ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ: ಬಹುರಾಜ್ಯ ಸಹಕಾರ ಸಂಘ: ಕೇಂದ್ರ ಸರ್ಕಾರಕ್ಕೇ ಪರಮಾಧಿಕಾರ

ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು 9

‘ಸಾಹಿತ್ಯ ಸಮ್ಮೇಳನ: ಕನ್ನಡ ಪರಂಪರೆ ಅವಗಣನೆ’ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,657 ▼	18,043 ▼	₹57,500 (ಬೆಂಗಳೂರು) ▲	₹70,800 (ಬೆಂಗಳೂರು) ▼	82.77 ▲

ಅತ್ಯಂತ, ಅತಿ ಹಿಂದುಳಿದವರು ಪ್ರವರ್ಗ ಸೃಷ್ಟಿ: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವರದಿ

ಮೀಸಲು: ಇನ್ನು ಎರಡೇ ಪ್ರವರ್ಗ

• ರಾಜೇಶ್ ರೈ ಚಟ್ಲ

ಬೆಂಗಳೂರು: ಹಿಂದುಳಿದವರ ಮೀಸಲಾತಿ ಪಟ್ಟಿಯಲ್ಲಿರುವ ಮೂರು ಪ್ರವರ್ಗಗಳ (ಪ್ರವರ್ಗ 1, ಪ್ರವರ್ಗ 2 ಎ,ಬಿ ಮತ್ತು ಪ್ರವರ್ಗ 3ಎ, ಬಿ) ಬದಲು ‘ಅತ್ಯಂತ ಹಿಂದುಳಿದವರು’ (ಪ್ರವರ್ಗ 1) ಮತ್ತು ‘ಅತೀ ಹಿಂದುಳಿದವರು’ (ಪ್ರವರ್ಗ 2 ಎ,ಬಿ,ಸಿ,ಡಿ) ಎಂಬ ಎರಡೇ ಪ್ರವರ್ಗಗಳನ್ನು ರಚಿಸುವುದು ಸೂಕ್ತ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಪ್ರತಿಪಾದಿಸಿದೆ.

ಸರ್ಕಾರಕ್ಕೆ ಆಯೋಗ ಸಲ್ಲಿಸಿರುವ ಮಧ್ಯಂತರ ವರದಿಯಲ್ಲಿ ಈ ಅಭಿಪ್ರಾಯ ಇದೆ. ಹೊಸದಾಗಿ ಸೃಷ್ಟಿಸಲಾಗುವ 2 ಸಿ ಮತ್ತು 2 ಡಿ ಪ್ರವರ್ಗ ಸೇರುವ ಸಮುದಾಯದವರು ಪಡೆಯುವ ಮೀಸಲಾತಿಯು ‘ಶಿಕ್ಷಣ ಮತ್ತು ಉದ್ಯೋಗಕ್ಕೆ ಮಾತ್ರ ಅನ್ವಯಿಸುತ್ತದೆ’ ಎಂದು ವರದಿ ತನ್ನ ಶಿಫಾರಸಿನಲ್ಲಿ ಹೇಳಿದೆ.

ಹಿಂದುಳಿದ ವರ್ಗಗಳ ವರ್ಗೀಕರಣ ಆದೇಶ 2002ನೇ ಇಸವಿಯಿಂದ ಜಾರಿಯಲ್ಲಿದೆ. ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ‘ಅತ್ಯಂತ ಹಿಂದುಳಿದವರು’ (1), ‘ಅತೀ ಹಿಂದುಳಿದವರು’ (2 ಎ,ಬಿ), ‘ಹಿಂದುಳಿದವರು’ (3ಎ, ಬಿ) ಎಂಬ ಮೂರು ಪ್ರವರ್ಗಗಳಿವೆ.

ಆಯೋಗದ ಕಾಯ್ದೆ 1995ರ ಕಲಂ 11ರ ಅನ್ವಯ, ರಾಜ್ಯ ಸರ್ಕಾರವು ಪ್ರತಿ 10 ವರ್ಷಗಳಿಗೊಮ್ಮೆ ಹಿಂದುಳಿದ ವರ್ಗದಲ್ಲಿ ಉಳಿಯದೇ ಹೋಗಿರುವ ವರ್ಗಗಳನ್ನು ತೆಗೆದುಹಾಕುವ ಅಥವಾ ಹೊಸ ಹಿಂದುಳಿದ ವರ್ಗಗಳನ್ನು ಪಟ್ಟಿಗೆ ಸೇರಿಸಿ ಇಡೀ ಪಟ್ಟಿಯನ್ನು ಪುನರ್ ರಚಿಸಬೇಕು. ಪುನರ್‌ರಚನೆ ವೇಳೆ ಆಯೋಗದ ಸಲಹೆಯನ್ನು ಸರ್ಕಾರ ಪಡೆಯಬೇಕು. ಈಗಾಗಲೇ 20 ವರ್ಷ ಕಳೆದಿರುವುದರಿಂದ ಮೀಸಲಾತಿ ಪಟ್ಟಿಯನ್ನು ಮರು ವಿಂಗಡಣೆ ಮಾಡಲು ಆಯೋಗ ನಿರ್ಧರಿಸಿದೆ.

ವರದಿಯಲ್ಲಿ ಏನಿದೆ?: ‘ಸದ್ಯ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಅನೇಕ ಜಾತಿಗಳನ್ನು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ವರ್ಗಾಯಿಸಿ, ಆ ವರ್ಗಕ್ಕೆ ನೀಡಿರುವ ಶೇ 10 ಮೀಸಲಾತಿ ನೀಡಲು ಅವಕಾಶವಿದೆ. ಹಿಂದುಳಿದ ವರ್ಗದ ಜಾತಿಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಾನದಂಡವನ್ನು ಅನುಸರಿಸಿ ಪರಿವರ್ತನೆ/ ವರ್ಗಾವಣೆ ಮಾಡಲು ಸರ್ಕಾರ ಪರಿಶೀಲಿಸಬೇಕು’.

‘ಪ್ರವರ್ಗ 3ಎ’ ಸಮುದಾಯವನ್ನು (ಒಕ್ಕಲಿಗ, ರೆಡ್ಡಿ, ಬಲಿಜ, ಬಂಟ, ಕೊಡವ ಸೇರಿ 12 ಜಾತಿಗಳು) ‘ಪ್ರವರ್ಗ 2’ ಎಂದು ಅಂದರೆ, ‘ಅತೀ ಹಿಂದುಳಿದವರು’ ಎಂದು ಪರಿ ಗಣಿಸಿ 2ಸಿ ಎಂಬ ಹೊಸ ಪ್ರವರ್ಗ ಸೃಜಿಸಬೇಕು. ಅದೇ ರೀತಿ ‘ಪ್ರವರ್ಗ 3ಬಿ’ ಸಮುದಾಯವನ್ನು (ಲಿಂಗಾಯತ ವೀರಶೈವ, ಪಂಚಮ ಸಾಲಿ ಹಾಗೂ ಇತರ ಸಮುದಾಯಗಳು) ‘ಪ್ರವರ್ಗ 2’ ಅಂದರೆ, ‘ಅತೀ ಹಿಂದುಳಿದವರು’ ಎಂದು ಪರಿಗಣಿಸಿ 2ಡಿ ಎಂಬ ಹೊಸ ಪ್ರವರ್ಗ ಸೃಜಿಸಬೇಕು. ಈಗ ಮೀಸಲಾತಿ ಸೌಲಭ್ಯ ಪಡೆಯುತ್ತಿರುವ ಕೆಲವು ಹಿಂದುಳಿದ ವರ್ಗಗಳನ್ನು ‘ಪ್ರವರ್ಗ 3ಎ’ ಮತ್ತು ‘ಪ್ರವರ್ಗ 3ಬಿ’ಯಿಂದ ಇಡಬ್ಲ್ಯುಎಸ್‌ಗೆ ವರ್ಗಾಯಿಸಿದಾಗ, ಅಷ್ಟು ಪ್ರಮಾಣದ ಮೀಸಲಾತಿಯು ಹಿಂದುಳಿದ ವರ್ಗಗಳಿಗೆ ಹಂಚಲು ಲಭ್ಯವಾಗುತ್ತದೆ. ಈ ರೀತಿಯಿಂದ ‘ಪ್ರವರ್ಗ 3ಎ’ಯಲ್ಲಿ ಲಭ್ಯವಾಗುವ ಮೀಸಲಾತಿ ಪ್ರಮಾಣವು ಹೊಸತಾಗಿ ಸೃಜಿಸುವ ‘ಪ್ರವರ್ಗ 2ಸಿ’ಗೆ ಹಾಗೂ ‘ಪ್ರವರ್ಗ 3ಬಿ’ಯಲ್ಲಿ ಲಭ್ಯವಾಗುವ ಮೀಸಲಾತಿಯು 2ಡಿಗೆ ಲಭ್ಯವಾಗಲಿದೆ. ಇದರಿಂದ ಈ ಸಮುದಾಯಗಳಿಗೆ ಮೀಸಲಾತಿ ಪ್ರಮಾಣ ಹೆಚ್ಚಳವಾಗುವುದಲ್ಲದೆ, ಸಾಮಾಜಿಕ ನ್ಯಾಯ ಒದಗಿಸಬಹುದು’.

‘ಪಂಚಮಸಾಲಿ ಹಾಗೂ ವೀರಶೈವ ಲಿಂಗಾಯತ ಸಮಾಜ ಮತ್ತು ಒಕ್ಕಲಿಗ ಸಮಾಜಗಳಿಂದ ಸ್ವೀಕೃತವಾಗಿರುವ ಮನವಿಗಳನ್ನು ಪರಿಶೀಲಿಸಲು ಅನೇಕ ಜಿಲ್ಲೆಗಳಿಗೆ ಭೇಟಿ ನೀಡಿ ಸಂಬಂಧಪಟ್ಟವರ ಜೊತೆ ಚರ್ಚಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಆಗ ಮೇಲ್ನೋಟಕ್ಕೆ ಪಂಚಮಸಾಲಿ, ವೀರಶೈವ ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯಗಳಿಗೆ ಉದ್ಯೋಗದಲ್ಲಿ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವುದು ಗಮನಕ್ಕೆ ಬಂದಿದೆ. 2ಸಿ ಮತ್ತು 2ಡಿ ಮೀಸಲಾತಿ ಹೆಚ್ಚಿಸುವ ಸಂದರ್ಭದಲ್ಲಿ, ಈಗಾಗಲೇ ಅತ್ಯಂತ ಹಿಂದುಳಿದ ಪ್ರವರ್ಗ-1 ಮತ್ತು ಪ್ರವರ್ಗ 2ಎಗೆ ಧಕ್ಕೆ ಹಾಗೂ ಬದಲಾವಣೆ ಆಗದಂತೆ ಕಟ್ಟುನಿಟ್ಟಾಗಿ ನೋಡಿಕೊಳ್ಳಬೇಕು.

ಪ್ರವರ್ಗ 2ಸಿ ಮತ್ತು 2ಡಿ ಗೆ ಮೀಸಲಾತಿಯನ್ನು ಹೆಚ್ಚಿಸುವುದನ್ನು (ಈಗಿರುವ 3ಎ- ಶೇ 4 ಹಾಗೂ 3ಬಿ- ಶೇ5), ಪಟ್ಟಾಲಿ ಮಕ್ಕಳ ಕಚ್ಚಿ ವರ್ಸಸ್ ಎ. ಮೈಲಾರುಂಮ್ ಪೆರುಮಾಲ್ ಮತ್ತು ಇತರರ ಪ್ರಕರಣದಲ್ಲಿ (ಎಸ್‌ಎಲ್‌ಪಿ 19574/2021) ಸುಪ್ರೀಂ ಕೋರ್ಟ್ 2022ರ ಮಾರ್ಚ್ 31ರಂದು ನೀಡಿದ ತೀರ್ಪಿನ ತತ್ವಗಳು, ಜನಸಂಖ್ಯೆ ಹಾಗೂ ಸಾಕಷ್ಟು ಪ್ರಾತಿನಿಧ್ಯ, ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಸಮಕಾಲೀನ, ಪ್ರಾಯೋಗಿಕ ಅಂಕಿ ಅಂಶಗಳ ಮಾನದಂಡ ಅನುಸಾರ ಪರಿಗಣಿಸಬೇಕು’ ಎಂದು ವರದಿಯಲ್ಲಿ ಹಿಂದುಳಿದ ವರ್ಗಗಳ ಆಯೋಗ ತಿಳಿಸಿದೆ.

ಮೀಸಲಾತಿ ಮರುಹಂಚಿಕೆ- ಲೆಕ್ಕಾಚಾರ

‘ರಾಜ್ಯ ಸರ್ಕಾರ ಲಭ್ಯವಿರುವ ಮಾಹಿತಿಗೆ ಅನುಗುಣವಾಗಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ (ಇಡಬ್ಲ್ಯುಎಸ್) ಪಟ್ಟಿ ಪ್ರಕಟಿಸಬೇಕು. ಅಂತಿಮ ಪಟ್ಟಿ ತಯಾರಿಸುವಾಗ ಕೆಲವು ಹಿಂದುಳಿದ ವರ್ಗಗಳ ಜಾತಿಗಳನ್ನು ಹಿಂದುಳಿದ ವರ್ಗಗಳ ಜಾತಿ ಪಟ್ಟಿಯಿಂದ ಇಡಬ್ಲ್ಯುಎಸ್‌ಗೆ ವರ್ಗಾಯಿಸಿ, ಅದರ ಅಡಿಯಲ್ಲಿ ಅಂತಿಮ ಕೋಟಾ ನಿರ್ಧರಿಸಬೇಕು. ಈ ಮೀಸಲಾತಿಯನ್ನು ತರ್ಕಬದ್ಧಗೊಳಿಸುವ ಪ್ರಕ್ರಿಯೆಯಲ್ಲಿ ನಿರ್ದಿಷ್ಟ ಶೇಕಡಾವಾರು ಪ್ರಮಾಣದ ಮೀಸಲಾತಿಯು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಲಭ್ಯವಾಗಲಿದೆ’ ಎಂದು ವರದಿ ಹೇಳಿದೆ.

ಪ್ರಿಫಿಕ್ಸ್ಡ್ ಆಟೊ ಬೂತ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಂಆರ್‌ಸಿಎಲ್ ಮತ್ತು ಬೆಂಗಳೂರು ಸಂಚಾರ ಪೊಲೀಸರ ಸಹಯೋಗದಲ್ಲಿ ಎಂ.ಜಿ.ರಸ್ತೆ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ರೈಲು ನಿಲ್ದಾಣಗಳ ಬಳಿ ದರ ಪೂರ್ವ ನಿಗದಿ (ಪ್ರಿಫಿಕ್ಸ್ಡ್) ಆಟೊ ಬೂತ್‌ಗಳು ಬುಧವಾರ ಕಾರ್ಯಾರಂಭಗೊಂಡವು.

ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ವಿಶೇಷ ಕಮಿಷನರ್ (ಸಂಚಾರ) ಎಂ.ಎ. ಸಲೀಂ ಉದ್ಘಾಟಿಸಿದರು.

3ನೇ ಪುಟ ನೋಡಿ

ಎಂ.ಜಿ. ರಸ್ತೆಯಲ್ಲಿ ಪ್ರಿಫಿಕ್ಸ್ಡ್ ಆಟೊ ಸಂಚಾರ ವ್ಯವಸ್ಥೆಗೆ ಅಂಜುಂ ಪರ್ವೇಜ್ ಮತ್ತು ಎಂ.ಎ. ಸಲೀಂ ಚಾಲನೆ ನೀಡಿದರು

ಮಾತೃಭಾಷೆ ಕಡ್ಡಾಯಕ್ಕೆ ಕೇಂದ್ರದ ಅಸಹಕಾರ

7 ವರ್ಷದಿಂದ ಬಾಕಿ ಉಳಿದಿರುವ ಮಸೂದೆ ಹಿಂಪಡೆಯುವಂತೆ ಒತ್ತಡ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ 1ರಿಂದ 5ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಾತೃಭಾಷಾ ಮಾಧ್ಯಮದಲ್ಲೇ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಲು ರಾಜ್ಯ ವಿಧಾನಮಂಡಲದ ಉಭಯ ಸದನಗಳು 2015ರಲ್ಲಿ ಅಂಗೀಕರಿಸಿದ್ದ ಮಸೂದೆ ಹಿಂಪಡೆಯುವಂತೆ ಕೇಂದ್ರ ಸರ್ಕಾರ ನಿರಂತರ ಒತ್ತಡ ಹೇರುತ್ತಿದೆ.

ರಾಜ್ಯ ಸರ್ಕಾರವು ಮಾನ್ಯತೆ ನೀಡಿದ ಎಲ್ಲ ಶಾಲೆಗಳಲ್ಲಿ ಒಂದರಿಂದ ಐದನೆ ತರಗತಿಯವರೆಗೆ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದಲ್ಲೇ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಿ 1994ರಲ್ಲಿ ಭಾಷಾ ನೀತಿಯನ್ನು ಜಾರಿಗೊಳಿಸಲಾಗಿತ್ತು. ಆದರೆ, ಕರ್ನಾಟಕ ರಾಜ್ಯ ಅನುದಾನರಹಿತ ಶಾಲಾ ವ್ಯವಸ್ಥಾಪನಾ ಸಂಘಟನೆಯು ಭಾಷಾ ನೀತಿಯನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿತ್ತು. ರಾಜ್ಯ ಹೈಕೋರ್ಟ್ ಭಾಷಾ ನೀತಿಯನ್ನು ರದ್ದುಗೊಳಿಸಿತ್ತು.

> ‘ಉಚಿತ, ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಮಸೂದೆ-2015’ಕ್ಕೆ ರಾಷ್ಟ್ರಪತಿ ಅಂಕಿತಕ್ಕೆ ಯತ್ನ ನಡೆಯುತ್ತಿದೆ. ಮಸೂದೆ ಹಿಂಪಡೆಯುವ ಪ್ರಸ್ತಾವ ಇಲ್ಲ
>
> **ಜಿ. ಶ್ರೀಧರ್,** ಸಂಸದೀಯ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ

ಸುಪ್ರೀಂ ಕೋರ್ಟ್‌ನಲ್ಲೂ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿತ್ತು. ಭಾಷಾ ನೀತಿ ರದ್ದುಗೊಳಿಸಿದ್ದ ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠವು ಎತ್ತಿ ಹಿಡಿದಿತ್ತು. ತೀರ್ಪು ಮರುಪರಿಶೀಲನೆಗೆ ಕೋರಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಯನ್ನೂ ಸುಪ್ರೀಂ ಕೋರ್ಟ್ 2014ರಲ್ಲಿ ವಜಾ ಗೊಳಿಸಿತ್ತು.

ಕೇಂದ್ರದ ಕಾಯ್ದೆಗೆ ತಿದ್ದುಪಡಿ: ಸುಪ್ರೀಂ ಕೋರ್ಟ್ ತೀರ್ಪಿನ ಬಳಿಕ ಶಿಕ್ಷಣ ತಜ್ಞರು, ಕಾನೂನು ತಜ್ಞರು, ಸಾಹಿತಿಗಳು ಮತ್ತು ಬರಹಗಾರರ ಅಭಿಪ್ರಾಯ ಸಂಗ್ರಹಿಸಿದ್ದ ರಾಜ್ಯ ಸರ್ಕಾರ, ಸಂವಿಧಾನದ 350-ಎ ವಿಧಿಯಲ್ಲಿನ ಅವಕಾಶವನ್ನು ಬಳಸಿಕೊಂಡು ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸಲು ನಿರ್ಧರಿಸಿತ್ತು.

‘ಷಡ್ಯಂತ್ರ ಕಾರಣ’

‘ಎನ್‌ಇಪಿ ಅನುಷ್ಠಾನದ ಹೆಸರಿನಲ್ಲಿ ಮಾತೃಭಾಷಾ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸುವ ಮಸೂದೆಯನ್ನು ತಡೆಯುವುದು ಸರಿಯಲ್ಲ. ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವುದನ್ನು ವಿರೋಧಿಸುವ ಅಧಿಕಾರಿಶಾಹಿಯ ಷಡ್ಯಂತ್ರ ಇದರ ಹಿಂದಿದೆ’ ಎಂದು ದೂರುತ್ತಾರೆ ಮೈಸೂರಿನ ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸಾ.ರ. ಸುದರ್ಶನ.

3ನೇ ಪುಟ ನೋಡಿ

ರಜೌರಿ: ಎರಡು ಸಾವಿರಕ್ಕೂ ಅಧಿಕ ಸಿಆರ್‌ಪಿಎಫ್ ಯೋಧರ ನಿಯೋಜನೆ

ಜಮ್ಮು (ಪಿಟಿಐ): ಗಡಿ ಜಿಲ್ಲೆಗಳಾದ ರಜೌರಿ ಹಾಗೂ ಪೂಂಛ್‌ನಲ್ಲಿ ಭದ್ರತೆಯನ್ನು ಹೆಚ್ಚಿಸಲು ಮುಂದಾಗಿರುವ ಕೇಂದ್ರ ಸರ್ಕಾರ, ಈ ಜಿಲ್ಲೆಗಳ ವಿವಿಧೆಡೆ ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಸಿಬ್ಬಂದಿಯನ್ನು ನಿಯೋಜಿಸಿದೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

2,000ಕ್ಕೂ ಅಧಿಕ ಸಿಬ್ಬಂದಿಯನ್ನು ಒಳಗೊಂಡ ಸಿಆರ್‌ಪಿಎಫ್‌ನ 20 ತುಕಡಿಗಳನ್ನು ನಿಯೋಜನೆ ಮಾಡಲಾಗಿದೆ ಎಂದಿದ್ದಾರೆ. ರಜೌರಿ ಜಿಲ್ಲೆಯಲ್ಲಿ ಇತ್ತೀಚೆಗೆ ಸಂಭವಿಸಿದ ಉಗ್ರರ ದಾಳಿಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಆರು ಜನರು ಮೃತಪಟ್ಟಿದ್ದರು.

ಆಹಾರ, ರಸಗೊಬ್ಬರ ಮೇಲಿನ ಸಬ್ಸಿಡಿ ಕಡಿತ?

ನವದೆಹಲಿ (ರಾಯಿಟರ್ಸ್): ಆಹಾರ ಮತ್ತು ರಸಗೊಬ್ಬರ ಸಬ್ಸಿಡಿ ಮೇಲಿನ ವೆಚ್ಚವನ್ನು ಏಪ್ರಿಲ್‌ನಿಂದ ಶುರುವಾಗುವ ಆರ್ಥಿಕ ವರ್ಷದಲ್ಲಿ (2023-24) ₹ 3.70 ಲಕ್ಷ ಕೋಟಿಗೆ ಇಳಿಕೆ ಮಾಡುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದು ಮೂಲಗಳು ಹೇಳಿವೆ. ಇದು 2022-23ರ ವೆಚ್ಚಕ್ಕೆ ಹೋಲಿಸಿದರೆ ಶೇ 26ರಷ್ಟು ಕಡಿಮೆ.

ವಿತ್ತೀಯ ಕೊರತೆಯನ್ನು ನಿಯಂತ್ರಿಸುವ ಉದ್ದೇಶದಿಂದ ಈ ಆಲೋಚನೆ ನಡೆದಿದೆ ಎಂದು ಗೊತ್ತಾಗಿದೆ. ಆಹಾರ ಮತ್ತು ರಸಗೊಬ್ಬರಗಳಿಗೆ ನೀಡುವ ಸಬ್ಸಿಡಿಯು ಕೇಂದ್ರದ ಈ ವರ್ಷದ ಬಜೆಟ್‌ನ ಎಂಟನೆಯ ಒಂದರಷ್ಟು ಆಗುತ್ತದೆ. ಲೋಕಸಭಾ ಚುನಾವಣೆ ಹತ್ತಿರವಾಗುತ್ತಿರುವಾಗ ಆಹಾರ ಸಬ್ಸಿಡಿ ಮೊತ್ತವನ್ನು ಕಡಿಮೆ ಮಾಡುವುದು ರಾಜಕೀಯವಾಗಿ ಸೂಕ್ಷ್ಮ ತೀರ್ಮಾನವಾಗಲಿದೆ.

ಕೇಂದ್ರವು 2023-24ರಲ್ಲಿ ಆಹಾರ ಸಬ್ಸಿಡಿಗೆ ₹ 2.30 ಲಕ್ಷ ಕೋಟಿಯನ್ನು ಮೀಸಲಿಡುವ ಉದ್ದೇಶ ಹೊಂದಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆಹಾರ ಸಬ್ಸಿಡಿಗೆ ₹ 2.70 ಲಕ್ಷ ಕೋಟಿಯನ್ನು ಮೀಸಲಿಡಲಾಗಿದೆ ಎಂದು ಮೂಲಗಳು ಹೇಳಿವೆ. ರಸಗೊಬ್ಬರ ಸಬ್ಸಿಡಿ ಮೊತ್ತವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ₹ 2.30 ಲಕ್ಷ ಕೋಟಿಯಷ್ಟು ಇದೆ. ಅದು ಮುಂದಿನ ಆರ್ಥಿಕ ವರ್ಷಕ್ಕೆ ₹ 1.40 ಲಕ್ಷ ಕೋಟಿಗೆ ಇಳಿಕೆಯಾಗಬಹುದು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಈ ವಿಚಾರವಾಗಿ ಹಣಕಾಸು ಸಚಿವಾಲಯವು ಪ್ರತಿಕ್ರಿಯಿಸಲು ನಿರಾಕರಿಸಿದೆ. ಸಂಬಂಧಿತ ಸಚಿವಾಲಯಗಳಿಂದ ಪ್ರತಿಕ್ರಿಯೆ ತಕ್ಷಣಕ್ಕೆ ಲಭ್ಯವಾಗಿಲ್ಲ.

ಕೋವಿಡ್ ಅವಧಿಯಲ್ಲಿ ಜಾರಿಗೆ ಬಂದ ಉಚಿತ ಆಹಾರ ಧಾನ್ಯ ವಿತರಣೆ ಯೋಜನೆಯನ್ನು ನಿಲ್ಲಿಸುವ ಮೂಲಕ ದೊಡ್ಡ ಮೊತ್ತ ಉಳಿತಾಯ ಮಾಡಬಹುದು. ಆ ಯೋಜನೆಯ ಬದಲಿಗೆ ಕಡಿಮೆ ವೆಚ್ಚದ ಇನ್ನೊಂದು ಯೋಜನೆಯನ್ನು ಜಾರಿಗೊಳಿಸಲಾಗುತ್ತದೆ ಎಂದು ಗೊತ್ತಾಗಿದೆ. ಈ ಕ್ರಮಗಳಿಂದಾಗಿ, ಬಡವರಿಗೆ ವರ್ಷವೊಂದರಲ್ಲಿ ಸಿಗುವ ಉಚಿತ ಆಹಾರ ಧಾನ್ಯಗಳ ಪ್ರಮಾಣವು ಅರ್ಧದಷ್ಟು ಕಡಿಮೆಯಾಗಲಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸುವ ಸಂದರ್ಭದಲ್ಲಿ ಸಬ್ಸಿಡಿ ಕುರಿತು ಘೋಷಣೆ ಮಾಡಲಿದ್ದಾರೆ.

ಗಡಿಯಲ್ಲಿ ಚೀನಾದಿಂದಲೇ ಆಕ್ರಮಣ: ಪೆನ್ಪಾ

ಕೋಲ್ಕತ್ತ (ಪಿಟಿಐ): ‘ಭಾರತ- ಟಿಬೆಟ್ ಗಡಿಯಲ್ಲಿನ ಎಲ್ಲ ಆಕ್ರಮಣಗಳು ಏಕಪಕ್ಷೀಯವಾಗಿ ಚೀನಾದಿಂದ ನಡೆದಿವೆ’ ಎಂದು ಟಿಬೆಟ್‌ನ ಸಂದಿಗ್ಧ ಕಾಲ ಸರ್ಕಾರದ ಅಧ್ಯಕ್ಷ ಪೆನ್ಪಾ ತ್ಸೆರಿಂಗ್ ಪ್ರತಿಪಾದಿಸಿದ್ದಾರೆ.

‘ಭಾರತ ಮತ್ತು ಟಿಬೆಟ್ ನಡವಿನ ಗಡಿಯಾದ ಮೆಕ್ ಮೋಹನ್ ರೇಖೆಯನ್ನು ಒಪ್ಪಿ ಟಿಬೆಟ್ 1914ರಲ್ಲಿ ಒಪ್ಪಂದಕ್ಕೆ ಸಹಿ ಮಾಡಿದೆ. ಹೀಗಾಗಿ ತವಾಂಗ್ ಭಾರತದ ಅವಿಭಾಜ್ಯ ಅಂಗವಾಗಿದೆ’ ಎಂದು ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ತಿಳಿಸಿದ್ದಾರೆ.

ತವಾಂಗ್ ಮತ್ತು ಲಡಾಖ್‌ನಲ್ಲಿ ಭಾರತೀಯ ಸೇನೆ ಮತ್ತು ಚೀನಾದ ಪಿಎಲ್‌ಎ ನಡುವೆ ನಡೆದಿರುವ ಘರ್ಷಣೆಗಳ ಕುರಿತು ಮಾತನಾಡಿದ ಅವರು, ‘ಎಲ್ಲ ಆಕ್ರಮಣಗಳು ಚೀನಾದ ಕಡೆಯಿಂದ ನಡೆಯುತ್ತಿವೆ ಎಂಬುದು ನಮಗೆ ಗೊತ್ತಿದೆ’ ಎಂದೂ ಅವರು ಹೇಳಿದ್ದಾರೆ.

‘ಭಾರತ ಮತ್ತು ಚೀನಾ ನಡುವೆ 1959ರವರೆಗೆ ಯಾವುದೇ ಗಡಿ ಇರಲಿಲ್ಲ. ಭಾರತ ಗಡಿಯಿದ್ದದ್ದು ಟಿಬೆಟ್‌ನೊಂದಿಗೆ. ಬ್ರಿಟಿಷ್ ಇಂಡಿಯಾ ಮತ್ತು ಟಿಬೆಟ್ ನಡುವೆ 1914ರಲ್ಲಿ ನಡೆದ ಸಿಮ್ಲಾ ಒಪ್ಪಂದಕ್ಕೆ ನಾವು ಸಹಿ ಹಾಕಿದ್ದೇವೆ. ಕಾನೂನುಬದ್ಧ ಗಡಿಯಾಗಿ ಮೆಕ್ ಮೋಹನ್ ರೇಖೆಯನ್ನು ನಾವು ಒಪ್ಪುತ್ತೇವೆ’ ಎಂದರು.

ಬೆಂಗಳೂರಿನಲ್ಲಿ ವನ್ಯಜೀವಿ ವಿಧಿವಿಜ್ಞಾನ ಪ್ರಯೋಗಾಲಯ

ಬೆಂಗಳೂರು: ರಾಜ್ಯದ ಪ್ರಥಮ ವನ್ಯಜೀವಿ ವಿಧಿ ವಿಜ್ಞಾನಗಳ ಪ್ರಯೋಗಾಲಯ ಬೆಂಗಳೂರಿನಲ್ಲಿ ಸ್ಥಾಪನೆಯಾಗಲಿದ್ದು, ಇದಕ್ಕೆ ರಾಜ್ಯ ಸರ್ಕಾರ ₹2.7 ಕೋಟಿ ಅನುದಾನ ನೀಡಲು ಒಪ್ಪಿದೆ. ಮಾರ್ಚ್‌ನಿಂದ ಈ ಪ್ರಯೋಗಾಲಯ ಕಾರ್ಯಾರಂಭ ಮಾಡಲಿದೆ.

ಕಳೆದ ಒಂದು ದಶಕದಿಂದ ಪ್ರಯೋಗಾಲಯ ಸ್ಥಾಪನೆಯ ಪ್ರಸ್ತಾವನೆ ಚರ್ಚೆಯಲ್ಲಿದ್ದು, ರಾಜ್ಯ ಸರ್ಕಾರ ಇತ್ತೀಚೆಗಷ್ಟೇ ಒಪ್ಪಿಗೆ ನೀಡಿದೆ. ವನ್ಯಜೀವಿಗಳ ಮೇಲಿನ ಅಪರಾಧಗಳ ಬಗ್ಗೆ ತನಿಖೆ ನಡೆಸಲು ಈ ಪ್ರಯೋಗಾಲಯ ನೆರವಾಗಲಿದೆ. ಇದರಿಂದ ಅಪರಾಧಿಗಳಿಗೆ ಶಿಕ್ಷೆ ಕೊಡಿಸಲು ನೆರವಾಗಲಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಈಗ ಸ್ಯಾಂಪಲ್‌ಗಳನ್ನು ಡೆಹರಾಡೂನ್ ಅಥವಾ ಹೈದರಾಬಾದ್‌ನಲ್ಲಿರುವ ಪ್ರಯೋಗಾಲಯಗಳಿಗೆ ಕಳುಹಿಸಲಾಗುತ್ತಿದೆ. ಇದರಿಂದ ಬಹಳಷ್ಟು ಅಪರಾಧಗಳ ಪ್ರಕರಣಗಳಲ್ಲಿ ತನಿಖೆ ತಡವಾಗುತ್ತಿದೆ. ಮುಂದೆ ಈ ಸಮಸ್ಯೆ ಬಗೆಹರಿಯಲಿದೆ ಎಂದು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾಹಿತಿ ಕುಂ. ವೀರಭದ್ರಪ್ಪ ಹೇಳಿಕೆ • ಹುಲಿಕಲ್ ನಟರಾಜ್ ಅಭಿನಂದನಾ ಗ್ರಂಥ ಬಿಡುಗಡೆ

‘ಮನೆಯಲ್ಲಿನ ಅಸಂಖ್ಯಾತ ದೇವರ ಹೊರಹಾಕಿ’

ಪ್ರಜಾವಾಣಿ ವಾರ್ತೆ

ಹುಲಿಕಲ್ ನಟರಾಜ್ (ಎಡದಿಂದ ಆರನೆಯವರು) ಅವರ ಅಭಿನಂದನಾ ಗ್ರಂಥ ‘ಹುಲಿ ಹೆಜ್ಜೆ’ಯನ್ನು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ (ಎಡದಿಂದ ನಾಲ್ಕನೆಯವರು) ಬಿಡುಗಡೆ ಮಾಡಿದರು. (ಎಡದಿಂದ) ಕುಂ. ವೀರಭದ್ರಪ್ಪ, ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ, ಎ.ಎಸ್. ಕಿರಣ್ ಕುಮಾರ್, ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ಹುಲಿಕಲ್ ನಟರಾಜ್ ಅವರ ಮೊಮ್ಮಗ ಉದಾತ್ ಮತ್ತು ಪತ್ನಿ ದೇವಿಕಾ ಇದ್ದಾರೆ. – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದಕ್ಷಿಣ ಭಾರತದ ನಾವು ದ್ರಾವಿಡರೆ ಹೊರತು, ಹಿಂದೂಗಳಲ್ಲ. ನಮ್ಮ ಮನೆಯಲ್ಲಿನ ಅಸಂಖ್ಯಾತ ದೇವರು, ಮೂಢನಂಬಿಕೆಗಳನ್ನು ಹೊರಗಡೆ ಕಳುಹಿಸಬೇಕು’ ಎಂದು ಸಾಹಿತಿ ಕುಂ. ವೀರಭದ್ರಪ್ಪ ತಿಳಿಸಿದರು.

ರಾಷ್ಟ್ರೀಯ ವೈಜ್ಞಾನಿಕ ಸಂಶೋಧನಾ ಪರಿಷತ್ತು ಟ್ರಸ್ಟ್ ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹುಲಿಕಲ್ ನಟರಾಜ್ ಅವರ ಅಭಿನಂದನಾ ಗ್ರಂಥ ‘ಹುಲಿ ಹೆಜ್ಜೆ’ ಬಿಡುಗಡೆಯಾಯಿತು. ‘ಸ್ವಾಮಿ ಹರ್ಷಾನಂದ ಅವರು ತಮ್ಮ ಕೃತಿಯಲ್ಲಿ ‘ಹಿಂದೂ’ ಪದದ ಬಗ್ಗೆ ವ್ಯಾಖ್ಯಾನಿಸಿದ್ದು, ಈ ಪದ ‘ಅಪಾಯಕಾರಿ’ ಎಂದು ಉಲ್ಲೇಖಿಸಿದ್ದಾರೆ. ಆದ್ದರಿಂದ ನಾವು ಹಿಂದೂ ಅಲ್ಲ ಎನ್ನುವುದನ್ನು ಒಕ್ಕೊರಲಿನಿಂದ ಹೇಳಬೇಕು. ಬಸವಣ್ಣ, ಬುದ್ಧ, ಅಂಬೇಡ್ಕರ್ ನಮಗೆ ಮಾದರಿಯಾಗಬೇಕು’ ಎಂದು ಹೇಳಿದರು.

‘ರಸ್ತೆಯ ಅಕ್ಕಪಕ್ಕದಲ್ಲಿರುವ ದೇವಾಲಯ, ಮಸೀದಿ ಸೇರಿ ಎಲ್ಲ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಬೇಕು. ಇಲ್ಲವಾದಲ್ಲಿ ರಸ್ತೆ ಅಪಘಾತಗಳು ಹೆಚ್ಚಳವಾಗುತ್ತವೆ. ವಾಹನ ಚಾಲಕರು ದೇವರಿಗೆ ಕೈಮುಗಿಯಲು ಹೋಗಿ ಅಪಘಾತಕ್ಕೆ ಒಳಗಾಗುತ್ತಾರೆ. ಈ ಬಗ್ಗೆ ಸುಪ್ರೀಂ ಕೋರ್ಟ್ ಸೂಕ್ತ ನಿರ್ದೇಶನ ನೀಡಬೇಕು. ಕರ್ನಾಟಕವು ಮೂಢನಂಬಿಕೆಗಳ ಹುಟ್ಟುವಳಿ ಹಾಗೂ ವಿತರಣೆಗಳ ಸಂಸ್ಥೆಯಾಗಿದೆ. ವಿಧಾನಸೌಧದಲ್ಲಿಯೆ ಅತಿ ಹೆಚ್ಚು ಮೂಢನಂಬಿಕೆಗಳಿದ್ದು, ದೇವರಿಗೆ ಸಮಾನವಾಗಿರುವ ಈ ಕಟ್ಟಡದಲ್ಲಿ ಗೌರವಾನ್ವಿತ ಮುಟ್ಠಾಳರಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜ್ಞಾನದ ಮಾಹಿತಿ ಬಳಸಿ: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ‘ಮನುಷ್ಯನಿಗೆ ಜ್ಞಾನ ಬೆಳೆದಂತೆ ಆತನ ಧೋರಣೆಯಲ್ಲಿಯೂ ಬದಲಾವಣೆಯಾಗುತ್ತದೆ. ಜ್ಞಾನದ ನೆರವಿನಿಂದ ದೊರೆಯುವ ಮಾಹಿತಿಗಳನ್ನು ಸಮಾಜದ ಒಳಿತಿಗೆ ಬಳಸಬೇಕು. ಆದರೆ, ಕೆಲವರು ತಮ್ಮ ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳುತ್ತಿರುವುದು ವಿಪರ್ಯಾಸ. ಸಂಪರ್ಕ ಸಾಧನಗಳ ಕೊರತೆಯಿಂದ ಈ ಹಿಂದೆ ಜನರ ಶೋಷಣೆ ನಡೆಯುತ್ತಿತ್ತು. ಮುಂದೆ ಇರುವ ಸವಾಲುಗಳನ್ನು ಎದುರಿಸಲು ಸತ್ಯದ ಮಾಹಿತಿ ರವಾನೆಯಾಗಬೇಕು’ ಎಂದು ಹೇಳಿದರು.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್, ‘ನಮ್ಮ ಬದುಕಿನ ಪಯಣದಲ್ಲಿ ನಂಬಿಕೆಯನ್ನು ಮೂಢನಂಬಿಕೆಯಾಗಿ ಪರಿವರ್ತಿಸಿಕೊಳ್ಳುತ್ತೇವೆ. ಜನರನ್ನು ತಪ್ಪು ದಾರಿಗೆ ತಳ್ಳುವವರಿಗೆ ರಾಜಕಾರಣಿಗಳು ನಮಸ್ಕಾರ ಹಾಕುತ್ತಾರೆ. ಪ್ರಪಂಚವನ್ನು ವೈಜ್ಞಾನಿಕ ನೆಲೆಯಲ್ಲಿ ಕೊಂಡೊಯ್ಯಬೇಕಾದವರು ಮೂಢನಂಬಿಕೆಗೆ ಸಿಲುಕಿದ್ದಾರೆ. ಪವಾಡ ಎಂದರೆ ನಿಜ ಅರ್ಥದಲ್ಲಿ ಮಾನವ ಸೇವೆ. ಸ್ವಾಮೀಜಿಗಳು ಧರ್ಮ ಹಾಗೂ ವೈಚಾರಿಕತೆಯನ್ನು ಪ್ರಸಾರ ಮಾಡಬೇಕು’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅತಿಥಿಗಳಿಗೆ ಆಯೋಜಕರು ಹೂವು, ನಿಂಬೆ ಹಣ್ಣು ನೀಡಿ ಸ್ವಾಗತಿಸಿದರು.

‘ಕೂದಲನ್ನು ಮಾತ್ರ ಏಕೆ ಕೊಡುವಿರಿ?’

‘ಮೂಢನಂಬಿಕೆಗಳೇ ಕರ್ನಾಟಕದ ದೊಡ್ಡ ‘ಸಾಯಿಬಾಬಾ’. ಈ ಹಿಂದೆ ದೇವಮಾನವರು ಇಲ್ಲದೇ ಇರುವಂತಹ ಜಾಗವೇ ಕರ್ನಾಟಕದಲ್ಲಿ ಇರಲಿಲ್ಲ. ಈಗಲೂ ಮೂಢನಂಬಿಕೆ ಜೀವಂತವಾಗಿದೆ. ನಮ್ಮ ವಿಜ್ಞಾನಿಗಳು ಪೂಜೆ ಮಾಡಿ, ರಾಕೆಟ್ ಉಡಾಯಿಸುತ್ತಾರೆ. ಗ್ರಹಣದ ಅವಧಿಯಲ್ಲಿ ನೀರನ್ನು ಚೆಲ್ಲಲಾಗುತ್ತದೆ. ಅದೇ ರೀತಿ, ಹಾಲು, ತುಪ್ಪವನ್ನು ಏಕೆ ಚೆಲ್ಲುವುದಿಲ್ಲ? ತಿರುಪತಿ ತಿಮ್ಮಪ್ಪನಿಗೆ ಕೂದಲು ಮಾತ್ರ ನೀಡಲಾಗುತ್ತದೆ. ಮೂಗು, ಕಣ್ಣು, ಕೈ ಸೇರಿ ವಿವಿಧ ಅಂಗಾಂಗಗಳನ್ನೂ ಏಕೆ ನೀಡುವುದಿಲ್ಲ? ಅವೈಚಾರಿಕ ಯುಗದಲ್ಲಿ ನಾವು ಬದುಕುತ್ತಿದ್ದೇವೆ’ ಎಂದು ಕುಂ. ವೀರಭದ್ರಪ್ಪ ಬೇಸರ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಪದ್ಮನಾಭ ಸೇರಿ ಮೂವರಿಗೆ ‘ಭಾರತಿ ತ್ಯಾಗರಾಜ ಸಮ್ಮಾನ’

ಬೆಂಗಳೂರು: ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನಾ ಕೈಂಕರ್ಯ ಟ್ರಸ್ಟ್ ನೀಡುವ ‘ಭಾರತಿ ತ್ಯಾಗರಾಜ ಸಮ್ಮಾನ್’ ಪ್ರಶಸ್ತಿಗೆ ಕರ್ನಾಟಕ ಸಂಗೀತದ ಸಾಧಕ ಆರ್.ಕೆ. ಪದ್ಮನಾಭ, ಮೃದಂಗ ವಿದ್ವಾನ್ ವಿ.ಎಸ್. ರಾಜಗೋಪಾಲ್ ಹಾಗೂ ಗಾಯಕಿ ಆರ್.ಎ. ರಮಾಮಣಿ ಅವರು ಆಯ್ಕೆಯಾಗಿದ್ದಾರೆ.

ಜ.6ರಿಂದ 12ರ ವರೆಗೆ ‘176ನೇ ವರ್ಷದ ತ್ಯಾಗರಾಜರ ಆರಾಧನೆ ಮತ್ತು ರಾಷ್ಟ್ರೀಯ ಸಂಗೀತೋತ್ಸವ’ ಕಾರ್ಯಕ್ರಮವನ್ನು ಚಾಮರಾಜಪೇಟೆಯ ಶೃಂಗೇರಿ ಶಂಕರ ಮಠದಲ್ಲಿ ಆಯೋಜಿಸಲಾಗಿದೆ. ಇದೇ 12ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್‌ನ ಪ್ರಕಟಣೆ ತಿಳಿಸಿದೆ.

ಪ್ರಶಸ್ತಿಯು ತಲಾ ₹1 ಲಕ್ಷ ನಗದು ಮತ್ತು ಚಿನ್ನದ ಪದಕ ಒಳಗೊಂಡಿದೆ. ಪ್ರತಿದಿನ ಸಂಜೆ 5 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ತ್ಯಾಗರಾಜರ ಆರಾಧನೆ ಮತ್ತು ರಾಷ್ಟ್ರೀಯ ಸಂಗೀತೋತ್ಸವ ಕಾರ್ಯಕ್ರಮಗಳು ನಡೆಯಲಿವೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಮಾತ್ರವಲ್ಲದೇ, ಬೇರೆ ರಾಜ್ಯಗಳ 300ಕ್ಕೂ ಹೆಚ್ಚು ಶಾಸ್ತ್ರೀಯ ಸಂಗೀತಗಾರರು ಪಾಲ್ಗೊಳ್ಳಲಿದ್ದಾರೆ. ಉಮಯಲಪುರಂ ಶಿವರಾಮನ್, ಜಯಂತಿ ಕುಮರೇಶ್ ಮತ್ತು ಕುಮಾರೇಶ್, ವಿಜಯ್ ಪ್ರಕಾಶ್, ಅಮಿತ್ ನಾಡಿಗ್, ನಾಗವಲ್ಲಿ ನಾಗರಾಜ್, ರಘುನಂದನ್, ಸುಚೇನ್ ಮುಂತಾದ ಸಂಗೀತಗಾರರು ಕಛೇರಿ ನಡೆಸಿಕೊಡಲಿದ್ದಾರೆ.

ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆ 7ರಿಂದ

ಬೆಂಗಳೂರು: ‘ನೇತಾಜಿ ಸುಭಾಷಚಂದ್ರ ಬೋಸ್’ ಅವರ ಜನ್ಮದಿನದ ಅಂಗವಾಗಿ ಎಐಡಿಎಸ್‌ಒ ಜಿಲ್ಲಾ ಸಮಿತಿಯಿಂದ ಜ. 7 ಮತ್ತು 8ರಂದು ರಾಜ್ಯಮಟ್ಟದ ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಮಲ್ಲೇಶ್ವರದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಜ. 7ರಂದು ಕೊಕ್ಕೊ, ಕಬಡ್ಡಿ ಮತ್ತು ಕ್ರಿಕೆಟ್ ಪಂದ್ಯಾವಳಿಗಳು ನಡೆಯಲಿದ್ದು, ಒಂದು ಶಾಲೆ ಮತ್ತು ಕಾಲೇಜಿನಿಂದ ಒಂದು ತಂಡಕ್ಕೆ ಮಾತ್ರ ಅವಕಾಶವಿದೆ.

ಜ.8ರಂದು ‘ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೇತಾಜಿ ಹಾಗೂ ಐಎನ್‌ಎ ಪಾತ್ರ ಹಾಗೂ ಅದರ ಪ್ರಸ್ತುತತೆ’ ವಿಷಯದ ಕುರಿತು ಪ್ರಬಂಧ ರಚನೆ, ಚರ್ಚಾ ಸ್ಪರ್ಧೆ, ಚಿತ್ರಕಲೆ, ಸ್ವರಚಿತ ಕವನ ವಾಚನ ಹಾಗೂ ದೇಶಭಕ್ತಿ ಗೀತೆಗಳ ಗಾಯನ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ.

ಪ್ರೌಢಶಾಲೆ, ಪಿಯು, ಡಿಪ್ಲೊಮಾ, ಪದವಿ, ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಈ ಎಲ್ಲಾ ಸ್ಪರ್ಧೆಗಳು ನಡೆಯುತ್ತವೆ. ಸ್ಪರ್ಧೆಗಳಲ್ಲಿ ವಿಜೇತರಿಗೆ ಜ. 28 ರಂದು ಹುಬ್ಬಳ್ಳಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 8951515996 / 9535389885ಗೆ ಸಂಪರ್ಕಿಸಿ.

‘ಸರ್ವರಿಗೂ ಸೂರು: ಸರ್ಕಾರದ ಪಾಲಿನ ಮೊತ್ತ ಬಜೆಟ್‌ನಲ್ಲಿ ಹೆಚ್ಚಳ’

ಬೆಂಗಳೂರು: ಸರ್ವರಿಗೂ ಸೂರು ಯೋಜನೆಯಡಿ (ಪಿಎಂ ಆವಾಸ್) ನಿರ್ಮಿಸುವ ಮನೆಗಳಿಗೆ ರಾಜ್ಯ ಸರ್ಕಾರದ ಪಾಲಿನ ಮೊತ್ತ ಗ್ರಾಮೀಣ ಪ್ರದೇಶದವರಿಗೆ ₹1.20 ಲಕ್ಷದಿಂದ ₹3 ಲಕ್ಷಕ್ಕೂ, ನಗರ ಪ್ರದೇಶದಲ್ಲಿ ₹2.70 ಲಕ್ಷದಿಂದ ₹ 4 ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನಿಸಿದ್ದು, ಹೆಚ್ಚಳವನ್ನು ಮುಂದಿನ ಬಜೆಟ್‌ನಲ್ಲಿ ಘೋಷಿಸಲಾಗುವುದು ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ.

ಅಧಿಕಾರಿಗಳ ಸಭೆ ನಡೆಸಿದ ಅವರು, ಬಳಿಕ ಸುದ್ದಿಗಾರರ ಜತೆ ಮಾತನಾಡಿದರು. ಎಲ್ಲ ವರ್ಗದ ಫಲಾನುಭವಿಗಳಿಗೂ ಏಕಪ್ರಕಾರದಲ್ಲಿ ಹೆಚ್ಚಳ ಮಾಡಲಾಗುವುದು. ಒಂದು ಮನೆಗೆ ₹4.50 ಲಕ್ಷದಿಂದ ₹5 ಲಕ್ಷ ವೆಚ್ಚವಾಗುತ್ತದೆ. ಫಲಾನುಭವಿಗಳು ತಲಾ ₹1 ಲಕ್ಷ ಪಾವತಿಸಿದರೆ ಸಾಕಾಗುತ್ತದೆ ಎಂದರು.

ಈಗ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಫಲಾನುಭವಿಗೆ ₹1.20 ಲಕ್ಷ ಮತ್ತು ನಗರ ಪ್ರದೇಶದಲ್ಲಿ 2.70 ಲಕ್ಷ ನೀಡಲಾಗುತ್ತಿದೆ ಎಂದರು.

ಈ ಯೋಜನೆಯಡಿ 2016–17ರಲ್ಲಿ ರಾಜ್ಯದ ವಿವಿಧ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಒಟ್ಟು 1.80 ಲಕ್ಷ ಮನೆಗಳ ನಿರ್ಮಾಣಕ್ಕೆ ಕೇಂದ್ರದಿಂದ ಅನುಮೋದನೆ ಸಿಕ್ಕಿತ್ತು. ಆದರೆ, ನಾನು ಇಲಾಖೆ ಉಸ್ತುವಾರಿ ವಹಿಸಿಕೊಂಡ ಬಳಿಕವೇ ಟೆಂಡರ್ ಕರೆದು, ಕಾರ್ಯಾದೇಶವನ್ನೂ ಕೊಟ್ಟು ಚಾಲನೆ ನೀಡಿದೆ. ನನ್ನ ಪ್ರಯತ್ನದ ಪರಿಣಾಮ ಒಟ್ಟು 44,165 ಮನೆಗಳು ಪೂರ್ಣಗೊಂಡಿವೆ. ಇದಕ್ಕೆ ₹2,483 ಕೋಟಿ ವೆಚ್ಚವಾಗಿದೆ. ಉಳಿದ ₹83 ಸಾವಿರ ಮನೆಗಳು ಮಾರ್ಚ್ ಒಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

2ನೇ ಹಂತದಲ್ಲಿ 97,134 ಮನೆಗಳ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 3,600 ಮನೆಗಳ ನಿರ್ಮಾಣ ಆರಂಭಿಸಿದ್ದು, 1,287 ಮನೆಗಳ ನಿರ್ಮಾಣ ಪೂರ್ಣಗೊಂಡಿದೆ. ₹3,141ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಅಮ್ರಿತ್ ಪೌಲ್ ಜಾಮೀನು ಅರ್ಜಿ ಮತ್ತೆ ವಜಾ

ಬೆಂಗಳೂರು: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದ ಆರೋಪಿ, ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ಜಾಮೀನು ಅರ್ಜಿ ಮತ್ತೆ ವಜಾಗೊಂಡಿದೆ. 24ನೇ ಸಿಸಿಎಚ್ ನ್ಯಾಯಾಲಯವು ಬುಧವಾರ ಅರ್ಜಿ ವಜಾಗೊಳಿಸಿತು. ಲೋಕಾಯುಕ್ತ ವಿಶೇಷ ನ್ಯಾಯಾಲಯದಲ್ಲೂ ಈ ಹಿಂದೆ ಜಾಮೀನು ಅರ್ಜಿ ತಿರಸ್ಕಾರಗೊಂಡಿತ್ತು.

ಪೌಲ್‌ಗೆ ಜಾಮೀನು ನೀಡುವಂತೆ ವಕೀಲರು ಮಾಡಿದ್ದ ಮನವಿಯನ್ನು ನ್ಯಾಯಾಧೀಶರು ತಿರಸ್ಕರಿಸಿದರು. ಭದ್ರತಾ ಕೊಠಡಿಯ ಬೀಗದ ಕೀಯನ್ನು ತನ್ನ ಕೈಕೆಳಗಿನ ನೌಕರರಿಗೆ ನೀಡಿ, ಉತ್ತರ ಪತ್ರಿಕೆ ತಿದ್ದಿಸಿರುವ ಕೃತ್ಯದಲ್ಲಿ ಪೌಲ್ ಭಾಗಿ ಆಗಿರುವುದು ತನಿಖೆಯಿಂದ ದೃಢಪಟ್ಟಿತ್ತು. ಸಿಐಡಿ ತಂಡವು ಅವರನ್ನು ಬಂಧಿಸಿ ವಿಚಾರಣೆ ನಡೆಸಿತ್ತು. ಅವರ ಮನೆಯ ಮೇಲೂ ತನಿಖಾ ತಂಡವು ದಾಳಿ ನಡೆಸಿ ದಾಖಲೆ ವಶಕ್ಕೆ ಪಡೆದಿತ್ತು.

ಆರ್ಥಿಕ ದುರ್ಬಲರಿಗೆ ವಸತಿ ಸಮುಚ್ಚಯ ಕಾಮಗಾರಿ ವಿಳಂಬ

ಆಯುಕ್ತರ ಹಾಜರಿಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಈಜಿಪುರದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ವಿತರಿಸಬೇಕಾದ ಉದ್ದೇಶಿತ ವಸತಿ ಸಮುಚ್ಚಯದ ನಿರ್ಮಾಣ ಕಾಮಗಾರಿ ವಿಳಂಬದ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮುಖ್ಯ ಆಯುಕ್ತರು ಮತ್ತು ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತರು ನ್ಯಾಯಾಲಯಕ್ಕೆ ಖುದ್ದು ಹಾಜರಾಗಿ ವಿವರಣೆ ನೀಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ‘ಕರ್ನಾಟಕ ಈಜಿಪುರ ನಿವಾಸಿಗಳ ಸಾಮಾಜಿಕ ಕಲ್ಯಾಣ ಸಂಘ’ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ‘ಕಾಮಗಾರಿಯಲ್ಲಿ ಕಿಂಚಿತ್ತೂ ಪ್ರಗತಿಯಾಗಿಲ್ಲ. ಇದರ ಹೊಣೆ ಹೊರಬೇಕಾದ ಸಂಸ್ಥೆಗಳು ಪರಸ್ಪರ ಹೊಣೆಯನ್ನು ವರ್ಗಾಯಿಸುತ್ತಾ ಆರೋಪ–ಪ್ರತ್ಯಾರೋಪ ಮಾಡುತ್ತಿರುವುದು ದುರದೃಷ್ಟಕರ’ ಎಂದು ಬೇಸರ ವ್ಯಕ್ತಪಡಿಸಿತು.

‘ಕಾಮಗಾರಿಯಲ್ಲಿ ಏನಾದರೂ ಪ್ರಗತಿ ಆಗಿದೆಯೊ ಇಲ್ಲವೊ ಎಂಬುದನ್ನು ತಿಳಿದುಕೊಳ್ಳಲು ನ್ಯಾಯಾಲಯ ಬಯಸುತ್ತದೆ. ಆದ್ದರಿಂದ, ಬಿಬಿಎಂಪಿ, ಬಿಡಿಎ ಮುಖ್ಯಸ್ಥರು ಮತ್ತು ಗುತ್ತಿಗೆದಾರ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಇದೇ 5ರಂದು ನ್ಯಾಯಾಲಯಕ್ಕೆ ಹಾಜರಾಗಿ ವಿವರಣೆ ನೀಡಬೇಕು’ ಎಂದು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಎಚ್ಚರಿಕೆ: ‘ಕಾಮಗಾರಿ ವಿಳಂಬಕ್ಕೆ ಕಾರಣವಾದ ಗುತ್ತಿಗೆದಾರಾದ ಮೆವರಿಕ್ ಹೋಲ್ಡಿಂಗ್ ಕಂಪನಿಯನ್ನು ನ್ಯಾಯಪೀಠವು ಕಳೆದ ವಿಚಾರಣೆ ವೇಳೆ ತರಾಟೆಗೆ ತೆಗೆದುಕೊಂಡಿತ್ತು. ಕೋರ್ಟ್ ಆದೇಶ ನೀಡಿ ದಶಕವೇ ಕಳೆದರೂ ಕಾಮಗಾರಿ ಅನುಷ್ಠಾನಗೊಂಡಿಲ್ಲ ಎಂದು ಹರಿಹಾಯ್ದಿತ್ತು. ಇದೇ ಪರಿಸ್ಥಿತಿ ಮುಂದುವರೆದರೆ, ಕಾಮಗಾರಿ ಪೂರ್ಣಗೊಳ್ಳುವವರೆಗೆ ಅರ್ಜಿದಾರರಿಗೆ ಬಾಡಿಗೆ ಹಣ ನೀಡಬೇಕಾಗುತ್ತದೆ’ ಎಂದು ಎಚ್ಚರಿಸಿತ್ತು.

‘ನಕ್ಷೆ ಅನುಮೋದನೆಯಾದ 18 ತಿಂಗಳೊಳಗೆ ವಸತಿಗೃಹ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು. ಇದಕ್ಕಾಗಿ ಕಾಮಗಾರಿಯ ಗುತ್ತಿಗೆ ಪಡೆದ ಮೇವರಿಕ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಮುಚ್ಚಳಿಕೆ ಬರೆದುಕೊಡಬೇಕು’ ಎಂದು ಹೈಕೋರ್ಟ್ 2017ರ ಮೇ31ರಂದು ಆದೇಶಿಸಿತ್ತು. ಅದರಂತೆ ಕಾಮಗಾರಿ ಆರಂಭಗೊಂಡರೂ ಈ ತನಕ ಪೂರ್ಣಗೊಂಡಿಲ್ಲ. ಈಜಿಪುರದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 1,512 ಮನೆಗಳ ನಿರ್ಮಾಣಕ್ಕೆ ಉದ್ದೇಶಿಸಲಾಗಿದೆ.

ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ವತಿಯಿಂದ ಜನವರಿ 19ರಿಂದ 29ರ ವರೆಗೆ ಲಾಲ್‌ಬಾಗ್‌ನಲ್ಲಿ ‘ಬೆಂಗಳೂರು ನಗರ ಇತಿಹಾಸ’ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ ಹಾಗೂ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಆಲಂಕಾರಿಕ ತೋಟಗಳ ಸ್ಪರ್ಧೆ, ತಾರಸಿ, ಕೈ ತೋಟಗಳು, ತರಕಾರಿ ಮತ್ತು ಔಷಧಿ ಗಿಡಗಳು, ಕುಂಡಗಳಲ್ಲಿ ಬೆಳೆದ ಗಿಡಗಳು, ಇಕೆಬಾನ, ಜಾನೂರು ಆರ್ಟ್, ಥಾಯ್ ಆರ್ಟ್ ಸೇರಿ ಇತರೆ ಪೂರಕ ಕಲೆಗಳಿಗೆ ಸಂಬಂಧಿಸಿದ ಸ್ಪರ್ಧೆಗಳಲ್ಲಿ ಭಾಗವಹಿಸುವ ಆಸಕ್ತರು ಜ. 9ರೊಳಗೆ ಅರ್ಜಿಗಳನ್ನು ಲಾಲ್‌ಬಾಗ್‌ನ ತೋಟಗಾರಿಕೆ ಕಚೇರಿಯಿಂದ ಪಡೆದುಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 6364037030, 9916433061, ಇಲಾಖಾ ಮಳಿಗೆಗಳು (9845807374)ಗೆ ಸಂಪರ್ಕಿಸಿ.

ಆಸ್ತಿ ತೆರಿಗೆ ಬಾಕಿ: ವಾರೆಂಟ್ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂರು ವರ್ಷದಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಆಸ್ತಿ ಮಾಲೀಕರಿಗೆ ಕಂದಾಯ ವಿಭಾಗದ ವತಿಯಿಂದ ವಾರೆಂಟ್ ಜಾರಿ ಮಾಡಲಾಗುತ್ತಿದೆ.

ಶಾಂತಿನಗರ ಉಪ ವಿಭಾಗದಲ್ಲಿ 2020–21ರಿಂದ ₹30.80 ಲಕ್ಷ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಸೋಮೇಶ್ವರ ಬಿಲ್ಡರ್ಸ್ ಹಾಗೂ 2013–14ರಿಂದ ₹54.56 ಲಕ್ಷ ಬಾಕಿ ಉಳಿಸಿಕೊಂಡಿರುವ ಸೇಂಟ್ ಮಾರ್ಕ್ ರಸ್ತೆಯಲ್ಲಿರುವ ಪ್ರೆಸಿಡೆನ್ಸಿ ಬಿಲ್ಡರ್ಸ್‌ಗೆ ಬುಧವಾರ ಬಿಬಿಎಂಪಿ ಅಧಿಕಾರಿಗಳು ವಾರೆಂಟ್ ನೀಡಿದರು.

‘ಬಿಬಿಎಂಪಿ ಮುಖ್ಯ ಆಯುಕ್ತರ ಸೂಚನೆ ಮೇರೆಗೆ 3 ವರ್ಷದಿಂದ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಣಿಜ್ಯ ಕಟ್ಟಡಗಳನ್ನು ಗುರುತಿಸಿ, ದಿನಕ್ಕೆ ಮೂವರಿಗೆ ವಾರೆಂಟ್ ವಿತರಿಸಲಾಗುತ್ತಿದೆ. ಕೂಡಲೇ ಆಸ್ತಿ ತೆರಿಗೆ ಪಾವತಿಸಿ ಎಂಬ ಸೂಚನೆ ಇದಾಗಿದ್ದು, ಇದನ್ನು ಪಾಲಿಸದಿದ್ದರೆ ಜಪ್ತಿ ಮಾಡಲಾಗುತ್ತದೆ’ ಎಂದು ಶಾಂತಿನಗರ ವಿಭಾಗದ ಸಹಾಯಕ ಕಂದಾಯ ಅಧಿಕಾರಿ ಬಸವರಾಜು ತಿಳಿಸಿದರು.

ಉಪವಿಭಾಗ ವ್ಯಾಪ್ತಿಯ ಶಾಂತಲಾನಗರ, ನೀಲಸಂದ್ರ, ಶಾಂತಿನಗರ ವಾರ್ಡ್‌ಗಳಲ್ಲಿ ₹28.18 ಕೋಟಿ ಬಾಕಿ ಇದ್ದು, ಪ್ರಸಕ್ತ ವರ್ಷ ₹111.89 ಕೋಟಿ ಆಸ್ತಿ ತೆರಿಗೆ ಸೇರಿ ಒಟ್ಟು ₹140.07 ಕೋಟಿ ಸಂಗ್ರಹವಾಗಬೇಕಿದೆ. ಇದರಲ್ಲಿ ಒಟ್ಟಾರೆ ₹107.61 ಕೋಟಿ (ಶೇ 76.83) ಸಂಗ್ರಹಿಸಲಾಗಿದೆ ಎಂದರು.

ಹಣ ದುರುಪಯೋಗ ಪ್ರಕರಣ: ಸಿಸಿಬಿ ತನಿಖೆ ಸಾಧ್ಯತೆ

ಬೆಂಗಳೂರು: ಗ್ರಾಹಕರಿಂದ ಸಂಗ್ರಹಿಸಿದ್ದ ನೀರಿನ ಶುಲ್ಕವನ್ನು ಜಲ ಮಂಡಳಿಗೆ ಪಾವತಿಸದೇ ಕೋಟ್ಯಂತರ ರೂಪಾಯಿ ವಂಚಿಸಿರುವ ಪ್ರಕರಣದ ತನಿಖೆಯನ್ನು ಸಿಸಿಬಿ ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ. ಸಿಸಿಬಿಗೆ ವರ್ಗಾಯಿಸುವ ಸಂಬಂಧ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಚರ್ಚಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ನಗರದ ಬೇರೆ ಬೇರೆ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿದ್ದು, ಆಯಾ ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದರು ಎಂದು ಮೂಲಗಳು ಹೇಳಿವೆ.

ಹಣ ದುರುಪಯೋಗ ಪ್ರಕರಣ ಸಂಬಂಧ ಕಾರ್ಯನಿರ್ವಾಹಕ ಎಂಜಿನಿಯರ್ ಆರ್.ಶ್ರೀನಿವಾಸ್ ಸೇರಿದಂತೆ 13 ಮಂದಿ ನೌಕರರನ್ನು ಮಂಗಳವಾರ ಅಮಾನತು ಮಾಡಲಾಗಿದೆ.

ಓಲಾದಿಂದ ಇ.ವಿ. ಕ್ಯಾಬ್ ಸೇವೆ

ಬೆಂಗಳೂರು: ಓಲಾ ಕಂಪನಿಯು ವಿದ್ಯುತ್ ಚಾಲಿತ ಕ್ಯಾಬ್‌ಗಳ ಸೇವೆಯನ್ನು ಆರಂಭಿಸಲು ಸಿದ್ಧತೆ ನಡೆಸಿದೆ. ಕಂಪನಿಯು ಇ.ವಿ. ಕ್ಯಾಬ್‌ಗಳ ಸೇವೆಯನ್ನು ಮೊದಲಿಗೆ ಪರೀಕ್ಷಾರ್ಥವಾಗಿ ಕೆಲವೇ ವಾರಗಳಲ್ಲಿ ಆರಂಭಿಸಲಿದೆ.

ಕಂಪನಿಯು ಒಟ್ಟು 10 ಸಾವಿರ ಇ.ವಿ. ಕ್ಯಾಬ್‌ಗಳ ಸೇವೆ ಒದಗಿಸುವ ಉದ್ದೇಶ ಹೊಂದಿದೆ ಎಂದು ಬುಧವಾರ ತಿಳಿಸಿದೆ. ಇ.ವಿ. ಕ್ಯಾಬ್ ಸೇವೆಗಳನ್ನು ಪಡೆಯುವವರಿಗೆ ಶೂನ್ಯ ಕ್ಯಾನ್ಸಲೇಷನ್ ಶುಲ್ಕ, ಶೇಕಡ 100ರಷ್ಟು ನಗದು ರಹಿತ ಪಾವತಿ ಸೌಲಭ್ಯಗಳನ್ನು ನೀಡಲಾಗುವುದು.

‘ಪರಿಸರ ಸ್ನೇಹಿ ಪ್ರಯಾಣದ ಅನುಭವವನ್ನು ನಾವು ಹಂತ ಹಂತವಾಗಿ ಒಟ್ಟು 50 ಕೋಟಿ ಭಾರತೀಯರಿಗೆ ಒದಗಿಸಲಿದ್ದೇವೆ’ ಎಂದು ಓಲಾ ಎಲೆಕ್ಟ್ರಿಕ್ ಕಂಪನಿಯ ಸಿಇಒ ಭವೀಶ್ ಅಗರ್ವಾಲ್ ಹೇಳಿದ್ದಾರೆ.

ನೈಋತ್ಯ ರೈಲ್ವೆ G20

ಸೂಚನೆ ಸಂ. 02/2022-23

ನೇರ ಸಂದರ್ಶನ

ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ಗದಗ ರಸ್ತೆಯಲ್ಲಿರುವ ಕೇಂದ್ರೀಯ ಆಸ್ಪತ್ರೆಯಲ್ಲಿ ಸೀನಿಯರ ಹೌಸ ಸರ್ಜನ್ ನೇಮಕಾತಿಯ ಸಲುವಾಗಿ ದಿನಾಂಕ 20.01.2023 ರಂದು ಬೆಳಿಗ್ಗೆ 11.00 ರಿಂದ 1.00 ರ ವರೆಗೆ ನೇರ ಸಂದರ್ಶನವನ್ನು ನಡೆಸಲಾಗುವುದು.

ಸೀನಿಯರ ಹೌಸ ಸರ್ಜನ್ ನೇಮಕಾತಿಗಾಗಿ ಅರ್ಹತೆ, ವಯಸ್ಸು ಮತ್ತು ಅವಧಿಯ ವಿವರಗಳನ್ನು ಕೆಳಗೆ ತಿಳಿಸಲಾಗಿದೆ. ಆಸಕ್ತಿಯುಳ್ಳ ಅಭ್ಯರ್ಥಿಗಳು ಕೆಳಗಿನ ದಸ್ತಾವೇಜುಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಬಹುದು.

ಹುದ್ದೆಗಳ ಸಂಖ್ಯೆ: 02 ಸಂ.
ವಿದ್ಯಾರ್ಹತೆ: ಎಂಬಿಬಿಎಸ್
ವಯಸ್ಸು: 37 ವರ್ಷದೊಳಗಿರಬೇಕು
ಸಂಭಾವನೆ: ಪ್ರತಿ ತಿಂಗಳಿಗೆ ರೂ. 45,000/–
ಅವಧಿ: ಪ್ರತೀ ಅವಧಿಯು ನೇಮಕಾತಿಯ ದಿನಾಂಕದಿಂದ ಆರು ತಿಂಗಳುಗಳು (ಒಟ್ಟು ಎರಡು ವರ್ಷಗಳು – ಆರು ತಿಂಗಳುಗಳ ಅವಧಿ)
ದಸ್ತಾವೇಜುಗಳು: ಅರ್ಜಿ, ಅಂಕಪಟ್ಟಿ (ಮೂಲ ಪ್ರತಿ ಹಾಗೂ ಒಂದು ಸೆಟ್ ನಕಲು ಪ್ರತಿ). ನೋಂದಣಿ ಮತ್ತು ಅನುಭವದ ಪ್ರಮಾಣ ಪತ್ರವಿದ್ದಲ್ಲಿ ತರಬಹುದು.

ಹೆಚ್ಚಿನ ವಿವರಗಳಿಗಾಗಿ ಕೆಳಕಂಡ ಸಹಿದಾರರ ಕಚೇರಿಯನ್ನು ಯಾವುದೇ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ರಿಂದ ಸಂಜೆ 6.00 ರೊಳಗೆ ದಿನಾಂಕ 19.01.2023ರ ವರೆಗೆ ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ವೈದ್ಯಕೀಯ ನಿರ್ದೇಶಕರು, ಕೇಂದ್ರೀಯ ಆಸ್ಪತ್ರೆ, ಹುಬ್ಬಳ್ಳಿ

PUB/589/AAD/PRB/SWR/2022-23

S.W.Railways · SWRRLY · SWRRLY

COMMANDER WORKS ENGINEER (AIR FORCE) NORTH,
Bellary Road, JC Nagar-post, Bangalore – 560 006

NOTICE

Late Ekantappa GS, S/o Late Shivalingappa G K, proprietor of the firm M/s. Gnani Builders residing at No 28, 4th Cross, 1st Main, Attur Layout, Yelahanka, Bangalore, Karnataka State, Pin : 560 064, who was engaged as a contractor for carrying out certain works of the Military Engineer Services by the president of India is reported to have died on 09 Sep 2022.

And whereas the Department is aware only of existence of the following legal representatives of the deceased :-

1. Smt B Vishala - Wife
2. Shri Madhu GE - Son

And whereas the Department is interested in knowing the names of all the legal representatives of the deceased with a view to decide the further course of action relating to contracts, NOTICE is hereby given to all persons claiming to be the legal representatives of the deceased contractor that they should indicate their names and addresses to Commander Works Engineer (AF) North, Military Engineer Services, Bellary Road, JC Nagar – Post, Bangalore – 560 006 by 15 Jan 2023.

Sd/- (CWE (AF) North Bangalore)

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/69/2022–23 ದಿನಾಂಕ: 04–01–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸದೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ರವರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ವೆಂಕಟೇಶ್. ಆರ್.ಸಿ. ಬಿನ್ ಲೇಟ್ ಚನ್ನಗಿರಿಯಪ್ಪ	ನೆಲಮಂಗಲ	ಕಸಬಾ	ಮಂಟನ ಕುರ್ಚಿ	164/5	01–26	ವ್ಯವಸಾಯ	ವಸತಿ
					ಒಟ್ಟು	01-26		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯನ್ನು ಪಡೆದು, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಂತೆ ಸುಸಜ್ಜಿತವಾದ ವಸತಿ ಬಡಾವಣೆಯನ್ನು ನಿರ್ಮಿಸಿ, ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿ ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **“ವ್ಯವಸಾಯ”** ವಲಯದಿಂದ **“ವಸತಿ”** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/3869/ಅಡ್ವರ್ಟೋರ್/2022–23

ಸಂಕ್ಷಿಪ್ತ ಸುದ್ದಿ

ಪಕ್ಷಿಯ ಪ್ರಾಣ ಉಳಿಸಿದ ಕಾನ್‌ಸ್ಟೆಬಲ್

ಬೆಂಗಳೂರು: ರಾಜಾಜಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಕ್ಕಳು ಹಾರಿಬಿಟ್ಟಿದ್ದ ಗಾಳಿಪಟದ ದಾರಕ್ಕೆ ಸಿಲುಕಿ ಒದ್ದಾಡುತ್ತಿದ್ದ ಕಾಗೆಯ ಪ್ರಾಣವನ್ನು ಸಂಚಾರ ವಿಭಾಗದ ಕಾನ್‌ಸ್ಟೆಬಲ್ ಉಳಿಸಿದ್ದು, ಅವರ ಮಾನವೀಯ ಕಾರ್ಯವನ್ನು ಸಾರ್ವಜನಿಕರು ಶ್ಲಾಘಿಸಿದ್ದಾರೆ.

ದಾರಕ್ಕೆ ಸಿಲುಕಿದ ಕಾಗೆಯು ಜೀವನ್ಮರಣ ಸ್ಥಿತಿಯಲ್ಲಿತ್ತು. ಇದನ್ನು ಗಮನಿಸಿದ ಸುರೇಶ್, ಎತ್ತರದ ಕಂಬವನ್ನೇರಿ ಕಾಗೆಯ ಪ್ರಾಣ ಉಳಿಸಿದ್ದಾರೆ. ಸಮವಸ್ತ್ರದಲ್ಲೇ ಮರ ಏರಿ ಕಾಗೆಯ ರಕ್ಷಣೆ ಮಾಡುತ್ತಿದ್ದ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ. ಇದನ್ನು ಗಮನಿಸಿದ ಶಾಸಕ ಸುರೇಶ್ ಕುಮಾರ್, ಸುರೇಶ್ ಅವರನ್ನು ಸನ್ಮಾನಿಸಿದ್ದಾರೆ.

‘128 ಮಹಿಳಾ ಕ್ಲಿನಿಕ್‌ಗಳು ಕಾರ್ಯಾರಂಭ’

ಬೆಂಗಳೂರು: ‘ಕಳೆದ ವರ್ಷ ಆರೋಗ್ಯ ಕ್ಷೇತ್ರದ ಮೂಲಸೌಕರ್ಯ ವೃದ್ಧಿಯಲ್ಲಿ ಗಮನಾರ್ಹ ಸಾಧನೆಯಾಗಿದೆ.128 ಮಹಿಳಾ ಕ್ಲಿನಿಕ್‌ಗಳು ಮತ್ತು ನಗರ ಪ್ರದೇಶಗಳಲ್ಲಿ 128 ಪಾಲಿಕ್ಲಿನಿಕ್‌ಗಳು ಕಾರ್ಯಾರಂಭ ಮಾಡುವ ಹಂತದಲ್ಲಿವೆ’ ಎಂದು ಆರೋಗ್ಯ ಸಚಿವ ಡಾ.ಕೆ ಸುಧಾಕರ್ ತಿಳಿಸಿದ್ದಾರೆ.

ವರ್ಷದ ಸಾಧನೆಗಳ ಮಾಹಿತಿಯನ್ನು ಅವರು ಹಂಚಿಕೊಂಡಿದ್ದು, ‘ಕೇಂದ್ರ, ರಾಜ್ಯ ಸರ್ಕಾರಗಳ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲಾಗಿದೆ. ಕರ್ನಾಟಕವು ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು, ಆರೋಗ್ಯ ವಲಯದಲ್ಲಿ ಮಾದರಿ ರಾಜ್ಯವಾಗಿ ಹೊರಹೊಮ್ಮಿದೆ. ನಾಗರಿಕ ಸಹಾಯವಾಣಿಯನ್ನು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೂ ವಿಸ್ತರಿಸಲಾಗುತ್ತಿದೆ’ ಎಂದಿದ್ದಾರೆ.

ಒಂದು ವರ್ಷದ ಅವಧಿಯಲ್ಲಿ 153 ಅತ್ಯಾಚಾರ ಪ್ರಕರಣ ದಾಖಲು, ಸೈಬರ್ ವಂಚನೆ ಪ್ರಕರಣ ಏರಿಕೆ

ಮಹಿಳಾ ದೌರ್ಜನ್ಯ ಪ್ರಕರಣ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷಕ್ಕೆ ಹೋಲಿಸಿದರೆ, 2022ನೇ ಸಾಲಿನಲ್ಲಿ ಕೊಲೆ, ಸುಲಿಗೆ, ಡಕಾಯಿತಿ, ಸರ ಅಪಹರಣ, ಮನೆಯಲ್ಲಿದ್ದ ಚಿನ್ನಾಭರಣ ಕಳವು, ವಾಹನ ಕಳವು ಪ್ರಕರಣಗಳು ಇಳಿಕೆ ಕಂಡಿದ್ದರೂ ಸಿಲಿಕಾನ್ ಸಿಟಿಯಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಪ್ರಕರಣಗಳು ಈ ಸಾಲಿನಲ್ಲಿ ಏರಿಕೆಯಾಗಿವೆ.

‘ವರದಕ್ಷಿಣೆ ಕಾಯ್ದೆ, ಪೋಕ್ಸೊ, ದೌರ್ಜನ್ಯ ಸೇರಿದಂತೆ ಇತರೆ ಪ್ರಕರಣಗಳು ಶೇ 30ರಷ್ಟು ಏರಿಕೆಯಾಗಿವೆ’ ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

‘ಮಹಿಳೆಯರು ಹಾಗೂ ಯುವತಿಯರಲ್ಲಿ ಹೆಚ್ಚು ಜಾಗೃತಿ ಮೂಡಿದ್ದು, ದೌರ್ಜನ್ಯಕ್ಕೆ ಒಳಗಾದವರು ಪ್ರಕರಣ ದಾಖಲಿಸುತ್ತಿದ್ದಾರೆ. ಇದರಿಂದ ಪ್ರಕರಣಗಳು ಏರಿಕೆಯಾಗಿವೆ’ ಎಂದರು.

‘ಕಳೆದ ವರ್ಷ ಹಿಜಾಬ್ ಸಂಬಂಧದ ಗಲಾಟೆ, ಕಾರ್ಮಿಕ, ರೈತರ ಹಾಗೂ ಸಂಘ ಸಂಸ್ಥೆಗಳಿಂದ ನಗರದಲ್ಲಿ ಒಟ್ಟು 500 ಪ್ರತಿಭಟನೆಗಳು ನಡೆದಿವೆ. ಎಲ್ಲಿಯೂ ಅಹಿತಕರ ಘಟನೆ ನಡೆದಿಲ್ಲ. ಪುನೀತ್‌ರಾಜ್‌ಕುಮಾರ್ ಪುಣ್ಯ ಸ್ಮರಣೆ ಹಾಗೂ ಕರ್ನಾಟಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಮೇಕೆದಾಟು ಪಾದಯಾತ್ರೆ, ಚಾಮರಾಜಪೇಟೆ ಮೈದಾನ ವಿಚಾರದಲ್ಲಿ ಉತ್ತಮವಾಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು’ ಎಂದು ತಿಳಿಸಿದರು.

‘ವೈಯಕ್ತಿಕ, ಕೌಟುಂಬಿಕ, ಆಸ್ತಿ, ಅನೈತಿಕ ಸಂಬಂಧ ಕಾರಣಕ್ಕೆ ಕೊಲೆಗಳು ನಡೆದಿವೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ಡಕಾಯಿತಿಯಲ್ಲಿ ಶೇ 41ರಷ್ಟು, ಸುಲಿಗೆ ಶೇ 6, ಸರ ಅಪಹರಣ ಶೇ 33, ಮನೆ ಕನ್ನ ಪ್ರಕರಣದಲ್ಲಿ ಶೇ 31ರಷ್ಟು ಇಳಿಕೆಯಾಗಿವೆ. ಈ ವರ್ಷವೂ ತಂತ್ರಜ್ಞಾನ ಬಳಸಿಕೊಂಡು, ಆರೋಪಿಗಳ ಪತ್ತೆಹಚ್ಚಲಾಗುವುದು’ ಎಂದು ಹೇಳಿದರು. 2022ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ನಗರದಲ್ಲಿ ನಡೆದಿದ್ದ ಅಪರಾಧ ಪ್ರಕರಣಗಳ ವರದಿಯನ್ನು ಪೊಲೀಸರು ಬುಧವಾರ ಬಿಡುಗಡೆ ಮಾಡಿದ್ದು, ಅಂಕಿಅಂಶ ಇಲ್ಲಿದೆ.

ಅಪರಾಧ ಪ್ರಕರಣಗಳು

ಕ್ರಮ ಸಂಖ್ಯೆ	ಅಪರಾಧದ ಮಾದರಿ	2021 ವರದಿಯಾದ ಪ್ರಕರಣ	2021 ಪತ್ತೆ ಹಚ್ಚಿದ ಪ್ರಕರಣ	2022 ವರದಿ	2022 ಪತ್ತೆ
1	ಕೊಲೆ	154	152	172	172
2	ಡಕಾಯಿತಿ	36	36	23	22
3	ದರೋಡೆ	364	325	478	351
4	ಚಿನ್ನ ಕಸಿದು ಪರಾರಿ	166	165	151	134
5	ಚಿನ್ನಾಭರಣ ಕಳವು (ಹಗಲು)	135	77	179	70
6	ಚಿನ್ನಾಭರಣ ಕಳವು (ರಾತ್ರಿ)	654	354	701	229
7	ವಾಹನ ಕಳವು	4,124	1,556	5,066	1,189
8	ಇತರೆ ಕಳವು	1,941	915	2,511	561
	ಒಟ್ಟು	7,574	3,580	9,281	2,728



ಬೆಂಗಳೂರು ನಗರ

ವ್ಹೀಲಿಂಗ್ ವಿರುದ್ಧ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗುವುದು.
– **ಅನುಚೇತ್**, ಜಂಟಿ ಪೊಲೀಸ್ ಆಯುಕ್ತ, ಸಂಚಾರ ವಿಭಾಗ

ನಗರದಲ್ಲಿ ದಾಖಲಾದ ಪ್ರಕರಣಗಳನ್ನು ವೈಜ್ಞಾನಿಕ ವಿಧಾನಗಳಿಗೆ ಒತ್ತು ನೀಡಿ ತನಿಖೆ ಕೈಗೊಳ್ಳಲಾಗುತ್ತಿದೆ.
– **ಪ್ರತಾಪ್ ರೆಡ್ಡಿ**, ನಗರ ಪೊಲೀಸ್ ಕಮಿಷನರ್

ಸೈಬರ್ ಅಪರಾಧ

7,734 ಆರೋಪಿಗಳ ಪತ್ತೆಹಚ್ಚಲಾದ ಪ್ರಕರಣಗಳು

₹13.6 ಕೋಟಿ ಆರೋಪಿಗಳಿಂದ ಜಪ್ತಿ ಮಾಡಿದ ಮೊತ್ತ

ಮಾದಕ ವಸ್ತುಗಳ ಪ್ರಕರಣಗಳ ವಿವರ

579 ಡ್ರಗ್ಸ್ ಪೆಡ್ಲರ್‌ಗಳ ವಿರುದ್ಧ ಕ್ರಮ

3,448 ಮಾದಕ ವಸ್ತುಗಳ ಸೇವನೆ ಮಾಡಿದವರ ವಿರುದ್ಧ ಕ್ರಮ

3,746 ಕೆ.ಜಿ ಗಾಂಜಾ ವಶ

167 ಕೆ.ಜಿ ಇತರೆ ಮಾದಕ ವಸ್ತು ವಶ

₹89.53 ಕೋಟಿ ಮಾದಕ ವಸ್ತುಗಳನ್ನು ವಶಕ್ಕೆ ಪಡೆದ ಮೌಲ್ಯ

ನಗರ ಸುರಕ್ಷಾ ಯೋಜನೆ ಏನು–ಎತ್ತ?

- ಸೇಫ್ ಸಿಟಿ ಯೋಜನೆ ಅಡಿ ನಗರದಲ್ಲಿ 4,100 ಕ್ಯಾಮೆರಾಗಳ ಅಳವಡಿಕೆ
- ಮಕ್ಕಳ ಮತ್ತು ಮಹಿಳೆಯರ ಸುರಕ್ಷತೆ ಬಗ್ಗೆ 50 ‘ಸೇಫ್ ಐಲ್ಯಾಂಡ್’, 60 ‘ವುಮೆನ್ ಔಟ್‌ಪೋಸ್ಟ್’, 8 ಆಸ್ಪತ್ರೆಗಳಲ್ಲಿ ‘ಕ್ರಿಟಿಕಲ್ ಕೇರ್ ರೆಸ್ಪಾನ್ಸ್ ಯುನಿಟ್’ಗಳ ಅನುಷ್ಠಾನ ಕಾರ್ಯ ಪ್ರಗತಿಯಲ್ಲಿದೆ.

ಕಾಣೆಯಾಗಿದ್ದಾರೆ

ರಾಜು (ಕೊಪ್ಪ)

ರಾಜು ವಯಸ್ಸು: 65 ಎತ್ತರ: 5', ಬಣ್ಣ: ಗೋಧಿಬಣ್ಣ, ಸಾಧಾರಣ ಮೈಕಟ್ಟು ಇವರು ಪಿಂಕ್ ಶರ್ಟ್, ಬ್ಲ್ಯಾಕ್ ಪ್ಯಾಂಟ್ ಧರಿಸಿದ್ದು, ಕೈ ಮೇಲೆ ಗಂಟುಗಂಟಾದ ಗುಳ್ಳೆಗಳು ಇವೆ. ಇವರು ಕನ್ನಡ, ತಮಿಳು ಮಾತನಾಡುತ್ತಾರೆ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕಿನವರು ಬೆಂಗಳೂರಿನ ವೈಟ್‌ಫೀಲ್ಡ್‌ನಿಂದ ಕಾಣೆಯಾಗಿದ್ದಾರೆ. ಇವರ ಬಗ್ಗೆ ಮಾಹಿತಿ ಸಿಕ್ಕರೆ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕೆಳಗಿನ ಮೊಬೈಲ್‌ಗೆ ಕರೆ ಮಾಡಿ:

7899076615/ 9535536228

ಪ್ರಿಫಿಕ್ಸ್‌ಡ್ ಆಟೊ ಬೂತ್‌ಗೆ ಚಾಲನೆ

ಒಂದನೇ ಪುಟದಿಂದ...

ಬೈಯಪ್ಪನಹಳ್ಳಿ, ಬನಶಂಕರಿಯಲ್ಲಿ ತಲಾ ಒಂದು ಮತ್ತು ನಾಗಸಂದ್ರ ಮೆಟ್ರೊ ನಿಲ್ದಾಣದಲ್ಲಿ ಎರಡು ಬೂತ್‌ಗಳನ್ನು ತೆರೆಯಲಾಗುವುದು. ಮೆಟ್ರೊ ನಿಲ್ದಾಣಕ್ಕೆ ಬರುವ ಮತ್ತು ನಿಲ್ದಾಣದಿಂದ ಮನೆ ತಲುಪಲು ಈ ಪ್ರಿಫಿಕ್ಸ್‌ಡ್ ಆಟೊ ಬೂತ್‌ಗಳು ಅನುಕೂಲ ಆಗಲಿವೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಪ್ರತಿದಿನ ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 12.30ರವರೆಗೆ ಪೊಲೀಸ್ ಮತ್ತು ಬಿಎಂಆರ್‌ಸಿಎಲ್ ಸಿಬ್ಬಂದಿ ಜಂಟಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಆಟೊರಿಕ್ಷಾ ಪ್ರಯಾಣ ದರವು 2 ಕಿಲೋ ಮೀಟರ್‌ಗೆ ₹30 ಮತ್ತು ನಂತರದ ಪ್ರತಿ ಕಿಲೋ ಮೀಟರ್‌ಗೆ ₹15 ಇದೆ. ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಸಾಮಾನ್ಯ ದರಕ್ಕಿಂತ ಒಂದೂವರೆ ಪಟ್ಟು ಹೆಚ್ಚಾಗಿರಲಿದೆ.

‘ತಲುಪಬೇಕಿರುವ ನಿಖರ ಸ್ಥಳವನ್ನು ಪ್ರಯಾಣಿಕರು ಈ ಕೌಂಟರ್‌ಗಳಲ್ಲಿ ತಿಳಿಸಬೇಕು. ಚಾಲಕ ಮತ್ತು ಪ್ರಯಾಣಿಕರ ದೂರವಾಣಿ ಸಂಖ್ಯೆ, ಆಟೊರಿಕ್ಷಾ ನೋಂದಣಿ ಸಂಖ್ಯೆಯನ್ನು ಇಲ್ಲಿ ದಾಖಲಿಸಿಕೊಳ್ಳಲಾಗುತ್ತದೆ. ಪ್ರಯಾಣದ ಕೊನೆಯಲ್ಲಿ ಪಾವತಿಸಬೇಕಾದ ಮೊತ್ತವನ್ನೂ ಒಳಗೊಂಡ ಪ್ರಯಾಣದ ಚೀಟಿಯನ್ನು ಇಲ್ಲೇ ನೀಡಲಾಗುತ್ತದೆ. ಈ ಬೂತ್‌ಗಳಲ್ಲಿ ಪ್ರಯಾಣಿಕರು ಸೇವಾ ಶುಲ್ಕವಾಗಿ ₹2 ಪಾವತಿಸಬೇಕಾಗುತ್ತದೆ’ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ವಿವರಿಸಿದ್ದಾರೆ.

ಎಂ.ಜಿ.ರಸ್ತೆ ಮೆಟ್ರೊ ನಿಲ್ದಾಣದಲ್ಲಿ ಕಬ್ಬಿನ ಜ್ಯೂಸ್ ಮಳಿಗೆಗೂ ಇದೇ ವೇಳೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಚಾಲನೆ ನೀಡಿದರು.

ಎಂಸಿಎ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಜಡತ್ವ ತೊರೆದರೆ ಸರ್ಕಾರಿ ಸಂಸ್ಥೆಗಳಿಗೆ ಅಸ್ತಿತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಜಡತ್ವ ತೊರೆದು ಆಧುನಿಕ ಕಾಲಘಟ್ಟಕ್ಕೆ ತೆರೆದುಕೊಳ್ಳದೇ ಹೋದರೆ ಖಾಸಗಿ ಪೈಪೋಟಿ ಮಧ್ಯೆ ಅಸ್ತಿತ್ವ ಕಳೆದುಕೊಳ್ಳುವ ಅಪಾಯವಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎಚ್ಚರಿಸಿದರು.

ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಸಂಸ್ಥೆಯ (ಎಂಸಿಎ) ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಬುಧವಾರ ಮಾತನಾಡಿದರು.

90ರ ದಶಕದಲ್ಲಿ ಆರಂಭವಾದ ಖಾಸಗೀಕರಣ, ಜಾಗತೀಕರಣ, ಆಧುನೀಕರಣಗಳ ಫಲವಾಗಿ ಖಾಸಗಿ ಸಂಸ್ಥೆಗಳು ಪ್ರಾಬಲ್ಯಕ್ಕೆ ಬಂದವು.

ನಗರದಲ್ಲಿ ಬುಧವಾರ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಸಂಸ್ಥೆಯ ಸುವರ್ಣ ಮಹೋತ್ಸವ ಸಮಾರಂಭದಲ್ಲಿ (ಎಡದಿಂದ) ಸಿದ್ದಲಿಂಗಪ್ಪ ಬಿ.ಪೂಜಾರಿ, ಎಂ.ಎಸ್.ಕರಿಗೌಡ, ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಮುರುಗೇಶ್ ಆರ್. ನಿರಾಣಿ ಇದ್ದರು ಪ್ರಜಾವಾಣಿ ಚಿತ್ರ

ಅದುವರೆಗೂ ಪ್ರಬಲವಾಗಿದ್ದ ಸರ್ಕಾರಿ ಸಂಸ್ಥೆಗಳು ತೀವ್ರ ಪೈಪೋಟಿ ಎದುರಿಸಬೇಕಾಯಿತು. ಕ್ರಿಯಾಶೀಲತೆ, ದಕ್ಷತೆ ಮೈಗೂಡಿಸಿಕೊಂಡ ಸರ್ಕಾರಿ ಸಂಸ್ಥೆಗಳು ಮಾತ್ರ ಸ್ಪರ್ಧೆಯನ್ನು ಸಮರ್ಥವಾಗಿ ಎದುರಿಸಿ, ಅಸ್ತಿತ್ವ ಉಳಿಸಿಕೊಂಡವು. ಅಂಥ ಸಂಸ್ಥೆಗಳಲ್ಲಿ ಎಂಸಿಎ ಸಹ ಒಂದು. ಆಧುನಿಕ ಕಾಲಘಟ್ಟದಲ್ಲಿ ಇನ್ನಷ್ಟು ಕ್ರಿಯಾಶೀಲವಾಗಬೇಕಿದೆ. ಇಲ್ಲದಿದ್ದರೆ ಹಿನ್ನಡೆ ಅನುಭವಿಸಬೇಕಾಗುತ್ತದೆ ಎಂದು ಹೇಳಿದರು.

ಸರ್ಕಾರಿ ಸಂಸ್ಥೆಗಳು ಉತ್ತಮವಾಗಿ ಕೆಲಸ ಮಾಡಬೇಕು. ಉತ್ತಮ ಕಾರ್ಯದಕ್ಷತೆಯ ಜತೆಗೆ, ಸಾರ್ವಜನಿಕರ ವಿಶ್ವಾಸವನ್ನೂ ಗಳಿಸಬೇಕು. ಜನರ ಅನಿಸಿಕೆಗಳಿಗೆ ಮನ್ನಣೆ ನೀಡಬೇಕು. ಹಾಗಾದಾಗ ಅವುಗಳ ಅಸ್ತಿತ್ವ ಭದ್ರವಾಗುವ ಜತೆಗೆ, ಸರ್ಕಾರಕ್ಕೂ ಒಳ್ಳೆಯ ಹೆಸರು ಬರುತ್ತದೆ ಎಂದು ಸಲಹೆ ನೀಡಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಿದ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ‘ಸರ್ಕಾರಿ ಸಂಸ್ಥೆಗಳು ಖಾಸಗಿ ಕೆಲಸಗಳನ್ನೂ ನಿರ್ವಹಿಸುವ ಅವಕಾಶಗಳನ್ನು ಬಳಸಿಕೊಳ್ಳಬೇಕು. ಲಾಭದಾಯಕವಾಗಿ ಮುನ್ನಡೆಯಬೇಕು’ ಎಂದು ಕಿವಿಮಾತು ಹೇಳಿದರು.

ಸಂಸ್ಥೆಯ ನೂತನ ಲಾಂಛನ, ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿದ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ, ‘ಕೈಗಾರಿಕಾ ಕ್ಷೇತ್ರದಲ್ಲಿ ರಾಜ್ಯ ಗಮನಾರ್ಹ ಸಾಧನೆ ಮಾಡಿದೆ. ಜಾಗತಿಕ ಹೂಡಿಕೆದಾರರ ಸಮಾವೇಶಗಳ ಫಲವಾಗಿ ಸಾಕಷ್ಟು ಬಂಡವಾಳ ಹರಿದು ಬರುತ್ತಿದೆ’ ಎಂದು ವಿವರ ನೀಡಿದರು.

ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಶಾಸಕ ರಿಜ್ವಾನ್ ಅರ್ಷದ್, ಸಂಸ್ಥೆಯ ಅಧ್ಯಕ್ಷ ಎಂ.ಎಸ್.ಕರಿಗೌಡರ, ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗ ಬಿ.ಪೂಜಾರಿ, ನಿರ್ದೇಶಕ ವೀರೇಶ್ ಸಂಗಳದ ಉಪಸ್ಥಿತರಿದ್ದರು.

‘ಎನ್‌ಇಪಿ: ಸಾಂಸ್ಕೃತಿಕ ಚಟುವಟಿಕೆ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಜತೆಗೆ ದೈಹಿಕ ಶಿಕ್ಷಣ, ಡಿಜಿಟಲ್ ಮತ್ತು ಹಣಕಾಸು ಜಾಗೃತಿ ಕಲಿಕೆಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಗೂ ಕಡ್ಡಾಯಗೊಳಿಸಲಾಗಿದೆ. ಉಳಿದ ವಿಷಯಗಳ ಆಯ್ಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡಲಾಗಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಹೇಳಿದ್ದಾರೆ.

ಮಲ್ಲೇಶ್ವರದಲ್ಲಿರುವ ಸೇವಾ ಸದನದಲ್ಲಿ ಬುಧವಾರ ನಡೆದ ‘ಸಂಗೀತ ಸಂಭ್ರಮ’ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಎನ್‌ಇಪಿಯಲ್ಲಿ ನಮ್ಮತನಕ್ಕೆ ಒತ್ತು ಕೊಡಲಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಧಾಮಂತ್ರಿ ನರೇಂದ್ರ ಮೋದಿ ಅವರು ತರುತ್ತಿರುವ ಸಕಾರಾತ್ಮಕ ಬದಲಾವಣೆಗಳನ್ನು ರಾಜ್ಯ ಸರ್ಕಾರವು ಅಷ್ಟೇ ಉತ್ಸಾಹ ಮತ್ತು ಬದ್ಧತೆಗಳಿಂದ ಅನುಷ್ಠಾನಗೊಳಿಸುತ್ತಿದೆ.



ನಗರದಲ್ಲಿ ಬುಧವಾರ ನಡೆದ ‘ಸಂಗೀತ ಸಂಭ್ರಮ’ ಕಾರ್ಯಕ್ರಮವನ್ನು ಸಚಿವ ಅಶ್ವತ್ಥ ನಾರಾಯಣ ಉದ್ಘಾಟಿಸಿದರು

ಈ ಮೂಲಕ, ಸಾರ್ವಜನಿಕರು ಹಲವು ದಶಕಗಳಿಂದ ಎದುರು ನೋಡುತ್ತಿದ್ದಂತಹ ಪರಿವರ್ತನೆ ಬರುತ್ತಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಮಾಜದ ನಿಜವಾದ ಅಗತ್ಯಗಳೇನು ಎನ್ನುವುದನ್ನು ಪರಿಗಣನೆಗೆ ತೆಗೆದುಕೊಂಡು ಮುಂದಡಿ ಇಡಬೇಕು. ಎನ್‌ಇಪಿ ಜಾರಿಯಲ್ಲಿ ರಾಜ್ಯವು ಇಡೀ ದೇಶಕ್ಕೆ ಪ್ರಥಮ ಸ್ಥಾನದಲ್ಲಿದೆ’ ಎಂದರು.

ಕಾರ್ಯಕ್ರಮದಲ್ಲಿ ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಹಿರಿಯ ಸಂಗೀತ ಕಲಾವಿದೆ ಪುಸ್ತಕಂ ರಮಾ ಮುಂತಾದವರು ಉಪಸ್ಥಿತರಿದ್ದರು.

ಮಾತೃಭಾಷೆ ಕಡ್ಡಾಯಕ್ಕೆ ಕೇಂದ್ರದ ಅಸಹಕಾರ

ಒಂದನೇ ಪುಟದಿಂದ...

ಅದಕ್ಕೆ ಪೂರಕ ವಾಗಿ ಕೇಂದ್ರದ ‘ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಕಾಯ್ದೆ–2009’ರ ಸೆಕ್ಷನ್ 29 (2)(ಎಫ್)ಗೆ ತಿದ್ದುಪಡಿ ತರುವ ಮಸೂದೆಗೆ ವಿಧಾನಮಂಡಲದ ಒಪ್ಪಿಗೆ ಪಡೆಯಲಾಗಿತ್ತು.

ಕಾಯ್ದೆಯ ಸೆಕ್ಷನ್ 29 (2)(ಎಫ್) ನಲ್ಲಿ ‘ಶಿಕ್ಷಣ ಮಾಧ್ಯಮವು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಮಕ್ಕಳ ಮಾತೃಭಾಷೆಯಲ್ಲಿರತಕ್ಕದ್ದು’ ಎಂಬ ಅಂಶವಿದೆ. ಅದರಲ್ಲಿ ‘ಸಾಧ್ಯವಾಗಬಹುದಾದಷ್ಟು ಮಟ್ಟಿಗೆ’ ಎಂಬ ಪದವನ್ನು ಕಾಯ್ದೆಯಿಂದ ಕೈಬಿಡುವ ತಿದ್ದುಪಡಿ ಮಸೂದೆಯನ್ನು 2015ರಲ್ಲಿ ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಿ ಅಂಗೀಕಾರ ಪಡೆಯಲಾಗಿತ್ತು.

ಆರಂಭದಿಂದಲೂ ಆಕ್ಷೇಪ: ರಾಜ್ಯಪಾಲರು ರಾಷ್ಟ್ರಪತಿಯವರ ಅಂಕಿತ ಪಡೆಯುವುದಕ್ಕಾಗಿ ಮಸೂದೆಯನ್ನು ಕೇಂದ್ರ ಗೃಹ ಸಚಿವಾಲಯಕ್ಕೆ ಕಳುಹಿಸಿದ್ದರು. ಗೃಹ ಇಲಾಖೆಯು ಕೇಂದ್ರದ ಮಾನವ ಸಂಪನ್ಮೂಲ ಸಚಿವಾಲಯಕ್ಕೆ ಕಳುಹಿಸಿತ್ತು. ಶಿಕ್ಷಣ ಮಾಧ್ಯಮಕ್ಕೆ ಸಂಬಂಧಿಸಿದಂತೆ ಸಂವಿಧಾನದಲ್ಲಿರುವ ಅವಕಾಶ, ತ್ರಿಭಾಷಾ ಸೂತ್ರ ಮತ್ತಿತರ ಕಾರಣಗಳನ್ನು ಮುಂದಿಟ್ಟುಕೊಂಡು ಕೇಂದ್ರದ ವಿವಿಧ ಇಲಾಖೆಗಳು ಈ ಮಸೂದೆಯ ಕುರಿತು ಸ್ಪಷ್ಟನೆ ನೀಡುವಂತೆ ರಾಜ್ಯಕ್ಕೆ ಸೂಚಿಸಿದ್ದವು. ಹಲವು ಬಾರಿ ಸ್ಪಷ್ಟನೆಗಳನ್ನು ನೀಡಿದ ಬಳಿಕವೂ ಒಪ್ಪಿಕೊಂಡಿರಲಿಲ್ಲ.

‘ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ)–2020ರಲ್ಲಿ ಮೂರು ಭಾಷೆಗಳನ್ನು ಕಲಿಯಲು ಮಕ್ಕಳಿಗೆ ಅವಕಾಶ ನೀಡಬೇಕೆಂಬ ಅಂಶವಿರುವುದರಿಂದ ಮಾತೃಭಾಷಾ ಮಾಧ್ಯಮದಲ್ಲಿ ಶಿಕ್ಷಣ ನೀಡುವುದನ್ನು ಕಡ್ಡಾಯಗೊಳಿಸುವ ಅಗತ್ಯ ಉದ್ಭವಿಸುವುದಿಲ್ಲ ಎಂಬ ಅರ್ಥದಲ್ಲಿ 2021ರ ಫೆಬ್ರುವರಿ 3ರಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯದ ಸಂಸದೀಯ ವ್ಯವಹಾರಗಳ ಇಲಾಖೆಗೆ ಪತ್ರ ಬರೆದಿತ್ತು. ಈ ಕುರಿತು ಸ್ಪಷ್ಟನೆ ನೀಡಬೇಕು ಅಥವಾ ಮಸೂದೆ ಹಿಂಪಡೆಯಬೇಕು ಎಂದು ಸೂಚಿಸಿತ್ತು. ಆ ಬಳಿಕವೂ ನಿರಂತರವಾಗಿ ನೆನಪೋಲೆ ಬರೆಯುತ್ತಿರುವ ಕೇಂದ್ರ ಗೃಹ ಇಲಾಖೆ, ಮಸೂದೆ ಹಿಂಪಡೆಯುವ ಬಗ್ಗೆ ತೀರ್ಮಾನಿಸುವಂತೆ ಒತ್ತಾಯ ಮಾಡುತ್ತಲೇ ಇದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮಸೂದೆ ಹಿಂಪಡೆಯುವ ವಿಚಾರದಲ್ಲಿ ಕೇಂದ್ರ ಗೃಹ ಇಲಾಖೆಯ ಪತ್ರವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಗೆ ರವಾನಿಸಿದ್ದ ಸಂಸದೀಯ ವ್ಯವಹಾರಗಳ ಇಲಾಖೆ, ಉತ್ತರಿಸುವಂತೆ ಸೂಚಿಸಿತ್ತು. ಆದರೆ, ಸಾರ್ವಜನಿಕ ಶಿಕ್ಷಣ ಇಲಾಖೆ ಈ ಬಗ್ಗೆ ಪ್ರತಿಕ್ರಿಯಿಸಿಲ್ಲ. ಹಾಗಾಗಿ, ಮಸೂದೆ ಕೇಂದ್ರದಲ್ಲೇ ಉಳಿದಿದೆ’ ಎಂದರು.

‘ಗೋ ಹತ್ಯೆ ನಿಷೇಧ ಕಾಯ್ದೆ ಸಮರ್ಪಕವಾಗಿ ಜಾರಿಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮತಾಂತರ ನಿಷೇಧ ಮತ್ತು ಗೋ ಹತ್ಯೆ ನಿಷೇಧ ಕಾಯ್ದೆಗಳನ್ನು ಬಲಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದ್ದರೂ, ಆ ಕಾಯ್ದೆಗಳು ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಈ ಬಗ್ಗೆ ಗಮನಹರಿಸಬೇಕು’ ಎಂದು ಪೊಲೀಸ್ ಅಧಿಕಾರಿಗಳಿಗೆ ಗೃಹ ಸಚಿವ ಆರಗ ಜ್ಞಾನೇಂದ್ರ ಕಿವಿಮಾತು ಹೇಳಿದರು.

ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಬುಧವಾರ ಸಭೆ ನಡೆಸಿದ ಅವರು, ‘ಬೀಟ್ ವ್ಯವಸ್ಥೆಯನ್ನು ಇನ್ನಷ್ಟು ಚುರುಕುಗೊಳಿಸಬೇಕು. ವಿಧಾನಸಭೆ ಚುನಾವಣೆಯಲ್ಲಿ ಸಮೀಪಿಸುತ್ತಿರುವುದರಿಂದ ಇನ್ನಷ್ಟು ಎಚ್ಚರಿಕೆಯಿಂದ, ಸವಾಲುಗಳನ್ನೂ ಎದುರಿಸಲು ಸಿದ್ಧರಾಗಬೇಕು’ ಎಂದೂ ಸಲಹೆ ನೀಡಿದರು.

‘ಕಳೆದೊಂದು ವರ್ಷದಲ್ಲಿ ಗೃಹ ಇಲಾಖೆಯ ಕಾರ್ಯದಕ್ಷತೆ ಹೆಚ್ಚಿಸಲು ಆದ್ಯತೆ ನೀಡಲಾಗಿದೆ. ಪೊಲೀಸ್ ಸಿಬ್ಬಂದಿ ಹಗಲಿರುಳು ಶ್ರಮಿಸಿದ ಪರಿಣಾಮ ಎಲ್ಲ ಸವಾಲುಗಳನ್ನು ನಿಭಾಯಿಸಲು ಸಾಧ್ಯವಾಗಿದೆ. ಪಿಎಸ್‌ಐ ನೇಮಕಾತಿ ಹಗರಣವನ್ನು ಬಹಿರಂಗಪಡಿಸಿ, ಇಲಾಖೆಗೆ ಭ್ರಷ್ಟ ಅಧಿಕಾರಿಗಳ ಸೇರ್ಪಡೆಗೆ ತಡೆಯೊಡ್ಡಿದ ಘಟನೆಯೂ ನಡೆಯಿತು’ ಎಂದರು.

ನಗರದಲ್ಲಿ ಇಂದು

ಪದಕ ಪ್ರದಾನ ಸಮಾರಂಭ: ಅತಿಥಿಗಳು: ಆರಗ ಜ್ಞಾನೇಂದ್ರ, ಉಪಸ್ಥಿತಿ: ಪ್ರವೀಣ್ ಸೂದ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆಎಸ್‌ಆರ್‌.ಪಿ, ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

‘ರಾಜ್‌ಕುಮಾರ್’, ‘ಪುನೀತ್ ರಾಜ್‌ಕುಮಾರ್’ ಮತ್ತು ‘ಶಂಕರ್‌ನಾಗ್’ ಅವರ ಪುತ್ಥಳಿಗಳ ಅನಾವರಣ: ಅತಿಥಿಗಳು: ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್‌ರಾಜ್‌ಕುಮಾರ್, ಸ್ಥಳ: ನಾಗಶೆಟ್ಟಿಹಳ್ಳಿ ಬಸ್ ನಿಲ್ದಾಣ, ಆಯೋಜನೆ: ಡಾ.ರಾಜ್‌ಕುಮಾರ್ ಮತ್ತು ಡಾ.ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಸಂಘ, ನಾಗಶೆಟ್ಟಿಹಳ್ಳಿ, ಬೆಳಿಗ್ಗೆ 10

ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಶ್ರದ್ಧಾಂಜಲಿ: ಸಾನ್ನಿಧ್ಯ: ಶಿವರುದ್ರ ಸ್ವಾಮೀಜಿ, ನುಡಿನಮನ: ಸಿ. ಸೋಮಶೇಖರ್, ಬಿ.ಎಲ್. ಶಂಕರ್, ರಾಣಿ ಸತೀಶ್, ಬಸವರಾಜ ಸಾದರ, ಷಡಕ್ಷರಿ, ಮಹದೇವಯ್ಯ, ವಚನ ಗಾಯನ: ಮೃತ್ಯುಂಜಯ ದೊಡ್ಡವಾಡ, ಸವಿತಾ ಗಣೇಶ್, ನಿರ್ವಹಣೆ: ಕೆ.ವಿ. ನಾಗರಾಜ ಮೂರ್ತಿ, ಆಯೋಜನೆ: ಬಸವ ವೇದಿಕೆ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಕೃಪಾ ರಸ್ತೆ, ಸಂಜೆ 5.30

ಆರಿದ್ರೋತ್ಸವ ಪೂಜಾ ಕೈಂಕರ್ಯಗಳು: ಸಂಜೆ 6ಕ್ಕೆ ವಿನಾಯಕ ಶಿವಕಾಮಿನಿ ಸಮೇತ ತಾಂಡವೇಶ್ವರಸ್ವಾಮಿಗೆ ಶಾಲ್ಯಾನ್ನ ಅಭಿಷೇಕ ಅಲಂಕಾರ, 7.15ಕ್ಕೆ ಭರತನಾಟ್ಯ: ಪೂಜಿತ ಭಾಸ್ಕರ್, ಸಂವೃತ ಕಿಶೋರ್, ರಾತ್ರಿ 8ಕ್ಕೆ ಮಹಾಮಂಗಳಾರತಿ ಮತ್ತು ಪ್ರಸಾದ, ಆಯೋಜನೆ: ಬೆಂಗಳೂರು ಅಯೋಧ್ಯನಗರದ ಶಿವಾಚಾರ ವೈಶ್ಯ (ನಗರ್ತ) ಸಮಿತಿ, ಸ್ಥಳ: ನಗರೇಶ್ವರಸ್ವಾಮಿ ದೇವಾಲಯ, ನಗರ್ತಪೇಟೆ

ರಾಷ್ಟ್ರೀಯ ವಿಜ್ಞಾನ ನಾಟಕೋತ್ಸವ: ಅತಿಥಿಗಳು: ಅರುಂಧತಿ ನಾಗ್, ಎ.ಡಿ. ಚೌಧರಿ, ಆಯೋಜನೆ ಮತ್ತು ಸ್ಥಳ: ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ಕಸ್ತೂರಬಾ ರಸ್ತೆ, ಬೆಳಿಗ್ಗೆ 9.30

ಅರುಂಧತಿ ನಾಗ್

ನಟರಾಜ ಕೆ., ಅವರ ‘ಸಾವಿತ್ರಿ ಬಾಯಿ ಫುಲೆ’ ಕೃತಿ ಬಿಡುಗಡೆ: ಎಚ್.ಎಲ್. ಪುಷ್ಪಾ, ಉಪಸ್ಥಿತಿ: ಶ್ರೀನಿವಾಸ್ ಜಿ.ಕಪ್ಪಣ್ಣ, ಚಡ್ಡಿ ನಾಗೇಶ್, ರಾಜಗುರು ಹೊಸಕೋಟೆ, ‘ಮಂಗ ಮಾಣಿಕ್ಯ ಪ್ರಹಸನ’ ನಾಟಕ ಪ್ರದರ್ಶನ: ತಂಡ: ಕಲಾ ಗಂಗೋತ್ರಿ, ಆಯೋಜನೆ: ನಾಟಕ ಬೆಂಗಳೂರು 23, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.15

ಸ್ಪೆಷಲ್ ಸ್ಟ್ರೋಕ್ಸ್: ಮುಖ್ಯ ಅತಿಥಿ: ಪ.ಸ. ಕುಮಾರ್, ಉಪಸ್ಥಿತಿ: ಭಾರತಿ ಸಾಗರ್, ಪೂರ್ಣಿಮಾ ವೈದ್ಯನಾಥನ್, ಚೇತನಾ ರವಿ, ಆಯೋಜನೆ ಮತ್ತು ಸ್ಥಳ: ಆರ್ಟ್ ಹೌಸ್, ಪ್ಯಾಲೆಸ್ ರಸ್ತೆ, ಆ್ಯಬ್‌ಷಾಟ್ ಬಡಾವಣೆ, ವಸಂತ ನಗರ, ಸಂಜೆ 6.30

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆ: ಆದೇಶಕ್ಕೆ ತಡೆ

ಬೆಂಗಳೂರು: ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆಗೆ ದರ ನಿಗದಿಪಡಿಸಿ ಸಾರಿಗೆ ಇಲಾಖೆಯು 2022ರ ನವೆಂಬರ್ 25ರಂದು ಹೊರಡಿಸಿದ್ದ ಅಧಿಸೂಚನೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಅಧಿಸೂಚನೆ ಪ್ರಶ್ನಿಸಿ ಓಲಾ, ಉಬರ್ ಇಂಡಿಯಾ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಹಾಗೂ ರೋಪ್ಪೆನ್ ಟ್ರಾನ್ಸ್‌ಪರ್ಟೇಶನ್ ಸರ್ವೀಸಸ್ (ರ‍್ಯಾಪಿಡೊ) ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ. ‘ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ಸಾರಿಗೆ ಇಲಾಖೆ ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳು ಇತ್ಯರ್ಥವಾಗುವವರೆಗೆ, ಅಧಿಸೂಚನೆಗೆ ತಡೆ ನೀಡಲಾಗಿದೆ’ ಎಂದ ನ್ಯಾಯಪೀಠ ವಿಚಾರಣೆಯನ್ನು ಇದೇ 12ಕ್ಕೆ ಮುಂದೂಡಿದೆ.

ಆ್ಯಪ್ ಆಧಾರಿತ ಆಟೊರಿಕ್ಷಾ ಸೇವೆ ಸ್ಥಗಿತಗೊಳಿಸುವಂತೆ ಸೂಚಿಸಿ 2022ರ ಅ. 11ರಂದು ಹೊರಡಿಸಿರುವ ಇಲಾಖೆ ಆದೇಶ ಪ್ರಶ್ನಿಸಿ ಅಗ್ರಿಗೇಟರ್ ಸಂಸ್ಥೆಗಳು ಹೈಕೋರ್ಟ್ ಮೆಟ್ಟಿಲೇರಿದ್ದವು. ವಿಚಾರಣೆ ವೇಳೆ ರಾಜ್ಯ ಸರ್ಕಾರ, ‘ಹೈಕೋರ್ಟ್ ಸಲಹೆಯಂತೆ ಸಮಸ್ಯೆಯನ್ನು ಬಗೆಹರಿಸಲಾಗುವುದು’ ಎಂದಿತ್ತು. ಇಲಾಖೆ ಅಧಿಸೂಚನೆ ಪ್ರಶ್ನಿಸಿ ಹೈಕೋರ್ಟ್‌ಗೆ ಮತ್ತೊಂದು ರಿಟ್ ಅರ್ಜಿ ಸಲ್ಲಿಸಿದ್ದ ಅಗ್ರಿಗೇಟರ್ ಸಂಸ್ಥೆಗಳು, ‘ದರ ನಿಗದಿಪಡಿಸಲು ರಾಜ್ಯ ಸರ್ಕಾರ ಸಕ್ಷಮ ಪ್ರಾಧಿಕಾರವಲ್ಲ’ ಎಂದಿವೆ.

ಲಾಟರಿ ಮಾರಾಟಗಾರರ ಸಂಘ ಆರೋಪ

‘₹6 ಸಾವಿರ ಕೋಟಿ ನಷ್ಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಲಾಟರಿ ನಿಷೇಧವಿದ್ದರೂ ಅಕ್ರಮವಾಗಿ ಇ–ಲಾಟರಿ ಮತ್ತು ಆನ್‌ಲೈನ್ ಗ್ಯಾಂಬ್ಲಿಂಗ್ ರಾಜಾರೋಷವಾಗಿ ನಡೆಯುತ್ತಿದೆ. ಇದರಿಂದ ರಾಜ್ಯಕ್ಕೆ ವಾರ್ಷಿಕ ಆದಾಯದಲ್ಲಿ ₹6 ಸಾವಿರ ಕೋಟಿ ನಷ್ಟವಾಗುತ್ತಿದೆ’ ಎಂದು ಕರ್ನಾಟಕ ರಾಜ್ಯ ಲಾಟರಿ ಚಿಲ್ಲರೆ ಮಾರಾಟಗಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ. ರಾಮಕೃಷ್ಣ ಆರೋಪಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇರಳ ರಾಜ್ಯ ಸರ್ಕಾರವು ಲಾಟರಿ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ನಿರ್ವಹಣೆ ಮಾಡುತ್ತಿದೆ. ಇದರಿಂದ ವಾರ್ಷಿಕ ₹ ಸಾವಿರದಿಂದ ₹7 ಸಾವಿರ ಕೋಟಿ ಲಾಭ ಪಡೆಯುತ್ತಿದೆ. 2023–24ರ ಬಜೆಟ್ ಸಂದರ್ಭದಲ್ಲಿ ಕೇರಳ ಮಾದರಿ ಲಾಟರಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಬೇಕು’ ಎಂದು ಒತ್ತಾಯಿಸಿದರು.

ಆರೋಪಗಳೇನು?

- ರಾಜಾರೋಷವಾಗಿ ನಡೆಯುತ್ತಿರುವ ಇ–ಲಾಟರಿ, ಆನ್‌ಲೈನ್ ಗ್ಯಾಂಬ್ಲಿಂಗ್
- ಕೇರಳ ಮಾದರಿ ಲಾಟರಿ ಪದ್ಧತಿ: ಇಲ್ಲೂ ಅನುಷ್ಠಾನಗೊಳಿಸಲು ಒತ್ತಾಯ

‘ಲಾಟರಿ ಕಾಯ್ದೆ ಮತ್ತು ತೆರಿಗೆಗೆ ಸಂಬಂಧಿಸಿದಂತೆ 2022ರ ಮಾರ್ಚ್ 23ರಂದು ಸುಪ್ರೀಂ ಕೋರ್ಟ್ ತೀರ್ಪಿನಂತೆ ಕರ್ನಾಟಕ ಮತ್ತು ಕೇರಳದಲ್ಲಿ ಮಾರಾಟವಾಗುವ ಹೊರ ರಾಜ್ಯಗಳ ಲಾಟರಿಗಳ ತೆರಿಗೆಯನ್ನು ಆಯಾ ರಾಜ್ಯದ ವಾಣಿಜ್ಯ ಇಲಾಖೆಗೆ ಪಾವತಿ ಮಾಡಬೇಕು ಎಂದು ಆದೇಶ ನೀಡಿದೆ. ಆದರೆ ರಾಜ್ಯ ಸರ್ಕಾರ ಇದನ್ನು ಪಾವತಿಸಿಕೊಳ್ಳಲು ನಿರಾಸಕ್ತಿ ಹೊಂದಿದಂತೆ ಕಾಣುತ್ತದೆ’ ಎಂದು ಅವರು ತಿಳಿಸಿದರು.

‘ರಾಜ್ಯದಲ್ಲಿ ಇ- ಲಾಟರಿ ಹಾಗೂ ಆನ್‌ಲೈನ್ ಗ್ಯಾಂಬ್ಲಿಂಗ್ ರಾಜಾರೋಷವಾಗಿ ನಡೆಯುತ್ತಿದ್ದರೂ ಲಾಟರಿ ನಿಷೇಧ ಮಾಡಿರುವುದು ಹಾಸ್ಯಾಸ್ಪದ. ಅಲ್ಲದೆ ಇತರೆ ರಾಜ್ಯಗಳ ಲಾಟರಿಗಳು ಮತ್ತು ಇ-ಲಾಟರಿಗಳು ಹುಲುಸಾಗಿ ಅಭಿವೃದ್ಧಿ ಹೊಂದುತ್ತಿರುವಾಗ ನಮ್ಮ ರಾಜ್ಯದಲ್ಲಿ ನಿಷೇಧಿಸಿರುವುದರಲ್ಲಿ ಅರ್ಥವಿಲ್ಲ. ಈ ಲಾಟರಿ ಯೋಜನೆ ಸರ್ಕಾರಕ್ಕೆ ಹೊರೆಯಾಗದ ರೀತಿಯಲ್ಲಿ ಖರ್ಚು-ವೆಚ್ಚಗಳನ್ನು ನಿರ್ವಹಿಸಲಾಗುವುದು’ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಎ. ಮೈಕೆಲ್ ರಾಜ್, ಕಾರ್ಯದರ್ಶಿ ಪದ್ಮೋಜಿ ರಾವ್, ಖಜಾಂಚಿ ಪಿ. ಸ್ವಾಮಿ, ಸದಸ್ಯರಾದ ಆರ್. ಧರಣೇಂದ್ರ ಕುಮಾರ್ ಇದ್ದರು.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ www.exammastermind.comಗೆ ಭೇಟಿ ಕೊಡಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಪ್ರಾಂಶುಪಾಲರ ಹುದ್ದೆಗಳನ್ನು ತುಂಬಲು ಮುಂದಾಗಿದೆ. ಅರ್ಜಿ ಸಲ್ಲಿಕೆ, ಪರೀಕ್ಷೆಯ ಸ್ವರೂಪ, ಆಯ್ಕೆಯ ವಿಧಾನ ಕುರಿತ ವಿವರ ಇಲ್ಲಿದೆ.

ಪ್ರಾಂಶುಪಾಲರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆ

ಎ.ಎಂ.ಸುರೇಶ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 310 ಪ್ರಾಂಶುಪಾಲರ ಹುದ್ದೆಗಳ (ಗ್ರೇಡ್-1) ಭರ್ತಿಗಾಗಿ ನೇಮಕಾತಿ ಪ್ರಕ್ರಿಯೆ ಆರಂಭವಾಗಿದೆ. ಇದೇ ಮೊದಲ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದು, ನೇಮಕಾತಿಯ ಜವಾಬ್ದಾರಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ವಹಿಸಲಾಗಿದೆ.

ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಜತೆಗೆ ಆಡಳಿತ ನಿರ್ವಹಣೆಯ ಜವಾಬ್ದಾರಿಯೂ ಪ್ರಾಂಶುಪಾಲರಿಗೆ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಮರ್ಥರನ್ನು ಆಯ್ಕೆ ಮಾಡಬೇಕು ಎಂಬ ಉದ್ದೇಶದಿಂದ 100 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗುತ್ತಿದೆ. ಅದರಲ್ಲಿ ಗಳಿಸಿದ ಅಂಕಗಳು ಮತ್ತು ಮೀಸಲಾತಿ ಆಧರಿಸಿ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

ಕಲ್ಯಾಣ ಕರ್ನಾಟಕ ಭಾಗದಲ್ಲಿನ 45 ಮತ್ತು ರಾಜ್ಯದ ಇನ್ನುಳಿದ ಭಾಗದಲ್ಲಿರುವ ಕಾಲೇಜುಗಳಲ್ಲಿನ 265 ಪ್ರಾಂಶುಪಾಲರ ಹುದ್ದೆಗಳನ್ನು ತುಂಬಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈಗಾಗಲೇ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ನೇಮಕಾತಿಗೆ ಚಾಲನೆ ನೀಡಿದೆ.

ಅರ್ಜಿ ಸಲ್ಲಿಸುವುದು ಹೇಗೆ?

ಪ್ರಾಂಶುಪಾಲರ ಹುದ್ದೆಯ ಆಕಾಂಕ್ಷಿಗಳು ಆನ್‌ಲೈನ್ ಮೂಲಕವೇ ಅರ್ಜಿಗಳನ್ನು ಸಲ್ಲಿಸಬೇಕು. ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಇಲ್ಲ. ಜನವರಿ 15ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ಇದ್ದು, ಆಯ್ದ ಇ-ಪೋಸ್ಟ್ ಆಫೀಸ್‌ಗಳಲ್ಲಿ ಜನವರಿ 17ರ ಒಳಗೆ ಶುಲ್ಕ ಪಾವತಿಸಬೇಕು.

ಸಾಮಾನ್ಯ ವರ್ಗದವರು ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿಗೆ ಸೇರಿದ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಐದು ಸಾವಿರ ರೂಪಾಯಿ ನಿಗದಿಪಡಿಸಲಾಗಿದೆ. ಎಸ್‌ಸಿ, ಎಸ್‌ಟಿ ಹಾಗೂ ಪ್ರವರ್ಗ-1ರ ಅಭ್ಯರ್ಥಿಗಳು ₹2500 ಶುಲ್ಕ ಪಾವತಿಸಬೇಕು. ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ http://kea.kar.nic.in ಸಂಪರ್ಕಿಸಬೇಕು.

ಯಾರು ಅರ್ಹರು?

ಸರ್ಕಾರಿ ಮತ್ತು ಖಾಸಗಿ ಪದವಿ ಕಾಲೇಜಿನಲ್ಲಿ ಬೋಧನೆ ಅಥವಾ ಸಂಶೋಧನೆ ಅಥವಾ ಆಡಳಿತದಲ್ಲಿ ಪೂರ್ಣಕಾಲಿಕ ಬೋಧಕರಾಗಿ 15 ವರ್ಷ ಸೇವಾ ಅನುಭವ ಹೊಂದಿರುವ ಪ್ರಾಧ್ಯಾಪಕ/ಸಹ ಪ್ರಾಧ್ಯಾಪಕರು ಅರ್ಜಿ ಸಲ್ಲಿಸಬಹುದು. ಅಲ್ಲದೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಪಟ್ಟಿ ಮಾಡಿರುವ ಪತ್ರಿಕೆಗಳಲ್ಲಿ ಕನಿಷ್ಠ 10 ಸಂಶೋಧನಾ ಲೇಖನಗಳು ಪ್ರಕಟವಾಗಿರಬೇಕು. ಯುಜಿಸಿ ಮಾನದಂಡಗಳ ಪ್ರಕಾರ 110 ಸಂಶೋಧನಾ ಅಂಕಗಳನ್ನು ಹೊಂದಿರಬೇಕು. ಅರ್ಜಿ ಸಲ್ಲಿಸಲು ನಿರಾಕ್ಷೇಪಣಾ ಪತ್ರ ಅಗತ್ಯ. ಹಿಂದಿನ ಸೇವಾವಧಿ, ವೇತನ, ರಜೆ ಇತ್ಯಾದಿಗಳನ್ನು ಪಿಂಚಣಿ ಉದ್ದೇಶಕ್ಕೆ ಪರಿಗಣಿಸಲಾಗುತ್ತದೆ.

ಪರೀಕ್ಷೆಯ ವಿಧಾನ ಹೇಗಿರುತ್ತದೆ?

ಸ್ಪರ್ಧಾತ್ಮಕ ಪರೀಕ್ಷೆಯು 100 ಅಂಕಗಳ ಬಹುಆಯ್ಕೆ ಮಾದರಿಯ ಒಂದು ಪ್ರಶ್ನೆಪತ್ರಿಕೆಯನ್ನು ಒಳಗೊಂಡಿರುತ್ತದೆ. ಸಾಮಾನ್ಯ ಜ್ಞಾನ, ಗ್ರಹಿಕಾ ಸಾಮರ್ಥ್ಯ, ಪಿಂಚಣಿ ಮತ್ತು ವೇತನ ಲೆಕ್ಕಾಚಾರ, ಸಾರ್ವಜನಿಕ ಸಂಗ್ರಹಣೆ, ಅಧಿನಿಯಮಗಳು ಮತ್ತು ನಿಯಮಗಳು, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, ಪಠ್ಯೇತರ ಚಟುವಟಿಕೆಗಳು, ಕಂಪ್ಯೂಟರ್ ಜ್ಞಾನ, ತಾರ್ಕಿಕ ಜ್ಞಾನ, ನೈತಿಕತೆ ವಿಷಯಗಳನ್ನು ಒಳಗೊಂಡ ಪ್ರಶ್ನೆಗಳು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಇರುತ್ತವೆ. ತಪ್ಪು ಉತ್ತರಗಳಿಗೆ ಅಂಕಗಳನ್ನು ಕಳೆಯುವುದಿಲ್ಲ.150 ಅಂಕಗಳ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಇರುತ್ತದೆ. ಇದರಲ್ಲಿ ಕನಿಷ್ಠ 50 ಅಂಕಗಳನ್ನು ಪಡೆಯ ಬೇಕು.ಇದು ಎಸ್ಸೆಸ್ಸೆಲ್ಸಿ ಹಂತದ ಪ್ರಶ್ನೆ ಪತ್ರಿಕೆಯಾಗಿರುತ್ತದೆ. ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆ ಅಥವಾ ಎಸ್ಸೆಸ್ಸೆಲ್ಸಿಗಿಂತ ಹೆಚ್ಚಿನ ಯಾವುದೇ ಪರೀಕ್ಷೆಯಲ್ಲಿ ಕನ್ನಡವು ಮುಖ್ಯಭಾಷೆ, ದ್ವಿತೀಯ ಭಾಷೆ ಅಥವಾ ಐಚ್ಛಿಕ ವಿಷಯವಾಗಿದ್ದರೆ ಅಥವಾ ಕನ್ನಡ ಮಾಧ್ಯಮದಲ್ಲಿ ಉತ್ತೀರ್ಣರಾಗಿದ್ದರೆ, ಅಂತಹವರಿಗೆ ಕನ್ನಡ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ. ಕನ್ನಡ ಭಾಷಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸುವುದಿಲ್ಲ. ಇದು ಕೇವಲ ಅರ್ಹತೆಗಾಗಿ ಅಷ್ಟೇ.

ಅವಧಿ ಎಷ್ಟು?

ಪ್ರಾಂಶುಪಾಲರನ್ನು ಐದು ವರ್ಷಗಳ ಅವಧಿಗೆ ನೇಮಕ ಮಾಡಿಕೊಳ್ಳಲಾಗುತ್ತದೆ. ಅದಾದ ಬಳಿಕ ಸರ್ಕಾರ ರಚಿಸುವ ಸಮಿತಿಯು ಅವರ ಕಾರ್ಯವನ್ನು ಮೌಲ್ಯಮಾಪನಕ್ಕೆ ಒಳಪಡಿಸಲಿದೆ. ಕಾರ್ಯನಿರ್ವಹಣೆ ಉತ್ತಮವಾಗಿದ್ದರೆ ಮತ್ತೆ ಐದು ವರ್ಷಗಳ ಕಾಲ ಅವಧಿ ವಿಸ್ತರಿಸಲು ಅವಕಾಶ ಇದೆ. ಒಂದು ವೇಳೆ ಅವಧಿ ವಿಸ್ತರಣೆ ಆಗದೆ ಇದ್ದರೆ, ಪ್ರಾಂಶುಪಾಲರಾಗಿ ನೇಮಕವಾಗುವುದಕ್ಕೂ ಮುಂಚೆ ಇದ್ದ ಕಾಲೇಜಿನಲ್ಲಿ ವಯೋಮಿತಿ ಪೂರ್ಣಗೊಳ್ಳುವವರೆಗೆ ಹಿಂದೆ ಇದ್ದ ಹುದ್ದೆಯಲ್ಲಿ ಮುಂದುವರಿಯಬಹುದು. ❖

ಸಿಆರ್‌ಪಿಎಫ್‌ನಲ್ಲಿ ಹುದ್ದೆಗಳು

1315 ಹೆಡ್‌ಕಾನ್‌ಸ್ಟೆಬಲ್ 143 ಎಎಸ್‌ಐ-ಸ್ಟೆನೊ

ಪರೀಕ್ಷಾ ಕೇಂದ್ರಗಳು

ಮೊದಲ ಹಂತದ ಕಂಪ್ಯೂಟರ್ ಆಧಾರಿತ ಪರೀಕ್ಷೆ ಬರೆಯಲು ಸಿಆರ್‌ಪಿಎಫ್ ಸೂಚಿಸಿದ ಪರೀಕ್ಷಾ ಕೇಂದ್ರಗಳನ್ನೇ ಅಭ್ಯರ್ಥಿಗಳು ಆಯ್ಕೆ ಮಾಡಿಕೊಳ್ಳಬೇಕು. ಅನೇಕ ರಾಜ್ಯಗಳಲ್ಲಿ ಪರೀಕ್ಷಾ ಕೇಂದ್ರಗಳನ್ನು ಸೂಚಿಸಲಾಗಿದೆ.

ಮಂಜುನಾಥ್ ಭದ್ರಶೆಟ್ಟಿ

ಕೇಂದ್ರ ಗೃಹ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಕೇಂದ್ರ ಮೀಸಲು ಪೊಲೀಸ್ ಪಡೆ (CRPF)ಯಲ್ಲಿ '143 ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಸ್ಟೆನೊ' ಹಾಗೂ ಸಚಿವಾಲಯದ 1,315 ಹೆಡ್‌ಕಾನ್‌ಸ್ಟೆಬಲ್ ಹುದ್ದೆಗಳ (ಪುರುಷ ಮತ್ತು ಮಹಿಳಾ) ಭರ್ತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಜನವರಿ 4ರಿಂದ ಅರ್ಜಿ ಸಲ್ಲಿಕೆ ಆರಂಭವಾಗಿದೆ. ಜನವರಿ 21 ಕೊನೆ ದಿನವಾಗಿದೆ. www.crpf.nic.in ವೆಬ್‌ಸೈಟ್ ಮೂಲಕ ಸೂಕ್ತ ದಾಖಲಾತಿಗಳೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು.

ವಿದ್ಯಾರ್ಹತೆ, ವಯೋಮಿತಿ: 10 + 2 (ಪಿಯುಸಿ) ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರು. 18 ರಿಂದ 25 ವರ್ಷ ವಯೋಮಿತಿಯಿದೆ. ಎಸ್‌ಸಿ, ಎಸ್‌ಟಿ, ಒಬಿಸಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆ ಇದೆ.

ಈ ಹುದ್ದೆಗಳಿಗೆ ನೇಮಕಾತಿ ನಾಲ್ಕು ಹಂತಗಳಲ್ಲಿ ನಡೆಯುತ್ತದೆ

ಹಂತ 1: ಕಂಪ್ಯೂಟರ್ ಆಧರಿತ ಪರೀಕ್ಷೆ (ಸಿಬಿಟಿ)

ಈ ಹುದ್ದೆಗಳಿಗೆ ಮೊದಲ ಹಂತದಲ್ಲಿ 100 ಅಂಕಗಳಿಗೆ ಕಂಪ್ಯೂಟರ್ ಆಧಾರಿತ ಪರೀಕ್ಷೆ (ಬಹು ಆಯ್ಕೆ ಮಾದರಿ) ಇರುತ್ತದೆ. ಇದರ ಅವಧಿ 90 ನಿಮಿಷ. ಅರ್ಜಿ ಸಲ್ಲಿಸುವವರು ಮೊದಲು ಈ ಪರೀಕ್ಷೆ ಬರೆಯಬೇಕು. ಈ ಪರೀಕ್ಷೆಯಲ್ಲಿ ಭಾಷಾ ಪರೀಕ್ಷೆ (ಹಿಂದಿ ಅಥವಾ ಇಂಗ್ಲಿಷ್), ಸಾಮಾನ್ಯ ಗ್ರಹಿಕೆ ಸಾಮರ್ಥ್ಯ, ಸಾಮಾನ್ಯ ಜ್ಞಾನ, ಕ್ವಾಂಟಿಟೇಟಿವ್ ಎಂಬ ನಾಲ್ಕು ವಿಭಾಗಗಳಿಗೆ ತಲಾ 25 ಅಂಕಗಳು ಇರುತ್ತವೆ. ಒಂದೂವರೆ ಗಂಟೆ ಅವಧಿಯಲ್ಲಿ ಅಭ್ಯರ್ಥಿಗಳು ಉತ್ತರಿಸಬೇಕು. ಪ್ರತಿ 4 ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ.

ಇದರಲ್ಲಿ ಉತ್ತೀರ್ಣರಾದ, ಎಎಸ್‌ಐ- ಸ್ಟೆನೊ ಸೇರಲಿಚ್ಛಿಸುವ ಅಭ್ಯರ್ಥಿಗಳು ಕೌಶಲ ಪರೀಕ್ಷೆ ಎದುರಿಸಬೇಕು. ನಿಗದಿತ ಕೇಂದ್ರಗಳಲ್ಲಿ ಪರೀಕ್ಷೆ ಬರೆಯಬೇಕು. ಹೇಳಿದ 80 ಪದಗಳನ್ನು 10 ನಿಮಿಷದಲ್ಲಿ ಕಂಪ್ಯೂಟರ್‌ನಲ್ಲಿ ತಪ್ಪಿಲ್ಲದೇ ಟೈಪ್ ಮಾಡಬೇಕು. ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ 50 ನಿಮಿಷದಲ್ಲಿ ಒಂದು ಸೂಚಿತ ಲೇಖನ ನೋಡಿಕೊಂಡು ಪೂರ್ಣ ಬರೆಯಬೇಕು. ಒಂದು ನಿಮಿಷಕ್ಕೆ 35 ಪದಗಳನ್ನು ಟೈಪ್ (ಹಿಂದಿ ಅಥವಾ ಇಂಗ್ಲಿಷ್) ಮಾಡಬೇಕು.

ಹಂತ 2: ದೈಹಿಕ ಪರೀಕ್ಷೆ

ಎರಡೂ ಹುದ್ದೆಗಳಿಗೆ ಮೊದಲ ಹಂತದಲ್ಲಿ ಅರ್ಹತೆ ಪಡೆದವರು ಎರಡನೇ ಹಂತದಲ್ಲಿ ದೇಹದಾರ್ಢ್ಯತೆ ಹಾಗೂ ದೈಹಿಕ ಸಹಿಷ್ಣುತೆ ಪರೀಕ್ಷೆ ಎದುರಿಸಬೇಕು. ಈ ಕುರಿತ ವಿವರವಾದ ಮಾಹಿತಿಗಾಗಿ ನೇಮಕಾತಿಯ ನೋಟಿಫಿಕೇಶನ್ ಪರಿಶೀಲಿಸಬೇಕು.

ಹಂತ 3 ಮತ್ತು 4: ವೈದ್ಯಕೀಯ ಪರೀಕ್ಷೆ, ದಾಖಲಾತಿ ಪರಿಶೀಲನೆ

ದೇಹದಾರ್ಢ್ಯತೆ ಹಾಗೂ ದೈಹಿಕ ಸಹಿಷ್ಣುತೆ ಪರೀಕ್ಷೆಯಲ್ಲಿ ಯಶಸ್ವಿಯಾಗುವ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆ ಹಾಗೂ ವಿವರವಾದ ವೈದ್ಯಕೀಯ ಪರೀಕ್ಷೆ ಇರುತ್ತದೆ. ಇವೆರಡನ್ನೂ ಯಶಸ್ವಿಯಾಗಿ ಪೂರೈಸಿದವರು ನಿಗದಿತ ಹುದ್ದೆಗಳಿಗೆ ಪಡೆಯಲು ಅರ್ಹರಾಗುತ್ತಾರೆ.

ವೇತನ ಶ್ರೇಣಿ;ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್ ASI (ಸ್ಟೆನೊ) ವೇತನ ಶ್ರೇಣಿಯು ₹29,200–₹92,300ವರೆಗೆ ಇರುತ್ತದೆ. ಹೆಡ್ ಕಾನ್‌ಸ್ಟೆಬಲ್ (ಸಚಿವಾಲಯ) ಹುದ್ದೆಗಳಿಗೆ ₹25,000–₹81,100ವರೆಗೆ ಇರುತ್ತದೆ. ❖

ಪ್ರಜಾವಾಣಿ ಉದ್ಯೋಗ ವಾರ್ತೆ

ಕೆಎಸ್‌ಎಂಸಿಎಲ್‌ನಲ್ಲಿ ಹುದ್ದೆಗಳು

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆ, ಸಹಾಯಕ ವ್ಯವಸ್ಥಾಪಕ, ಗಣಿ ಸಮೀಕ್ಷಕ, ಗಣಿ ಫೋರ್ಮನ್, ಎಲೆಕ್ಟ್ರಿಕಲ್ ಎಂಜಿನಿಯರ್, ಮೆಕಾನಿಕಲ್ ಫೋರ್‌ಮೆನ್ ತಂತ್ರಜ್ಞ, ಸಿವಿಲ್ ಎಂಜಿನಿಯರ್, ಭೂ ವಿಜ್ಞಾನಿ ಸೇರಿದಂತೆ ಹದಿನಾರಕ್ಕೂ ಹೆಚ್ಚು ವಿಭಾಗಗಳಲ್ಲಿನ ಗುತ್ತಿಗೆ ಆಧಾರಿತ 30 ಹುದ್ದೆಗಳ ಭರ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಿದೆ. ಬೆಂಗಳೂರು, ಹಾಸನ, ಬಾಗಲಕೋಟೆ, ಬಳ್ಳಾರಿ ಭಾಗದಲ್ಲಿ ಈ ಉದ್ಯೋಗಗಳಿದ್ದು, ಅರ್ಹರು, ಜನವರಿ 16ರಿಂದ 20ರವರೆಗೆ ನಡೆಯುವ 'ವಾಕ್-ಇನ್' ಸಂದರ್ಶನಕ್ಕೆ ಹಾಜರಾಗಬಹುದು. ಸಂದರ್ಶನ ನಡೆಯುವ ಸ್ಥಳ: ಕಾರ್ಪೊರೇಟ್ ಕಚೇರಿ: ಟಿಟಿಎಂಸಿ 'ಎ' ಬ್ಲಾಕ್, 5 ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಎಚ್ ರಸ್ತೆ, ಶಾಂತಿನಗರ, ಬೆಂಗಳೂರು – 560027. ಮಾಹಿತಿಗಾಗಿ www.ksmc.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು.

ವಿದ್ಯಾರ್ಹತೆ: ಐಟಿಐ, ಡಿಪ್ಲೊಮಾ, ಗಣಿಗಾರಿಕೆ, ಎಲೆಕ್ಟ್ರಿಕಲ್ , ಸಿವಿಲ್ ಎಂಜಿನಿಯ ರಿಂಗ್, ಎಂಬಿಎ, ಎಂಎಸ್ಸಿ ಪದವಿ ಸೇರಿದಂತೆ ಹುದ್ದೆಗೆ ಅನುಗುಣವಾಗಿ ಶೈಕ್ಷಣಿಕ ಅರ್ಹತೆ ಪಡೆದಿರುವವರು ಸಂದರ್ಶನಕ್ಕೆ ಹಾಜರಾಗಬಹುದು. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೊ ರೇಷನ್ ಲಿಮಿಟೆಡ್‌ನ ksmc.karnataka.gov.in ಈ ಜಾಲತಾಣಕ್ಕೆ ಭೇಟಿ ನೀಡಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

ಸಮಾಜ ವಿಜ್ಞಾನ

8) ಎಲೆ ಉದುರುವ ಮಾನ್ಸೂನ್ ಅರಣ್ಯಗಳ ಬಗ್ಗೆ ವಿವರವಾಗಿ ಬರೆಯಿರಿ

ಉತ್ತರ: ಈ ಪ್ರಕಾರದ ಅರಣ್ಯಗಳು ಭಾರತದಲ್ಲಿ ಅತಿಹೆಚ್ಚು ವಿಸ್ತಾರವಾಗಿ ಹರಡಿವೆ. ಇವುಗಳು 75 ರಿಂದ 250 ಸೆಂ.ಮೀ. ಮಳೆ ಪಡೆಯುವ ಪ್ರದೇಶಗಳಲ್ಲಿ ವ್ಯಾಪಕವಾಗಿ ವಿಸ್ತರಿಸಿವೆ. ಇದು ಭಾರತದ ಶೇ 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿವೆ. ಭಾರತವು ಮಾನ್ಸೂನ್ ವಾಯುಗುಣವನ್ನು ಹೊಂದಿರುವುದರಿಂದ ಈ ಬಗೆಯ ಅರಣ್ಯಗಳು ವ್ಯಾಪಕವಾಗಿ ಹಂಚಿಕೆಯಾಗಿವೆ. ಇವುಗಳು ವರ್ಷದ ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ ಎಲೆಯುದುರಿಸುವುದನ್ನು ರೂಢಿಸಿಕೊಂಡಿವೆ. ಹೀಗಾಗಿ ಇವುಗಳನ್ನು ಎಲೆ ಉದುರುವ ಮಾನ್ಸೂನ್ ಅರಣ್ಯಗಳು ಎನ್ನುವರು

9) ಬ್ಯಾಂಕುಗಳ ಗುಣ ಲಕ್ಷಣಗಳನ್ನು ಬರೆಯಿರಿ

ಉತ್ತರ: . ಬ್ಯಾಂಕುಗಳ ಗುಣ ಲಕ್ಷಣಗಳು ಹೀಗಿವೆ :-

1) **ಹಣದ ವಹಿವಾಟು** : ಬ್ಯಾಂಕುಗಳು ಹಣಕಾಸಿನ ಸಂಸ್ಥೆಗಳಾಗಿದ್ದು ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
2) **ವ್ಯಕ್ತಿ/ಸಂಸ್ಥೆ/ಕಂಪನಿ** : ಬ್ಯಾಂಕ್ ಒಬ್ಬ ವ್ಯಕ್ತಿಯಾಗಿರಬಹುದು, ಸಂಸ್ಥೆ ಅಥವಾ ಕಂಪನಿ ಆಗಿರಬಹುದು. ಬ್ಯಾಂಕಿಂಗ್ ಕಂಪನಿ ಎಂದರೆ ಹಣಕಾಸಿನ ವ್ಯವಹಾರ ಮಾಡುವ ಸಂಸ್ಥೆ.
3) **ಠೇವಣಿಗಳನ್ನು ಅಂಗೀಕರಿಸುತ್ತವೆ** : ಬ್ಯಾಂಕು ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತದೆ.. ಈ ಠೇವಣಿಗಳನ್ನು ಠೇವಣಿದಾರರು ಬೇಡಿಕೆ ಇಟ್ಟಾಗ ಅಥವಾ ಒಂದು ನಿರ್ದಿಷ್ಟ ಅವಧಿ ಮುಗಿದ ಮೇಲೆ ಹಿಂದಿರುಗಿಸಬೇಕಾಗುತ್ತದೆ. ಈ ಠೇವಣಿಗಳಿಗೆ ಬ್ಯಾಂಕು ಭದ್ರತೆಯನ್ನು ಒದಗಿಸುತ್ತದೆ.
4) **ಸಾಲಗಳನ್ನು ಕೊಡುವುದು**: ಬ್ಯಾಂಕು ಕೈಗಾರಿಕಾ ಕ್ಷೇತ್ರ, ಕೃಷಿಕ್ಷೇತ್ರ, ಶಿಕ್ಷಣ, ಗೃಹ ನಿರ್ಮಾಣ ಮೊದಲಾದ ಉದ್ದೇಶಗಳಿಗಾಗಿ ಹಣವನ್ನು ಸಾಲರೂಪದಲ್ಲಿ ಕೊಡುತ್ತದೆ.
5) **ಪಾವತಿ ಮತ್ತು ಹಿಂದಕ್ಕೆ ಪಡೆಯುವುದು**: ಬ್ಯಾಂಕು ಸುಲಭ ರೀತಿಯಲ್ಲಿ ಠೇವಣಿದಾರರಿಗೆ ಚೆಕ್ಕು ಅಥವಾ ಹುಂಡಿಗಳ ಮೂಲಕ ಹಣವನ್ನು ಪಾವತಿಮಾಡುತ್ತದೆ ಮತ್ತು ಠೇವಣಿಗಳನ್ನು ಹಿಂದಕ್ಕೆ ಪಡೆಯಲು ಅನುವು ಮಾಡಿಕೊಡುತ್ತದೆ.
6) **ಏಜೆಂಟ್ ಅಥವಾ ಏಜೆಂಟ್ ನಿಯೋಜನೆ ಮತ್ತು ಉಪಯುಕ್ತ ಸೇವೆಗಳು**: ಬ್ಯಾಂಕು ತನ್ನ ಗ್ರಾಹಕರಿಗೆ ಏಜೆಂಟರಂತೆ ಅನೇಕ ಉಪಯುಕ್ತ ಸೇವೆಗಳನ್ನು ಒದಗಿಸುತ್ತದೆ.
7) **ಲಾಭ ಮತ್ತು ಸೇವಾ ಭಾವನೆ:** ಬ್ಯಾಂಕು ಸೇವೆಯ ಮನೋಭಾವ ಹೊಂದಿದ್ದು ಲಾಭ ಪಡೆಯುವ ಒಂದು ಸಂಸ್ಥೆಯಾಗಿದೆ.
8) **ನಿರಂತರ ವಿಸ್ತರಿಸುತ್ತಾ ಹೋಗುವ ಕಾರ್ಯಗಳು**: ಬ್ಯಾಂಕುಗಳು ತಮ್ಮ ಕಾರ್ಯಗಳನ್ನು ನಿರಂತರವಾಗಿ ಬೇರೆ ಬೇರೆ ದಿಕ್ಕುಗಳತ್ತ ಸೇವೆಗಳನ್ನು ಮತ್ತು ಚಟುವಟಿಕೆಗಳನ್ನು ವಿಸ್ತರಿಸಿಕೊಂಡು ಹೋಗುತ್ತವೆ.
9) **ಸಂಬಂಧ ಕಲ್ಪಿಸುವ ಕೊಂಡಿ** : ಬ್ಯಾಂಕು ಠೇಣಿದಾರರು ಮತ್ತು ಸಾಲ ಪಡೆಯುವವರ ಮಧ್ಯೆ ಸಂಪರ್ಕ ಕಲ್ಪಿಸುವ ಒಂದು ಕೊಂಡಿಯಂತೆ ತಮ್ಮ ಕಾರ್ಯಗಳನ್ನು ನಡೆಸುತ್ತದೆ. ಗ್ರಾಹಕರ ಉಳಿಕೆ ಹಣವನ್ನು ಠೇವಣಿಗಳ ಮೂಲಕ ಸಂಗ್ರಹಿಸಿ ಇದನ್ನು ಯಾರಿಗೆ ಅವಶ್ಯವಿದೆಯೋ ಅವರಿಗೆ ಅವರಿಗೆ ಸಾಲ ರೂಪದಲ್ಲಿ ಕೊಡುತ್ತದೆ.
10) **ಬ್ಯಾಂಕಿಂಗ್ ವ್ಯವಹಾರ** : ಬ್ಯಾಂಕಿನ ಮುಖ್ಯ ಚಟುವಟಿಕೆ ಹಣಕಾಸಿನಿಂದ ಕೂಡಿದ ವ್ಯವಹಾರ(ಬ್ಯಾಂಕಿಂಗ್)ವಾಗಿದ್ದು ಇತರೆ ವ್ಯವಹಾರಗಳಿಗೆ ಅಧೀನವಾಗಿರುವುದಿಲ್ಲ.

10) ಸಂಗೊಳ್ಳಿ ರಾಯಣ್ಣ ಕುರಿತು ಬರೆಯಿರಿ

ಉತ್ತರ:- ಸಂಗೊಳ್ಳಿಯ ರಾಯಣ್ಣನ ವೀರಯೋಧ. ಕಿತ್ತೂರಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಆದ್ಯಕರ್ತವ್ಯವೆಂದು ಭಾವಿಸಿದ್ದನು. ಈತನಮನೆತನದವರು ಪರಂಪರೆಯಿಂದಲೂ ಸೈನಿಕರಾಗಿ ಸೇವೆಯನ್ನು ಸಲ್ಲಿಸಿದ್ದರು. ರಾಯಣ್ಣ ಕಿತ್ತೂರಿನ ಯುದ್ಧದಲ್ಲಿ ಚೆನ್ನಮ್ಮನ ಜೊತೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ್ದನು. ಯುದ್ಧದಲ್ಲಿ ಸೆರೆಯಾಳಾಗಿ ಬಂಧಿಸಲ್ಪಟ್ಟು ತರುವಾಯ ಬಿಡುಗಡೆಗೊಂಡನು. ಅವನು ಸೈನಿಕರನ್ನು ಸಂಘಟಿಸುತ್ತಾ ಸ್ವಾತಂತ್ರ್ಯದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡನು. ಭೌಗೋಳಿಕವಾಗಿ ಆಯಕಟ್ಟಿನ ಸ್ಥಳಗಳಲ್ಲಿ ಗುಪ್ತ ಸಭೆಗಳನ್ನು ನಡೆಸುವ ಮೂಲಕ ತನ್ನ ಮುಂದಿನ ಯೋಜನೆಗಳನ್ನು ರೂಪಿಸಿದ್ದನು ಸಂಗೊಳ್ಳಿ ರಾಯಣ್ಣನು ಮೊದಲ ಗುರಿ ಬ್ರಿಟಿಷರ ಆಡಳಿತ ಯಂತ್ರದ ಪ್ರಮುಖ ಅಂಗವಾಗಿದ್ದ ತಾಲ್ಲೂಕು ಕಚೇರಿಗಳು ಮತ್ತು ಖಜಾನೆಗಳನ್ನು ಲೂಟಿ ಮಾಡುವುದಾಗಿತ್ತು ಮೊದಲು ನಂದಗಡ ಮತ್ತು ಖಾನಾಪುರ ತರುವಾಯ ಸಂಪಗಾವಿ ಆತನ ಕಾರ್ಯಾಚರಣೆಗಳ ಸ್ಥಳಗಳಾದವು. ಆತನ ಸೈನ್ಯ ಐನೂರಷ್ಟಿತ್ತು. ಬ್ರಿಟಿಷರ ಸೈನ್ಯಕ್ಕೆ ಸಹಾಯವನ್ನು ನೀಡುತ್ತಿದ್ದ ಹಳ್ಳಿಗರು ಅವನ ಆಕ್ರೋಶಕ್ಕೆ ತುತ್ತಾದರು. ಬ್ರಿಟಿಷರು ರಾಯಣ್ಣನು ರಾಣಿ ಚೆನ್ನಮ್ಮನ ಕುಮ್ಮಕ್ಕಿನಿಂದ ಸೈನಿಕ ಕಾರ್ಯಾಚರಣೆಗಳನ್ನು ನಡೆಸುತ್ತಿದ್ದಾನೆ ಎಂದು ಭಾವಿಸಿದ್ದರು. ಹೀಗಾಗಿ ಚೆನ್ನಮ್ಮನನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಸ್ಥಳಾಂತರಿಸಿದರು. ಸಂಗೊಳ್ಳಿ ರಾಯಣ್ಣ ರಾಯಣ್ಣನನ್ನು ಸೆರೆಹಿಡಿಯಲು ಬ್ರಿಟಿಷರು ಸಂಚನ್ನು ರೂಪಿಸಿದರು. ಕಿತ್ತೂರಿನ ಚೆನ್ನಮ್ಮಳನ್ನು ವಿರೋಧಿಸುತ್ತಿದ್ದ ದೇಸಾಯಿಗಳನ್ನು ಪ್ರಚೋದಿಸಿದರು. ಅಮಲ್ದಾರನಾಗಿದ್ದ ಕೃಷ್ಣರಾಯ ಎಂಬುವವನು ಈ ಸಂಚಿಗೆ ಕೈಜೋಡಿಸಿದನು. ಸಂಚಿಗೆ ಬಲಿಯಾದ ರಾಯಣ್ಣನನ್ನು ಇಂಗ್ಲಿಷ್ ಸೈನ್ಯ ಬಂಧಿಸಿ ಧಾರವಾಡಕ್ಕೆ ತಂದಿತು. ಆತನ ಬಂಧನಾನಂತರ ಆತನ ಸೈನಿಕರು ಶರಣಾಗತರಾದರು. ಮುಖ್ಯ ಅಪರಾಧಿ ಎಂದು ಘೋಷಿಸಿ 1831ರಲ್ಲಿ ನಂದಗಡದಲ್ಲಿ ಅವನನ್ನು ಗಲ್ಲಿಗೇರಿಸಲಾಯಿತು. ಆತನ ಅನೇಕ ಅನುಯಾಯಿಗಳನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಯಿತು. ಸಂಗೊಳ್ಳಿ ರಾಯಣ್ಣನ ಜೀವನ ಮತ್ತು ದೇಶ ಪ್ರೇಮವನ್ನು ಆ ಪ್ರದೇಶದ ಲಾವಣಿಗಳು ಇಂದಿಗೂ ಜೀವಂತವಾಗಿಸಿವೆ.

11) ಭಾರತದ ನಕಾಶೆಯನ್ನು ಬಿಡಿಸಿ, ಕೆಳಗಿನವುಗಳನ್ನು ಬಿಡಿಸಿ

ಎ) 23 1/2 0 ಉತ್ತರ ಅಕ್ಷಾಂಶ ಬಿ) ನರ್ಮದಾ ನದಿ

ಸಿ) ದೆಹಲಿ.



ಉತ್ತರ:- ಭಾರತ

ಮಾದರಿ ಪ್ರಶ್ನೆಗಳು

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿಯ ವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪೂರಕ ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ರಸಾಯನವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ

ಗಣಿತ ಶಾಸ್ತ್ರ

26) $A=\begin{bmatrix}5 & -3\\ -1 & 2\end{bmatrix}$ and $B=\begin{bmatrix}-2 & -1\\ 4 & 7\end{bmatrix}$; ಆದರೆ $AB \neq BA$ ಎಂದು ತೋರಿಸಿ

ಪರಿಹಾರ:–

ದತ್ತ $A=\begin{bmatrix}5 & -3\\ -1 & 2\end{bmatrix}$ & $B=\begin{bmatrix}-2 & -1\\ 4 & 7\end{bmatrix}$

$$\therefore AB=\begin{bmatrix}5 & -3\\ -1 & 2\end{bmatrix} x \begin{bmatrix}-2 & -1\\ 4 & 7\end{bmatrix}$$

$$AB=\begin{bmatrix}-10-12 & -5-21\\ 2+8 & 1+14\end{bmatrix}=\begin{bmatrix}-22 & -26\\ 10 & 15\end{bmatrix}$$

$$BA=\begin{bmatrix}-2 & -1\\ 4 & 7\end{bmatrix} x \begin{bmatrix}5 & -3\\ -1 & 2\end{bmatrix}$$

$$BA=\begin{bmatrix}-10+1 & 6-2\\ 20-7 & -12+14\end{bmatrix}=\begin{bmatrix}-9 & 4\\ 13 & 2\end{bmatrix}$$

$$\begin{bmatrix}-22 & -26\\ 10 & 15\end{bmatrix} \neq \begin{bmatrix}-9 & 4\\ 13 & 2\end{bmatrix}$$

$$\therefore AB \neq BA$$

27) X–ಅಕ್ಷಕ್ಕೆ

$\int \frac{dx}{(x+1)(x+2)}$ ಕಂಡುಹಿಡಿಯಿರಿ.

ಉತ್ತರ:– ಇಲ್ಲಿ ಅನುಕಲನೀಯ ಒಂದು ಶುದ್ಧ ಭಾಗಲಬ್ಧ ಭಿನ್ನರಾಶಿ, ಆದ್ದರಿಂದ ಅಂಶಿಕ ಭಿನ್ನರಾಶಿಯ ರೂಪವನ್ನು ಬಳಸಲಾಗುವುದು

$\frac{1}{(x+1)(x+2)}=\frac{A}{x+1}+\frac{B}{x+2}$ ಎಂದು ಬರೆಯುತ್ತೇವೆ.

ಇಲ್ಲಿ ವಾಸ್ತವಿಕ ಸಂಖ್ಯೆಗಳು A ಮತ್ತು B ಗಳನ್ನು ಸರಿ ಹೊಂದುವ ರೀತಿಯಲ್ಲಿ ಕಂಡುಹಿಡಿಯುತ್ತೇವೆ.

ಸಮೀಕರಣ (1)ರ ಪ್ರಕಾರ $1 = A(x+2) + B(x+1)$. ಸಿಗುತ್ತದೆ.

x ನ ಸಹ ಗುಣಕ ಮತ್ತು ಸ್ಥಿರ ಪದಗಳನ್ನು ಸಮಾಂತರಿಸಿದಾಗ

$$A+B=0$$

ಮತ್ತು $2A+B=1$

ಈ ಸಮೀಕರಣಗಳನ್ನು ಪರಿಹರಿಸಿದಾಗ $A=1$ ಮತ್ತು

$B=-1$ ಸಿಗುತ್ತದೆ.

ಆದ್ದರಿಂದ ಅನುಕಲನೀಯವನ್ನು ಕೆಳಕಂಡಂತೆ ನೀಡಬಹುದು.

$$\frac{1}{(x+1)(x+2)}=\frac{A}{x+1}+\frac{B}{x+2}$$

$$\int\frac{dx}{(x+1)(x+2)}=\int\frac{dx}{x+1}-\int\frac{dx}{x+2}$$

$$=\log|x+1|-\log|x+2|+C$$

$$=\log\left|\frac{x+1}{x+2}\right|+C$$

28) $\int_0^2 (x^2+1)dx$ ನ್ನು ಮೊತ್ತದ ಮಿತಿಯನ್ನಾಗಿ ಕಂಡುಹಿಡಿಯಿರಿ.

ಉತ್ತರ:– ವ್ಯಾಖ್ಯೆಯಂತೆ

$$\int_a^b f(x)dx=(b-a)\lim_{n\to\infty}\frac{1}{n}[f(a)+f(a+h)+\dots\dots\dots\dots+f(a+n-1)h]$$

ಇಲ್ಲಿ $h=\frac{b-a}{n}$

$A=0$, $b=2$, $f(x)=x^2+1$, $h=\frac{2-0}{n}=\frac{2}{n}$

ಆದುದರಿಂದ,

$$\int_0^2(x^2+1)dx=2\lim_{n\to\infty}\frac{1}{n}\left[f(0)+f\left(\frac{2}{n}\right)+f\left(\frac{4}{n}\right)+\dots\dots+f\left(\frac{2(n-1)}{n}\right)\right]$$

$$=2\lim_{x\to\infty}\frac{1}{n}\left[1+\left(\frac{2^2}{n^2}+1\right)+\left(\frac{4^2}{n^2}+1\right)+\dots\dots+\left(\frac{(2n-2)^2}{n^2}+1\right)\right]$$

$$=2\lim_{x\to\infty}\frac{1}{n}\left[\underbrace{(1+1+\dots\dots+1)}_{n\text{-terms}}+\frac{1}{n^2}(2^2+4^2+\dots\dots+(2n-2)^2\right]$$

$$=2\lim_{n\to\infty}\frac{1}{n}\left[n+\frac{2^2}{n^2}(1^2+2^2+\dots\dots+(n-1)^2\right]$$

$$=2\lim_{n\to\infty}\frac{1}{n}\left[n+\frac{4}{n^2}\frac{(n-1)n(2n-1)}{6}\right]$$

$$=2\lim_{n\to\infty}\frac{1}{n}\left[n+\frac{2}{3}\frac{(n-1)(2n-1)}{n}\right]$$

$$=2\lim_{n\to\infty}\left[1+\frac{2}{3}\left(1-\frac{1}{n}\right)\left(2-\frac{1}{n}\right)\right]=2\left[1+\frac{4}{3}\right]=\frac{14}{3}$$

29) $\int_{\frac{-\pi}{4}}^{\frac{\pi}{4}}\sin^2 x dx$ ನ್ನು ಕಂಡುಹಿಡಿಯಿರಿ.

ಉತ್ತರ:– $\sin^2 x$ ಒಂದು ಸಮ ಉತ್ಪನ್ನವಾಗಿರುವುದರಿಂದ, P_2(i) ನಿಂದ

$$\int_{\frac{-\pi}{4}}^{\frac{\pi}{4}}\sin^2 x\,dx=2\int_0^{\frac{\pi}{4}}\sin^2 x\,dx$$

ಎಂದಾಗುತ್ತದೆ

$$=2\int_0^{\frac{\pi}{4}}\frac{(1-\cos 2x)}{2}dx=\int_0^{\frac{\pi}{4}}(1-\cos 2x)dx$$

$$=\left[x-\frac{1}{2}\sin 2x\right]_0^{\frac{\pi}{4}}=\left(\frac{\pi}{4}-\frac{1}{2}\sin\frac{\pi}{2}\right)-0=\frac{\pi}{4}-\frac{1}{2}$$

ಸಿದ್ದರಾಮಯ್ಯ ಹೇಳಿಕೆಗೆ ಮುಖ್ಯಮಂತ್ರಿ ತಿರುಗೇಟು

ನಾನು ನಿಯತ್ತಿನ ನಾಯಿ; ತೋಳವಲ್ಲ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ನಾಯಿ ಅತ್ಯಂತ ನಿಯತ್ತಿನ ಪ್ರಾಣಿ; ಸಾಕುವವರಿಗೆ, ಮಾಲೀಕರಿಗೆ ನಿಯತ್ತಾಗಿರುತ್ತೆ; ಕಳ್ಳರನ್ನು ಬಿಡೋದಿಲ್ಲ; ನಾನೂ ಕರ್ನಾಟಕದ ಜನರ ಸೇವೆ ಮಾಡುತ್ತಿರುವ ನಿಯತ್ತಿನ ನಾಯಿ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ತಿರುಗೇಟು ಕೊಟ್ಟರು.

'ಕಾಂಗ್ರೆಸ್‌ನವರ ಧಂ, ತಾಕತ್ತನ್ನು ಪ್ರಶ್ನಿಸುವ ಬೊಮ್ಮಾಯಿ, ನರೇಂದ್ರ ಮೋದಿ ಎದುರು ನಾಯಿಮರಿಯಂತೆ ಇರುತ್ತಾರೆ' ಎಂದು ಸಿದ್ದರಾಮಯ್ಯ ಮಂಗಳವಾರ ಹಗರಿಬೊಮ್ಮನಹಳ್ಳಿಯಲ್ಲಿ ಮಾಡಿದ್ದ ಭಾಷಣಕ್ಕೆ ಬಳ್ಳಾರಿಯಲ್ಲಿ ಬುಧವಾರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿ ಮಾತನಾಡುವ ಸಮಯದಲ್ಲಿ ಮುಖ್ಯಮಂತ್ರಿ ಟಾಂಗ್ ಕೊಟ್ಟರು.

'ನಾನು ರಾಜ್ಯದ ಜನರ ಸೇವೆ ಮಾಡುವ ನಿಯತ್ತಿನ ನಾಯಿ ಎಂದು ಹೇಳಿಕೊಳ್ಳಲು ಹೆಮ್ಮೆ ಪಡುತ್ತೇನೆ. ನನಗೆ ಅಧಿಕಾರ ಸಿಕ್ಕಿದೆ, ಅವಕಾಶ ಸಿಕ್ಕಿದೆ ಎಂಬ ಕಾರಣಕ್ಕೆ ಜನರನ್ನು ತಿನ್ನುವ ತೋಳ ಆಗಲಾರೆ. ಕೆಲವು ನಾಯಿ ವೇಷದ ತೋಳಗಳಿವೆ. ನಾಯಿ ಯಾರು, ತೋಳ ಯಾರು ಎಂಬುದು ಜನರಿಗೆ ಚೆನ್ನಾಗಿ ಗೊತ್ತಿದೆ' ಎಂದು ಸಿದ್ದರಾಮಯ್ಯನವರ ವಿರುದ್ಧ ಬೊಮ್ಮಾಯಿ ಹರಿಹಾಯ್ದರು.

'ಹದಿನೈದನೇ ಹಣಕಾಸು ಆಯೋಗದ ಮಧ್ಯಂತರ ವರದಿಯಲ್ಲಿ ರಾಜ್ಯಕ್ಕೆ ₹ 4,500 ಕೋಟಿ ಮಧ್ಯಂತರ ಪರಿಹಾರ ಘೋಷಣೆ ಮಾಡಿದ್ದನ್ನು ತರುವುದಕ್ಕೆ ಬೊಮ್ಮಾಯಿ ಅವರಿಗೆ ಆಗಲಿಲ್ಲ. ಮೋದಿಯವರ ಮುಂದೆ ನಾಯಿಮರಿ ರೀತಿ ಇರುತ್ತಾರೆ' ಎಂದು ವಿರೋಧ ಪಕ್ಷದ ನಾಯಕರು ಮಂಗಳವಾರ ಲೇವಡಿ ಮಾಡಿದ್ದರು.

'ಸಿದ್ದರಾಮಯ್ಯ ಆಡಿದ ಮಾತು ಅವರ ವ್ಯಕ್ತಿತ್ವ ತೋರಿಸುತ್ತದೆ. ನಾಯಿಯಲ್ಲಿರುವ ನಿಯತ್ತಿನ ಗುಣವನ್ನು ನಾನು ಜನರ ಪರವಾಗಿ ಉಳಿಸಿಕೊಂಡು ಹೋಗುತ್ತೇನೆ' ಎಂದು ಬಸವರಾಜ ಬೊಮ್ಮಾಯಿ ಇದಕ್ಕೂ ಮುನ್ನ ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

'ಮನಮೋಹನ್‌ಸಿಂಗ್ ಅವರಂಥ ಸಭ್ಯ ಪ್ರಧಾನಿ ಇದ್ದಾಗ ರಾಜ್ಯಕ್ಕೆ ನಯಾಪೈಸೆ ತರಲಿಲ್ಲ. ಅವರ ಬಳಿಗೆ ಹೆದರಿಕೊಂಡು ಹೋಗದ ಸಿದ್ದರಾಮಯ್ಯ ಈಗ ಧೀರ, ಶೂರ ಎಂದು ಹೇಳಿಕೊಳ್ಳುತ್ತಾನೆ' ಎಂದು ಒಂದು ಹಂತದಲ್ಲಿ ಮುಖ್ಯಮಂತ್ರಿ ಏಕ ವಚನವನ್ನೂ ಪ್ರಯೋಗಿಸಿದರು.

'ನರೇಂದ್ರ ಮೋದಿ ಕಾಮಧೇನು; ಹತ್ತು- ಹಲವು ಕೊಡುಗೆ ಕೊಟ್ಟಿದ್ದಾರೆ. ನಾನು ದೊಡ್ಡ ಪಟ್ಟಿಯನ್ನೇ ಕೊಡಬಹುದು. ಒಂದು ರಾಜ್ಯಕ್ಕೆ 6,000 ಕಿ.ಮೀ ರಾಷ್ಟ್ರೀಯ ಹೆದ್ದಾರಿ ಕೊಟ್ಟಿರುವುದು ಸ್ವಾತಂತ್ರ್ಯ ಭಾರತದಲ್ಲಿ ದಾಖಲೆ. ಬೆಂಗಳೂರು- ಮೈಸೂರು ಹೆದ್ದಾರಿ; ಮಂಗಳೂರು, ಕಾರವಾರ ಬಂದರು ಅಭಿವೃದ್ಧಿ, ಕಳಸಾ- ಬಂಡೂರಿಗೆ ಅನುಮೋದನೆ, ಇದರ ಅರಿವಿಲ್ಲದೆ, ರಾಜಕೀಯ ಪ್ರೇರಿತ ಹೇಳಿಕೆಯನ್ನು ಸಿದ್ದರಾಮಯ್ಯ ನೀಡುತ್ತಿದ್ದಾರೆ' ಎಂದು ಅವರು ಟೀಕಿಸಿದರು.

'ನಾಯಿಮರಿ' ಪದ ಬಳಕೆ: ಸಚಿವರ ವಾಗ್ದಾಳಿ

ಬೆಂಗಳೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಧಾನಿ ನರೇಂದ್ರ ಮೋದಿ ಮುಂದೆ ನಾಯಿ ಮರಿಯಂತೆ ವರ್ತಿಸುತ್ತಾರೆ' ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ನೀಡಿರುವ ಹೇಳಿಕೆಯನ್ನು ಬಿಜೆಪಿ ನಾಯಕರು ಮತ್ತು ಸಚಿವರು ತೀವ್ರವಾಗಿ ಖಂಡಿಸಿದ್ದಾರೆ.

ಕಂದಾಯ ಸಚಿವ ಆರ್.ಅಶೋಕ ಪ್ರತಿಕ್ರಿಯಿಸಿ, 'ಸಿದ್ದರಾಮಯ್ಯ ಅವರು ಬೊಮ್ಮಾಯಿ ಬಗ್ಗೆ ಕೀಳುಮಟ್ಟದಲ್ಲಿ ಮಾತನಾಡಿದ್ದಾರೆ. ಇಂತಹ ಭಾಷೆ ಬಳಕೆ ಕಾಂಗ್ರೆಸ್ ಸಂಸ್ಕೃತಿ ಏನು ಎನ್ನುವುದನ್ನು ತೋರಿಸುತ್ತದೆ. ಇವರು ದೆಹಲಿಗೆ ಹೋಗಿ ಸೋನಿಯಾ ಮತ್ತು ರಾಹುಲ್ ಅವರ ಭೇಟಿಗೆ 4–5 ದಿನಗಳು ಕಾಯುತ್ತಾ, ಗುಲಾಮರಂತೆ ವರ್ತಿಸುವುದು ಎಲ್ಲರಿಗೂ ಗೊತ್ತಿದೆ. ಆದರೆ, ನಾಯಿ ಮರಿಯೋ ಬೆಕ್ಕಿನ ಮರಿಯೋ ಎಂದು ನಾವು ಹೇಳುವುದಿಲ್ಲ. ಅದು ನಮ್ಮ ಸಂಸ್ಕೃತಿ ಅಲ್ಲ' ಎಂದಿದ್ದಾರೆ.

ಗೃಹ ಸಚಿವ ಆರಗ ಜ್ಞಾನೇಂದ್ರ, 'ರಾಜ್ಯದ ಚುಕ್ಕಾಣಿ ಹಿಡಿದಿರುವ ಮುಖ್ಯಮಂತ್ರಿ ಕುರಿತು ಟೀಕೆಯ ಸಂದರ್ಭದಲ್ಲಿ ಬಳಸಿದ ಭಾಷೆ ಅವರ ಘನತೆಗೆ ತಕ್ಕುದಲ್ಲ. ಇದರಿಂದ ಸಾಂಸ್ಕೃತಿಕ ಪ್ರಜ್ಞೆ ಇರುವ ಎಲ್ಲರ ಮನ ನೋಯಿಸಿದೆ. ಅವರು ರಾಜ್ಯದ ಜನತೆ ಕ್ಷಮೆ ಕೇಳಬೇಕು' ಎಂದು ಆಗ್ರಹಿಸಿದ್ದಾರೆ.

ಲೋಕೋಪಯೋಗಿ ಸಚಿವ ಸಿ.ಸಿ.ಪಾಟೀಲ ಅವರು, 'ಸಿದ್ದರಾಮಯ್ಯ ಅವರು ತಮ್ಮ ಎಲುಬಿಲ್ಲದ ನಾಲಿಗೆಯಿಂದ ಈ ರೀತಿಯಾಗಿ ಮಾತನಾಡುವುದನ್ನು ಕೇಳಿದಾಗ ಪುರಂದರದಾಸರು ಬರೆದ ಆಚಾರವಿಲ್ಲದ ನಾಲಿಗೆ... ನಿನ್ನ ನೀಚ ಬುದ್ಧಿಯನ್ನು ಬಿಡು ನಾಲಿಗೆ ಎಂಬ ಸಾಲು ನೆನಪಿಗೆ ಬರುತ್ತಿದೆ' ಎಂದು ಹೇಳಿದ್ದಾರೆ.

ಬೃಹತ್ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ, 'ಹತ್ತು ವರ್ಷಗಳ ಕಾಲ ಸೂಪರ್ ಪವರ್ ಆಗಿದ್ದ ಸೋನಿಯಾ ಗಾಂಧಿ ಮುಂದೆ ಕೈಕಟ್ಟಿ ನಿಲ್ಲುವಾಗ ಸಿದ್ದರಾಮಯ್ಯ ಅವರ ಸ್ವಾಭಿಮಾನ ಎಲ್ಲಿ ಹೋಗಿತ್ತು?. ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಅಂಥವರ ಮುಂದೆ ಜೀ ಹುಜೂರ್ ಎನ್ನುವ ನಿಮಗೆ ಭಾರತದ ಸಂಸ್ಕೃತಿ, ಸಂಸ್ಕಾರ ಕೊಟ್ಟಿದೆಯೇ' ಎಂದು ಪ್ರಶ್ನಿಸಿದ್ದಾರೆ.

ಸಹಕಾರ ಸಚಿವ ಎಸ್.ಟಿ.ಸೋಮಶೇಖರ್, 'ಸಿದ್ದರಾಮಯ್ಯ ಅವರಿಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ರಾಹುಲ್ ಗಾಂಧಿ ಅವರು ನಿಮಗಿಂತ ಜ್ಯೂನಿಯರಾ? ಸೀನಿಯರಾ? ರಾಹುಲ್ ಗಾಂಧಿ ಮುಂದೆ ನೀವು ಹೇಗೆ ಮಾತನಾಡುತ್ತೀರಿ? ಅವರ ಮುಂದೆ ಕಾಲಮೇಲೆ ಕಾಲು ಹಾಕಿಕೊಂಡು ಕೂತ್ಕೋತಿರಾ' ಎಂದು ಅವರು ಪ್ರಶ್ನಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, 'ಕಾಂಗ್ರೆಸ್‌ನಲ್ಲಿ ಗುಲಾಮರಂತೆ ಇರುವ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಬೇಕೇ ವಿನಾ ನಾಲಿಗೆಯನ್ನು ಹರಿಬಿಡುವ ದುಸ್ಸಾಹಸಕ್ಕೆ ಮುಂದಾಗಬಾರದು. ಇದೇ ಪ್ರವೃತ್ತಿ ಮುಂದುವರಿಸಿದರೆ ಜನರೇ ತಕ್ಕ ಉತ್ತರ ನೀಡುತ್ತಾರೆ' ಎಂದು ಹೇಳಿದ್ದಾರೆ.

> ಕಾಂಗ್ರೆಸ್ ಸಂಸ್ಕೃತಿಯೇ ಬಿಜೆಪಿಯಲ್ಲಿ ಇದೆ ಎಂದು ಸಿದ್ದರಾಮಯ್ಯ ಭಾವಿಸಿರಬಹುದು, ಅದು ತಪ್ಪು ಕಲ್ಪನೆ. ನಾಯಿಯು ಬಾಲ ಅಲ್ಲಾಡಿಸಿಕೊಂಡು ಓಡಾಡಿದಂತೆ ವರ್ತಿಸುವುದು ಕಾಂಗ್ರೆಸ್ ಸಂಸ್ಕೃತಿ
>
> **ಸಿ.ಟಿ.ರವಿ,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> ರಾಹುಲ್ ಗಾಂಧಿ ಅವರಿಗೆ ಯಾವುದೇ ಸ್ಥಾನಮಾನವಿಲ್ಲ. ಆದರೂ, ಅವರನ್ನು ಕಂಡರೆ ಏಕೆ ನಡುಗುತ್ತೀರಿ. ಅವರ ವಯಸ್ಸು, ಅನುಭವ ಏನು. ನಿಮ್ಮ ವಯಸ್ಸು, ಅನುಭವ ಏನು?
>
> **ಡಾ.ಕೆ.ಸುಧಾಕರ್,** ಆರೋಗ್ಯ ಸಚಿವ



ಗೋಪುರಕ್ಕೆ ಪಂಚ ಕಳಶ

ಜಾತ್ರಾ ಮಹೋತ್ಸವದ ಪ್ರಯುಕ್ತ ಕೊಪ್ಪಳದ ಗವಿಮಠದ ಕರ್ತೃ ಗದ್ದುಗೆಯ ಗೋಪುರಕ್ಕೆ ಬುಧವಾರ ಪಂಚ ಕಳಶ ಅಳವಡಿಸುವ ದೃಶ್ಯ ಇಳಿಸಂಜೆಯಲ್ಲಿ ಕಂಡಿದ್ದು ಹೀಗೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

ಚಿತ್ರದುರ್ಗ ಜಿಲ್ಲೆಯ ಹೊಸಹಳ್ಳಿಯಲ್ಲಿ ಘಟನೆ

ಅಮೃತಾ ಮತ್ತು ಅವರ ತವರು ಮನೆಯವರ ವಿರುದ್ಧ ಮಾನವ ಹಕ್ಕುಗಳ ಉಲ್ಲಂಘನೆ ಹಾಗೂ ಅಮಾನುಷ ಕೃತ್ಯದ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿದೆ

ಸರಪಳಿ ಬಿಗಿದು ಕುಡುಕ ಪತಿ ಕಟ್ಟಿ ಹಾಕಿದ ಪತ್ನಿ!

ಧರ್ಮಪುರ (ಚಿತ್ರದುರ್ಗ ಜಿಲ್ಲೆ): ಕುಡಿತಕ್ಕೆ ದಾಸನಾಗಿ ಕುಟುಂಬವನ್ನು ನಿರ್ಲಕ್ಷಿಸಿದ್ದ ಪತಿಯನ್ನು ಪತ್ನಿ ತನ್ನ ತವರು ಮನೆಯಲ್ಲಿ ಸರಪಳಿ ಬಿಗಿದು ಕಂಬಕ್ಕೆ ಕಟ್ಟಿ ಹಾಕಿದ್ದ ಘಟನೆ ಸಮೀಪದ ಹೊಸಹಳ್ಳಿಯಲ್ಲಿ ನಡೆದಿದೆ.

ಹಿರಿಯೂರು ತಾಲ್ಲೂಕಿನ ಹರ್ತಿಕೋಟೆ ಗ್ರಾಮದ ರಂಗನಾಥ್ ಹೊಸಹಳ್ಳಿಯ ಅಮೃತಾ ಅವರೊಡನೆ ವಿವಾಹವಾಗಿದ್ದು, ಇಬ್ಬರು ಮಕ್ಕಳಿದ್ದಾರೆ. ಕುಡಿತದ ಚಟ ಅಂಟಿಸಿಕೊಂಡಿದ್ದ ರಂಗನಾಥ್ ಸಂಸಾರದ ಬಗ್ಗೆ ಗಮನ ನೀಡುತ್ತಿರಲಿಲ್ಲ. ಕುಡಿತದ ನಶೆಯಲ್ಲಿ ಸರಿಯಾಗಿ ಊಟವನ್ನೂ ಮಾಡುತ್ತಿರಲಿಲ್ಲ. ಇದರಿಂದ ರೋಸಿ ಹೋಗಿದ್ದ ಅಮೃತಾ ಗಂಡನನ್ನು ಮನೆಯಿಂದ ಹೊರಹೋಗದಂತೆ ತಡೆಯಲು ಕಾಲಿಗೆ ಸರಪಳಿ ಬಿಗಿದು, ಮನೆಯಲ್ಲಿನ ಕಂಬಕ್ಕೆ ಕಟ್ಟಿ ಬೀಗ ಜಡಿದು ಕೂಡಿ ಹಾಕಿದ್ದರು.

ಕುಡಿತದ ಚಟಕ್ಕೆ ಬಲಿಯಾಗಿದ್ದ ರಂಗನಾಥ್‌ನನ್ನು ಸರಪಳಿಯಿಂದ ಕಂಬಕ್ಕೆ ಕಟ್ಟಿ ಹಾಕಿರುವುದು

ಬುಧವಾರ ಹೊಸಹಳ್ಳಿಗೆ ತೆರಳಿದ್ದ ರಂಗನಾಥ್‌ನ ಪಾಲಕರಿಗೆ ಕೂಡಿ ಹಾಕಿರುವ ವಿಷಯ ತಿಳಿದಿದೆ. ಪಿಎಸ್ಐ ಪರಶುರಾಮ್ ಎನ್.ಲಮಾಣಿ ತನಿಖೆ ನಡೆಸಿದ್ದಾರೆ.

ಕೆಪಿಟಿಸಿಎಲ್ ನೇಮಕಾತಿ ಅಕ್ರಮ: ಮತ್ತೆ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ನಡೆದ ಅಕ್ರಮಕ್ಕೆ ಸಂಬಂಧಿಸಿದಂತೆ, ಪೊಲೀಸರು ಬುಧವಾರ ಮತ್ತೆ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಈವರೆಗೆ ಬಂಧಿತರಾದವರ ಸಂಖ್ಯೆ 48ಕ್ಕೆ ಏರಿಕೆಯಾಗಿದೆ.

ಗೋಕಾಕ ತಾಲ್ಲೂಕಿನ ಮಲ್ಲಾಪುರ ಪಿ.ಜಿ. ಗ್ರಾಮದ ಅಣ್ಣಪ್ಪ ಕೆಂಪಣ್ಣ ಮಾರವಾಡಿ(31), ಶಿವಾಪುರದ ಜಾನ್‌ರಾಬರ್ಟ್ ಯಶವಂತ ಬಂಗೆನ್ನವರ(26), ಮೂಡಲಗಿ ತಾಲ್ಲೂಕಿನ ರಾಜಾಪುರದ ಚಿದಾನಂದ ಚಿನ್ನಪ್ಪ ಮಾಡಲಗಿ(27) ಬಂಧಿತರು.

'ಎಲೆಕ್ಟ್ರಾನಿಕ್ ಡಿವೈಸ್ ಮತ್ತು ಮೈಕ್ರೋಚಿಪ್ ಬಳಸಿ, ಮೂವರು ಆರೋಪಿಗಳು ಪರೀಕ್ಷೆ ಬರೆದಿದ್ದರು. ಅವರಿಂದ ಅಕ್ರಮಕ್ಕೆ ಬಳಸಿದ ಎಲ್ಲ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಲ್ಲ ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸಂಜೀವ್ ಪಾಟೀಲ ತಿಳಿಸಿದ್ದಾರೆ.

ಅಣ್ಣಪ್ಪ ಮಾರವಾಡಿ

ಜಾನ್‌ರಾಬರ್ಟ್ ಬಂಗೆನ್ನವರ

ಚಿದಾನಂದ ಮಾಡಲಗಿ

ನದಿ, ಸಮುದ್ರದಲ್ಲಿ ಸಿದ್ಧೇಶ್ವರರ ಚಿತಾಭಸ್ಮ ವಿಸರ್ಜನೆಗೆ ಸಿದ್ಧತೆ

ಸಹಸ್ರಾರು ಭಕ್ತರಿಂದ ಚಿತಾಭಸ್ಮ ದರ್ಶನ

ಪ್ರಜಾವಾಣಿ ವಾರ್ತೆ

ವಿಜಯಪುರ: ಸಿದ್ಧೇಶ್ವರ ಸ್ವಾಮೀಜಿ ಅವರ ಅಂತ್ಯಕ್ರಿಯೆ ನಡೆದ ಜ್ಞಾನ ಯೋಗಾಶ್ರಮಕ್ಕೆ ಬುಧವಾರ ದಿನಪೂರ್ತಿ ಸಹಸ್ರಾರು ಭಕ್ತರು ಭೇಟಿ ನೀಡಿ ಚಿತಾಭಸ್ಮದ ದರ್ಶನ ಪಡೆದರು.

ಶ್ರೀಗಳ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದವರು ಹಾಗೂ ಪಡೆಯಲಾಗದವರು ಸೇರಿದಂತೆ ಶಾಲಾ, ಕಾಲೇಜು ವಿದ್ಯಾರ್ಥಿಗಳು ಆಶ್ರಮಕ್ಕೆ ಬೆಳಿಗ್ಗೆಯಿಂದಲೇ ಬಂದು ಸರದಿಯಲ್ಲಿ ನಿಂತು ಚಿತಾಭಸ್ಮಕ್ಕೆ ಕೈಮುಗಿದು, ಕಂಬನಿ ಮಿಡಿದರು.

ಆಶ್ರಮದ ಗಿಡಮರಗಳ ಕೆಳಗೆ ಕುಳಿತು ಸಿದ್ಧೇಶ್ವರ ಶ್ರೀಗಳ ಗುಣಗಾನ, ಭಜನೆ ಮಾಡುತ್ತಿರುವ ದೃಶ್ಯ ಕಂಡುಬಂದಿತು.

'ಶ್ರೀಗಳು ದೈಹಿಕವಾಗಿ ನಮ್ಮ ನಡುವೆ ಇಲ್ಲವಾದರೂ, ಅವರ ಪ್ರವಚನಗಳು, ನೀತಿ ಬೋಧನೆಗಳು, ವಿಚಾರಗಳು ನಮ್ಮಲ್ಲಿ ನಿರಂತರವಾಗಿರುತ್ತವೆ' ಎಂದು ಚಿತಾಭಸ್ಮ ದರ್ಶನಕ್ಕೆ ಬಂದಿದ್ದ ಭಕ್ತರಾದ ಸುಮಂಗಲಾ ಬಿರಾದಾರ, ಸಿದ್ದಮ್ಮ ದಳವಾಯಿ, ಗೀತಾ ಅಂಗಡಿ, ಬೋರಮ್ಮ ಹಂಚಿನಾಳ ಹೇಳಿದರು.

ಐದು ಕಡೆ ವಿಸರ್ಜನೆ: 'ಸಿದ್ಧೇಶ್ವರ ಶ್ರೀಗಳ ಕೋರಿಕೆಯಂತೆ ಅವರ ಚಿತಾಭಸ್ಮವನ್ನು ನಾಲ್ಕು ನದಿ, ಒಂದು ಸಾಗರ ಸೇರಿದಂತೆ ಐದು ಕಡೆ ಒಂದೆರಡು ದಿನಗಳಲ್ಲಿ ವಿಸರ್ಜಿಸಲಾಗುವುದು' ಎಂದು ಆಶ್ರಮದ ಅಧ್ಯಕ್ಷ ಬಸವಲಿಂಗ ಸ್ವಾಮೀಜಿ ಹೇಳಿದರು.

'ಸಾರ್ವಜನಿಕರಿಗೆ ಶ್ರೀಗಳ ಚಿತಾಭಸ್ಮ ನೀಡಲಾಗುವುದು ಎಂದು ಅಂತ್ಯಕ್ರಿಯೆ ವೇಳೆ ತಿಳಿಸಲಾಗಿತ್ತು. ಆದರೆ, ಈಗ ನೀಡದಿರಲು ನಿರ್ಧರಿಸಲಾಗಿದೆ' ಎಂದರು.

'ಶ್ರೀಗಳ ಬಗ್ಗೆ ಗೌರವ ಇರುವವರು ಆಶ್ರಮದ ಜ್ಞಾನ ಭಂಡಾರದಲ್ಲಿ ಸಿಗುವ ಗ್ರಂಥಗಳನ್ನು, ವಿಭೂತಿಯನ್ನು ಕೊಂಡೊಯ್ಯಲಿ' ಎಂದರು.

'ಆಶ್ರಮದಲ್ಲಿ ಈ ಹಿಂದಿನಿಂದ ನಡೆದುಕೊಂಡು ಬಂದಿರುವಂತೆ ನಿತ್ಯ ದಾಸೋಹ, ಪ್ರವಚನಗಳು ಮುಂದುವರಿಸಿಕೊಂಡು ಹೋಗಬೇಕು ಎಂಬ ಆಶಯ ಇದೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ ಹೇಳಿದರು.

ವಿಜಯಪುರ ಜ್ಞಾನಯೋಗಾಶ್ರಮಕ್ಕೆ ಭಕ್ತರು ಬುಧವಾರ ಭೇಟಿ ನೀಡಿ ಸಿದ್ಧೇಶ್ವರ ಸ್ವಾಮೀಜಿ ಅವರ ಚಿತಾಭಸ್ಮದ ದರ್ಶನ ಪಡೆದರು – ಪ್ರಜಾವಾಣಿ ಚಿತ್ರ

‘ರಸ್ತೆ, ಚರಂಡಿ ಬಿಟ್ಟು ಲವ್ ಜಿಹಾದ್ ಬಗ್ಗೆ ಮಾತನಾಡಿ’


ನಳಿನ್ ಕುಮಾರ್ ಕಟೀಲ್

ಮಂಗಳೂರು: ‘ನೀವು ರಸ್ತೆ, ಚರಂಡಿ ಯಂತಹ ಸಣ್ಣ ವಿಚಾರದ ಬಗ್ಗೆ ಮಾತನಾಡಬೇಡಿ. ನಿಮ್ಮ ಮಕ್ಕಳ ಬದುಕಿನ ಭವಿಷ್ಯದ ಪ್ರಶ್ನೆ ‘ಲವ್ ಜಿಹಾದ್’ ನಿಲ್ಲಿಸಬೇಕಾದರೆ ಭಾರತೀಯ ಜನತಾ ಪಾರ್ಟಿಯೇ ಬೇಕು ಎಂದು ಜನರಿಗೆ ಮನವರಿಕೆ ಮಾಡಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಪಕ್ಷದ ಕಾರ್ಯಕರ್ತ ರನ್ನು ಉದ್ದೇಶಿಸಿ ಹೇಳಿರುವ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬಿಜೆಪಿ ವತಿಯಿಂದ ಹಮ್ಮಿಕೊಂಡಿರುವ ‘ಬೂತ್ ವಿಜಯ ಅಭಿಯಾನ’ಕ್ಕೆ ಇಲ್ಲಿ ಸೋಮವಾರ ಚಾಲನೆ ನೀಡಿದ್ದ ಕಟೀಲ್ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದರು.

‘ಶಾಲೆಗೆ ಹೋದ ಮಕ್ಕಳು ಮತ್ತೆ ಮನೆಗೆ ಸುರಕ್ಷಿತವಾಗಿ ಮರಳುತ್ತಾರೆ ಎನ್ನುವ ಸ್ಥಿತಿ ಇಲ್ಲ. ದಕ್ಷಿಣ ಕನ್ನಡದಲ್ಲೂ ಆತಂಕದ ಸ್ಥಿತಿ ಇದೆ. ಈ ಆತಂಕ ನಿವಾರಣೆ ಆಗಬೇಕಾದರೆ, ಕರ್ನಾಟಕದಲ್ಲೂ ‘ಲವ್ ಜಿಹಾದ್’ ನಿಷೇಧಿಸುವ ಕಾನೂನಿನ ಅಗತ್ಯ ಇದೆ. ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಹಾಗೂ ಗೋಹತ್ಯಾ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದ್ದೇವೆ. ಲವ್ ಜಿಹಾದ್ ನಿಷೇಧ ಕಾನೂನನ್ನೂ ಜಾರಿಗೆ ತರುತ್ತೇವೆ’ ಎಂದು ನಳೀನ್ ಕುಮಾರ್ ಕಟೀಲ್ ಅವರು ಹೇಳಿದ್ದರು.

‘ಕಾರ್ಯಕರ್ತರು ಮನೆಮನೆಗೆ ನುಗ್ಗಬೇಕು. ಇನ್ನು 100 ದಿನ ವಿಶ್ರಮಿಸ ಬಾರದು. ಯಕ್ಷಗಾನದಲ್ಲೂ ಬಿಜೆಪಿ ಪ್ರಚಾರ ಆರಂಭವಾಗಬೇಕು’ ಎಂದೂ ಅವರು ಹೇಳಿದ್ದರು.

ಡಬಲ್ ಎಂಜಿನ್‌ಗೆ ಕೋಮುದ್ವೇಷ ಇಂಧನ: ಯು.ಟಿ. ಖಾದರ್

ನಳಿನ್ ಕುಮಾರ್ ಅವರ ಈ ಹೇಳಿಕೆಗೆ ಇಲ್ಲಿ ಬುಧವಾರ ಪ್ರತಿಕ್ರಿಯಿಸಿದ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್, ‘ಬಿಜೆಪಿಯ ಡಬಲ್ ಎಂಜಿನ್ ಸರ್ಕಾರದಲ್ಲಿ ಕೇವಲ ಕೋಮುದ್ವೇಷದ ಇಂಧನ ತುಂಬಿಕೊಂಡಿದೆ. ಅದರ ಸೈಲೆನ್ಸರ್‌ನಿಂದ ಬರುವ ಹೊಗೆಯಲ್ಲೂ ವಿಷವೇ ಇದೆ’ ಎಂದರು.

‘ರಸ್ತೆಗಳನ್ನು ಅಭಿವೃದ್ಧಿಪಡಿಸಿ, ಗುಂಡಿಗಳನ್ನು ಮುಚ್ಚುವ ಅರ್ಹತೆ ಹಾಗೂ ಯೋಗ್ಯತೆಗಳೆರಡೂ ಬಿಜೆಪಿ ಸರ್ಕಾರಕ್ಕಿಲ್ಲ. ಇಷ್ಟು ವರ್ಷಗಳಲ್ಲಿ ಈ ಸರ್ಕಾರ ಅಭಿವೃದ್ಧಿ ಕೆಲಸಗಳನ್ನೇ ಮಾಡಿಲ್ಲ. ಹಾಗಾಗಿ ಚುನಾವಣೆ ಸಮೀಪಿಸುವಾಗ ಜನರ ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ನಾಯಕರು ಮಾಡುತ್ತಿದ್ದಾರೆ’ ಎಂದರು.

ಪ್ರದೇಶಕ್ಕೆ ತಕ್ಕ ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕರ್ನಾಟಕದ ಚುನಾವಣೆ ಸವಾಲಾಗಿ ತೆಗೆದುಕೊಂಡಿರುವ ಅಮಿತ್ ಶಾ
- ಹಳೇ ಮೈಸೂರು ಜಿಲ್ಲೆಗಳಲ್ಲದೇ ಎಲ್ಲ ಪ್ರದೇಶಗಳಿಗೂ ಸಮಾನ ಮಹತ್ವ
- ಗೆಲುವಿಗೆ ಪ್ರದೇಶವಾರು ಪ್ರತ್ಯೇಕ ಕಾರ್ಯತಂತ್ರ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ತಮ್ಮ ಇತ್ತೀಚಿನ ಎರಡು ದಿನಗಳ ಭೇಟಿಯಲ್ಲಿ ಪಕ್ಷದೊಳಗಿನ ವಿದ್ಯಮಾನ, ರಾಜ್ಯದಲ್ಲಿ ವಿವಿಧ ಭಾಗಗಳಲ್ಲಿ ಪಕ್ಷದ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡಿದ್ದು, ಅದಕ್ಕೆ ಪೂರಕವಾಗಿ ವಿವಿಧ ಪ್ರದೇಶಗಳಿಗೆ ತಕ್ಕಂತೆ ಚುನಾವಣಾ ಕಾರ್ಯತಂತ್ರ ಹೆಣೆಯಲಿದ್ದಾರೆ.

‘ಕಳೆದ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಪೂರ್ಣ ಬಹುಮತಗಳಿಸದೇ ಯಡವಟ್ಟು ಮಾಡಿಕೊಂಡಿರುವುದನ್ನು ಪಾಠವಾಗಿ ತೆಗೆದುಕೊಂಡಿರುವ ಅವರು ಈ ಬಾರಿ ಯಾವುದೇ ಕಾರಣಕ್ಕೂ ತಪ್ಪುಗಳನ್ನು ಮಾಡಬಾರದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಹೀಗಾಗಿ ಎಲ್ಲೆಲ್ಲಿ ಲೋಪಗಳಿವೆ, ಅವುಗಳನ್ನು ಹೇಗೆ ಸರಿಪಡಿಸಬೇಕು ಎಂಬ ಬಗ್ಗೆ ಕೆಲವು ಹಿರಿಯ ನಾಯಕರಿಂದ ವೈಯಕ್ತಿಕವಾಗಿ ಮಾಹಿತಿಯನ್ನು ಪಡೆದಿದ್ದಾರೆ’ ಎಂದು ಪಕ್ಷದ ಮೂಲಗಳು ಹೇಳಿವೆ.

ಇಷ್ಟು ವರ್ಷ ಚುನಾವಣೆಗಳಲ್ಲಿ ಹಳೇ ಮೈಸೂರು ಭಾಗದ ಜಿಲ್ಲೆಗಳು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಗಂಭೀರ ಸ್ಪರ್ಧೆ ನೀಡದೇ ಇರುವ ಕಾರಣ ಬಹುಮತದ ಗೆರೆ ದಾಟಲು ಅಡ್ಡಿಯಾಗಿತ್ತು. ಈ ಬಾರಿ ಈ ಪ್ರದೇಶದಲ್ಲಿ ಯಾವುದೇ ಪಕ್ಷಗಳ ಜತೆ ಒಳ ಒಪ್ಪಂದ ಮಾಡಿಕೊಳ್ಳದೇ ಕಠಿಣ ಸ್ಪರ್ಧೆಯನ್ನು ಒಡ್ಡುವುದು ಮಾತ್ರವಲ್ಲದೇ, ಹೆಚ್ಚಿನ ಸ್ಥಾನಗಳನ್ನು ಗೆಲ್ಲಲೇಬೇಕು ಎಂದು ನಾಯಕರಿಗೆ ಕಟ್ಟುನಿಟ್ಟಿನ ಗುರಿ ನಿಗದಿ ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

224 ಕ್ಷೇತ್ರಗಳಲ್ಲೂ ಏಕ ಪ್ರಕಾರವಾಗಿ ಕಠಿಣ ಪ್ರಯತ್ನ ಹಾಕಲೇಬೇಕು. ಆಯಾ ಭಾಗದ ಜಿಲ್ಲೆಗಳಿಗೆ ತಕ್ಕಂತೆ ಕಾರ್ಯತಂತ್ರ ರೂಪಿಸಬೇಕು. ಗೆಲ್ಲಬಹುದಾದ ಅಭ್ಯರ್ಥಿಗಳಿಗೆ ಆದ್ಯತೆ ನೀಡಬೇಕು. ಸಚಿವರು ತಮ್ಮ ತಮ್ಮ ಉಸ್ತುವಾರಿ ಜಿಲ್ಲೆಗಳಲ್ಲಿ ಕನಿಷ್ಠ 3 ರಿಂದ 4 ವಿಧಾನಸಭಾ ಕ್ಷೇತ್ರಗಳಲ್ಲಿ ಗೆಲ್ಲಿಸಲು ಏನೇನು ಮಾಡಬೇಕು ಎಂಬ ಬಗ್ಗೆ ತೀರ್ಮಾನಿಸಿ ಮಾಹಿತಿ ನೀಡಬೇಕು ಎಂದು ಸೂಚಿಸಿದ್ದಾರೆ.

‘ಬಿಜೆಪಿಗೆ ಹಳೇ ಮೈಸೂರು ಪ್ರದೇಶದಲ್ಲಿ ನೆಲೆ ಇಲ್ಲ ಎಂಬ ವಾದದಲ್ಲಿ ಹುರುಳಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಪಕ್ಷ ಶೇ 52 ರಷ್ಟು ಮತಗಳಿಸಿದೆ. ಬಿಜೆಪಿ ಗೆಲ್ಲದೇ ಇರುವ ಕ್ಷೇತ್ರಗಳಲ್ಲೂ ಪ್ರತಿಸ್ಪರ್ಧಿ ಪಕ್ಷಗಳಿಗಿಂತಲೂ ಹೆಚ್ಚು ಮತಗಳನ್ನು ಗಳಿಸಿರುವಾಗ, ನೆಲೆ ಇಲ್ಲ ಎಂದು ಯಾವ ಆಧಾರದಲ್ಲಿ ಹೇಳುತ್ತೀರಿ. ಪ್ರಾಮಾಣಿಕ ಪ್ರಯತ್ನ ಹಾಕಬೇಕು’ ಎಂದು ತಾಕೀತು ಮಾಡಿದ್ದಾರೆ.

‘2014 ಮತ್ತು 2019ರ ಲೋಕಸಭೆ ಚುನಾವಣೆ, ಆ ಬಳಿಕ ನಡೆದ ವಿಧಾನಸಭಾ ಚುನಾವಣಾ ಸಂದರ್ಭಗಳಲ್ಲಿ ಬಿಜೆಪಿ ಗೆಲ್ಲುವುದಿಲ್ಲ, ಪಕ್ಷಕ್ಕೆ ನೆಲೆಯೇ ಇಲ್ಲ ಎಂದು ಲೇವಡಿ ಮಾಡುತ್ತಿದ್ದರು. ಆದರೆ, ನಮ್ಮ ಪರಿಶ್ರಮ ಈ ವ್ಯಾಖ್ಯಾನಕಾರರ ಲೆಕ್ಕಾಚಾರಗಳನ್ನು ಬುಡಮೇಲು ಮಾಡಿತು. ಜನರಿಗೆ ನಮ್ಮ ಕೆಲಸಗಳು ಮತ್ತು ಅಭಿವೃದ್ಧಿಯ ವಿಚಾರವನ್ನು ಸಮರ್ಥವಾಗಿ ತಲುಪಿಸಿದೆವು. ಕಾರ್ಯಕರ್ತರು ಹಗಲಿರುಳೆನ್ನದೇ ಕೆಲಸ ಮಾಡಿದ್ದರಿಂದ ಯಶಸ್ಸು ಸಿಕ್ಕಿತು. ಉತ್ತರ ಪ್ರದೇಶ, ಗುಜರಾತ್, ಗೋವಾ, ಉತ್ತರಾಖಂಡ್‌ನಲ್ಲೂ ಇದೇ ರೀತಿ ಯಶಸ್ಸು ಸಿಕ್ಕಿದೆ. ಆದ್ದರಿಂದ ಪ್ರತಿಕೂಲ ಸ್ಥಿತಿಯನ್ನು ಅನುಕೂಲಕರವಾಗಿ ಪರಿವರ್ತಿಸಿ ಕೊಂಡು ಯಶಸ್ಸಿನತ್ತ ಮುನ್ನಡೆಸಬೇಕಾಗಿದೆ’ ಎಂದು ನಾಯಕರಿಗೆ ಶಾ ಅವರು ಮನವರಿಕೆ ಮಾಡಿದರು’ ಎಂದು ಮೂಲಗಳು ಹೇಳಿವೆ.

ಅಭ್ಯರ್ಥಿ ಆಯ್ಕೆಗೆ ‘ತ್ರಿ’ ಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಗದ್ದುಗೆ ಹಿಡಿಯಲು ನಾನಾ ತಂತ್ರಗಳ ಮೊರೆ ಹೋಗಿರುವ ಕಾಂಗ್ರೆಸ್ ನಾಯಕರು, ಕ್ಷೇತ್ರ ಗೆಲ್ಲುವ ಕಲಿಗಳ ಆಯ್ಕೆಗೆ ‘ತ್ರಿ’ ಸೂತ್ರ ಅಳವಡಿಸಲು ಮುಂದಾಗಿದ್ದಾರೆ.

ಚುನಾವಣೆಗೆ ಸಜ್ಜುಗೊಳ್ಳಲು, ರಾಜ್ಯ– ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಆಂದೋಲನ ಮಾದರಿಯಲ್ಲಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ನಾಯಕರು ಇದೇ 11ರಿಂದ 27ರವರೆಗೆ ‘ಪ್ರಜಾಧ್ವನಿ’ ಯಾತ್ರೆ ಕೈಗೊಳ್ಳಲಿದ್ದಾರೆ. ಯಾತ್ರೆಯ ಸಂದರ್ಭದಲ್ಲಿ ಅಥವಾ ಯಾತ್ರೆಯ ಮೊದಲ ಹಂತ ಮುಗಿಯುತ್ತಿದ್ದಂತೆ ಟಿಕೆಟ್ ಘೋಷಿಸುವಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮೇಲೆ ಪಕ್ಷದ ನಾಯಕರು ಒತ್ತಡ ಹೇರುತ್ತಿದ್ದಾರೆ. ಹೀಗಾಗಿ, ಜನವರಿ ಕೊನೆಯ ವಾರದಲ್ಲಿ 120ರಿಂದ 150 ಕ್ಷೇತ್ರಗಳ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ರಾಜ್ಯ ನಾಯಕರು ಚಿಂತಿಸಿದ್ದಾರೆ.

ಎಲ್ಲ ಹಾಲಿ ಶಾಸಕರು ಮತ್ತು 2018ರ ಚುನಾವಣೆಯಲ್ಲಿ 5 ಸಾವಿರಕ್ಕೂ ಕಡಿಮೆ ಮತಗಳ ಅಂತರದಿಂದ ಸೋಲುಂಡವರಿಗೆ, ಕ್ಷೇತ್ರವಾರು ನಡೆಸಿದ ಸರ್ವೆಯಲ್ಲಿ ಮತದಾರರ ಒಲವು ಗಳಿಸಿ ಗೆಲ್ಲುವ ಅಭ್ಯರ್ಥಿ ಗುರುತಿಸಿ ಕೊಂಡವರಿಗೆ, ನಿರ್ದಿಷ್ಟ ಕ್ಷೇತ್ರಗಳಲ್ಲಿ ವರ್ಚಸ್ಸು, ಸಾಮರ್ಥ್ಯ ಮತ್ತು ಮತದಾರರ ಮೇಲೆ ಪ್ರಭಾವ ಬೀರಬಲ್ಲವರಿಗೆ ಟಿಕೆಟ್ ಎಂಬ ಮೂರು ಸೂತ್ರಗಳನ್ನು ಪಾಲಿಸಿ ಟಿಕೆಟ್ ಹಂಚಿಕೆ ಮಾಡಲು ಪಕ್ಷದ ವಲಯದಲ್ಲಿ ಚರ್ಚೆ ನಡೆದಿದೆ.

‘ಗೆಲುವೊಂದೇ ಮಾನದಂಡ ಎಂಬ ಗುರಿಯಿಟ್ಟು ಚುನಾವಣೆಯನ್ನು ಸಾಮೂಹಿಕ ನಾಯಕತ್ವದಲ್ಲಿ ಎದುರಿಸಲು ಕಾಂಗ್ರೆಸ್ ನಾಯಕರು ಪಣ ತೊಟ್ಟಿದ್ದಾರೆ. ಆದರೆ, ಅನೇಕ ಕ್ಷೇತ್ರಗಳಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬಣದ ಅಭ್ಯರ್ಥಿಗಳೆಂದು ಗುರುತಿಸಿಕೊಂಡವರು ಟಿಕೆಟ್ ಗಿಟ್ಟಿಸಿಕೊಳ್ಳಲು ಜಿದ್ದಿಗೆ ಬಿದ್ದಿದ್ದಾರೆ. ಆಪ್ತರ ಮೂಲಕ ಟಿಕೆಟ್ ಗಿಟ್ಟಿಸಿಕೊಳ್ಳಲು ತೆರೆಮರೆಯಲ್ಲಿ ಯತ್ನ ಆರಂಭಿಸಿದ್ದಾರೆ. ಈ ಬಣ ರಾಜಕೀಯ ಈಗಾಗಲೇ ವರಿಷ್ಠರ ಗಮನಕ್ಕೂ ಬಂದಿದೆ. ಹೀಗಾಗಿ, ಟಿಕೆಟ್ ಹಂಚಿಕೆ ವಿಚಾರದಲ್ಲಿ ರಾಜ್ಯದವರೇ ಆಗಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮೇಲುಗೈ ಸಾಧಿಸುವ ಸಾಧ್ಯತೆಯೇ ಹೆಚ್ಚು’ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

‘ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಪರಸ್ಪರ ಚೆನ್ನಾಗಿಯೇ ಇದ್ದಾರೆ. ಆದರೆ, ಅವರ ಸುತ್ತ ಇರುವವರ ಚಿತಾವಣೆ ಹೆಚ್ಚುತ್ತಿದೆ.ಇದರಿಂದಾಗಿ ಪಕ್ಷದಲ್ಲಿ ಬಣ ರಾಜಕೀಯದ ಜೊತೆಗೆ ಗೊಂದಲವೂ ಉಂಟಾಗುತ್ತಿದೆ. ರಾಜ್ಯದಲ್ಲಿ ಈ ಬಾರಿ ಗೆಲ್ಲುವ ಉತ್ತಮ ವಾತಾವರಣವಿದೆ. ಅದನ್ನು ಹಾಳು ಮಾಡಿಕೊಳ್ಳಬೇಡಿ ಎಂದು ವರಿಷ್ಠರು ಈಗಾಗಲೇ ಎಚ್ಚರಿಕೆ ನೀಡಿದ್ದಾರೆ. ಕಡಿಮೆ ಅಂತರದಲ್ಲಿ ಗೆದ್ದವರಿಗೆ ಟಿಕೆಟ್ ಬಹುತೇಕ ಖಚಿತ. ಆದರೆ, ಚುನಾವಣೆಯ ಬಳಿಕ ಕ್ಷೇತ್ರದಿಂದ ದೂರವಾದವರು, ಮತದಾರರ ಸಂಪರ್ಕ ಕಳೆದುಕೊಂಡವರಿಗೆ ಟಿಕೆಟ್ ಸಿಗುವ ಸಾಧ್ಯತೆ ವಿರಳ. ಒಂದು ಮನೆಯಲ್ಲಿ ಒಬ್ಬರಿಗೆ ಮಾತ್ರ ಟಿಕೆಟ್ ಕೊಡುವ ಬಗ್ಗೆಯೂ ಚರ್ಚೆ ನಡೆದಿದೆ’ ಎಂದು ಹೇಳಿದರು.

ಪ್ರಚಾರ ಸಮಿತಿ ಶೀಘ್ರ ರಚನೆ: ಕೆಪಿಸಿಸಿ ಪ್ರಚಾರ ಸಮಿತಿಯ ಅಧ್ಯಕ್ಷರನ್ನಾಗಿ ಎಂ.ಬಿ. ಪಾಟೀಲ ಅವರನ್ನು ವರ್ಷದ ಹಿಂದೆಯೇ ನೇಮಿಸಿದ್ದರೂ, ಸಮಿತಿಗೆ ಪೂರ್ಣ ಪ್ರಮಾಣದಲ್ಲಿ ಪದಾಧಿಕಾರಿಗಳನ್ನು ನೇಮಿಸಿಲ್ಲ. ಶೀಘ್ರದಲ್ಲಿ ಸಮಿತಿಗೆ ಪದಾಧಿಕಾರಿಗಳನ್ನು ನೇಮಿಸುವ ನಿರೀಕ್ಷೆಯಿದೆ.

ಡಿಕೆಶಿ– ಸಿದ್ದರಾಮಯ್ಯ ಪೈಪೋಟಿಗೆ ಖರ್ಗೆ ತಡೆ?

‘ಸೀಟು ಹಂಚಿಕೆ ವೇಳೆ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಒಮ್ಮತ ಮೂಡದೆ, ಗೊಂದಲ ಉಂಟಾದರೆ ಪಕ್ಷದ ವರಿಷ್ಠರೇ ಅಭ್ಯರ್ಥಿ ಹೆಸರು ಅಂತಿಮಗೊಳಿಸಬಹುದು. ಅಲ್ಲದೆ, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇಡೀ ರಾಜ್ಯದ ರಾಜಕೀಯ ಚಿತ್ರಣದ ಸಂಪೂರ್ಣ ಅರಿವು ಇದೆ. ಅವರು ಮಧ್ಯಪ್ರವೇಶಿಸುವುದು ಖಚಿತ’ ಎಂದು ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

‘ಹಲವು ಕ್ಷೇತ್ರಗಳಲ್ಲಿ ಟಿಕೆಟ್‌ಗಾಗಿ ಈಗಾಗಲೇ ಪೈಪೋಟಿ ಆರಂಭವಾಗಿದೆ. ಇತರ ಪಕ್ಷಗಳಿಂದ ವಲಸೆ ಬಂದವರೂ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ರಾಜ್ಯದಲ್ಲಿ ಚುನಾವಣೆ ಗೆದ್ದು ತೋರಿಸುವುದು ಮಲ್ಲಿಕಾರ್ಜುನ ಖರ್ಗೆ ಅವರ ಮುಂದಿರುವ ಗುರಿ ಮತ್ತು ಸವಾಲು. ಅಭ್ಯರ್ಥಿ ಆಯ್ಕೆಯ ಗೊಂದಲದಿಂದ ಕ್ಷೇತ್ರ ಕಳೆದುಕೊಳ್ಳಬಾರದೆಂಬ ಕಾರಣಕ್ಕೆ ಅವರು ಎಚ್ಚರಿಕೆಯ ನಡೆ ಇಡುವುದು ಖಚಿತ’ ಎಂದೂ ಅವರು ಹೇಳಿದರು.

‘ಬಿಜೆಪಿಯವರು ಉತ್ತರ ಕರ್ನಾಟಕ ಗೆದ್ದಾಯಿತೆ?’

ತುಮಕೂರು: ಮುಂಬರುವ ವಿಧಾನಸಭೆ ಚುನಾವಣೆ ದೃಷ್ಟಿಯಿಂದ ಹಳೆ ಮೈಸೂರು ಪ್ರದೇಶವನ್ನು ಕೇಂದ್ರೀಕರಿಸಿರುವ ಬಿಜೆಪಿಯವರು ಉತ್ತರ ಕರ್ನಾಟಕದ ಎಲ್ಲಾ ಪ್ರದೇಶಗಳನ್ನು ಗೆದ್ದಾಯಿತೆ? ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ತುರುವೇಕೆರೆಯಲ್ಲಿ ಬುಧವಾರ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶಕ್ಕೂ ಮುನ್ನ ಸುದ್ದಿಗಾರ ರೊಂದಿಗೆ ಮಾತನಾಡಿದರು. ಹಳೆ ಮೈಸೂರು ಪ್ರದೇಶಗಳನ್ನು ಗೆಲ್ಲುತ್ತೇವೆ ಎಂದು ಬಿಜೆಪಿಯವರು ಬೀಗುತ್ತಿದ್ದಾರೆ. ಇಲ್ಲಿನ ಜನರು ಬಿಜೆಪಿ ಮಾತಿಗೆ ಮಣೆ ಹಾಕುವುದಿಲ್ಲ ಎಂದು ಹೇಳಿದರು.

‘ಬಿಜೆಪಿಗೆ ಮರಳುವ ಪ್ರಶ್ನೆಯೇ ಇಲ್ಲ’

ಗಂಗಾವತಿ: ‘ನಾನು ಸ್ಥಾಪಿಸಿದ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಾಮರ್ಥ್ಯ ಏನು ಎಂಬುದು ಮುಂದಿನ ದಿನಗಳಲ್ಲಿ ಎಲ್ಲರಿಗೂ ಗೊತ್ತಾಗಲಿದೆ. ಬಿಜೆಪಿಗೆ ಮರಳುವ ಪ್ರಶ್ನೆಯೇ ಇಲ್ಲ’ ಎಂದು ಪಕ್ಷದ ಸ್ಥಾಪಕ ಜನಾರ್ದನ ರೆಡ್ಡಿ ಹೇಳಿದರು.

‘ಜನವರಿ 16ರ ಬಳಿಕ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವೆ. ಎಲ್ಲ ಕ್ಷೇತ್ರಗಳಲ್ಲಿ ಸಂಚರಿಸಿ ಪಕ್ಷ ಬಲಪಡಿಸುವೆ. ನನ್ನ ಮೇಲಿನ ಪ್ರಕರಣಗಳು ಇತ್ಯರ್ಥವಾದರೆ ಅಥವಾ ಹೊಸ ಪಕ್ಷ ಯಶಸ್ಸು ಗಳಿಸಿದರೆ, ನಾನು ಪುನಃ ಬಿಜೆಪಿ ಸೇರುವೆ ಎಂಬುದು ಸುಳ್ಳು’ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಕೊಪ್ಪಳ, ವಿಜಯನಗರ, ಬಳ್ಳಾರಿ, ಗದಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪಕ್ಷ ಸಂಘಟಿಸುತ್ತಿದ್ದೇನೆ. ಗಂಗಾವತಿ ಹೊರತುಪಡಿಸಿ ಬೇರೆಲ್ಲೂ ಸ್ಪರ್ಧಿಸುವುದಿಲ್ಲ. ಇಲ್ಲಿಂದಲೇ ಸವಾಲು ಎದುರಿಸುವೆ’ ಎಂದರು.

‘ಉತ್ತರ ಕರ್ನಾಟಕದಲ್ಲಿ ಏನನ್ನಾದರೂ ಮಾಡುವೆ ಎಂಬ ಭಯದಿಂದ ಕೆಲವರು ನನ್ನನ್ನು ತವರು ಜಿಲ್ಲೆ ಬಳ್ಳಾರಿಯಿಂದ ತಂತ್ರ ಮಾಡಿ ಹೊರಹಾಕಿಸಿದರು. ಇಂಥದ್ದಕ್ಕೆಲ್ಲ ಬಗ್ಗುವುದಿಲ್ಲ’ ಎಂದರು.

‘ಪೊಲೀಸ್ ನೇಮಕಾತಿ: ಮಹಿಳಾ ಮೀಸಲಾತಿಗೆ ಚಿಂತನೆ’

ಶಿವಮೊಗ್ಗ: ‘ಪೊಲೀಸ್ ನೇಮಕಾತಿಯಲ್ಲಿ ಮಹಿಳೆಯರಿಗೆ ಶೇ 25ರಷ್ಟು ಮೀಸಲು ನೀಡಲು ಸರ್ಕಾರ ಚಿಂತನೆ ನಡೆಸಿದ್ದು, ಮುಂಬರುವ ದಿನಗಳಲ್ಲಿ ಕಾರ್ಯರೂಪಕ್ಕೆ ಬರಲಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಜಿಲ್ಲಾ ಒಕ್ಕಲಿಗ ಮಹಿಳಾ ವೇದಿಕೆ ಬುಧವಾರ ಆಯೋಜಿಸಿದ್ದ ‘ಮಲೆನಾಡು ಮೇಳ’ ಉದ್ಘಾಟಿಸಿ ಮಾತನಾಡಿದರು.

ಪಿಂಚಣಿ ವಿಳಂಬ: ಬೇಸತ್ತ ನಿವೃತ್ತ ಅಧಿಕಾರಿಯಿಂದ ವಿನೂತನ ಪ್ರತಿಭಟನೆ

ಬೀಳ್ಕೊಡುಗೆಯ ಉಡುಗೊರೆ ವಾಪಸ್!

ಪ್ರಜಾವಾಣಿ ವಾರ್ತೆ

ಮಂಗಳೂರು: ತಮ್ಮ ಪಿಂಚಣಿ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ನಿವೃತ್ತ ಸಹಾಯಕ ಕಾರ್ಯದರ್ಶಿ ಜಿ.ಸದಾನಂದ ಅವರು ತಮ್ಮ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ನೀಡಿದ್ದ ಉಡುಗೊರೆಗಳನ್ನು ಮರಳಿಸುವ ಮೂಲಕ ಪ್ರತಿಭಟಿಸಿದ್ದಾರೆ.

ಆಡಳಿತ ಶಾಖೆಯ ಸೂಪರಿಂಟೆಂಡೆಂಟ್ ಅವರ ಮೇಜಿನ ಮೇಲೆ ಸದಾನಂದ ಅವರು ಮೈಸೂರು ಪೇಟ, ಹಾರ ಹಾಗೂ ಶಾಲುಗಳನ್ನು ಇಟ್ಟುಹೋದ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಬೀಳ್ಕೊಡುಗೆ ಸಮಾರಂಭದಲ್ಲಿ ನೀಡಲಾದ ಪೇಟ, ಹಾರ, ಶಾಲುಗಳನ್ನು ಸೂಪರಿಂಟೆಂಡ್ ಅವರ ಮೇಜಿನ ಮೇಲೆ ಇಟ್ಟಿರುವುದು

40 ವರ್ಷ ಸರ್ಕಾರಿ ಸೇವೆ ಸಲ್ಲಿಸಿದ್ದ ಸದಾನಂದ 2022ರ ಅ.31ರಂದು ನಿವೃತ್ತರಾಗಿದ್ದರು. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಆಡಳಿತ ವಿಭಾಗದಿಂದ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಗಿತ್ತು.

‘ಸದಾನಂದ ಅವರು ಪಿಂಚಣಿಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ತ್ವರಿತವಾಗಿ ಮಾಡಿಕೊಡುವಂತೆ ಕೋರಲು 2022ರ ನವೆಂಬರ್‌ನಿಂದ ಪದೇ ಪದೇ ಕಚೇರಿಗೆ ಭೇಟಿ ನೀಡಿದ್ದರು. ಪಿಂಚಣಿಗೆ ಸಂಬಂಧಿಸಿದ ದಾಖಲಾತಿಗಳನ್ನು ಸರ್ಕಾರಕ್ಕೆ ಸಲ್ಲಿಸುವ ವಿಚಾರದಲ್ಲಿ ವಿಳಂಬ ಆಗಿರುವುದರಿಂದ ತೀವ್ರ ನೊಂದಿದ್ದರು. ಹೀಗಾಗಿ ಬೇಸರದಿಂದ ಉಡುಗೊರೆಗಳನ್ನು ಮರಳಿಸಿದ್ದಾರೆ‘ ಎಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಕಚೇರಿಯ ಮೂಲಗಳು ತಿಳಿಸಿವೆ.

ಸದಾನಂದ ಪ್ರತಿಕ್ರಿಯಿಸಿ, ‘ಚಿಕಿತ್ಸೆ, ಮದುವೆ ಹಾಗೂ ಇತರ ಕಾರಣಗಳಿಗೆ ಮಾಡಿದ ಸಾಲದಿಂದಾಗಿ ನನ್ನ ಮೇಲೆ ಬಹಳ ಆರ್ಥಿಕ ಹೊರೆ ಇದೆ. ಪಿಂಚಣಿ ವಿಳಂಬದಿಂದ ಸಮಸ್ಯೆಯಾಗಿದೆ‘ ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಕುಮಾರಸ್ವಾಮಿ ಆರೋಪ

‘ಸ್ಯಾಂಟ್ರೊ ರವಿ ಜತೆ ಸಚಿವರ ನಂಟು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೈಸೂರಿನಲ್ಲಿ ಸುಳ್ಳು ಮಾಹಿತಿ ನೀಡಿ ಪರಿಶಿಷ್ಟ ಜಾತಿಯ ಮಹಿಳೆಯನ್ನು ಮದುವೆಯಾಗಿ ವಂಚಿಸಿರುವ ಪ್ರಕರಣದ ಆರೋಪಿಯಾಗಿರುವ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಜತೆ ರಾಜ್ಯ ಸರ್ಕಾರದ ಹಲವು ಸಚಿವರು ನಂಟು ಹೊಂದಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಪಕ್ಷದ ಪ್ರಧಾನ ಕಚೇರಿಯಲ್ಲಿ ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ‘2018ರಲ್ಲಿ ನನ್ನ ನೇತೃತ್ವದ ಸಮ್ಮಿಶ್ರ ಸರ್ಕಾರ ಉರುಳಿಸಲು ಯಾರನ್ನು ಬಳಸಿಕೊಳ್ಳಲಾಗಿತ್ತು? ಮುಂಬೈಗೆ ಹೋಗಿದ್ದವರ ಮೋಜು, ಮಸ್ತಿಗೆ ಸಕಲ ವ್ಯವಸ್ಥೆ ಮಾಡಿದವರು ಯಾರು? ಸ್ಯಾಂಟ್ರೊ ರವಿ ಮತ್ತು ರಾಜ್ಯದ ಕೆಲವು ಪ್ರಭಾವಿ ಸಚಿವರ ನಡುವೆ ಇರುವ ಸಂಬಂಧವೇನು? ಎಂಬುದರ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ನನ್ನ ಸರ್ಕಾರ ಉರುಳಿಸಲು 17 ಮಂದಿಯನ್ನು ಮುಂಬೈಗೆ ಕರೆದುಕೊಂಡು ಹೋದ ವ್ಯಕ್ತಿ ಯಾರು? ಕರ್ನಾಟಕವನ್ನು ರಕ್ಷಣೆ ಮಾಡುವುದು ಜೆಡಿಎಸ್ ಪಕ್ಷದಿಂದ ಸಾಧ್ಯವಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ನೀಡಿದ್ದರು. ಈ ರಾಜ್ಯವು ಬಿಜೆಪಿ ನಾಯಕರಿಂದ ಉಳಿಯಲು ಸಾಧ್ಯವಿಲ್ಲ. ಈ ಸರ್ಕಾರದ ಮಂತ್ರಿಗಳ ಹಣೆಬರಹ ಇಲ್ಲಿದೆ ನೋಡಿ’ ಎಂದು ಹಲವು ಸಚಿವರು ಸ್ಯಾಂಟ್ರೊ ರವಿ ಜತೆಗಿರುವ ಫೋಟೊಗಳನ್ನು ಪ್ರದರ್ಶಿಸಿದರು.

‘ಸ್ಯಾಂಟ್ರೊ ರವಿಗೆ ಐದು ಹೆಸರುಗಳಿವೆ. ಮೈಸೂರು, ಬೆಂಗಳೂರಿನಲ್ಲಿ ಆತನ ವಿರುದ್ಧ ಪ್ರಕರಣಗಳಿವೆ. ಇತ್ತೀಚಿನವರೆಗೂ ಕುಮಾರಕೃಪಾ ಅತಿಥಿ ಗೃಹದಲ್ಲೇ ಕುಳಿತು ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸಿದ್ದಾನೆ. ಆತನಿಗೆ ಅಲ್ಲಿ ಕೊಠಡಿ ನೀಡಿದವರು ಯಾರು? ಅದಕ್ಕೆ ಶಿಫಾರಸು ಮಾಡಿದ್ದವರು ಯಾರು? ಎಂಬುದನ್ನು ಮುಖ್ಯಮಂತ್ರಿ ಮತ್ತು ಗೃಹ ಸಚಿವರು ರಾಜ್ಯದ ಜನತೆಗೆ ತಿಳಿಸಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಿಚಾರದಲ್ಲಿ ಧಮ್, ತಾಕತ್ತು ಪ್ರದರ್ಶಿಬೇಕು’ ಎಂದು ಒತ್ತಾಯಿಸಿದರು.

‘ಪೊಲೀಸ್ ಅಧಿಕಾರಿಗಳಿಗೆ ಆ ವ್ಯಕ್ತಿ ಬೆದರಿಕೆ ಹಾಕಿರುವ ದಾಖಲೆಗಳಿವೆ. ಮುಖ್ಯಮಂತ್ರಿಯೇ ನನ್ನನ್ನು ಸರ್ ಎನ್ನುತ್ತಾರೆ. ನೀನೂ ನನ್ನನ್ನು ಸರ್ ಎಂದು ಕರೆಯಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ತಾಕೀತು ಮಾಡುತ್ತಿದ್ದ. ಈತನ ಹಿಂದೆ ಅಡಗಿ ಕುಳಿತಿದ್ದ ವ್ಯಕ್ತಿ ಯಾರು? ಅಧಿಕಾರಿಗಳ ವರ್ಗಾವಣೆ ಹೆಸರಿನಲ್ಲಿ ಆತ ನಡೆಸಿದ್ದ ವ್ಯವಹಾರಗಳು ಏನು? ಎಲ್ಲವೂ ತನಿಖೆಯಾಗಲಿ’ ಎಂದರು.

‘ಲಿಂಬಾವಳಿ ಆಪ್ತ ಯಾರು?’



‘ಉದ್ಯಮಿ ಪ್ರದೀಪ್ ಆತ್ಮಹತ್ಯೆ ಪ್ರಕರಣದ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವ ಗೋಪಿ ಮತ್ತು ಶಾಸಕ ಅರವಿಂದ ಲಿಂಬಾವಳಿ ನಡುವಿನ ಸಂಬಂಧವೇನು? ಆ ವ್ಯಕ್ತಿಯ ಮೂಲಕ ಬಿಲ್ಡರ್‌ಗಳಿಂದ ₹ 50 ಕೋಟಿಯಿಂದ ₹ 60 ಕೋಟಿ ಸಂಗ್ರಹ ಆಗಿರುವ ಮಾಹಿತಿ ಇದೆ’ ಎಂದು ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ರಾಜಕೀಯದಿಂದ ನಿವೃತ್ತಿ :ಕೃಷ್ಣ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜಕೀಯದಿಂದ ನಿವೃತ್ತರಾಗುವುದಾಗಿ ಮಾಜಿ ಮುಖ್ಯಮಂತ್ರಿ ಮತ್ತು ಬಿಜೆಪಿ ನಾಯಕ ಎಸ್.ಎಂ.ಕೃಷ್ಣ ಅವರು ಹೇಳಿದ್ದಾರೆ.

ಹೊಸ ವರ್ಷದ ಸಂದೇಶ ನೀಡುವ ಸಂದರ್ಭದಲ್ಲಿ ರಾಜಕೀಯ ನಿವೃತ್ತಿಯ ವಿಷಯವನ್ನು ಅವರು ಪ್ರಸ್ತಾಪಿಸಿದ್ದಾರೆ. ‘ನನಗೀಗ 90 ವರ್ಷ ವಯಸ್ಸು ಆಗಿದ್ದು, ಇದರ ಅರಿವು ನನಗಿದೆ. 90 ವರ್ಷದ ನಾನು 50 ವರ್ಷದವನಂತೆ ನಟಿಸಲು ಸಾಧ್ಯವಿಲ್ಲ. ಆದ್ದರಿಂದ ಕ್ರಮೇಣ ಸಾರ್ವಜನಿಕ ಜೀವನದಿಂದ ಹಿಂದಕ್ಕೆ ಸರಿಯುತ್ತಿದ್ದೇನೆ’ ಎಂದು ಅವರು ತಿಳಿಸಿದರು.

‘ನಿವೃತ್ತಿ ಆಗುತ್ತಿದ್ದೇನೆ ಎಂದರೆ ಸನ್ಯಾಸ ಪಡೆಯುತ್ತಿದ್ದೇನೆ ಎಂದಲ್ಲ. ಪಕ್ಷ ಅಥವಾ ನಾಯಕರು ಸಂಘಟನೆ ಮತ್ತು ಇತರ ವಿಚಾರಗಳಲ್ಲಿ ಸಲಹೆಗಳನ್ನು ಕೇಳಿದರೆ ನೀಡಲು ಸಿದ್ಧನಿದ್ದೇನೆ. ಆದರೆ ನಾನಾಗಿಯೇ ಮೇಲೆ ಬಿದ್ದು ಸಲಹೆ ನೀಡಲು ಹೋಗುವುದಿಲ್ಲ. ಹಳೇ ಮೈಸೂರು ಭಾಗದಲ್ಲಿ ಸಂಘಟನೆಯ ವಿಚಾರದಲ್ಲಿ ಸಲಹೆ ಕೇಳಿದರೆ ಕೊಡುತ್ತೇನೆ’ ಎಂದರು.

‘ನಾನಾಗಿಯೇ ರಾಜಕೀಯದಿಂದ ಹಿಂದಕ್ಕೆ ಸರಿಯುತ್ತಿರುವುದರಿಂದ ನನ್ನನ್ನು ಪಕ್ಷ ನಿರ್ಲಕ್ಷಿಸುತ್ತಿದೆ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಸಾಹಿತ್ಯ ಸಮ್ಮೇಳನ: ಕನ್ನಡ ಪರಂಪರೆ ಅವಗಣನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡ ಪರಂಪರೆ ಹಾಗೂ ಅಲ್ಪಸಂಖ್ಯಾತರ ಅವಗಣನೆಯ ಉದ್ದೇಶ ಹೊಂದಿದೆ’ ಎಂದು ಆರೋಪಿಸಿರುವ ಚಿಂತಕರು ಹಾಗೂ ಬರಹಗಾರರು, ಜನ ಸಾಹಿತ್ಯ ಸಮ್ಮೇಳನಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕೆ.ಮರುಳಸಿದ್ದಪ್ಪ, ಎಸ್.ಜಿ.ಸಿದ್ಧರಾಮಯ್ಯ, ಜಿ.ರಾಮಕೃಷ್ಣ, ರಾಜೇಂದ್ರ ಚೆನ್ನಿ, ವಿಜಯಾ, ಬಂಜಗೆರೆ ಜಯಪ್ರಕಾಶ್, ವಿಮಲಾ.ಕೆ.ಎಸ್., ಎನ್. ಗಾಯತ್ರಿ, ಬಿ.ಶ್ರೀಪಾದ ಭಟ್, ಎನ್. ಆರ್. ವಿಶುಕುಮಾರ್, ಸುರೇಂದ್ರ ರಾವ್, ಕೆ.ನೀಲಾ, ಮೀನಾಕ್ಷಿ ಬಾಳಿ ಹಾಗೂ ಬಿ.ಎನ್.ಯೋಗಾನಂದ ಅವರು ಜಂಟಿ ಹೇಳಿಕೆ ನೀಡಿದ್ದಾರೆ.

‘ಪ್ರಜಾಪ್ರಭುತ್ವವಾದಿ ಸಂಸ್ಥೆಗಳನ್ನು ನಿಷ್ಕ್ರಿಯಗೊಳಿಸುವ ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ಇದಕ್ಕೆ ಸಮಾನಾಂತರವಾಗಿ ಸಾಂಸ್ಕೃತಿಕ ಸಂಸ್ಥೆಗಳ ಮೇಲೆ ಕರ್ನಾಟಕದಲ್ಲಿ ಬೆಂಬಲಿತವಾದ ಆಕ್ರಮಣಗಳು ನಡೆದಿವೆ. ಈ ಬಾರಿಯ ಸಾಹಿತ್ಯ ಸಮ್ಮೇಳನವನ್ನು ಇಂಥದ್ದೇ ದುರುದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ ಎನ್ನುವುದರ ಬಗ್ಗೆ ನಮಗೆ ಸಂದೇಹವಿಲ್ಲ. ನಮ್ಮ ದೃಷ್ಟಿಯಲ್ಲಿ ಸಾಹಿತ್ಯವು ಯಾವಾಗಲೂ ಪ್ರಜಾಪ್ರಭುತ್ವವಾದಿ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ’ ಎಂದು ಹೇಳಿದ್ದಾರೆ.

‘ಬರಹಗಾರರ ಆಕ್ಷೇಪಣೆಗಳಿಂದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷರು ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ ಎಂದು ನಿರೀಕ್ಷಿಸಿರಲೂ ಇಲ್ಲ. ಅವರು ಉಡಾಫೆ, ಸ್ವಸಮರ್ಥನೆ, ಸುಳ್ಳುಗಳಿಂದ ಕೂಡಿದ ಹೇಳಿಕೆಗಳನ್ನು ನೀಡಿದ್ದಾರೆ. ಪ್ರಗತಿಪರರನ್ನು ಹೀಯಾಳಿಸಿದ್ದಾರೆ. ಬಲಪಂಥೀಯ ಧೋರಣೆಗೆ ಅನುಗುಣವಾಗಿ ತಮ್ಮ ನಾಲಿಗೆ ಹರಿಬಿಟ್ಟಿದ್ದಾರೆ. ತಾವೇ ಕನ್ನಡದ ಏಕೈಕ ಪ್ರತಿನಿಧಿ ಎನ್ನುವ ಮಾನಸಿಕ ವಿಕಲ್ಪವನ್ನು ತೋರಿಸಿದ್ದಾರೆ. ತಮ್ಮ ಕುತ್ಸಿತ ಹಾಗೂ ಅಲ್ಪಮತೀಯ ಆರ್ಭಟದ ಮಾತುಗಳಿಂದ ಬರಹಗಾರರು ಹೆದರಿ ಹಿಂದೆ ಸರಿಯುತ್ತಾರೆ ಎನ್ನುವ ಭ್ರಮೆಯಲ್ಲಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕರ್ನಾಟಕದ ಜನಸಾಮಾನ್ಯರು ಕಟ್ಟಿದ ಸಾಹಿತ್ಯ ಪರಿಷತ್ತನ್ನು ಮನುಷ್ಯ ವಿರೋಧಿ ಸಿದ್ಧಾಂತ ಹಾಗೂ ಕ್ರಿಯೆಗಳಿಂದ ಶುದ್ಧಗೊಳಿಸಿ, ಕನ್ನಡ ಪರಂಪರೆಯ ಬಹುತ್ವ, ಜಾತ್ಯಾತೀತ, ಧರ್ಮಾತೀತ, ಮಾನವೀಯ ಕಾಳಜಿಗಳನ್ನು ಹೊಂದಿದ ಸಂಸ್ಥೆಯಾಗಿ ಮುಂದುವರೆಯುವಂತೆ ಕಾಪಾಡಲು ಬರಹಗಾರರು ಸನ್ನದ್ಧರಾಗಿದ್ದಾರೆ. ಅಧ್ಯಕ್ಷರ ಹೇಳಿಕೆಗಳನ್ನು ಅತ್ಯಂತ ಮರುಕ ಹಾಗೂ ಕರುಣೆಯಿಂದ ನಾವು ಗಮನಿಸಿದ್ದೇವೆ. ಪರಿಷತ್ತಿನ ಜಿಲ್ಲಾ ಘಟಕದ ಅಧ್ಯಕ್ಷರು ಕಸಾಪ ಜಾತ್ಯತೀತ ಸಂಸ್ಥೆಯಾಗಿ ಉಳಿಸಲು ಮುಂದಾಗಬೇಕು’ ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

ಕರ್ನಾಟಕ ಸರ್ಕಾರ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)

ನಂ.8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052.

ಸಂ: ಕವಶಿಸಸ/ಕಾಅ–1/ಟೆಂಡರ್–24/2022–23 ದಿನಾಂಕ: 04.01.2023

ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ **ಕೋಲಾರ ಜಿಲ್ಲೆ, ಕೋಲಾರ ಟೌನ್‌ನಲ್ಲಿ ಭೋವಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ. 3076)** ಇ–ಪೋರ್ಟಲ್ ಮುಖಾಂತರ **ದಿನಾಂಕ : 05.01.2023ರಂದು** ಟೆಂಡರ್‌ಗಳನ್ನು ಕರೆಯಲಾಗಿದ್ದು. ಟೆಂಡರ್ ಸಲ್ಲಿಸಲು ಅಂತಿಮ **ದಿನಾಂಕ : 04.02.2023 ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in** ರಲ್ಲಿ ನೋಡಬಹುದಾಗಿದೆ.

ಸೂಚನೆ : ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಕವಶಿಸಸಂ

DIPR/CP/3875/Yakshi/2022-23

ಕರ್ನಾಟಕ ಸರ್ಕಾರ

ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಆಯುಕ್ತರ ಕಛೇರಿ, ಕೆ.ಆರ್. ವೃತ್ತ, ಬೆಂಗಳೂರು–560001

ದೂ: 91–080–22212408, ಫ್ಯಾಕ್ಸ್: 91–080–22277528

ಸಂಖ್ಯೆ: SSLR/DAAS/LOT2A: 13/2022-23 ದಿನಾಂಕ : 03–01–2023

ಇ–ಟೆಂಡರ್ ಪ್ರಕಟಣೆ

ಭೂಮಾಪನ ಇಲಾಖೆಯಲ್ಲಿ ಡ್ರೋಣ್ / ವೈಮಾನಿಕ ಸಮೀಕ್ಷೆ ಮೂಲಕ **ORI Generation for Large Scale Mapping (DAAS), LOT2A** ಗಾಗಿ ಸೇವೆ ಒದಗಿಸುವ ಸಂಬಂಧ ಅರ್ಹ ಪ್ರತಿಷ್ಠಿತ ಸಂಸ್ಥೆಗಳಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಇಲಾಖೆಯ ಈ ಸೇವೆಯನ್ನು ಒದಗಿಸಲು ಆಸಕ್ತಿ ಹೊಂದಿರುವಂತಹ ಸಂಸ್ಥೆಗಳಿಂದ ಆರ್.ಎಫ್.ಪಿ (RFP) ಯಲ್ಲಿ ಒಳಗೊಂಡಿರುವ ನಿಯಮಗಳು ಮತ್ತು ಷರತ್ತುಗಳ ಅನ್ವಯ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದು, **ದಿನಾಂಕ: 03–01–2023** ರಿಂದ **http:www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ. ಆಸಕ್ತ ಸಂಸ್ಥೆಗಳು ಇ–ಆಡಳಿತ ಕೇಂದ್ರದಲ್ಲಿ ನೋಂದಾಯಿಸಿಕೊಂಡು ಬಿಡ್ಡಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ: **18–01–2023** ಆಗಿರುತ್ತದೆ.

ಸಹಿ/–
ಸಿ.ಎನ್.ಶ್ರೀಧರ, ಭಾ.ಆ.ಸೇ
ಹೆಚ್ಚುವರಿ ನಿರ್ದೇಶಕರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳು, ಬೆಂಗಳೂರು

ವಾಸಾಸಂಇ/ವಾ.ಪ್ರ/3865/ಶಿರಡಿ ಸಾಯಿ/2022–23

ಕರ್ನಾಟಕ ಗೃಹ ಮಂಡಳಿ

Karnataka Housing Board – Building Communities

ಗೃಹ ಆಯುಕ್ತರವರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು–560 009.

ಸಂಖ್ಯೆ: ಕಗೃಮಂ/ಕಾ.ಪಾ.ಅ(ಹಂಚಿಕೆ)/ಬೆಳ್ಳಿಕೆರೆ/ಭೂಮಾ/2022–23 ದಿನಾಂಕ: 03–01–2023

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೆಳ್ಳಿಕೆರೆ ಗ್ರಾಮದ ಈ ಕೆಳಕಂಡ ಭೂಮಾಲೀಕರಿಗೆ 50:50 ಅನುಪಾತದ ಅಡಿಯಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಿದ್ದು, ಈ ಸಂಬಂಧ ಯಾರದಾದರೂ ತಕರಾರು ಇದ್ದಲ್ಲಿ ಪತ್ರಿಕಾ ಪ್ರಕಟಣೆಯು ಪ್ರಕಟಣೆಗೊಂಡ 7 ದಿನಗಳ ಒಳಗಾಗಿ ಸಂಬಂಧಪಟ್ಟ ಕರ್ನಾಟಕ ಗೃಹ ಮಂಡಳಿಯ ಸೂರ್ಯನಗರ 3ನೇ ಹಂತದ ಯೋಜನಾ ಕಛೇರಿ, ಅಥವಾ ಕೇಂದ್ರ ಕಛೇರಿಯ ಹಂಚಿಕೆ ಶಾಖೆ, 4ನೇ ಮಹಡಿ ಬೆಂಗಳೂರು ರವರಿಗೆ ಅಕ್ಷೇಪಣೆಗಳನ್ನು ಸಲ್ಲಿಸಲು ತಿಳಿಯಪಡಿಸಿದೆ.

ನಿಗಧಿತ ಅವಧಿಯ ನಂತರ ಬರುವ ಯಾವುದೇ ತಕರಾರು ಅರ್ಜಿಗಳನ್ನು ಪರಿಗಣಿಸುವುದಿಲ್ಲ. ಕೊಷ್ಟಕದಲ್ಲಿ ಪ್ರಕಟಿಸಿರುವ ಜಮೀನಿನ ವಿಸ್ತೀರ್ಣದಂತೆ ಮಂಡಳಿಯ ನಿಯಮಾನುಸಾರ ಬರುವ ನಿವೇಶನಗಳನ್ನು ಆಯಾ ಭೂಮಾಲೀಕರಿಗೆ/ವಾರಸುದಾರರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕ್ರ ಸಂ	ಭೂಮಾಲೀಕರ ಹೆಸರು	ಸರ್ವೆ ನಂಬರ್	ಒಟ್ಟು ವಿಸ್ತೀರ್ಣ	
			ಎಕರೆ	ಗುಂಟೆ
1	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	101	1	38
2	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	140/3	0	14.5
3	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	141	2	6
4	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	142	2	1
5	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	143	2	3
6	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	144/1	1	2
7	ಶ್ರೀ ವಿ ಮುನಿರಾಜು ಬಿನ್ ವೆಂಕಟಗಿರಿಯಪ್ಪ	144/2	1	2
8	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	145	2	2
9	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	146	2	8
10	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	147	2	6
11	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	148	2	4
12	ಶ್ರೀ ವಿ ಮುನಿರಾಜು ಬಿನ್ ವೆಂಕಟಗಿರಿಯಪ್ಪ	149	2	0
13	ಶ್ರೀ ಎನ್ ಎಂ. ಮಂಜುನಾಥ್ ಬಿನ್ ಲೇಟ್ ಮಾದಪ್ಪ	153	2	1
14	ಶ್ರೀಮತಿ. ರೂಪಾ ಕೋಂ ಕೋದಂಡರಾಮ	156	2	3
15	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	157/2	1	2
16	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	158	1	29
17	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	159/1	1	0
18	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	159/2	0	29
19	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	160/2	1	8
20	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	160/3	0	19
21	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	161	1	29
22	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	162	1	30
23	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	163/1	1	3
24	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	163/2	1	3
25	ಶ್ರೀ ಎನ್ ಎಂ. ಮಂಜುನಾಥ್ ಬಿನ್ ಲೇಟ್ ಮಾದಪ್ಪ	164	2	10
26	ಶ್ರೀಮತಿ. ರೂಪಾ ಕೋಂ ಕೋದಂಡರಾಮ	165	1	8
27	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	171/1 (ಹಳೇ ಸರ್ವೆ ನಂ. 97/2)	0	7
28	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	171/2	0	12.5
29	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	172/1	0	39
30	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	173	2	17
31	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	177 (ಹಳೇ ಸರ್ವೆ ನಂ. 99/2)	2	0
32	ಶ್ರೀಮತಿ ರೂಪಾ ಕೋಂ ಕೋದಂಡರಾಮ	178/2 (ಹಳೇ ಸರ್ವೆ ನಂ. 99/3)	0	30
33	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	179/1 (ಹಳೇ ಸರ್ವೆ ನಂ. 99/5)	0	33
34	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	179/2	1	0
35	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	181 (ಹಳೇ ಸರ್ವೆ ನಂ. 99/7)	2	0
36	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	182 (ಹಳೇ ಸರ್ವೆ ನಂ. 99/8)	2	18
37	ಶ್ರೀಮತಿ ರೂಪಾ ಕೋಂ ಕೋದಂಡರಾಮ	183 (ಹಳೇ ಸರ್ವೆ ನಂ. 99/9)	1	0
38	ಶ್ರೀ ಮಹೇಶ್ ಕೆ.ರೆಡ್ಡಿ ಬಿನ್ ಕೆ. ಜಿ ಕೋದಂಡರಾಮ	184 (ಹಳೇ ಸರ್ವೆ ನಂ. 99/10)	2	0
39	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	185/2	0	30
40	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	186 (ಹಳೇ ಸರ್ವೆ ನಂ. 99/12)	1	0
41	ಶ್ರೀಮತಿ ರೂಪಾ ಕೋಂ ಕೋದಂಡರಾಮ	192 (ಹಳೇ ಸರ್ವೆ ನಂ. 99/1ಬಿ)	1	32
42	ಶ್ರೀಮತಿ ರೂಪಾ ಕೋಂ ಕೋದಂಡರಾಮ	193 (ಹಳೇ ಸರ್ವೆ ನಂ. 99/1)	1	0
43	ಶ್ರೀ ವಿ.ಮುನಿರಾಜು ಬಿನ್ ವೆಂಕಟಗಿರಿಯಪ್ಪ	194 (ಹಳೇ ಸರ್ವೆ ನಂ. 99/2)	1	38
44	ಶ್ರೀ ಶಿವಲಿಂಗಪ್ಪ, ಬಿನ್ ಶಿವಯೋಗಿ ಮಹಾಜನಶೆಟ್ಟಿ	195/2	1	0
45	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	196 (ಹಳೇ ಸರ್ವೆ ನಂ. 100/5)	1	0
46	ಶ್ರೀ ಎನ್.ಎಂ. ಮಂಜುನಾಥ್ ಬಿನ್ ಲೇಟ್ ಮಾದಪ್ಪ	197 (ಹಳೇ ಸರ್ವೆ ನಂ. 100/7)	1	31
47	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	198 (ಹಳೇ ಸರ್ವೆ ನಂ. 100/1)	1	0
48	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	200 (ಹಳೇ ಸರ್ವೆ ನಂ. 100/3)	0	39
49	ಶ್ರೀ ಕೋದಂಡರಾಮ ಬಿನ್ ಗಿಡ್ಡನರೆಡ್ಡಿ	201 (ಹಳೇ ಸರ್ವೆ ನಂ. 100/ಬಿ4)	1	39
50	ಶ್ರೀ ಮಹೇಶ್ ಬಿ.ವಿ,	202/2	0	31
51	ಶ್ರೀ ಮಹೇಶ್ ಕೆ ರೆಡ್ಡಿ ಬಿನ್ ಕೆ.ಜಿ ಕೋದಂಡರಾಮ	203 (ಹಳೇ ಸರ್ವೆ ನಂ. 100/ಬಿ6)	1	0
52	ಶ್ರೀ ವಿ ಮುನಿರಾಜು ಬಿನ್ ವೆಂಕಟಗಿರಿಯಪ್ಪ	204 (ಹಳೇ ಸರ್ವೆ ನಂ. 100ಬಿ3)	0	37

ಸಹಿ/– ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

DIPR/CP/RO3855/AAPL/2022-23

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಅಧಿಸೂಚನೆ ಸಂಖ್ಯೆ: ಕ–ರೇರಾ/ಆಡಳಿತ/ಸಿಆರ್–61/2022–23, ದಿನಾಂಕ: 3/01/2023

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಮತ್ತು ಕರ್ನಾಟಕ ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಹೊರಗುತ್ತಿಗೆ ಮೂಲಕ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸಲು ಅರ್ಹ ವ್ಯಕ್ತಿಗಳು / ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. www.eproc.karnataka.gov.in ನಲ್ಲಿ ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 21ನೇ ಜನವರಿ 2023.

ವಿವರವಾದ ಅಧಿಸೂಚನೆಯು ವೆಬ್‌ಸೈಟ್ www.rera@karnataka.gov.inನಲ್ಲಿ ಲಭ್ಯವಿದೆ.

ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಜಿಲ್ಲಾ ಪಂಚಾಯತ್ ತುಮಕೂರು,

ಕಾರ್ಯಪಾಲಕ ಅಭಿಯಂತರರವರ ಕಚೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ.
ದೂ:0816-2252937

ಸಂಖ್ಯೆ: 34/ಕಾಪಾಅ/ಗ್ರಾಕು.ನೀ.ನೈ ವಿ/ತುಮ/ಟೆಂಡರ್/AE-2/2918/2022–23
ದಿನಾಂಕ: 30.12.2022

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 34/2022–23
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2022–23 ನೇ ಸಾಲಿಗೆ ಏಕ–ಲಕೋಟೆ ಮತ್ತು ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಗುಬ್ಬಿ, ಕುಣಿಗಲ್, ಕೊರಟಗೆರೆ ಮತ್ತು ಕುಣಿಗಲ್ ತಾಲ್ಲೂಕಿನ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ.13.76 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.34400/– ಗಳು ಹಾಗೂ ಆ) ಗರಿಷ್ಟ ಮೊತ್ತ ರೂ.83.77 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.167540/– ಗಳು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **10.01.2023** ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW-3 ಕಾಮಗಾರಿಗಳಿಗೆ) ದಿನಾಂಕ: **06.01.2023** ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.01.2023 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.01.2023 ಬೆಳಿಗ್ಗೆ 11.00 ಘಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ತುಮಕೂರು ವಿಭಾಗ, ತುಮಕೂರು

DIPR/TMK/831/MCA/2022-23

KMF

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ.,

ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ–580004
☎:-0836-2467603, 2468380 E-mail : dharwarnin@gmail.com

IFT NO: KMF/2022-23/IND10298/CALL-3 Date:-04-01-2023

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಹಾಲು ಒಕ್ಕೂಟ ನಿಯಮಿತ., ಧಾರವಾಡವು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಗೂ ಹಾವೇರಿ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಮಹಿಳಾ ಹಾಲು ಉತ್ಪಾದಕರ ವಿವಿಧ ಸಂಘಗಳಿಗೆ "Automatic Milk Collection Unit (EMT Based)" ಗಳ ವಿನ್ಯಾಸ, ಪೂರೈಕೆ, ಸ್ಥಾಪನೆ & ಚಾಲನೆ ಮಾಡುವುದು ಸೇರಿದಂತೆ ಟೆಂಡರ ದಾಖಲಾತಿಗಳಲ್ಲಿ ನಮೂದಿಸಲಾದ ತಾಂತ್ರಿಕ ತಪಶೀಲುಪಟ್ಟಿ ಪ್ರಕಾರ ಪೂರೈಸಲು ಆಸಕ್ತಿಯುಳ್ಳ ಮತ್ತು ಅರ್ಹ ಮೂಲ ಉತ್ಪಾದಕರಿಂದ / ಡೀಲರ್ / ಪೂರೈಕೆದಾರರಿಂದ ಟೆಂಡರ ಅಹ್ವಾನಿಸಲಾಗಿರುತ್ತದೆ.

ಕ್ರ. ಸಂ.	ವಿವರ	ಪ್ರಮಾಣ	ಇಎಂಡಿ ಮೊತ್ತ (ರೂ.ಗಳಲ್ಲಿ)
1	Design, Supply, Installation, Testing & Commissioning of Automatic Milk Collection Unit (EMT Based) at Various WMCPS at Dharwad, Gadag, Uttar-kannada and Haveri Districts.	21 Nos	59,000/-

ಇ–ಟೆಂಡರ ಪ್ರೊಸೆಸಿಂಗ್ ಶುಲ್ಕ (ಮರು ಪಾವತಿಸಲಾಗದ) ಮತ್ತು ಇಎಂಡಿ ಮೊತ್ತವನ್ನು ಇ–ಪೋರ್ಟಲ್ ನಿಯಮಾನುಸಾರ ಟೆಂಡರ ದಾಖಲಾತಿಯಲ್ಲಿ ನಮೂದಿಸಿದಂತೆ ಪಾವತಿಸಬಹುದಾಗಿದೆ. ಹೆಚ್ಚಿನ ವಿವರಗಳಾದ ಭದ್ರತಾ ಠೇವಣಿ, ಟೆಂಡರ ಕರಾರು ಮತ್ತು ಷರತ್ತುಗಳನ್ನು ವೆಬ್‌ಸೈಟ್ **http://eproc.karnataka.gov.in** ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:– **080–46010000 / 68948777, email: support@ihelpdsk.com** ರ ಮೂಲಕ ಸಂಪರ್ಕಿಸಿ ಟೆಂಡರ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.

1	ಇ–ಟೆಂಡರ ಸಲ್ಲಿಸುವ ಕೊನೆಯ ದಿನಾಂಕ & ವೇಳೆ	ದಿ:–11–01–2023 ರ ಸಂಜೆ 4–00 ರವರೆಗೆ
2	ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–12–01–2023 ರ ಸಂಜೆ 4–30 ರ ನಂತರ
3	ವಾಣಿಜ್ಯ ಬಿಡ್ ತೆರೆಯುವ ದಿನಾಂಕ & ವೇಳೆ	ದಿ:–16–01–2023 ರ ಬೆಳಿಗ್ಗೆ 10–00 ರ ನಂತರ

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)

KSIIDC

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ಟೆಂಡರ್ ಆಹ್ವಾನ ಪ್ರಕಟಣೆ

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://eproc.karnataka.gov.in ಮೂಲಕ)

ಕರ್ನಾಟಕ ಸರ್ಕಾರವು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು ಇದರ ಪಕ್ಕದಲ್ಲಿ **“ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ (ಬಿಎಸ್‌ಬಿಪಿ)”ಗೆ** ಪ್ರಮುಖ ಮೂಲಸೌಲಭ್ಯ ನಿರ್ಮಾಣ ಕಾರ್ಯವನ್ನು ಕೈಗೆತ್ತುಕೊಳ್ಳಲು ಉದ್ದೇಶಿಸಿದೆ. ಕೆಎಸ್‌ಐಐಡಿಸಿಯು **“ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ಇಲ್ಲಿ ಕವಿಪ್ರನಿನಿ ವಿವರಣೆ ಅನುಸಾರ 2 ಸಂಖ್ಯೆಗಳ 66/11 ಕೆವಿ, 2x20 ಎಂವಿಎ ಉಪಕೇಂದ್ರಗಳ (66/11ಕೆವಿ ಉಪಕೇಂದ್ರ–1 ಮತ್ತು 2) ಸ್ಥಾಪನೆಗಾಗಿ”** ಕೆಪಿಟಿಸಿಎಲ್/ಕೆಪಿಡಬ್ಲ್ಯುಡಿ/ಎನ್‌ಹೆಚ್/ಎನ್‌ಹೆಚ್ಎಐ/ಸಿಪಿಡಬ್ಲ್ಯುಡಿ/ ಅಥವಾ ಇತರೆ ಕೇಂದ್ರ/ ರಾಜ್ಯ ಸರ್ಕಾರದ ಉದ್ದಿಮೆ, ಸಂಸ್ಥೆಗಳಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರುಗಳಿಂದ ಐಟಂ ದರದ ಆಧಾರದ ಮೇಲೆ ಟೆಂಡರುಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್‌ನ ಅಂದಾಜು ಮೊತ್ತ : **ರೂ.36.18 ಕೋಟಿ.** ಇಎಂಡಿ ಮೊತ್ತ: **ರೂ.36.18 ಲಕ್ಷ. ಪ್ರಮುಖ ದಿನಾಂಕಗಳು:** ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **04.01.2023ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ: **12.1.2023 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ: **04.02.2023 ರಂದು ಸಂಜೆ 5.30 ಗಂಟೆವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ **https://eproc.karnataka.in** ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. ಸಂಪರ್ಕ ಸಂ.ಎಜಿಎಂ (ಐಪಿಡಿ–II), 080–22258131/132 ಇ–ಮೇಲ್: **bic3@ksiidc.com,ipd-2@ksiidc.com** ಮತ್ತು **info@ksiidc.com**

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಪಿಡಿ–II),
ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ಕರ್ನಾಟಕ ಸರ್ಕಾರ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ–577501)

(ದೂ ಸಂಖ್ಯೆ 08194–225713 ಇ–ಮೇಲ್ : dudc_ctg@yahoo.co.in

ನಂ.ಜಿನಕೋ(2)ನಗರೋತ್ಥಾನ ಹಂತ–4/ಸಿ.ಆರ್646/2022–23 ದಿ:03.01.2023

ದರಪಟ್ಟಿ ಆಹ್ವಾನ

ಮಾನ್ಯ ಮುಖ್ಯಮಂತ್ರಿಗಳ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ–4) ರಡಿ ಎಸ್.ಸಿ.ಪಿ, ಟಿ.ಎಸ್.ಪಿ, ಶೇ. 24.10, ಶೇ. 7.25, ಮತ್ತು ಶೇ. 5 ರ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ಚಳ್ಳಕೆರೆ, ಹಿರಿಯೂರು ನಗರಸಭೆ, ಹೊಸದುರ್ಗ, ಹೊಳಲ್ಕೆರೆ ಪುರಸಭೆ, ಮೊಳಕಾಲ್ಮುರು ಮತ್ತು ನಾಯಕನಹಟ್ಟಿ ಪಟ್ಟಣ ಪಂಚಾಯಿತಿಗಳಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ವೈಯಕ್ತಿಕ ಕಲ್ಯಾಣ ಕಾರ್ಯಕ್ರಮದಡಿ ಈ ಕೆಳಕಂಡ ಕೋಷ್ಠಕದಲ್ಲಿ ನಮೂದಿಸಿರುವ ಸಾಮಾಗ್ರಿಗಳನ್ನು ಸರಬರಾಜು ಮಾಡಲು ನೊಂದಾಯಿತ ಸಾಮಾಗ್ರಿಗಳ ಉತ್ಪಾದಕರು / ಅಧಿಕೃತ ಮಾರಾಟಗಾರರಿಂದ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ: 06/01/2023 ರ ಸಂಜೆ 5–30 ರ ಒಳಗಾಗಿ ಈ ಕೆಳಕಂಡ ಸಾಮಾಗ್ರಿಗಳಿಗೆ ತಾಂತ್ರಿಕ ವೈಶಿಷ್ಟತೆಗಳೊಂದಿಗೆ (Technical Specification) ದರಗಳನ್ನು (Rates) ನಮೂದಿಸಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ ರವರಿಗೆ ನೊಂದಾಯಿತ / ಸ್ಪೀಡ್ ಪೋಸ್ಟ್, ಇ–ಮೇಲ್ (dudc_ctg@yahoo.co.in)ಗಳ ಮೂಲಕ ಕೊಟೇಷನ್‌ಗಳನ್ನು ಸಲ್ಲಿಸತಕ್ಕದ್ದು. ನಂತರ ಬಂದ ಕೊಟೇಷನ್‌ಗಳನ್ನು ಸ್ವೀಕರಿಸುವುದಿಲ್ಲ. **ಸಾಮಾಗ್ರಿಗಳ ವಿವರ:–** (1) ಬೀರು / ಅಲ್ಮೇರಾ (0.8 ಎಂ.ಎಂ / 1.0 ಎಂ.ಎಂ, 21/19 ಗೇಜ್ ಎಂ.ಎಸ್. ಸ್ಟೀಲ್) 1800 ಎಂ.ಎಂ ಗಿಂತ ಎತ್ತರ (Height), 760 ಎಂ.ಎಂ. ಗಿಂತ ಹೆಚ್ಚಿನ ಅಗಲ (Width), 505 ಎಂಎಂ ಗಿಂತ ಹೆಚ್ಚಿನ ಆಳ (Depth), ಮತ್ತು No.of Shelves 3. ಪ್ರಮಾಣ:–01 ಕ್ಕೆ (2) ಟಿ.ವಿ 32 ಇಂಚು (ಎಲ್.ಇ.ಡಿ) ಪ್ರಮಾಣ:–01 ಕ್ಕೆ (3) 165 ಲೀ. ನಿಂದ 200 ಲಿ. ಸಾಮಾರ್ಥ್ಯವುಳ್ಳ ರಿಫ್ರೀಜರೇಟರ್. ಪ್ರಮಾಣ:–01 ಕ್ಕೆ (4) ಲಾಕರ್ (0.8 ಎಂ.ಎಂ. ನಿಂದ 1.0 ಎಂ.ಎಂ (19/21 ಗೇಜ್) ಎಂ.ಎಸ್. ಸ್ಟೀಲ್‌ನಿಂದ ಮಾಡಿದ 15 ರಿಂದ 30 ಸಂಖ್ಯೆ ಬಾಕ್ಸ್ ಸಾಮಾರ್ಥ್ಯವುಳ್ಳ ಮತ್ತು ಅಂದಾಜು ಬಾಕ್ಸ್ ಸೈಜ್ ಅಗಲ (B) 12.20 ಇಂಚ್ X ಎತ್ತರ (H) 13.77 ಇಂಚ್ ಇರುವ. ಪ್ರಮಾಣ:–01 ಕ್ಕೆ (5) ಲ್ಯಾಪ್‌ಟಾಪ್ ಐ3 ಮೇಲ್ಪಟ್ಟು 4ಜಿ.ಬಿ ರ್ಯಾಮ್, 1ಟಿಬಿ ಹಾರ್ಡ್‌ಡಿಸ್ಕ್. ಪ್ರಮಾಣ:–01 ಕ್ಕೆ (6) 100 ಲೀ. ಸಾಮರ್ಥ್ಯವುಳ್ಳ ವಾಟರ್ ಫಿಲ್ಟರ್. ಪ್ರಮಾಣ:–01 ಕ್ಕೆ (7) ವುಡನ್ ಕಂಪ್ಯೂಟರ್ ಟೇಬಲ್ ಸೈಜ್ 3*2.5 ಪ್ರಮಾಣ:–01 ಕ್ಕೆ (8) ವುಡನ್ ಕಂಪ್ಯೂಟರ್ ಟೇಬಲ್ ಸೈಜ್ 4*2.5 ಪ್ರಮಾಣ:–01 ಕ್ಕೆ (9) ಕಂಪ್ಯೂಟರ್ ಛೇರ್ (Fabric + Wheel Chair) ಪ್ರಮಾಣ:–01 ಕ್ಕೆ (10) ಡೆಸ್ಕ್‌ಟಾಪ್ ಕಂಪ್ಯೂಟರ್ ಐ5, 4ಜಿಬಿ ರ್ಯಾಮ್, 1ಟಿ.ಬಿ ಹಾರ್ಡ್‌ಡಿಸ್ಕ್ ಪ್ರಮಾಣ:–01 ಕ್ಕೆ (11) 250 ಲೀ. ಸಾಮರ್ಥ್ಯವುಳ್ಳ ವಾಟರ್ ಫಿಲ್ಟರ್ ಪ್ರಮಾಣ:–01 ಕ್ಕೆ (12) ಸ್ಯಾನಿಟರಿ ನ್ಯಾಪ್‌ಕಿನ್ ಬರ್ನಿಂಗ್ ಯಂತ್ರ (Burning Capacity Per Day No. of Napkins 100 to 200) ಪ್ರಮಾಣ:–01 ಕ್ಕೆ (13) ಸರ್ಕಾರಿ ಹಾಸ್ಟೆಲ್‌ಗಳಿಗೆ ಸೋಲಾರ್ ಬೀದಿ ದೀಪಗಳನ್ನು ಅಳವಡಿಸುವುದು. (ಅಗತ್ಯ ಸಾಮರ್ಥ್ಯದ ಸೋಲಾರ್ ಪೆನಾಲ್ ಬೋರ್ಡ್, ಬ್ಯಾಟರಿ ಮತ್ತು ವೈರಿಂಗ್ ಅಗತ್ಯವಿರುವ ಸ್ವಿಚ್ ಮತ್ತು ಎಲೆಕ್ಟ್ರಿಕಲ್ ಸಾಮಾಗ್ರಿಗಳನ್ನು ಅಳವಡಿಸುವುದು) ಪ್ರಮಾಣ:–01 ಸೆಟ್‌ಗೆ (14) ವಿಕಲ ಚೇತನರಿಗೆ ಎಲೆಕ್ಟ್ರಿಕ್ ರೀಛಾರ್ಜ್ ಮಾಡುವ (0.25 Max Motor Torque Nm @ rpm ಗಿಂತ ಹೆಚ್ಚಿನ ಸಾಮರ್ಥ್ಯದ) ನಾಲ್ಕು ಚಕ್ರ ವಾಹನವನ್ನು ಆರ್.ಟಿ.ಓ ನೊಂದಣಿ ಮಾಡಿ ಮತ್ತು ವಿಮೆಯೊಂದಿಗೆ ಸರಬರಾಜು ಮಾಡುವುದು. ಪ್ರಮಾಣ:–01 ಕ್ಕೆ (15) ಯು.ಪಿ.ಎಸ್ ಬ್ಯಾಟರಿ ಸಾಮರ್ಥ್ಯ 900 ವಿ.ಎ, ಆರ್.ಸಿ 25000, 200 ಎ.ಎಚ್. ಟ್ಯೂಬುಲರ್ ಬ್ಯಾಟರಿ 2 ವರ್ಷದ ವಾರಂಟಿ ಅವಧಿ, 1100 ಇನ್‌ವಾಟರ್ ಮತ್ತು ವೈರಿಂಗ್ ಮಾಡಿ ಅಗತ್ಯವಿರುವ ಎಲೆಕ್ಟ್ರಿಕಲ್ ಸಾಮಾಗ್ರಿಗಳನ್ನು ಅಳವಡಿಸುವುದು. ಪ್ರಮಾಣ:–01 ಸೆಟ್‌ಗೆ

DIPR/CTA/MCA/836/2022-23

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

DBCDC

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನಂ. 16–ಡಿ, 4ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–52

Ph: 080-22374832, 22374834 Fax: 080-22374833, e-mail: md.dbcdc@gmail.com, visit at: www.karnataka.gov.in/dbcdc

ಸಂಖ್ಯೆ:ದೇಹಿನಿ/ಸ/ಪ್ರಕಟಣೆ/ಸಿಆರ್–06/2022–23 **ಪ್ರಕಟಣೆ** ದಿನಾಂಕ: 03.01.2023

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನಲ್ಲಿ ಒದಗಿಸಿದ ಪೂರಕ ಆಯವ್ಯಯದ ಅನುದಾನದಲ್ಲಿ ಈ ಕೆಳಕಂಡ ಯೋಜನೆಗಳಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಸೇವಾ ಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸ್ವೀಕೃತಿ

• ಡಿ.ದೇವರಾಜ ಅರಸು ಸ್ವಯಂ_ಉದ್ಯೋಗ ವೈಯಕ್ತಿಕ ಸಾಲ ಯೋಜನೆ:

ಹಿಂದುಳಿದ ವರ್ಗಗಳ ಈ ಯೋಜನೆ ಸೌಲಭ್ಯ ಪಡೆಯಲು ಸ್ವಯಂ ಉದ್ಯೋಗಕ್ಕಾಗಿ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಗರಿಷ್ಠ ರೂ.2.00 ಲಕ್ಷಗಳ ವರೆಗೆ ಆರ್ಥಿಕ ನೆರವು ಇದರಲ್ಲಿ ಗರಿಷ್ಠ ಶೇ.15ರಷ್ಟು ಸಹಾಯಧನ, ಉಳಿಕೆ ಮೊತ್ತ ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ಸಾಲ ಸೌಲಭ್ಯ ಪಡೆಯ ಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. (ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಹಟ್ಟಿಗೊಲ್ಲ, ಮರಾಠ, ಮತ್ತು ಇದರ ಉಪ ಸಮುದಾಯಗಳು ಹೊರತುಪಡಿಸಿ) ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/–ಗಳು ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ' ಒಳಗಿರಬೇಕು. ಅರ್ಜಿದಾರರ ವಯಸ್ಸು 18 ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಈ ಯೋಜನೆಯಡಿಯಲ್ಲಿ ಸೌಲಭ್ಯ ಒದಗಿಸಲು ಸೇವಾಸಿಂದು ತಂತಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವಾಗ ಅರ್ಜಿದಾರರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು, (ಶ್ರೀ/ಶ್ರೀಮತಿ ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಬ್ಯಾಂಕ್ ಪಾಸ್ ಪುಸ್ತಕದಲ್ಲಿಯೂ ಇದ್ದು ಹೊಂದಾಣಿಕೆಯಾಗಬೇಕು.

• ಗಂಗಾ ಕಲ್ಯಾಣ ನೀರಾವರಿ ಯೋಜನೆ:

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ ಹಿಂದುಳಿದ ವರ್ಗಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗಂಗಾ ಕಲ್ಯಾಣ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

★ ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರು ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

1) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವ್ಯಾಪ್ತಿಗೆ ಒಳಪಡುವ ಜಾತಿ/ಸಮುದಾಯಗಳಿಗೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರಾಗಿದ್ದು ಹಾಲಿ ಜಮೀನುಗಳು ಖುಷ್ಕಿಯಾಗಿದ್ದು ಯಾವುದೇ ಮೂಲದಿಂದ ನೀರಾವರಿ ಸೌಲಭ್ಯ ಹೊಂದಿರಬಾರದು.
2) ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3) ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ. 98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ. 1,20,000/–ಗಳ ಒಳಗಿರಬೇಕು.
4) ಅರ್ಜಿದಾರರು ಒಂದೇ ಸ್ಥಳದಲ್ಲಿ ಹೊಂದಿಕೊಂಡಂತೆ ಕನಿಷ್ಠ 02 ಎಕರೆ ಜಮೀನು ಹೊಂದಿರಬೇಕು, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 01 ಎಕರೆ ಜಮೀನು ಹೊಂದಿರಬೇಕು.
5) ವೈಯಕ್ತಿಕ ಕೊಳವೆ ಬಾವಿ ಯೋಜನೆಯಲ್ಲಿ ಘಟಕ ವೆಚ್ಚ ರೂ. 2.50 ಲಕ್ಷಗಳು, ಇದರಲ್ಲಿ ರೂ. 2.00 ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ.4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
6) ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರು ಜಿಲ್ಲೆಗಳಿಗೆ ವೈಯಕ್ತಿಕ ಕೊಳವೆ ಬಾವಿ ಘಟಕ ವೆಚ್ಚ ರೂ. 4.00 ಲಕ್ಷಗಳು ಇದರಲ್ಲಿ ರೂ. 3.50ಲಕ್ಷ ಸಹಾಯಧನ ಹಾಗೂ ರೂ. 50,000/– ನಿಗಮದಿಂದ ಶೇ.4ರ ಬಡ್ಡಿದರದಲ್ಲಿ ನೀಡುವ ಸಾಲದ ಮೊತ್ತ ಒಳಗೊಂಡಿದೆ.
7) ರೈತರು ಆಧಾರ್ ಜೋಡಣೆಯಾದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆ ಹೊಂದಿರಬೇಕು. ಆಧಾರ್ ಕಾರ್ಡ್‌ನಲ್ಲಿರುವಂತೆ ರೈತರ ಹೆಸರು(ಶ್ರೀ/ಶ್ರೀಮತಿ, ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಬ್ಯಾಂಕ್ ಖಾತೆಯ ಪುಸ್ತಕದಲ್ಲಿಯೂ ಇದ್ದು, ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಆಧಾರ್‌ಕಾರ್ಡ್‌ನಲ್ಲಿರುವಂತೆ ಹೆಸರು ಹೊಂದಾಣಿಕೆಯಾಗಬೇಕು.

ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಈಗಾಗಲೇ 2022–23ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿರುವವರು ಪುನಃ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಚಿಸುವ ಹಿಂದುಳಿದ ವರ್ಗಗಳ ಅರ್ಜಿದಾರರು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ **ದಿನಾಂಕ: 05.01.2023 ರಿಂದ ದಿನಾಂಕ: 17.01.2023ರವರೆಗೆ** ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ ಹಾಗೂ ನಿಗಮದ ವೆಬ್‌ಸೈಟ್ **www.dbcdc.karnataka.gov.in** ಇಲ್ಲಿ ಸಂಪರ್ಕಿಸಿ. ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪಡೆಯಲು ನಿಗಮದ ಸಹಾಯವಾಣಿ ಸಂಖ್ಯೆ:080–22374832 / 8050770004&6 / 7090400100 / 7090400900. ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಅದರಂತೆ ಸಂಪರ್ಕಿಸಬಹುದು.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು,

ವಾಸಾಸಂಇ/ಬೆಂನ/ಜಿಎ/3868/2022–23

ಅತಿಥಿ ಉಪನ್ಯಾಸಕರ ನೇಮಕ: ಜ.10ರವರೆಗೆ ಅರ್ಜಿ ಸಲ್ಲಿಕೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಗೆ ಕಾಲೇಜು ಶಿಕ್ಷಣ ಇಲಾಖೆ ಚಾಲನೆ ನೀಡಿದ್ದು, ಅರ್ಜಿ ಸಲ್ಲಿಸಲು ಜನವರಿ 10ರವರೆಗೆ ಅವಕಾಶ ನೀಡಿದೆ.

2022–23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಾಯಂ ಅಧ್ಯಾಪಕರಿಗೆ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಲಾಗುವುದು. ಮೆರಿಟ್ ಪಟ್ಟಿಯ ಪ್ರಕಾರ ಸ್ಥಳ ಆಯ್ಕೆಗೆ ಜ. 16ರಿಂದ 25ರವರೆಗೆ ಕೌನ್ಸೆಲಿಂಗ್ ನಡೆಸಲಾಗುವುದು, ಸ್ಥಳ ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಫೆಬ್ರುವರಿ 1ರ ಒಳಗೆ ಕರ್ತವ್ಯಕ್ಕೆ ಹಾಜರಾಗಬೇಕು. ಅರ್ಜಿ ಸಲ್ಲಿಸಲು ಇಲಾಖೆಯ ವೆಬ್‌ಸೈಟ್ https://dce.karnataka.gov.in

No 13006/Lakshme Gowda/11/E1C
Government of India
Ministry of Defence
Military Engineer Services
Commander Works Engineer (AF) North
Bellary Road, JC Nagar Post, Bangalore – 560 006
Dated: 30 Dec 2022

MEMORANDUM

1. Attention of MES/196969 Shri Lakshme Gowda, CMD (Ord Grade) of GE (AF) Bangalore was issued letter bearing No 13006/Lakshme Gowda/44E1C dated 06 May 2022 to report for duty for his unauthorized absence since 10 Feb 2014. As per Rule 12 (2) of FR/SR Part-III Leave Rules the Government servant who remains absent from duty for a continuous period exceeding five years shall be deemed to have resigned from the Government service.
2. However, he was given reasonable opportunity to report for duty, whereas the said individual has not reported for duty. As such he has been issued the following letters:-
(a) No.13006/Lakshme Gowda/44/E1C dated 06 May 2022 copy attached as Appendix A
(b) Memorandum No 13006/Lakshme Gowda/51/E1C dated 17 Oct 2022 copy attached as Appendix B.
3. It is confirmed that the above letters/Memorandum have been delivered as per the "Track Consignment status", whereas the individual has not reported for duty or any written consent received by this office in his defence.
4. Therefore, MES/196969 Shri Lakshme Gowda, CMD (Ord Grade) of GE (AF) Bangalore has been issued a final letter by the undersigned so as to report to this office for an inquiry on 08 Jan 2023 failing which ex-parte decision will be taken against him.

Sd/- Inquiry Officer
CWE(AF) North, Bangalore

MES/196969
Shri Lakshme Gowda, CMD (OG)
Gangandanahalli, Laxshmi Pura)Post) Bangalore North, Bangalore – 23

Commander Works Engineers (AF) North
Military Engineer Services
Bellary Road, JC Nagar Post, Bangalore – 560 006
Tele: 080-23412458, Fax: 080-23518742, Email: afbang3-mes@nic.in

13006/Lakshme Gowda/BOI/10/E1C **21 Dec 2022**

MES/196969
Shri Lakshme Gowda, CMD (OG)
Gangandanahalli, Laxshmi Pura (Post) Bangalore North, Bangalore – 23

DISCIPLINARY ACTION: MEMORANDUM AGAINST MES/196969 SHRI LAKSHME GOWDA, CMD (OG) OF GE (AF) BANGALORE

1. Reference this office Memorandum No 13006// LakshmeGowada /51/E1C dated 17 Oct 2022.
2. It is intimated that the undersigned has been appointed as Inquiry Officer vide CWE(AF) North Bangalore letter No 13006/Lakshme Gowda/52/E1C dated 10 Nov 2022 to enquire into the charges framed against you.
3. You were directed to submit a written statement in your defence within 10 days of receipt of the above referred Memorandum and also to state whether you are willing to be heard in person, which are still awaited.
3. As per the postal track consignment No EK691488423IN it is confirmed that the same has been delivered to you on 30/11/2022, whereas, your reply to the said Memorandum has not been received by this office even after completion of 19 days.
4. In view of the above, the undersigned will hold an inquiry on 08 Jan 2023 at 1000 hrs in the office of CWE (AF) North, Bangalore.
5. You are therefore, directed to report to this office for an inquiry along with your written statement in your defence without fail else ex-parte decision will be taken against you.
6. Please acknowledge.

Sd/- Inquiry Officer
CWE(AF) North, Bangalore

Appendix 'A'

Commander Works Engineers (AF) North
Military Engineer Services
Bellary Road JC Nagar Post, Bangalore – 560 006
Telephone: 080-23412458, Fax: 080-23518742, E-mail: afbang3-mes@nic.in

13006/Lakshme Gowda/ 44 /E1C **06 May 2022**

Shri Lakshme Gowda, CMD(OG)
MES/196969
Door No.126, Gangondanahalli,
Lakshmipur Post, Dasanapura Hobli, Bangalore North – 562 123

DISCIPLINARY ACTION: LONG ABSENCE FROM DUTY: MES 196969 SHRI LAKSHME GOWDA, CMD (OG) OF GE (AF) BANGALORE

1. While performing your duties as MT Driver (Ordinary Grade) in AGE E/M Sub Division under Garrison Engineer (Air Force), Habbal, Bangalore, you have left the office on 10 Feb 2014 without any intimation to your Superiors or submitted any application for leave and still absent from duty with effect from 10 Feb 2014.
2. You were asked to report for duty by GE (AF) North, Bangalore through many letters / show cause notice giving opportunities to join duty, whereas, you have not turned up to report for duty or any application for leave. You have submitted an application for resignation from service vide application dated 25 Sep 2019 after a period of absence for more than 5 years which is not acceptable as you being a Government servant is expected to be honest in your duties and maintain absolute integrity, and devotion to duty at all times. Your absence from duty is unauthorized and your act shows unbecoming of government servant and liable for disciplinary action as you have violated the Rule 3(1), (ii) and (iii) of CCS (Conduct Rules 1964.
3. In view of the above, you are hereby asked to explain as to why disciplinary action as per CCS(CCA) Rules 1965 should not be taken against you for above violations.
4. Your reply must reach this office within 10 days of the receipt of this letter, failing which it shall be presumed that you have nothing to state in your defence and necessary disciplinary action as deemed fit shall be proceeded against you 'Ex-parte'.
5. Please acknowledge.

Sd/- Commander Works Engineer

Appendix 'B'

Commander Works Engineers (AF) North
Military Engineer Services
Bellary Road, JC Nagar Post, Bangalore – 560 006
Tele: 080-23412458, Fax: 080-23518742, Email: afbang3-mes@nic.in

13006/Lakshme Gowda/51 /E1C **17 Oct 2022**

MEMORANDUM

The undersigned proposes to hold an inquiry against MES/196969 Shri Lakshme Gowda, CMD (OG) of GE(AF) Bangalore under Rule 14 of the Central Civil Service (Classification, Control and Appeal) Rules, 1965. The substance of the imputations of misconduct or misbehavior in respect of which the inquiry is proposed to be held is set out in the enclosed statement of articles of charge (Annexure I). A statement of the imputations of misconduct or misbehavior in support of each article of charge is enclosed (Annuexure II). A list of documents by which and a list of witnesses by whom, the article of charge are proposed to be sustained are also enclosed (Annexure III and IV).
2. Shri Lakshme Gowda is directed to submit within 10 days of the receipt of this Memorandum, a written statement of his defence and also to state whether he desires to be heard in person.
3. He is informed that an inquiry will be held only in respect of those articles of charge as are not admitted. He should, therefore, specifically admit or deny each article of charge.
4. Shri Lakshme Gowda is further informed that if he does not submit his written statement of defence on or before the date specified in Para 2 above, or does not appear in person before the inquiring authority or otherwise fails or refuses to comply with the provisions of Rule 14 of the C.C.S.(C.C.A) Rules,1965 or the orders/directions issued in pursuance of the said rule, the inquiring authority may hold the inquiry against him ex parte.
5. Attention of Shri Lakshme Gowda is invited to Rule 20 of the Central Civil Service (Conduct)Rule, 1964, under which no Government servant shall bring or attempt to bring any political or outside influence to bear upon any superior authority to further his interest in respect of matters pertaining to his service under the Government. If any representation is received on his behalf from another person in respect of any matter dealt with in these proceedings it will be presumed that Shri Lakshme Gowda is aware of such a representation and that it has been made at his instance and action will be taken against him for violation of Rule 20 of the C.C.S(Conduct) Rules, 1964.
6. The receipt of the Memorandum may be acknowledged.

Sd/- Commander Works Engineers

To,
MES/196969
Shri Lakshme Gowda, CMD (OG)
Gangandanahalli, Laxshmi Pura)Post) Bangalore North Bangalore - 23

ಅಮೂಲ್– ನಂದಿನಿ ಕುರಿತ ಅಮಿತ್ ಶಾ ಹೇಳಿಕೆಗೆ ಆಕ್ಷೇಪ

‘ವಿಲೀನ ವಿರೋಧಿಸಿ ಒಕ್ಕೂಟಗಳು ನಿರ್ಣಯ ಕೈಗೊಳ್ಳಲಿ’

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ಸಂವಾದ

ಬೆಂಗಳೂರು: ಕೆಎಂಎಫ್ ಮತ್ತು ಅಮೂಲ್ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿದ ಹೇಳಿಕೆ ರಾಜ್ಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಈ ವಿಷಯದ ಹಿನ್ನೆಲೆಯಲ್ಲಿ ‘ನಂದಿನಿ–ಅಮೂಲ್ ಅಮಿತ್ ಶಾ ಹೇಳಿದ್ದೇನು?’ ಎನ್ನುವ ಕುರಿತು ‘ಪ್ರಜಾವಾಣಿ’ ಬುಧವಾರ ಆಯೋಜಿಸಿದ್ದ ಸಂವಾದದಲ್ಲಿ ವಿಲೀನ ವಿರೋಧಿಸಿ ಎಲ್ಲ ಹಾಲು ಒಕ್ಕೂಟಗಳು ಒಮ್ಮತದ ನಿರ್ಣಯಗಳನ್ನು ಕೈಗೊಳ್ಳಬೇಕು ಎನ್ನುವ ಒತ್ತಾಯ ಕೇಳಿ ಬಂತು.

ಅತಿಥಿಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪೂರ್ಣ ಸಂವಾದ ವೀಕ್ಷಿಸಲು:
https://youtu.be/t9fNvoNn-jo
https://www.facebook.com/prajavani.net/videos/3313315965549597/

ರಾಜಕೀಯಕ್ಕೆ ‘ನಂದಿನಿ’ ಬಲಿಯಾಗಬಾರದು



ನಂದಿನಿ ಮತ್ತು ಅಮುಲ್‌ಗೆ ಸಂಬಂಧಿಸಿದಂತೆ ಅಮಿತ್ ಶಾ ಅವರು ನೀಡಿರುವ ಹೇಳಿಕೆ ಸಂಪೂರ್ಣ ರಾಜಕೀಯ ಪ್ರೇರಿತವಾಗಿದೆ. ನಂದಿನಿಯನ್ನು ರಾಜಕೀಯವಾಗಿ ಬಳಸಿಕೊಳ್ಳದೆ ರೈತರ ಹಿತಾಸಕ್ತಿಗೆ ಮಾತ್ರ ಸೀಮಿತವಾಗಬೇಕು. ಬೇರೆ ಬೇರೆ ರಾಜ್ಯಗಳಲ್ಲಿರುವ ವ್ಯವಸ್ಥೆ ಬೇರೆಯಾಗಿದ್ದು, ಕರ್ನಾಟಕದ ವ್ಯವಸ್ಥೆಯೇ ಬೇರೆ. ಹಾಲು ಒಕ್ಕೂಟಗಳನ್ನು ವಿಲೀನಗೊಳಿಸಿ ಬಹು ರಾಜ್ಯಗಳ ಸಂಸ್ಥೆ ಸ್ಥಾಪಿಸಿ ವಿದೇಶದಲ್ಲಿ ಭಾರತದ ‘ಬ್ರ್ಯಾಂಡ್’ ಸೃಷ್ಟಿಸುವ ಯೋಜನೆ ಇದಾಗಿರಬಹುದು. ಆದರೆ, ಈಗಾಗಲೇ ನಂದಿನಿ ರಾಷ್ಟ್ರಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಪ್ರತಿಯೊಂದು ರಾಜ್ಯದಲ್ಲಿ ಗುಜರಾತ್ ಮಾದರಿ ಜಾರಿಗೊಳಿಸುತ್ತೇವೆ ಎನ್ನುವುದು ಸರಿ ಅಲ್ಲ

– **ಸಿದಗೌಡ ಮೋದಗಿ,**
ರಾಜ್ಯಾಧ್ಯಕ್ಷ, ಭಾರತೀಯ ಕೃಷಿಕ ಸಮಾಜ, ಬೆಳಗಾವಿ

‘ಜಾಗತಿಕ ನೋಟ ಮುಖ್ಯವಾಗಬೇಕು’

ಕೆಎಂಎಫ್– ಅಮೂಲ್ ವಿಲೀನ ಅಸಾಧ್ಯ ಮತ್ತು ಬೆಂಬಲಿಸಲು ಸಾಧ್ಯವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಕೆಎಂಎಫ್ ನಮ್ಮದು ಎನ್ನುವ ಕೂಗು ಹೆಚ್ಚಾಗಬೇಕು. ಎಲ್ಲ ಒಕ್ಕೂಟಗಳು ಈ ಬಗ್ಗೆ ದನಿ ಎತ್ತಬೇಕು. ಕೆಎಂಎಫ್ ಸಂಶೋಧನೆ ಮತ್ತು ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಅಂತರರಾಷ್ಟ್ರೀಯ ಮಟ್ಟದ ಉತ್ಪನ್ನಗಳನ್ನು ತಯಾರಿಸಲು ಒಂದಷ್ಟು ಬದಲಾವಣೆಗಳನ್ನು ಕೈಗೊಳ್ಳಬೇಕು. ಈ ಮೂಲಕ ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಬ್ರ್ಯಾಂಡ್ ಸೃಷ್ಟಿಸಿಕೊಳ್ಳಲು ಸಾಧ್ಯವಾಗಲಿದೆ. ಕೆಎಂಎಫ್‌ನಲ್ಲಿ ಶಕ್ತಿ ಮತ್ತು ಸಾಮರ್ಥ್ಯ ಇದೆ. ಆದರೆ, ಬೇಕಾಗಿರುವುದು ನೆರವು. ಜತೆಗೆ, ಮಾರುಕಟ್ಟೆ ಕಾರ್ಯತಂತ್ರವನ್ನು ವಿಸ್ತರಿಸಲು ಜಾಗತಿಕ ದೃಷ್ಟಿಕೋನದ ವ್ಯವಸ್ಥಾಪಕರು ಸಹ ಅಗತ್ಯ.

ಡಾ. ಶಂಕರ ಸಿದ್ಧಾಂತಿ,
ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಮಾಜಿ ನಿರ್ದೇಶಕ,ಬೆಂಗಳೂರು.

‘ಕನ್ನಡಿಗರ ಅಸ್ಮಿತೆ ನಂದಿನಿ ಉಳಿಸಿಕೊಳ್ಳಬೇಕು’



ಕೆಎಂಎಫ್ ಮತ್ತು ಅಮೂಲ್ ವಿಲೀನಗೊಳಿಸಿದರೆ ಕನ್ನಡಿಗರಿಗೆ ಮಾಡುವ ದ್ರೋಹವಾಗಿದೆ. ಕೇಂದ್ರ ಸರ್ಕಾರ ಈಗಾಗಲೇ ಕರ್ನಾಟಕ ಮೂಲದ ಬ್ಯಾಂಕ್‌ಗಳನ್ನು ಬೇರೆ ಬೇರೆ ಬ್ಯಾಂಕ್‌ಗಳ ಜತೆ ವಿಲೀನಗೊಳಿಸಿ ಕನ್ನಡಿಗರಿಗೆ ಅನ್ಯಾಯ ಮಾಡಿದೆ. ಈಗ ಅಮೂಲ್‌ಗೆ ಸ್ಪರ್ಧೆವೊಡ್ಡುತ್ತಿರುವ ಕೆಎಂಎಫ್ ಅನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸುತ್ತಿದೆ.

ಕೆಎಂಎಫ್ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಅಮೂಲ್ ಜತೆ ವಿಲೀನಗೊಳಿಸುವ ಕ್ರಮ ಸರಿ ಅಲ್ಲ. ಕೆಎಂಎಫ್ ಅಧ್ಯಕ್ಷರು ಮತ್ತು ನಿರ್ದೇಶಕರು ವಿಲೀನಕ್ಕೆ ಪ್ರಬಲ ವಿರೋಧ ವ್ಯಕ್ತಪಡಿಸಬೇಕಾಗಿತ್ತು. ಆದರೆ, ಅವರು ಇದುವರೆಗೆ ಹೇಳಿಕೆ ನೀಡಿಲ್ಲ. ಎಲ್ಲ ಹಾಲು ಒಕ್ಕೂಟಗಳ ನಿರ್ದೇಶಕರು ಸಹ ಪ್ರತಿಭಟನೆ ವ್ಯಕ್ತಪಡಿಸಬೇಕು.

ಎಲ್.ಗಂಗಾಧರಮೂರ್ತಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಜೆಡಿಎಸ್

‘ಅಮೂಲ್‌ಗೆ ನಂದಿನಿಯೇ ಪೈಪೋಟಿ’

ಯಾವುದೇ ಕಾರಣಕ್ಕೂ ಅಮುಲ್ ಜತೆ ವಿಲೀನ ಸಾಧ್ಯವೇ ಇಲ್ಲ. ಕರ್ನಾಟಕದಲ್ಲಿ ನಂದಿನಿ ಮತ್ತು ಅಮೂಲ್ ನಡುವೆ ಪೈಪೋಟಿ ಇದೆ. ಹೀಗಾಗಿ, ಅಮೂಲ್ ಜತೆ ಹೊಂದಾಣಿಕೆ ಸಾಧ್ಯವಿಲ್ಲ. ಆದರೆ, ವಿಲೀನ ವಿರೋಧಿಸಿ ಕೆಎಂಎಫ್ ಅಧ್ಯಕ್ಷರು ಇದುವರೆಗೆ ಹೇಳಿಕೆ ನೀಡಿಲ್ಲ. ನಂದಿನಿ 26 ಲಕ್ಷಕ್ಕೂ ಹೆಚ್ಚು ಜನರ ಜೀವನಾಡಿಯಾಗಿದೆ. ಇದು ನಮ್ಮ ಹೆಮ್ಮೆ. ನಂದಿನಿ ಬ್ರ್ಯಾಂಡ್ ಕಳೆದುಕೊಂಡರೆ ಸ್ವತಂತ್ರ ಮಗನನ್ನು ಕಳೆದುಕೊಂಡಂತೆ. ಅಮೂಲ್ ಮತ್ತು ನಂದಿನಿ ಒಂದಾಗಿ ಕೆಲಸ ಮಾಡಬಹುದೇ ಹೊರತು ವಿಲೀನ ಸಾಧ್ಯವಿಲ್ಲ. ಹಾಲು ಉತ್ಪಾದನೆಯ ಖರ್ಚು ಹೆಚ್ಚಾಗಿದ್ದರೂ ಆದಾಯ ಕಡಿಮೆಯಾಗಿದೆ. ಎಲ್ಲ ರಾಜ್ಯಗಳಲ್ಲಿ ಒಂದೇ ದರ ನಿಗದಿಪಡಿಸಿದರೆ ಹಾಲು ಉತ್ಪಾದನೆ ಹೆಚ್ಚಾಗಬಹುದು.

– **ಮಾಗಡಿ ನರಸಿಂಹಮೂರ್ತಿ,**
ಅಧ್ಯಕ್ಷ, ಬಮೂಲ್, ರಾಮನಗರ

ಸುದ್ದಿ 2 ನಿಮಿಷ

ಪೊಲೀಸ್ ಶ್ವಾನ ‘ರಾಮ್’ ಇನ್ನಿಲ್ಲ

ರಾಮನಗರ: 250ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಪತ್ತೆ ಕಾರ್ಯ ನಿರ್ವಹಿಸಿದ್ದ ಜಿಲ್ಲೆಯ ಹೆಮ್ಮೆಯ ಪೊಲೀಸ್ ಶ್ವಾನ ‘ರಾಮ್’ ಬುಧವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನ ಹೊಂದಿತು.

ರಾಮನಗರ ಜಿಲ್ಲಾ ಪೊಲೀಸ್ ಘಟಕಕ್ಕೆ 2017ನೇ ಸಾಲಿನಲ್ಲಿ ಸೇರ್ಪಡೆಗೊಂಡ ಈ ನಾಯಿಗೆ ಬೆಂಗಳೂರಿನ ಆಡುಗೋಡಿಯಲ್ಲಿನ ಪೊಲೀಸ್ ಶ್ವಾನ ತರಬೇತಿ ಕೇಂದ್ರದಲ್ಲಿ ತರಬೇತಿ ನೀಡಲಾಗಿತ್ತು. ನಂತರದಲ್ಲಿ ರಾಮನಗರ ಶ್ವಾನ ದಳದಲ್ಲಿ 6 ವರ್ಷ ಸೇವೆ ಸಲ್ಲಿಸಿದ ರಾಮ್ ಶ್ವಾನವು, 250ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಪತ್ತೆ ಕಾರ್ಯ ನಿರ್ವಹಿಸಿ, 30 ಅಪರಾಧ ಪ್ರಕರಣಗಳನ್ನು ಪತ್ತೆ ಮಾಡಿ ಪ್ರಶಂಸೆ ಗಳಿಸಿತ್ತು.

ಬುಧವಾರ ಸರ್ಕಾರಿ ಗೌರವಗಳೊಂದಿಗೆ ಚನ್ನಪಟ್ಟಣದ ಡಿಎಆರ್ ಕವಾಯತು ಮೈದಾನದಲ್ಲಿ ರಾಮ್ ಅಂತ್ಯಕ್ರಿಯೆ ನಡೆಯಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್‌ಬಾಬು, ಡಿಎಆರ್ ವಿಭಾಗದ ಡಿವೈಎಸ್ಪಿ ಜಿ. ಮಹೇಶ್, ಆರ್‌ಪಿಐ ರವಿ ಹಾಗೂ ರಾಮ್‌ನನ್ನು ನೋಡಿಕೊಳ್ಳುತ್ತಿದ್ದ ಎ. ರೂಪೇಶ್ ಮತ್ತಿತರರು ಕಂಬನಿ ಮಿಡಿದರು.

‘40 ಕಿಲೋ ಮೀಟರ್ ಉದ್ದದ ಮೆಟ್ರೊ ಮಾರ್ಗ ಶೀಘ್ರ ಸೇವೆಗೆ’

ಬೆಂಗಳೂರು: ‘ನಮ್ಮ ಮೆಟ್ರೊ’ ಎರಡನೇ ಹಂತದ ಸುಮಾರು 40 ಕಿಲೋ ಮೀಟರ್ ಉದ್ದದ ಮಾರ್ಗವನ್ನು ಶೀಘ್ರವೇ ಸಾರ್ವಜನಿಕ ಸೇವೆಗೆ ಮುಕ್ತಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ‘ಎಲೆಕ್ಟ್ರಾನಿಕ್ ಸಿಟಿ ಮತ್ತು ವೈಟ್‌ಫೀಲ್ಡ್ ಮಾರ್ಗಗಳು ಮೆಟ್ರೊ ಸೇವೆಯ ಜಾಲಕ್ಕೆ ಸೇರ್ಪಡೆಗೊಳ್ಳಲಿವೆ. ಇದರೊಂದಿಗೆ ಆ ಭಾಗದ ಜನರಿಗೆ ಸಾಕಷ್ಟು ಅನುಕೂಲ ಆಗಲಿದೆ’ ಎಂದಿದ್ದಾರೆ.

ಬೈಯಪ್ಪನಹಳ್ಳಿ–ವೈಟ್‌ಫೀಲ್ಡ್ ನಡುವಿನ 19 ಕಿಲೋ ಮೀಟರ್ ಮಾರ್ಗದಲ್ಲಿ ವೈಟ್‌ಫೀಲ್ಡ್–ಕೆ.ಆರ್.ಪುರ ಮಾರ್ಗದಲ್ಲಿ ಈಗಾಗಲೇ ಪರೀಕ್ಷಾರ್ಥ ಸಂಚಾರ ನಡೆದಿದ್ದು, ಈ ಮಾರ್ಗವನ್ನು ಮಾರ್ಚ್‌ನಲ್ಲಿ ಲೋಕಾರ್ಪಣೆಗೊಳಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ. ಬೆನ್ನಿಗಾನಹಳ್ಳಿ ನಿಲ್ದಾಣದ ಬಳಿ ರೈಲು ಹಳಿ ಹಾದು ಹೋಗಿದ್ದರಿಂದ ಕಾಮಗಾರಿ ವಿಳಂಬವಾಗುತ್ತಿದ್ದು, ಕೆ.ಆರ್.ಪುರ–ಬೈಯಪ್ಪನಹಳ್ಳಿ ನಡುವೆ ರೈಲು ಸಂಚಾರ ಮುಂದುವರಿಸಲು ಇನ್ನೂ ಆರು ತಿಂಗಳು ಬೇಕಾಗಲಿದೆ ಎಂಬುದು ಅಧಿಕಾರಿಗಳ ಲೆಕ್ಕಾಚಾರ.

ಆರ್.ವಿ.ರಸ್ತೆ–ಬೊಮ್ಮಸಂದ್ರ ಮಾರ್ಗದ 15.5 ಕಿಲೋ ಮೀಟರ್ ಉದ್ದದ ಮಾರ್ಗದಲ್ಲಿ ನಿಲ್ದಾಣ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಪರೀಕ್ಷಾರ್ಥ ಸಂಚಾರದ ದಿನಾಂಕ ನಿಗದಿಯಾಗಿಲ್ಲ. ಈ ಮಾರ್ಗವನ್ನು ಜುಲೈ ಅಥವಾ ಆಗಸ್ಟ್‌ನಲ್ಲಿ ಕಾರ್ಯಾರಂಭ ಮಾಡಲು ಅಧಿಕಾರಿಗಳು ಉದ್ದೇಶಿಸಿದ್ದಾರೆ. ಈ ನಡುವೆ ನಾಗಸಂದ್ರ–ಬಿಐಇಸಿ ನಡುವೆ 3.77 ಕಿಲೋ ಮೀಟರ್ ಮಾರ್ಗದ ಕಾಮಗಾರಿಯೂ ಪ್ರಗತಿಯಲ್ಲಿದ್ದು, ಈ ಮೂರು ಮಾರ್ಗಗಳು ಸೇರಿ 40 ಕಿಲೋ ಮೀಟರ್ ಆಗಲಿವೆ.

ಪ್ರಕರಣ ರದ್ದು ಕೋರಿ ಬಸವರಾಜನ್ ದಂಪತಿ ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ‘ಚಿತ್ರದುರ್ಗದ ಶ್ರೀ ಮುರುಘಾರಾಜೇಂದ್ರ ಬೃಹನ್ಮಠದ (ಎಸ್‌ಜೆಎಂ) ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೊಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಪ್ರಕರಣ ದಾಖಲಿಸಲು ಸಂತ್ರಸ್ತರಿಗೆ ಪ್ರಚೋದನೆ ನೀಡಿದ ಆರೋಪ ಸಂಬಂಧ ನಮ್ಮ ವಿರುದ್ಧ ದಾಖಲಿಸಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಮಠದ ಮಾಜಿ ಆಡಳಿತಾಧಿಕಾರಿ ಎಸ್. ಕೆ. ಬಸವರಾಜನ್ ಮತ್ತು ಅವರ ಪತ್ನಿ ಸೌಭಾಗ್ಯ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಕುರಿತಂತೆ ಸಲ್ಲಿಸಲಾಗಿರುವ ಕ್ರಿಮಿನಲ್ ಅರ್ಜಿಯಲ್ಲಿ ಮಠದ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಚಿತ್ರದುರ್ಗ ಗ್ರಾಮೀಣ ಠಾಣೆ ಪೊಲೀಸರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿದ್ದು, ರಜಾಕಾಲದಲ್ಲಿ ಸಲ್ಲಿಸಲಾಗಿದ್ದ ಈ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ರಾಚಯ್ಯ ಅವರಿದ್ದ ಏಕಸದಸ್ಯ ನ್ಯಾಯಪೀಠ ರಜಾಕಾಲದ ನಂತರಕ್ಕೆ ಮುಂದೂಡಿತ್ತು.

‘ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ನಲ್ಲಿ ನಮ್ಮ ಹೆಸರು ಉಲ್ಲೇಖವಾಗಿಲ್ಲ. ಆದರೂ, ಪೊಲೀಸರು ಅಧಿಕಾರ ದುರ್ಬಳಕೆ ಮಾಡಿಕೊಂಡು ನಮ್ಮನ್ನು ಬಂಧಿಸಿದ್ದರು. ಪ್ರಕರಣಕ್ಕೂ ನಮಗೂ ಯಾವುದೇ ಸಂಬಂಧವಿಲ್ಲ. ಪ್ರಕರಣದಲ್ಲಿ ನಮ್ಮಿಬ್ಬರನ್ನೂ ತಪ್ಪಾಗಿ ಸಿಲುಕಿಸಲಾಗಿದೆ. ಪೊಲೀಸರ ಈ ನಡೆಯಿಂದ ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ನಮಗೆ ಪ್ರಾಪ್ತವಾಗಿರುವ ಜೀವಿಸುವ ಮತ್ತು ವೈಯಕ್ತಿಕ ಸ್ವಾತಂತ್ರದ ಹಕ್ಕಿನ ಉಲ್ಲಂಘನೆಯಾಗಿದೆ. ಆದ್ದರಿಂದ, ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿದ್ದಾರೆ.

ಸಾಧನೆಗೆ ದೃಢ ಮನಸ್ಸು ಮುಖ್ಯ: ಸಚಿವ ಮಾಧುಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಧನೆ ಮಾಡಲು ಎಲ್ಲಾ ಅಂಗಾಂಗಗಳು ಸರಿ ಇರಬೇಕೆಂದೇನಿಲ್ಲ, ದೃಢವಾದ ಮನಸ್ಸಿರಬೇಕು’ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದರು.

ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಬುಧವಾರ ಹಮ್ಮಿಕೊಂಡಿದ್ದ ‘ವಿಶ್ವ ಬ್ರೈಲ್ ದಿನಾಚರಣೆ’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಮನಸ್ಸಿನ ಶಕ್ತಿಯ ಮುಂದೆ ಅಂಗಾಂಗಗಳ ನ್ಯೂನತೆ ಏನೂ ಅಲ್ಲ. ದೇವರು ನಮ್ಮನ್ನು ಸೃಷ್ಟಿ ಮಾಡುವಾಗ ಎಲ್ಲಾ ಅಂಗಾಂಗಳಿಗೂ ಶಕ್ತಿ ನೀಡಿರುತ್ತಾನೆ. ಕೆಲವೊಮ್ಮೆ ಆ ಶಕ್ತಿ ಕೆಲವು ಅಂಗಾಂಗಗಳಿಗೆ ಇಲ್ಲದಂತೆ ಆಗಬಹುದು. ಆದರೆ, ಅದರಲ್ಲಿರುವ ಶಕ್ತಿ ಮತ್ತೊಂದು ಅಂಗಾಂಗಕ್ಕೆ ವರ್ಗಾವಣೆ ಮಾಡಿರುತ್ತಾನೆ’ ಎಂದರು.

ಅಂಧ ಐಎಎಸ್ ಅಧಿಕಾರಿ ಮತ್ತು ಪುದುಚೇರಿ ಜಿಲ್ಲಾಧಿಕಾರಿ ಆಗಿ ಕಾರ್ಯನಿರ್ವಹಿಸುತ್ತಿರುವ ಸತೇಂದರ್ ಸಿಂಗ್‌ಗೆ ‘ಸಾರ್ವಜನಿಕ ಸನ್ಮಾನ ಸಮರ್ಪಣೆ’ ಪ್ರಶಸ್ತಿ, ಜೈನ್ ರೋಲ್ ಮಾಡೆಲ್ ಉದ್ಯೋಗಿ ಸಂಜಯ್ ಶ್ರೀಕಾಂತ್, ಸ್ವಯಂ ಉದ್ಯೋಗಿ ಕಮಲ್ ಮಾಲು, ಕ್ರೀಡಾಪಟು ಮಾನಸ, ಸಮಾಜ ಸೇವಕ ನಾಗನಗೌಡ ಅವರಿಗೆ ‘ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ ಎಕ್ಸಲೆನ್ಸಿ’ ಪ್ರಶಸ್ತಿ, ಅಂಕಿತ್ ಜಿಂದಾಲ್, ಬಿ.ಎಸ್. ವೆಂಕಟೇಶ್, ಪ್ರಜ್ವಲ್ ಹಾಗೂ ಪೃಥ್ವಿ ಅವರಿಗೆ ‘ಎನ್.ಎಫ್.ಬಿ. ಡಿಗ್ನಿಟಿ ಆಫ್ ದಿ ಕಮ್ಯೂನಿಟಿ’ ಪ್ರಶಸ್ತಿ, ಗಟಕ್ ಸಿಂಗ್ ಮತ್ತು ಸದಾಶಿವಯ್ಯ ಅವರಿಗೆ ‘ಶ್ರೇಷ್ಠ ಮಾನವ ಸೇವಾ’ ಸನ್ಮಾನ, ವೀರಭದ್ರಯ್ಯಗೆ ‘ಹಿರಿಯ ನಾಗರಿಕ ಸನ್ಮಾನ’ ಮತ್ತು ಲಕ್ಷ್ಮೀ ದೇವಿ ಅವರಿಗೆ ಸ್ವಯಂ ಸಬಲ ಮಹಿಳಾ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ನಾಗನಗೌಡ, ಕಮಲ್ ಮಾಲು, ಸಂಜಯ್ ಶ್ರೀಕಾಂತ್ ಜೈನ್ ಮತ್ತು ಮಾನಸ ಅವರಿಗೆ ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್ (ಎನ್‌ಎಫ್‌ಬಿ) ಎಕ್ಸಲೆನ್ಸಿ ಪ್ರಶಸ್ತಿ ನೀಡಲಾಯಿತು. (ನಿಂತವರು ಎಡದಿಂದ) ಎನ್‌ಎಫ್‌ಬಿ ಅಧ್ಯಕ್ಷ ನಾಗರಾಜ್ ಎಂ, ಡಾ. ಲತಾ ಕುಮಾರಿ, ಸತೇಂದ್ರ ಸಿಂಗ್, ಮೋಹನ್ ಕೊಂಡಾಜಿ, ಕಾನೂನು ಸಚಿವ ಮಾಧುಸ್ವಾಮಿ ಮತ್ತು ರಾಜ್ ಕೃಷ್ಣಮೂರ್ತಿ ಇದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT
And Finance Available On Low Interest Against Properties, Land& Building,Sites,Flats, Converted& Agriculture Lands
Call:7204995189

PUBLIC NOTICE

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34.
TENDER NOTICE
Tenders are invited from reputed Civil Contractors / Suppliers for following works
1. Medical College and Supers Specialty Hospital – Kasavanahalli – Construction of proposed Compound wall Rs.40,60,000
2. Purchase of 12 V 100 AH Exide Tubular batteries to KRJS Institutions.
Tender form may be obtained from **KRJS –Head Office** From 06-1-2023 between **10.00** am to **5.00** pm. Last date for submitting sealed quotations: **15/1/2023** at 3.00pm For more details,
Visit our Website : www.reddyjanasangha.org or
Contact: Civil Engineers: **8618096726 / 9845144334**

JOB OPPORTUNITIES

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Hospital & Medical Jobs

DOCTORS JOB VACANCY
A Heritage Medical College in a Sprawling Campus is Offering Good Job Opportunities.
Professor In Ophthalmology: With 9 years teaching experience and 4 Nos of research publications in indexed journals.
Assistant Professor With MD Qualification: In Community Medicine and Pharmacology.
Senior Residents With PG Qualification (MD/MS): In General Medicine, General Surgery, Orthopaedics, Ob & Gyn, Psychiatry and Pulmonology (TB & Chest diseases).
Tutors With Post Graduate Qualification (MD/MS): In Anatomy, Physiology, Biochemistry, Pharmacology, Pathology, Microbiology, Community Medicine, Forensic Medicine. M.Sc qualification in Medical / Human Anatomy.
for Interviews Please Contact:
9108292533

PERSONAL

Change of Name

I,SUJITH SABANAYAGAM, changed-my son's name-from DHRUV to DHRUV SUJITH Dtd:22.12.2022 Sworn before notary H.S.Sakalesh Aradhya, Bengaluru

JC671927H SUB Sanjeev Kumar 2ATC son's name Records JEET KUMAR BHADOURIA to JEET BHADOURIA, Notary BM Chandrashekar.

POOJA BHIMANAGOUD JAMANAL W/o 6503271W SEP/ASH Bhimanagoud Jumanal, Qtr/No. 186/5 JB Colony, Bangalore, my name POOJA BHIMANAGOUD JAMANAL to POOJA BHIMANAGOUD JUMANAL, Notary BM Chandrashekar.

I,RAHAMATHUNNISA MOHAMED ABDULLA, changed-my name-to RAHMATHUNNISA MOHAMED ABDULLA Dtd:30.12.2022 Sworn before notary H.S.Sakalesh Aradhya, Bengaluru

SHIVANAND GHULAPPANAVAR, JC676336L, NB SUB, Vill-Nadi Ingalgaon, Athani, Belgaum, Karnataka, changed Son's name SHREYASH to SHREYASH SHIVANAND GHULAPPANAVAR, 03/01/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

SHIVANAND GHULAPPANAVAR, JC676336L, NB SUB, Vill-Nadi Ingalgaon, Athani, Belgaum, Karnataka, changed daughter's name SNEHA to SNEHA SHIVANAND GHULAPPANAVAR, 03/01/2023, Notary K.V. Mani, Bangalore

Lost

LOST
I, Mohamed Ansari,52 yrs Ppt No. T8970814, Issued 25/09/2019, s/o Ahmed Mohamed Gaffar residing- No 37-6, Church Road, Marappa Garden 4th cross, JC Nagar, Bengaluru 560006, do hereby inform to the General Public that I have lost the original land document No.2124/2004 dated 19/04/2004. Registered Hosur Sub Registrar Office,TN. If anyone finds Document, call **9094111116.** Or Above address.

DH DECCAN HERALD
ಪ್ರಜಾವಾಣಿ
Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164

ರೈಲು ನಿಲ್ದಾಣದಲ್ಲಿ ಕೊಳೆತ ಸ್ಥಿತಿಯಲ್ಲಿ ಮಹಿಳೆ ಮೃತದೇಹ ಪತ್ತೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣದ ಆವರಣದಲ್ಲಿ ಅಂದಾಜು 30 ವರ್ಷದ ಮಹಿಳೆಯ ಮೃತದೇಹ ಪತ್ತೆಯಾಗಿದೆ.

ಆವರಣದಲ್ಲಿದ್ದ ಪ್ಲಾಸ್ಟಿಕ್ ಡ್ರಮ್‌ನಲ್ಲಿ ಮೃತದೇಹವು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ದುಷ್ಕರ್ಮಿಗಳು ಕೊಲೆ ಮಾಡಿ ತಂದು ಹಾಕಿರುವ ಶಂಕೆ ವ್ಯಕ್ತವಾಗಿದೆ.

‘ಮೃತದೇಹಕ್ಕೆ ಪ್ಲಾಸ್ಟಿಕ್ ಸುತ್ತಿ 10 ದಿನಗಳ ಹಿಂದೆ ತಂದು ಹಾಕಿರುವ ಸಾಧ್ಯತೆ ಇದೆ. ರೈಲು ನಿಲ್ದಾಣದ ಸಿಬ್ಬಂದಿ ಕಳೆದ ಕೆಲವು ದಿನಗಳಿಂದ ಪ್ಲಾಸ್ಟಿಕ್ ಡ್ರಮ್ ಪರಿಶೀಲನೆ ನಡೆಸಿರಲಿಲ್ಲ. ಬುಧವಾರ ಮಧ್ಯಾಹ್ನ ಕೊಳೆತ ವಾಸನೆ ಬರುವುದನ್ನು ಗಮನಿಸಿದ ರೈಲು ನಿಲ್ದಾಣದ ಸಿಬ್ಬಂದಿ ಕ್ಷಿಪ್ರ ಕಾರ್ಯಪಡೆ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅವರು ನಮಗೆ ಮಾಹಿತಿ ನೀಡಿದ ಮೇರೆಗೆ ಪರಿಶೀಲನೆ ನಡೆಸಲಾಯಿತು. ಡಿಸೆಂಬರ್ 26ರಿಂದ ಇರುವ ಎಲ್ಲ ಸಿಸಿಟಿವಿ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಯಾವುದೇ ಸುಳಿವು ಪತ್ತೆಯಾಗಿಲ್ಲ’ ಎಂದು ರೈಲ್ವೆ ಎಸ್‌ಪಿ ತಿಳಿಸಿದ್ದಾರೆ.

‘ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರ ತಂಡ ಹಾಗೂ ಶ್ವಾನ ದಳವು ಆಗಮಿಸಿ ಪರಿಶೀಲನೆ ನಡೆಸಿದೆ. ದುಷ್ಕರ್ಮಿಗಳು ಬೇರೆಲ್ಲೋ ಕೊಲೆ ಮಾಡಿ ಮೃತದೇಹವನ್ನು ನಿಲ್ದಾಣಕ್ಕೆ ತಂದು ಹಾಕಿರುವ ಸಾಧ್ಯತೆ ಇದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸುತ್ತೇವೆ’ ಎಂದು ತಿಳಿಸಿದ್ದಾರೆ.

ಕ್ರಷರ್ ಮಾಲೀಕರ ಎಚ್ಚರಿಕೆ

ವಿಧಾನಸೌಧಕ್ಕೆ ಮುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲ್ಲಿ, ಕಲ್ಲು ಮತ್ತು ಎಂ–ಸ್ಯಾಂಡ್ ಉತ್ಪಾದನೆ ಸ್ಥಗಿತಗೊಳಿಸಿ ಹತ್ತು ದಿನದಿಂದ ಪ್ರತಿಭಟನೆ ನಡೆಸುತ್ತಿರುವ ಸ್ಟೋನ್ ಕ್ರಷರ್ಸ್ ಮತ್ತು ಕ್ವಾರಿ ಮಾಲೀಕರು, ಸೋಮವಾರದ ಬಳಿಕ ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಿದ್ದಾರೆ.

ಸಿದ್ದರಾಜು

‘ಗಣಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹಿಸುವುದನ್ನು ಸ್ಥಗಿತಗೊಳಿಸಬೇಕು ಹಾಗೂ ಕೆಎಂಎಂಸಿಆರ್- 1994ಕ್ಕೆ(ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ) ತಿದ್ದುಪಡಿ ತರಬೇಕು ಎಂದು ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಬೆಳಗಾವಿಯಲ್ಲಿ ನಡೆಸಿದ ಪ್ರತಿಭಟನೆಗೂ ಸರ್ಕಾರ ಕಿವಿಗೊಟ್ಟಿಲ್ಲ’ ಎಂದು ಬೆಂಗಳೂರು ನಗರ ಜಿಲ್ಲಾ ಸ್ಟೋನ್ ಕ್ರಷರ್ಸ್ ಆ್ಯಂಡ್ ಕ್ವಾರಿ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ಡಿ.ಸಿದ್ದರಾಜು ಬೇಸರ ವ್ಯಕ್ತಪಡಿಸಿದರು.

ಕಾಮಗಾರಿಗಳ ನಿರ್ವಹಣಾ ಇಲಾಖೆಗಳ ಮೂಲಕ 40 ವರ್ಷಗಳಿಂದ ರಾಜಧನ ಸಂಗ್ರಹ ಮಾಡಲಾಗುತ್ತಿದ್ದು, ಸರ್ಕಾರಕ್ಕೆ ಈಗಾಗಲೇ ರಾಜಧನ ಸಂದಾಯವಾಗಿದೆ. ಗಣಿ ಗುತ್ತಿಗೆದಾರರಿಂದ ಸುಮಾರು ₹6500 ಕೋಟಿಯಷ್ಟು ವಸೂಲಿ ಮಾಡಲು ಹೊರಟಿರುವುದು ಸರಿಯಲ್ಲ ಎಂದು ತಿಳಿಸಿದರು.

ಕಾನೂನುಬದ್ಧ ಗಣಿಗಾರಿಕೆ ನಡೆಸುವುದಕ್ಕೆ ಪೂರಕ ನಿಯಮಗಳಿಲ್ಲ. ಈಗ ದೂರ ಸಂವೇದಿ ತಂತ್ರಜ್ಞಾನದ ಮೂಲಕ ಡ್ರೋನ್ ಸಮೀಕ್ಷೆ ನಡೆಸುವ ನಿಯಮಗಳಿಗೆ ತಿದ್ದುಪಡಿ ತಂದಿರುವುದು ಸೂಕ್ತವಾಗಿಲ್ಲ. ಜಿಯೊ ಫೆನ್ಸಿಂಗ್ ಹಾಗೂ ಮತ್ತಿತರ ಕ್ರಮಗಳಿಂದ ಉದ್ಯಮ ನಡೆಸುವುದೇ ಕಷ್ಟವಾಗಲಿದೆ ಎಂದು ಹೇಳಿದರು.

ಹತ್ತು ದಿನಗಳಿಂದ ಕಟ್ಟಡ ಕಲ್ಲು, ಎಂ-ಸ್ಯಾಂಡ್ ಉತ್ಪಾದನೆ ಮತ್ತು ಪೂರೈಕೆ ಸ್ಥಗಿತಗೊಳಿಸಲಾಗಿದೆ. ಇದರಿಂದ ಅವಲಂಬಿತ ಉದ್ಯಮಗಳು, ಕಾರ್ಮಿಕರು ಸಂಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. 2500 ಕ್ರಷರ್‌ಗಳಿದ್ದು, ಸುಮಾರು 5 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ನೇರವಾಗಿ ತೊಂದರೆಗೆ ಸಿಲುಕಿದ್ದಾರೆ. ಪರೋಕ್ಷವಾಗಿಯೂ ಹಲವರು ತೊಂದರೆ ಅನುಭವಿಸುತ್ತಿದ್ದಾರೆ. ಏರ್ ಶೋ, ಮೆಟ್ರೊ ರೈಲು ಕಾಮಗಾರಿ, ರಸ್ತೆ ಅಭಿವೃದ್ಧಿ ಸೇರಿ ಮೂಲಸೌಕರ್ಯ ಕಾಮಗಾರಿ ಮೇಲೂ ಪರಿಣಾಮ ಬೀರುತ್ತಿದೆ ಎಂದು ವಿವರಿಸಿದರು.

ಆದರೂ ಸರ್ಕಾರ ತಲೆಕೆಡಿಸಿಕೊಂಡಿಲ್ಲ. ಸರ್ಕಾರ ಇದೇ ಧೋರಣೆ ಮುಂದುವರಿಸಿದರೆ ಮೂರ್ನಾಲ್ಕು ದಿನಗಳಲ್ಲಿ ರಾಜ್ಯದ ಎಲ್ಲಾ ಸ್ಟೋನ್ ಕ್ರಷರ್ ಮಾಲೀಕರ ಸಭೆ ಕರೆಯಲಾಗುವುದು. ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ನಿರ್ಧರಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಕೆಂಚಪ್ಪ, ಉಮಾಶಂಕರ, ಗೋವಿಂದರಾಜು, ಮಧುಸೂದನ, ಹೊಂಬೇಗೌಡ ಇದ್ದರು.

ನೆರೆಮನೆ ನಾಯಿಗೆ ಗುಂಡಿಟ್ಟು ಕೊಂದ ವ್ಯಕ್ತಿ

ಕುದೂರು (ಮಾಗಡಿ): ತಿಪ್ಪಸಂದ್ರ ಹೋಬಳಿಯ ಸಣ್ಣೇನಹಳ್ಳಿಯ ದಾಖಲೆ ಬಸವನಪಾಳ್ಯದಲ್ಲಿ ಮಂಗಳವಾರ ಹನುಮಂತಯ್ಯ ವ್ಯಕ್ತಿಯೊಬ್ಬ ತನ್ನ ಸಾಕು ನಾಯಿ ಜತೆ ಕಚ್ಚಾಡಿದ ನೆರೆ ಮನೆಯ ನಾಯಿಯನ್ನು ಗುಂಡಿಟ್ಟು ಕೊಂದಿದ್ದಾನೆ.

ಈ ಸಂಬಂಧ ಮೃತ ನಾಯಿ ಮಾಲೀಕ ಕಾಳಯ್ಯ ಅವರು ಬುಧವಾರ ಬೆಳಿಗ್ಗೆ ಕುದೂರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.ನಾಯಿಗೆ ಗುಂಡು ಹಾರಿಸಿ ಕೊಂದ ಹನುಮಂತಯ್ಯ ಮತ್ತು ಈ ಕೃತ್ಯಕ್ಕೆ ಸಹಕರಿಸಿದ ಕಾವೇರಿ ಪಾಳ್ಯದ ಮಂಜುನಾಥ್ ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಬಸವನಪಾಳ್ಯದ ಕಾಳಯ್ಯ ಅವರ ನಾಯಿ ಮಂಗಳವಾರ ಹನುಮಂತಯ್ಯ ಅವರ ನಾಯಿಗೆ ಕಚ್ಚಿತ್ತು. ಈ ಸಂಬಂಧ ಕಾಳಯ್ಯ ಮತ್ತು ಹನುಮಂತಯ್ಯ ಕುಟುಂಬ ಸದಸ್ಯರ ಮಧ್ಯೆ ಗಲಾಟೆ ನಡೆದಿತ್ತು. ಗ್ರಾಮಸ್ಥರು ಸಂಧಾನ ನಡೆಸಿ ಗಲಾಟೆ ಶಮನಗೊಳಿಸಿದ್ದರು.

ಮರುದಿನ ಸಂಜೆ ಕಾವೇರಿ ಪಾಳ್ಯದ ಮಂಜುನಾಥ್ ಜತೆ ಸೇರಿ ಹನುಮಂತಯ್ಯ ತನ್ನ ಬಳಿಯಿದ್ದ ನಾಡ ಬಂದೂಕಿನಿಂದ ಗುಂಡಿಟ್ಟು ಕಾಳಯ್ಯ ಅವರ ನಾಯಿಯನ್ನು ಕೊಂದು ಹಾಕಿದ.

‘ಅಕ್ರಮ ವ್ಯಾಪಾರ ಬಂದ್ ಯಾವಾಗ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೈಕೋರ್ಟ್ ಆದೇಶ ಉಲ್ಲಂಘಿಸಿ ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ನಡೆಯುತ್ತಿರುವ ಅಕ್ರಮ ವ್ಯಾಪಾರಕ್ಕೆ ಕಡಿವಾಣ ಯಾವಾಗ, ಪಾದಚಾರಿಗಳು ಧೈರ್ಯವಾಗಿ ಸುತ್ತಾಡುವುದು ಯಾವಾಗ’ ಎಂದು ಸಾರ್ವಜನಿಕರು, ಬಿಬಿಎಂಪಿ ಅಧಿಕಾರಿಗಳು ಹಾಗೂ ಪೊಲೀಸರನ್ನು ಪ್ರಶ್ನಿಸುತ್ತಿದ್ದಾರೆ.

‘ಮೆಜೆಸ್ಟಿಕ್ ಅಕ್ರಮ ವ್ಯಾಪಾರ: ಪ್ರಶ್ನಿಸಿದರೆ ಇರಿತ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಡಿ. 31ರಂದು ಪ್ರಕಟಿಸಿದ್ದ ವರದಿ ಉಲ್ಲೇಖಿಸಿ ಸಾರ್ವಜನಿಕರು ಅಭಿಪ್ರಾಯ ಹಂಚಿಕೊಳ್ಳುತ್ತಿದ್ದಾರೆ. ಕೆಲ ಸಾರ್ವಜನಿಕರ ಆಯ್ದ ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಮೆಜೆಸ್ಟಿಕ್ ‘ಅಕ್ರಮ’ ವ್ಯಾಪಾರ: ಪ್ರಶ್ನಿಸಿದರೆ ಇರಿತ

‘ಕೆ.ಆರ್. ಮಾರ್ಕೆಟ್ ಇದಕ್ಕೆ ಭಿನ್ನವಲ್ಲ’

ಮೆಜೆಸ್ಟಿಕ್ ಸುರಂಗ ಮಾರ್ಗವು ರೌಡಿಗಳ ಕಪಿಮುಷ್ಟಿಯಲ್ಲಿ ಸಿಲುಕಿದೆ. ಇಲ್ಲಿಯ ವ್ಯಾಪಾರಿಗಳಿಗೆ ತಮ್ಮದೇ ಆದ ಗುಂಪು ಇದೆ. ಇವರ ಗಾಳಕ್ಕೆ ಸಿಗುವವರಲ್ಲಿ ಅಮಾಯಕರೇ ಹೆಚ್ಚು. ಕಳಪೆ ವಸ್ತುಗಳಿಗೂ ದುಬಾರಿ ಬೆಲೆ ಹೇಳುತ್ತಾರೆ.

ಇವರನ್ನು ಪ್ರಶ್ನಿಸುವಂತಿಲ್ಲ, ಬೇಡ ಎನ್ನುವಂತಿಲ್ಲ. ಅತ್ಯಂತ ಕೆಟ್ಟ ಭಾಷೆಯಲ್ಲಿ ಬೈದು ಕೊರಳಪಟ್ಟಿ ಹಿಡಿದೆಳೆಯುವ ಮಟ್ಟಕ್ಕೆ ಬೆಳೆದಿದ್ದಾರೆ. ಕೂಗಳತೆ ದೂರದಲ್ಲಿ ಇರುವ ಉಪ್ಪಾರ ಪೇಟೆ ಪೊಲೀಸರಿಗೆ ಇದೆಲ್ಲ ಗೊತ್ತಿದ್ದರೂ ಕಂಡೂ ಕಾಣದಂತಿರುತ್ತಾರೆ. ಕೆ.ಆರ್. ಮಾರ್ಕೆಟ್ ಇದಕ್ಕೆ ಭಿನ್ನವಲ್ಲ. ಅಲ್ಲಿಯೂ ಇದೇ ಸ್ಥಿತಿ ಇದೆ. ಬಿಬಿಎಂಪಿ ಸಿಬ್ಬಂದಿ ಮತ್ತು ಸ್ಥಳೀಯ ಪೊಲೀಸರು ಮಾಮೂಲು ವಸೂಲಿಗಾಗಿ ವ್ಯಾಪಾರಿಗಳ ಪರ ವಕಾಲತ್ತು ವಹಿಸುತ್ತಾರೆ. ದೂರು ನೀಡಿದರೆ ದೂರ ಸರಿಯುತ್ತಾರೆ. ಸಂಪ್ರದಾಯಸ್ಥರು ಈ ವ್ಯಾಪಾರಿಗಳ ಅವಾಚ್ಯ ಬೈಗುಳಕ್ಕೆ ಕಿವಿಮುಚ್ಚಿಕೊಂಡು ಹೋಗಬೇಕಿದೆ. ಉನ್ನತ ಪೊಲೀಸ್ ಅಧಿಕಾರಿಗಳು ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ಎಸ್. ಪ್ರಭಾಕರ್, ಚಾಮರಾಜಪೇಟೆ

‘ಸಾರ್ವಜನಿಕರ ಸಂಚಾರಕ್ಕೆ ಸಂಚಕಾರ’

ಮೆಜೆಸ್ಟಿಕ್ ಬಸ್ ನಿಲ್ದಾಣದಿಂದ ರೈಲ್ವೆ ಸ್ಟೇಷನ್‌ಗೆ ಹೋಗುವ ಸುರಂಗ ಮಾರ್ಗದಲ್ಲಿ ವ್ಯಾಪಾರಿಗಳು ಬಳಸಿ ಬಿಸಾಡಿದ ವಸ್ತುಗಳು, ಉಗುಳಿ ಬಣ್ಣಗೆಟ್ಟ ಮೆಟ್ಟಿಲುಗಳು ಜನರ ಸಂಚಾರಕ್ಕೆ ಸಂಚಕಾರ ತಂದಿದೆ. ಲಂಗು ಲಗಾಮಿಲ್ಲದ ಅಂಗಡಿಗಳು ಮತ್ತು ಅವರ ನಡವಳಿಕೆಗಳು, ಎಷ್ಟು ಬೇಗ ಇಲ್ಲಿಂದ ಹೊರಡುತ್ತೇವೋ ಎಂದು ಓಡುವಂತೆ ಮಾಡುತ್ತದೆ. ದಯವಿಟ್ಟು ಸಂಬಂಧಪಟ್ಟ ಇಲಾಖೆಯವರು ಕ್ರಮ ಕೈಗೊಂಡು ಜನರು ಸುಗಮವಾಗಿ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಪುಷ್ಪಾ ಶ್ರೀರಾಮರಾಜು, ವಸಂತಪ್ಪ ಬ್ಲಾಕ್ ನಿವಾಸಿ

‘ವರ್ತಕರ ಕಂಡರೆ ಭಯ’

ಮೆಜೆಸ್ಟಿಕ್ ಸುರಂಗ ಮಾರ್ಗದಲ್ಲಿ ಸಂಚರಿಸುವಾಗ ಒಂದು ವಸ್ತುವಿನ ಬೆಲೆ ಕೇಳಿದರೆ ಅದರ ದರ ದುಪ್ಪಟ್ಟು ಹೇಳಿ ಖರೀದಿಸುವವರೆಗೂ ಬಿಡುವುದಿಲ್ಲ, ಅಲ್ಲಿನ ವರ್ತಕರನ್ನು ನೋಡಿದರೆ ಈಗಲೂ ಹೆದರಿಕೆ ಬರುತ್ತದೆ. ಇಂತಹ ವ್ಯಾಪಾರಿಗಳ ಹಾವಳಿ ತಪ್ಪಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಯಾವ ಯಾತ್ರಿಕನೂ ಆ ರಸ್ತೆಯನ್ನೇ ಬಳಸುವುದಿಲ್ಲ.

ಬಾಲಕೃಷ್ಣ ಎಂ. ಆರ್., ಸೀತಪ್ಪ ಲೇಔಟ್, ಆರ್. ಟಿ. ನಗರ ಬೆಂಗಳೂರು

‘ವ್ಯಾಪಾರಿಗಳ ಕಾಟ’

ಶಿವಮೊಗ್ಗದಿಂದ ಬೆಂಗಳೂರಿಗೆ ಬೆಳಿಗ್ಗೆ 6 ಗಂಟೆಗೆ ಇಳಿದು ಬಂದು ಸುರಂಗ ಮಾರ್ಗದ ಮೂಲಕ ಬಿಎಂಟಿಸಿ ಬಸ್ ನಿಲ್ದಾಣದ ಕಡೆಗೆ ಹೋಗುವವರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ.

ಅಮಾಯಕರನ್ನು ಪೀಡಿಸುವ ಲೈಂಗಿಕ ಕಾರ್ಯಕರ್ತರು, ಇವರಿಂದ ತಪ್ಪಿಸಿಕೊಂಡು ಬಂದರೆ ಅಕ್ರಮ ಅಂಗಡಿಗಳ ವ್ಯಾಪಾರಿಗಳು ಪ್ರವಾಸಿಗರನ್ನು ಕೈ ಹಿಡಿದು ವಸ್ತುಗಳನ್ನು ಖರೀದಿಸುವಂತೆ ಬಲವಂತ ಮಾಡುತ್ತಾರೆ. ಜನಪ್ರತಿನಿಧಿಗಳ ಮತ್ತು ಅಧಿಕಾರಗಳ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಈ ಪ್ರದೇಶದ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು.

–**ಮಹೇಶ ಬಂದ್ಯಾ,** ಕತ್ರಿಗುಪ್ಪೆ ನಿವಾಸಿ

ಪ್ರಜಾವಾಣಿ @75
ಸುರಂಗ ಮಾರ್ಗದ ಮಳಿಗೆಗಳಿಂದ ಸಮಸ್ಯೆ ಎದುರಿಸುತ್ತಿರುವವರಲ್ಲಿ ನೀವೂ ಒಬ್ಬರಾಗಿದ್ದರೆ, ಚುಟುಕಾಗಿ ಬರೆದು ಕಳಿಸಿ. ನಿಮ್ಮ ಹೆಸರು, ವಿಳಾಸ, ಭಾವಚಿತ್ರವನ್ನೂ ಕಳುಹಿಸಿ.
96060 38256

ಸ್ವದೇಶಿ ಮೇಳವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಸಂಸದ ಡಿ.ವಿ.ಸದಾನಂದಗೌಡ, ಆದಿಚುಂಚನಗಿರಿ ಶಾಖಾ ಮಠದ ಸೌಮ್ಯನಂದನಾಥ ಸ್ವಾಮೀಜಿ, ಸ್ವದೇಶಿ ಜಾಗರಣದ ಮಂಜುನಾಥ, ರಾಜ್ಯಸಭೆ ಸದಸ್ಯ ಜಗ್ಗೇಶ್, ಬಿಜೆಪಿ ಮುಖಂಡ ಎಸ್.ಮುನಿರಾಜು, ಮಂಡಲ ಅಧ್ಯಕ್ಷ ಎನ್. ಲೋಕೇಶ್ ಇದ್ದರು.

ಸ್ವದೇಶಿ ಮೇಳಕ್ಕೆ ಚಾಲನೆ

ಪ್ರಜಾವಾಣಿ ಚಿತ್ರ

ಪೀಣ್ಯದಾಸರಹಳ್ಳಿ: ಪ್ರತಿ ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘಕ್ಕೆ ಬೆಂಬಲ ನೀಡಿ 5 ಲಕ್ಷ ಮಹಿಳೆಯರಿಗೆ ಉದ್ಯೋಗ, ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ ಅಡಿ 5 ಲಕ್ಷ ಯುವಕರಿಗೆ ಉದ್ಯೋಗ ನೀಡುವ ಕೆಲಸ ಆಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಾಗಲಗುಂಟೆ ಎಂಇಐ ಆಟದ ಮೈದಾನದಲ್ಲಿ ಸ್ವದೇಶಿ ಜಾಗರಣ ಮಂಚ್-ಕರ್ನಾಟಕ ಆಯೋಜಿಸಿರುವ 5 ದಿನಗಳ ಸ್ವದೇಶಿ ಮೇಳ ಉದ್ಘಾಟಿಸಿ ಮಾತನಾಡಿದರು.

ಲಾಂಡ್ರಿ, ಸಲೂನ್, ಕಾರ್ಪೆಂಟರ್ ಸೇರಿ ದುಡಿಮೆದಾರರಿಗೆ ಕಾಯಕ ಯೋಜನೆ ಜಾರಿಗೆ ತರಲಾಗಿದೆ. ಹೀಗಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿಗೆ ತಂದಿರುವ ಆತ್ಮನಿರ್ಭರ ಯೋಜನೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

‘ಭಾರತೀಯ ಸಂಸ್ಕೃತಿ ಗಟ್ಟಿಯಾಗಿ ಪ್ರತಿಪಾದಿಸುವ ಸ್ವದೇಶಿ ಜಾಗರಣ ಮಂಚ್ ಇದಾಗಿದೆ. 130 ಕೋಟಿ ಜನಸಂಖ್ಯೆಯುಳ್ಳ ಭಾರತೀಯ ಮಾರುಕಟ್ಟೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರ ಜತೆಗೆ ಭಾರತ, ಈಗ ವಿಶ್ವದಲ್ಲೇ ಹೆಚ್ಚು ರಫ್ತು ಮಾಡುವ ದೇಶ ಎಂಬ ಖ್ಯಾತಿಗೆ ಪಾತ್ರವಾಗಿದೆ’ ಎಂದರು.

ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ನೀಡುವ ‘ಧನಸಹಾಯ’ಕ್ಕೆ ಸಂಬಂಧಿಸಿದ ನಿರ್ಬಂಧಗಳನ್ನು ಕೈಬಿಟ್ಟಿರುವುದಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್ ಅವರನ್ನು ಕರ್ನಾಟಕ ರಾಜ್ಯ ಸಾಹಿತಿ ಕಲಾವಿದರ ಸಂಘ ಸಂಸ್ಥೆಗಳ ಒಕ್ಕೂಟ ನಗರದಲ್ಲಿ ಬುಧವಾರ ಗೌರವಿಸಿತು. ಗಾಯಕ ವೈ.ಕೆ. ಮುದ್ದುಕೃಷ್ಣ, ಒಕ್ಕೂಟದ ಅಧ್ಯಕ್ಷ ಕೆ.ಎಚ್. ಕುಮಾರ್, ರಂಗ ತಜ್ಞ ಎ.ಆರ್. ಗೋವಿಂದಸ್ವಾಮಿ, ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ, ಡಿ. ಶ್ರೀನಾಥ್, ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಡಬ್ಲ್ಯು.ಎಚ್. ಶಾಂತಕುಮಾರ್, ರಾಮಚಂದ್ರ, ದೇವರಾಜ್, ಸವಿತಾ ಗಣೇಶ್ ಪ್ರಸಾದ್, ನಾಗರಾಜ್ ವಿ., ಶೆಕೆರೆ ಲೋಕೇಶ್, ಕುವೆಂಪು ಪ್ರಕಾಶ್, ತಮಟೆ ನಾಗರಾಜ್, ಉದಯಭಾನು ನರಸಿಂಹ ಮೊದಲಾದವರು ಇದ್ದಾರೆ.

ಪ್ರಶಸ್ತಿಯೊಂದಿಗೆ ಬಾಲಕಿಯರ ತಂಡ: ಮುಂದಿನ ಸಾಲು: ಸುಕೃತಿ ಸಾಗರ್, ದಿಶಾ ಕೆ, ಧನ್ಯತಾ, ಜನಾರ್ಧನ್, ಚಿನ್ಮಯಿ ಎಂ, ಸುಶೃತಾ ಎಂ.ಎಸ್. ಹಿಂದಿನ ಸಾಲು: ಸುದೀಪ್ತಿ ಸಾಗರ್, ಜಾಹ್ನವಿ ವೈ, ಉನ್ನತಿ ಹೊಸಮನಿ, ವಂಶಿಕಾ, ಪ್ರಗತಿ, ಮಾನ್ಯಾ ವಿ, ಲಿಖಿತಾ ವಿ.ಜಿ, ವೇದಿತಾ ಕೆ. ಮಧ್ಯದಲ್ಲಿ ನಿಂತವರು: ಕೋಚ್‌ಗಳಾದ ರಂಗನಾಥ್, ವಿ.ಎನ್. ಮತ್ತು ಸಂಗೀತಾ.

ಕೊಕ್ಕೊ: ಚಿತ್ರಕೂಟ ಶಾಲಾ ತಂಡಗಳಿಗೆ ಪ್ರಶಸ್ತಿ

ಬೆಂಗಳೂರು: ಇಲ್ಲಿಯ ಚಿತ್ರಕೂಟ ಶಾಲೆಯ ಬಾಲಕ ಮತ್ತು ಬಾಲಕಿಯರ ತಂಡಗಳು ಪಂಜಾಬ್‌ನಲ್ಲಿ ಇತ್ತೀಚೆಗೆ ನಡೆದ ರಾಷ್ಟ್ರಮಟ್ಟದ ಕೊಕ್ಕೊ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿವೆ.

ಫೈನಲ್ ಪಂದ್ಯದಲ್ಲಿ ಬಾಲಕಿಯರ ತಂಡವು ಇನಿಂಗ್ಸ್, 3 ಪಾಯಿಂಟ್ಸ್‌ನಿಂದ ಕೇರಳದ ವ್ಯಾಸ ಸ್ಕೂಲ್ ಎದುರು ಗೆದ್ದಿತು. ಬಾಲಕರ ತಂಡವು 2 ಪಾಯಿಂಟ್ಸ್‌ನಿಂದ ಪಂಜಾಬ್‌ನ ದೇವರಾಜ್ ದೇವ್ ಸ್ಕೂಲ್ ವಿರುದ್ಧ ಜಯಿಸಿತು.

ಸಂಕ್ಷಿಪ್ತ ಸುದ್ದಿ

ಮಹಿಳಾ ಅಧಿಕಾರಿ ಮೇಲೆ ಹಲ್ಲೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರೊಬ್ಬರು ತಪಾಸಣೆ ವೇಳೆ ಸಿಐಎಸ್‌ಎಫ್ ಮಹಿಳಾ ಇನ್‌ಸ್ಪೆಕ್ಟರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾರೆ. ಕರ್ತವ್ಯ ನಿರತ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಪ್ರಯಾಣಿಕನ ವಿರುದ್ಧ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನಿಂದ ಕೊಚ್ಚಿಗೆ ಹೊರಟಿದ್ದ ಜಾಕಿ ಅಮ್ಮನೂರ್ ಖಾಸಿಮ್ ಎಂಬ ಪ್ರಯಾಣಿಕ ಗ್ರೀನ್ ಕಾರ್ಡ್ ಕಳೆದ ಬಗ್ಗೆ ಸೆಕ್ಯೂರಿಟಿ ಚೆಕಿಂಗ್ ವಿಭಾಗದಲ್ಲಿದ್ದ ಸಿಐಎಸ್‌ಎಫ್ ಮಹಿಳಾ ಇನ್ಸ್‌ಪೆಕ್ಟರ್ ಧನೇಶ್ವರಿ ಕುಟ್ಟಾಮ್ ಅವರಿಗೆ ತಿಳಿಸಿದ್ದಾರೆ.

ಲಾಸ್ಟ್ ಆಂಡ್ ಫೌಂಡ್ ವಿಭಾಗದಲ್ಲಿ ದೂರು ನೀಡುವಂತೆ ಹೇಳಿದ ಅಧಿಕಾರಿ ಸಂಬಂಧಿಸಿದ ಫಾರಂ ನೀಡಿದ್ದರು. ಸಂಬಂಧಿಸಿದ ದಾಖಲೆ ಕೇಳಿದ್ದಕ್ಕೆ ಪ್ರಯಾಣಿಕ ದಾಖಲೆಗಳನ್ನು ಮಹಿಳಾ ಅಧಿಕಾರಿಯ ಮೇಲೆ ಎಸೆದು ಕಿರಿಚಾಡಿದರು. ನಂತರ ಹಲ್ಲೆ ನಡೆಸಿದರು ಎಂದು ದೂರಿನಲ್ಲಿ ಹೇಳಲಾಗಿದೆ. ಆರೋಪಿಯ ವಿರುದ್ಧ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಕ್ತ ವಿವಿ ಪ್ರವೇಶಾತಿ: ಗಡುವು ವಿಸ್ತರಣೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ 2022–23ನೇ ಸಾಲಿನ ಜುಲೈ ಆವೃತ್ತಿಯಲ್ಲಿ ದ್ವಿತೀಯ/ತೃತೀಯ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ (ಜನರಲ್), ಬಿಎಸ್ಸಿ (ಹೋಮ್ ಸೈನ್ಸ್), ಬಿಎಸ್ಸಿ (ಐಟಿ) ಮತ್ತು ಅಂತಿಮ ಎಂಎ, ಎಂಕಾಂ, ಎಂಬಿಎ ಮತ್ತು ಎಂ.ಎಸ್ಸಿ. ಪದವಿಗಳಿಗೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ದಂಡ ಶುಲ್ಕವಿಲ್ಲದೇ ನವೀಕರಿಸಿಕೊಳ್ಳಲು ಜ.15ರವರೆಗೆ ಗಡುವು ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿಗೆ https://ksoumysuru.ac.in/ ವೀಕ್ಷಿಸಬಹುದು.ಅಥವಾ ಮೊ.ಸಂಖ್ಯೆ: 9141181 235 ಎಂದು ಪ್ರಕಟಣೆ ತಿಳಿಸಿದೆ.

‘ಹಸಿರು ಜಲಜನಕ ಕಾರ್ಯಕ್ರಮ’ಕ್ಕೆ ಕೇಂದ್ರ ಒಪ್ಪಿಗೆ

ನವದೆಹಲಿ: ಮಹತ್ವಾಕಾಂಕ್ಷೆಯ ರಾಷ್ಟ್ರೀಯ ಹಸಿರು ಜಲಜನಕ ಕಾರ್ಯಕ್ರಮಕ್ಕೆ (ನ್ಯಾಷನಲ್ ಗ್ರೀನ್ ಹೈಡ್ರೋಜನ್ ಮಿಷನ್) ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

₹ 19,744 ಕೋಟಿ ವೆಚ್ಚದ ಈ ಕಾರ್ಯಕ್ರಮವು, ಭಾರತವನ್ನು ಹಸಿರು ಜಲಜನಕ ಹಾಗೂ ಅದರ ಉತ್ಪನ್ನಗಳನ್ನು ಉತ್ಪಾದಿಸುವ, ಬಳಕೆ ಮಾಡುವ ಹಾಗೂ ರಫ್ತುದಾರ ದೇಶ ವನ್ನಾಗಿ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಿದೆ.

‘ಶಿಕ್ಷೆಯಾಗುವವರೆಗೆ ಆರೋಪಿ ಹೆಸರು ಬಹಿರಂಗಬೇಡ’

ಜೈಪುರ (ಪಿಟಿಐ): ಲಂಚ ಪಡೆದ ಆರೋಪ ಎದುರಿಸುತ್ತಿರುವವರಿಗೆ ಹಾಗೂ ಶಂಕಿತರಿಗೆ ಕೋರ್ಟ್ ಶಿಕ್ಷೆ ವಿಧಿಸುವವರೆಗೆ, ಅವರ ಹೆಸರು ಹಾಗೂ ಭಾವಚಿತ್ರಗಳನ್ನು ಬಹಿರಂಗಪಡಿಸಬಾರದು ಎಂದು ರಾಜಸ್ಥಾನದ ಭ್ರಷ್ಟಾಚಾರ ನಿಗ್ರಹ ಸಂಸ್ಥೆ (ಎಸಿಬಿ) ತನ್ನ ಅಧಿಕಾರಿಗಳಿಗೆ ಬುಧವಾರ ಸೂಚಿಸಿದೆ.

ಎಡಿಜಿ ಹೇಮಂತ ಪ್ರಿಯದರ್ಶಿ ಅವರು ಹೆಚ್ಚುವರಿಯಾಗಿ ಎಸಿಬಿ ಮುಖ್ಯಸ್ಥರಾಗಿ ಅಧಿಕಾರವಹಿಸಿಕೊಂಡ ಕೂಡಲೇ ಈ ಸಂಬಂಧ ಆದೇಶ ಹೊರಡಿಸಿದ್ದಾರೆ.

‘ಉಗ್ರ’ರ ಪಟ್ಟಿಗೆ ಏಜಾಜ್ ಅಹ್ಮದ್ ಹೆಸರು ಸೇರ್ಪಡೆ

ನವದೆಹಲಿ (ಪಿಟಿಐ): ಅಲ್‌ಖೈದಾ ಸೇರಿದಂತೆ ಜಾಗತಿಕ ಭಯೋತ್ಪಾದಕ ಗುಂಪುಗಳೊಂದಿಗೆ ಸಂಪರ್ಕ ಹೊಂದಿರುವ, ಕಾಶ್ಮೀರ ಮೂಲದ ಏಜಾಜ್ ಅಹ್ಮದ್ ಅಹಂಗರ್ ಅಲಿಯಾಸ್ ಅಬು ಉಸ್ಮಾನ್ ಅಲ್–ಕಾಶ್ಮೀರಿ ಎಂಬಾತನನ್ನು ‘ಉಗ್ರ’ರ ಪಟ್ಟಿಗೆ ಸೇರಿಸಿದ್ದಾಗಿ ಕೇಂದ್ರ ಸರ್ಕಾರ ಬುಧವಾರ ಘೋಷಿಸಿದೆ.

ಕೇಂದ್ರ ಗೃಹ ಸಚಿವಾಲಯವು ಯುಎಪಿಎ ಅಡಿ ಈ ಕ್ರಮ ಕೈಗೊಂಡಿದೆ. ವ್ಯಕ್ತಿಯೊಬ್ಬನನ್ನು ‘ನಿರ್ದಿಷ್ಟ ಉಗ್ರ’ರ ಪಟ್ಟಿಗೆ ಸೇರಿಸಿದರೆ, ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಸೇರಿದಂತೆ ವಿವಿಧ ಸಂಸ್ಥೆಗಳು ಇಂಥ ವ್ಯಕ್ತಿ ಹೊಂದಿರುವ ಶಸ್ತ್ರಾಸ್ತ್ರಗಳ ಬಳಕೆ ಮೇಲೆ ನಿರ್ಬಂಧ ಹೇರಬಹುದು, ಅವರಿಗೆ ಸೇರಿದ ಹಣ ಹಾಗೂ ಸ್ವತ್ತುಗಳನ್ನು ಜಪ್ತಿ ಮಾಡಬಹುದಾಗಿದೆ ಎಂದು ಮೂಲಗಳು ಹೇಳಿವೆ.

ಭಾರತದಲ್ಲಿ ಗಾರ್ಸೆಟ್ಟಿ ಅಮೆರಿಕ ರಾಯಭಾರಿ

ನವದೆಹಲಿ: ಭಾರತದ ನೂತನ ರಾಯಭಾರಿಯಾಗಿ ಲಾಸ್ ಏಂಜಲೀಸ್‌ನ ಮಾಜಿ ಮೇಯರ್ ಎರಿಕ್ ಗಾರ್ಸೆಟ್ಟಿ ಅವರನ್ನು ಜೋ ಬೈಡನ್ ಸರ್ಕಾರ ಮತ್ತೆ ನೇಮಕ ಮಾಡಿದೆ.

ಗಾರ್ಸೆಟ್ಟಿ ಅವರನ್ನು ಭಾರತದ ರಾಯಭಾರಿಯಾಗಿ ನೇಮಕ ಮಾಡಲು ಬೈಡನ್ ಸರ್ಕಾರ 2021ರ ಜುಲೈ 9ರಂದು ತೀರ್ಮಾನಿಸಿತ್ತು. ಆದರೆ, ಇದಕ್ಕೆ ಸೆನೆಟ್‌ನ ಅನುಮೋದನೆ ದೊರೆತಿರಲಿಲ್ಲ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ; ಇಂದು ಕೇಂದ್ರ ಸಾರಿಗೆ ಸಚಿವರಿಂದ ಪರಿಶೀಲನೆ

ಪ್ರವೇಶ–ನಿರ್ಗಮನ ದ್ವಾರದ್ದೇ ಚಿಂತೆ

• ಆರ್. ಜಿತೇಂದ್ರ

ರಾಮನಗರ: ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಕಾಮಗಾರಿ ಮುಕ್ತಾಯ ಹಂತ ತಲುಪಿದ್ದರೂ, ಪ್ರಮುಖ ನಗರಗಳಿಗೆ ಪ್ರವೇಶ–ನಿರ್ಗಮನ ದ್ವಾರಗಳು ಇನ್ನೂ ಅಂತಿಮವಾಗಿಲ್ಲ. ಇದರಿಂದಾಗಿ ಹೆದ್ದಾರಿಯಲ್ಲಿ ಪ್ರಯಾಣಿಕರ ಪರದಾಟ ತಪ್ಪಿಲ್ಲ.

ಹತ್ತು ಪಥಗಳ ಹೆದ್ದಾರಿಯಲ್ಲಿ ಆರು ಪಥಗಳು ಎಕ್ಸ್‌ಪ್ರೆಸ್ ವೇಗೆ ಮೀಸಲಿದ್ದು, ಇನ್ನು ನಾಲ್ಕು ಪಥದಲ್ಲಿ ಸರ್ವೀಸ್ ರಸ್ತೆ ನಿರ್ಮಾಣ ಆಗಿದೆ. ಬೆಂಗಳೂರಿನ ನೈಸ್ ರಸ್ತೆ ಜಂಕ್ಷನ್‌ನಿಂದ ಆರಂಭಗೊಂಡು ಮೈಸೂರಿನ ಮಣಿಪಾಲ್ ಆಸ್ಪತ್ರೆ ವೃತ್ತದವರೆಗೆ 118 ಕಿ.ಮೀ ಉದ್ದದ ಹೆದ್ದಾರಿಯ ಮಧ್ಯೆ ತಲಾ ಒಂದು ಪ್ರವೇಶ ಮತ್ತು ನಿರ್ಗಮನ ದ್ವಾರ ನೀಡಿ ಎಕ್ಸ್‌ಪ್ರೆಸ್ ವೇ ಅನ್ನು ವಿನ್ಯಾಸಗೊಳಿಸಲಾಗಿತ್ತು. ಆದರೆ ಈ ಮಾರ್ಗ ಮಧ್ಯದಲ್ಲಿನ ಆರು ನಗರಗಳ ಪ್ರಯಾಣಿಕರಿಗೂ ಓಡಾಟಕ್ಕೆ ಅವಕಾಶ ನೀಡಬೇಕು ಎಂಬ ಒತ್ತಡ ಕೇಳಿಬಂದು ಹೆದ್ದಾರಿ ಪ್ರಾಧಿಕಾರ ಅದಕ್ಕೆ ಒಪ್ಪಿಗೆ ಸೂಚಿಸಿದ್ದರೂ ಹಳೇ ವಿನ್ಯಾಸದಲ್ಲೇ ಕಾಮಗಾರಿ ಮುಗಿಯುತ್ತಿದೆ.

ಬೆಂಗಳೂರು–ಮೈಸೂರು ಮಾರ್ಗ ಮಧ್ಯೆ ಬರುವ ಬಿಡದಿ, ರಾಮನಗರ, ಚನ್ನಪಟ್ಟಣ, ಮದ್ದೂರು, ಮಂಡ್ಯ ಹಾಗೂ ಶ್ರೀರಂಗಪಟ್ಟಣ ನಗರಗಳಿಗೆ ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶ ಮತ್ತು ನಿರ್ಗಮನ ದ್ವಾರಗಳ ನಿರ್ಮಾಣಕ್ಕೆ ಹೆದ್ದಾರಿ ಪ್ರಾಧಿಕಾರವು ಪ್ರತ್ಯೇಕ ಪ್ರಸ್ತಾವ ಸಲ್ಲಿಸಿದ್ದು, ಇದಕ್ಕೆ ಇನ್ನೂ ಕೇಂದ್ರ ಸರ್ಕಾರ ಹಸಿರು ನಿಶಾನೆ ತೋರಿಲ್ಲ.

₹1201 ಕೋಟಿ ಮೊತ್ತದ ಯೋಜನೆ: ಆರು ನಗರಗಳಿಗೆ ಪ್ರವೇಶ–ನಿರ್ಗಮನದ ಸಂಬಂಧ ಪ್ರಾಧಿಕಾರವು ಒಟ್ಟು ₹1201 ಕೋಟಿ ಮೊತ್ತದ ಯೋಜನೆಯ ಪ್ರಸ್ತಾವ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ

ಅಪಘಾತ: 22 ಮಂದಿ ಸಾವು

ಕಳೆದ ಮೂರು ತಿಂಗಳ ಅವಧಿಯಲ್ಲಿ ಕುಂಬಳಗೋಡಿನಿಂದ ಮದ್ದೂರು ತಾಲ್ಲೂಕಿನ ನಿಡಘಟ್ಟವರೆಗೆ ಎಕ್ಸ್‌ಪ್ರೆಸ್ ವೇನಲ್ಲಿ ಒಟ್ಟು 65 ಅಪಘಾತ ನಡೆದಿದ್ದು, 22 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. ಹೆದ್ದಾರಿಯಲ್ಲಿ ವೇಗ ಮಿತಿ ಇಲ್ಲದ ಕಾರಣ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ.
ಇನ್ನೂ ಎಲ್ಲಿಯೂ ಪ್ರಯಾಣಿಕರ ಸುರಕ್ಷತೆಗೆ ಬೇಕಾದ ಸೌಕರ್ಯಗಳನ್ನು ಅಳವಡಿಸುವ ಕಾರ್ಯ ಆಗಿಲ್ಲ. ಬೈಪಾಸ್‌ಗಳಲ್ಲಿ ಹೈವೆ ಪೆಟ್ರೋಲಿಂಗ್, ಸೈನ್ ಬೋರ್ಡ್‌ಗಳ ಅಳವಡಿಕೆ, ಅಪಘಾತ ವಲಯಗಳ ಗುರುತಿಸುವಿಕೆ ಕಾರ್ಯಗಳು ನಡೆಯಬೇಕಿದೆ.

ಈ ನಗರಗಳಿಗೆ ಕೆಲವೇ ಕಿ.ಮೀ. ದೂರದಲ್ಲಿ ಎಕ್ಸ್‌ಪ್ರೆಸ್ ವೇನಲ್ಲಿ ಪ್ರವೇಶ ಮತ್ತು ನಿರ್ಗಮನವನ್ನು ವಿನ್ಯಾಸಗೊಳಿಸಲಾಗುತ್ತಿದೆ. ಕುಂಬಳಗೋಡು ಟೋಲ್ ಪ್ಲಾಜಾ, ಬಿಡದಿ, ರಾಮನಗರದ ಕೆಂಪೇಗೌಡನದೊಡ್ಡಿ, ಚನ್ನಪಟ್ಟಣದ ತಿಟ್ಟಮಾರನಹಳ್ಳಿ ಇಲ್ಲವೇ ಮತ್ತಿಕೆರೆ–ಶೆಟ್ಟಿಹಳ್ಳಿ, ಮದ್ದೂರು ತಾಲ್ಲೂಕಿನ ನಿಡಘಟ್ಟ, ಮಂಡ್ಯ ಬೈಪಾಸ್ (ಹೋಟೆಲ್ ಅಮರಾವತಿ ಬಳಿ), ಶ್ರೀರಂಗಪಟ್ಟಣ ಟೋಲ್ (ಗಣಂಗೂರು) ಇಲ್ಲವೇ ಕರಿಘಟ್ಟ ರಸ್ತೆ ಬಳಿ ವಾಹನಗಳು ಎಕ್ಸ್‌ಪ್ರೆಸ್ ವೇ ಏರಲು ಇಲ್ಲವೇ ಇಳಿಯಲು ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ. ಇಲ್ಲಿಯೇ ಟೋಲ್ ಸಂಗ್ರಹ ವ್ಯವಸ್ಥೆಯೂ ಇರಲಿದೆ. ಇದನ್ನು ಹೊರತುಪಡಿಸಿ ಸರ್ವೀಸ್ ರಸ್ತೆಗಳಲ್ಲಿ ವಾಹನಗಳು ಎಂದಿನಂತೆ ಸಂಚರಿಸಲು ಅವಕಾಶ ಇದೆ.

> **ಮೈಸೂರು–ಬೆಂಗಳೂರು ನಡುವಿನ 6 ನಗರಗಳಿಗೆ ಪ್ರವೇಶ ಮತ್ತು ನಿರ್ಗಮನ ಟೋಲ್‌ಗಳು ಇರಲಿವೆ. ಸದ್ಯದಲ್ಲಿಯೇ ಇವುಗಳ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗುವುದು**
> **ಶ್ರೀಧರ್,** ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಮಳೆಗೆ ಬಣ್ಣ ಬಯಲು

ಈ ಹೆದ್ದಾರಿ ಕಾಮಗಾರಿ ಬಗ್ಗೆ ಈಗಾಗಲೇ ಸಾಕಷ್ಟು ಅಪಸ್ವರ ಕೇಳಿಬಂದಿವೆ. ಸಂಸದರಾದ ಡಿ.ಕೆ. ಸುರೇಶ್, ಸುಮಲತಾ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದಿಯಾಗಿ ಸಾಕಷ್ಟು ಮಂದಿ ಇದರ ಗುಣಮಟ್ಟ ಪ್ರಶ್ನಿಸಿದ್ದಾರೆ.

ಕಳೆದ ವರ್ಷ ಆಗಸ್ಟ್‌ನಲ್ಲಿ ಸುರಿದ ಮಳೆಗೆ ಬೆಂಗಳೂರು–ಮೈಸೂರು ಹೆದ್ದಾರಿಯು ಕೆರೆಯಂತೆ ಆಗಿದ್ದು, ಭಾರಿ ಪ್ರಮಾಣದಲ್ಲಿ ನೀರು ನಿಂತಿತ್ತು. ನಂತರವೂ ದುರಸ್ತಿ ಕಾಮಗಾರಿಗಳು ಸಮರ್ಪಕವಾಗಿ ನಡೆದಿಲ್ಲ. ಸರ್ವೀಸ್ ರಸ್ತೆ ಮತ್ತು ಮಳೆ ನೀರು ಚರಂಡಿಗಳನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ ಎಂಬ ಆರೋಪಗಳಿವೆ. ಕೇಂದ್ರ ಸಚಿವರು ಈ ಎಲ್ಲವನ್ನೂ ಪರಿಶೀಲಿಸಿ ಸೂಕ್ತ ಕ್ರಮಕ್ಕೆ ಸೂಚಿಸಬೇಕು ಎನ್ನುವುದು ಸಾರ್ವಜನಿಕರ ಒತ್ತಾಯವಾಗಿದೆ.

ಸಚಿವರಿಂದ ಪರಿಶೀಲನೆ ಇಂದು

ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಇದೇ 5ರಂದು ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಹಾಗೂ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಕಾಮಗಾರಿ ಪರಿಶೀಲನೆ ನಡೆಸಲಿದ್ದಾರೆ.

ಬೆಳಿಗ್ಗೆ 9.30ಕ್ಕೆ ಬೆಂಗಳೂರಿನ ಎಚ್‌ಎಎಲ್ ನಿಲ್ದಾಣಕ್ಕೆ ಬರಲಿರುವ ಸಚಿವ ಗಡ್ಕರಿ, ಹೆಲಿಕಾಪ್ಟರ್ ಮೂಲಕ ಮೊದಲಿಗೆ ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಅನ್ನು ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. 11.15ರಿಂದ ಮಧ್ಯಾಹ್ನ 12.15ರವರೆಗೆ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನ ವೈಮಾನಿಕ ಸಮೀಕ್ಷೆ ಕೈಗೊಳ್ಳಲಿದ್ದಾರೆ.

ಮಧ್ಯಾಹ್ನ 12.15ಕ್ಕೆ ರಾಮನಗರ ತಾಲ್ಲೂಕಿನ ಜಿಗೇನಹಳ್ಳಿ ಬಳಿ ಹೆದ್ದಾರಿಯಲ್ಲೇ ಸಚಿವರ ಹೆಲಿಕಾಪ್ಟರ್ ಇಳಿಯಲಿದೆ. ಬಳಿಕ ಅವರು ಮಾಧ್ಯಮದ ಜೊತೆಗೂಡಿ ಹೆದ್ದಾರಿಯ ಗುಣಮಟ್ಟ ಮತ್ತು ಕಾಮಗಾರಿಗಳನ್ನು ವೀಕ್ಷಿಸಲಿದ್ದಾರೆ. ಗಡ್ಕರಿ ಅವರೇ ಹೆದ್ದಾರಿಯಲ್ಲಿ ಕಾರ್ ಚಲಾಯಿಸುವ ನಿರೀಕ್ಷೆಯೂ ಇದೆ. 12.55ಕ್ಕೆ ಜಿಗೇನಹಳ್ಳಿಯಿಂದ ಹೆಲಿಕಾಪ್ಟರ್ ಮೂಲಕ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ತೆರಳಲಿದ್ದಾರೆ.

ಸಚಿವರ ಭೇಟಿ ಹಿನ್ನೆಲೆಯಲ್ಲಿ ಗುರುವಾರ ಬೆಳಿಗ್ಗೆ 11ರಿಂದ ಮಧ್ಯಾಹ್ನ 1.30ರವರೆಗೆ ಎಕ್ಸ್‌ಪ್ರೆಸ್ ವೇನ ರಾಮನಗರ–ಚನ್ನಪಟ್ಟಣ ನಡುವಿನ 22 ಕಿ.ಮೀ ಉದ್ದದ ಬೈಪಾಸ್ ರಸ್ತೆ ಸಾರ್ವಜನಿಕ ವಾಹನಗಳ ಓಡಾಟಕ್ಕೆ ಬಂದ್ ಆಗಿರಲಿದೆ.

ಒಮ್ಮೆ ಕೇಂದ್ರ ಸಾರಿಗೆ ಸಚಿವಾಲಯ ಅನುಮತಿ ನೀಡಿದ ಬಳಿಕ ಮತ್ತೆ ಅಗತ್ಯವಾದ ಭೂಸ್ವಾಧೀನ ಹಾಗೂ ಟೆಂಡರ್ ಪ್ರಕ್ರಿಯೆಗಳು ಆರಂಭ ಆಗಲಿವೆ. ಆದಾಗ್ಯೂ ಕಾಮಗಾರಿ ಮುಗಿದು ಪ್ರಯಾಣಿಕರಿಗೆ ಅನುಕೂಲ ಆಗಲು ಇನ್ನೂ ವರ್ಷಗಳು ಕಾಯಬೇಕಿದೆ.

ಐವರಿಗೆ ‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತು ನೀಡುವ ‘ಚಿತ್ರಕಲಾ ಸಮ್ಮಾನ್’ ಪ್ರಶಸ್ತಿಗೆ ಪ್ರೊ.ಕೆ. ಲಕ್ಷ್ಮಗೌಡ್ ಸೇರಿ ಐವರು ಆಯ್ಕೆಯಾಗಿದ್ದಾರೆ.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ‘₹ 1 ಲಕ್ಷ ನಗದು ಬಹುಮಾನ ಹಾಗೂ ಫಲಕವನ್ನು ಒಳಗೊಂಡಿರುವ ‘ಪ್ರೊ.ಎಂ.ಎಸ್. ನಂಜುಂಡರಾವ್ ಪ್ರಶಸ್ತಿ’ಗೆ ತೆಲಂಗಾಣದ ಪ್ರೊ.ಕೆ. ಲಕ್ಷ್ಮಗೌಡ್ ಅವರನ್ನು ಆಯ್ಕೆ ಮಾಡಲಾಗಿದೆ. ‘ಡಿ.ದೇವರಾಜ ಅರಸು ಪ್ರಶಸ್ತಿ’ಗೆ ಶಾಂತಾಮಣಿ ಮುದ್ದಯ್ಯ, ‘ವೈ.ಸುಬ್ರಹ್ಮಣ್ಯರಾಜು ಪ್ರಶಸ್ತಿ’ಗೆ ಕೆ. ವಿಠ್ಠಲ ಭಂಡಾರಿ, ‘ಎಂ.ಆರ್ಯಮೂರ್ತಿ ಪ್ರಶಸ್ತಿ’ಗೆ ಪ್ರೊ. ರಜನಿ ಪ್ರಸನ್ನ ಹಾಗೂ ‘ಎಚ್.ಕೆ.ಕೇಜ್ರಿವಾಲ್ ಪ್ರಶಸ್ತಿ’ಗೆ ಮಾರ್ಥ ಯಾಕಿಮೋವಿಝ್ ಭಾಜನರಾಗಿದ್ದಾರೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ಮತ್ತು ಫಲಕಗಳನ್ನು ಒಳಗೊಂಡಿವೆ’ ಎಂದು ತಿಳಿಸಿದರು.

‘ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಇದೇ 7ರಂದು ಸಂಜೆ 4.30ಕ್ಕೆ ಕುಮಾರಕೃಪಾ ರಸ್ತೆಯಲ್ಲಿರುವ ಪರಿಷತ್ತಿನ ಆವರಣದಲ್ಲಿ ನಡೆಯಲಿದೆ. ಬಿಜೆಪಿ ಮುಖಂಡ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್ ಅಧ್ಯಕ್ಷ ಎಸ್.ಎಂ. ಕೃಷ್ಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಯಕರ್ ಎಸ್.ಎಂ. ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ’ ಎಂದು ಹೇಳಿದರು.

ಕರಕುಶಲ ಗ್ರಾಮ: ಲಹರ್ ಸಿಂಗ್ ಮನವಿ

ಬೆಂಗಳೂರು: ‘ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ಕರಕುಶಲ ಗ್ರಾಮವನ್ನು ಸ್ಥಾಪಿಸಬೇಕೆಂಬ ಬೇಡಿಕೆಗೆ ಸಹಕಾರ ನೀಡಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್ ಅವರಿಗೆ ರಾಜ್ಯಸಭೆ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಮನವಿ ಸಲ್ಲಿಸಿದ್ದಾರೆ.

ಚನ್ನಪಟ್ಟಣದ ಆಟಿಕೆಗಳ ಉದ್ಯಮವನ್ನು ರಕ್ಷಿಸುವ ಮತ್ತು ಉತ್ತೇಜಿಸುವ ಕರಕುಶಲ ಗ್ರಾಮ ಸ್ಥಾಪನೆಗೆ ಬೆಂಬಲ ಮತ್ತು ಸಹಕಾರ ನೀಡಬೇಕು. ಅಲ್ಲದೆ, ಎಕ್ಸ್‌ಪ್ರೆಸ್ ವೇ ಕಾರ್ಯಾರಂಭಗೊಂಡ ನಂತರ ವ್ಯತಿರಿಕ್ತ ಪರಿಣಾಮ ಎದುರಿಸುತ್ತಿರುವ ಮದ್ದೂರು ವಡೆ, ಬಿಡದಿ ತಟ್ಟೆಇಡ್ಲಿ ಇತ್ಯಾದಿ ಸ್ಥಳೀಯ ಖಾದ್ಯ ವೈವಿಧ್ಯಗಳನ್ನು ಕೂಡ ಇಲ್ಲಿ ಗ್ರಾಹಕರಿಗೆ ಒದಗಿಸಬಹುದು’ ಎಂದೂ ಅವರು ಪತ್ರದಲ್ಲಿ ತಿಳಿಸಿದ್ದಾರೆ. ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ಬೆಂಗಳೂರಿಗೆ ಭೇಟಿ ನೀಡಲಿದ್ದು, ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಪರಿಶೀಲನೆ ನಡೆಸಲಿದ್ದಾರೆ.

ಕರ್ನಾಟಕ ಚಿತ್ರಕಲಾ ಪರಿಷತ್ತಿನಿಂದ ಇದೇ ಭಾನುವಾರ ಆಯೋಜನೆ

ಚಿತ್ರಸಂತೆ: ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುವ ಹಾಗೂ ಅವರು ರಚಿಸಿದ ಕಲಾಕೃತಿಗಳ ಮಾರಾಟಕ್ಕೆ ಅವಕಾಶ ಒದಗಿಸುವ ‘ಚಿತ್ರಸಂತೆ’ಯನ್ನು ಕರ್ನಾಟಕ ಚಿತ್ರಕಲಾ ಪರಿಷತ್ತು ಇದೇ ಭಾನುವಾರ (ಜ.8) ಕುಮಾರಕೃಪಾ ರಸ್ತೆಯಲ್ಲಿ ಹಮ್ಮಿಕೊಂಡಿದೆ.

ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ‘20ನೇ ಚಿತ್ರಸಂತೆಯನ್ನು ಬೆಳಿಗ್ಗೆ 10.30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ.

ಕಲಾ ಪ್ರದರ್ಶನಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಚಾಲನೆ ನೀಡಲಿದ್ದಾರೆ. ಪರಿಷತ್ತಿನ ಕಲಾ ಗ್ಯಾಲರಿಗಳಲ್ಲಿ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳು, ತೊಗಲು ಬೊಂಬೆ ಕಲಾಕೃತಿಗಳು ಹಾಗೂ ಪ್ರಶಸ್ತಿಗೆ ಭಾಜನರಾದ ಕಲಾವಿದರ ಕಲಾಕೃತಿಗಳು ಪ್ರದರ್ಶನ ಕಾಣಲಿವೆ. ಚಿತ್ರಕಲಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಚಿತ್ರಸಂತೆ ನಡೆಯುವ ಸ್ಥಳದಲ್ಲಿ ದಿನವಿಡೀ ಕಲಾ ಪ್ರದರ್ಶನ ನೀಡಲಿದ್ದಾರೆ’ ಎಂದು ತಿಳಿಸಿದರು.

‘ದೇಶದ ವಿವಿಧ ಭಾಗಗಳಿಂದ 1,500 ಕಲಾವಿದರು ಚಿತ್ರಸಂತೆಯಲ್ಲಿ ಭಾಗವಹಿಸಿ, ಕಲಾಕೃತಿಗಳನ್ನು ಪ್ರದರ್ಶಿಸಲಿದ್ದಾರೆ. ಕರ್ನಾಟಕದ ಜತೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರ, ಪಂಜಾಬ್, ಪಶ್ಚಿಮ ಬಂಗಾಳ, ಒಡಿಶಾ ಸೇರಿ ವಿವಿಧ ರಾಜ್ಯಗಳ ಕಲಾವಿದರು ಪಾಲ್ಗೊಳ್ಳುತ್ತಿದ್ದಾರೆ’ ಎಂದು ಹೇಳಿದರು.

ನೇರ ಖರೀದಿಗೆ ಅವಕಾಶ: ‘ಹಿರಿಯ ಕಲಾವಿದರು ಹಾಗೂ ಅಂಗವಿಕಲರಿಗೆ ಪರಿಷತ್ತಿನ ಆವರಣದಲ್ಲಿಯೇ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಈ ಚಿತ್ರಸಂತೆಯಲ್ಲಿ ₹ 100 ರಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಕಲಾಕೃತಿಗಳು ಇರಲಿವೆ. ಕಲಾವಿದರಿಂದ ನೇರವಾಗಿ ಕಲಾಕೃತಿಗಳನ್ನು ಖರೀದಿಸಬಹುದು’ ಎಂದು ಬಿ.ಎಲ್. ಶಂಕರ್ ವಿವರಿಸಿದರು.

‘ಹೊರಗಿನಿಂದ ಬರುವ 400ಕ್ಕೂ ಅಧಿಕ ಕಲಾವಿದರಿಗೆ ಉಚಿತ ವಸತಿ ವ್ಯವಸ್ಥೆ ಮಾಡಲಾಗಿದೆ. ಆವರಣದ ಹೊರಗೆ ಕೆನರಾ ಬ್ಯಾಂಕ್ ಹಾಗೂ ಎಸ್‌ಬಿಐ ಬ್ಯಾಂಕ್‌ನ ಸಂಚಾರಿ ಎಟಿಎಂ ಮತ್ತು ಸ್ವೈಪಿಂಗ್ ಯಂತ್ರಗಳ ವ್ಯವಸ್ಥೆ ಮಾಡಲಾಗುವುದು’ ಎಂದು ಅವರು ಹೇಳಿದರು.



ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಲಾ ಗ್ಯಾಲರಿಯಲ್ಲಿನ ಕಲಾಕೃತಿಗಳನ್ನು ಬಿಜೆಪಿ ಮುಖಂಡ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ ಟ್ರಸ್ಟ್ ಅಧ್ಯಕ್ಷ ಎಸ್.ಎಂ. ಕೃಷ್ಣ ವೀಕ್ಷಿಸಿದರು. ಬಿ.ಎಲ್. ಶಂಕರ್ ಹಾಗೂ ಪದಾಧಿಕಾರಿಗಳು ಇದ್ದಾರೆ. – ಪ್ರಜಾವಾಣಿ ಚಿತ್ರ

5 ಲಕ್ಷ ಜನ ಭೇಟಿ ನಿರೀಕ್ಷೆ

‘19ನೇ ಚಿತ್ರಸಂತೆಗೆ 4 ಲಕ್ಷಕ್ಕೂ ಅಧಿಕ ಜನರು ಭೇಟಿ ನೀಡಿದ್ದರು. ₹ 3 ಕೋಟಿಗೂ ಅಧಿಕ ಮೊತ್ತದ ಕಲಾಕೃತಿಗಳು ಮಾರಾಟವಾಗಿದ್ದವು. ಈ ಬಾರಿ 5 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ ಇದೆ. ಚಿತ್ರಸಂತೆಯಲ್ಲಿ ಸಾಮಾನ್ಯವಾಗಿ ಮೈಸೂರು ಸಾಂಪ್ರದಾಯಿಕ ಶೈಲಿ, ರಾಜಸ್ಥಾನಿ ಶೈಲಿ, ಮಧುಬನಿಯ ಶೈಲಿ, ತೈಲ ಮತ್ತು ಜಲವರ್ಣದ ಕಲಾಕೃತಿಗಳು ಲಭ್ಯವಿರುತ್ತವೆ. ಇವಲ್ಲದೆ, ಅಕ್ರಲಿಕ್, ಕೊಲಾಜ್, ಲಿಥೋಗ್ರಾಫ್ ಮೊದಲಾದ ಪ್ರಕಾರಗಳ ಕಲಾಕೃತಿಗಳು ದೊರೆಯುತ್ತವೆ’ ಎಂದು ಬಿ.ಎಲ್. ಶಂಕರ್ ಹೇಳಿದರು.

‘ವ್ಯಂಗ್ಯಚಿತ್ರಗಳ ಪ್ರದರ್ಶನಕ್ಕೂ ಅವಕಾಶ ಇರುತ್ತದೆ. ಕುಂಚ ಹಾಗೂ ಪೆನ್ಸಿಲ್‌ಗಳಿಂದ ಕಲಾರಸಿಕರ ಭಾವಚಿತ್ರಗಳನ್ನು ಸ್ಥಳದಲ್ಲೇ ರಚಿಸಿ ಕೊಡುವ ಕಲಾವಿದರು ಇರುತ್ತಾರೆ’ ಎಂದು ತಿಳಿಸಿದರು.

> **ಈ ಬಾರಿಯ ಚಿತ್ರಸಂತೆಯನ್ನು ಕಲಾವಿದರಿಗೆ ಅರ್ಪಣೆ ಮಾಡಲಾಗುತ್ತಿದೆ. ಕಲಾವಿದರು ಹೊಸ ಹೊಸ ಪ್ರಯೋಗಗಳೊಂದಿಗೆ ಕಲಾಕೃತಿಗಳ ಪ್ರದರ್ಶನಕ್ಕೆ ಸಜ್ಜಾಗಿದ್ದಾರೆ.**
> **ಬಿ.ಎಲ್. ಶಂಕರ್**
> ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ

ಸುಭಾಷಿತ

ನಾಳೆ ಏನೆಂಬ ಪ್ರಶ್ನೆಗಿಂತಲೂ ಇಂದು ಹೇಗೆ ಎನ್ನುವ ಪ್ರಶ್ನೆ ನಮಗೆ ಮಹತ್ತರವಾಗಿ ಕಾಣಬೇಕು.

–ಶಿವರಾಮ ಕಾರಂತ

ಮಥುರಾದಲ್ಲಿ ಸರ್ವೆಗೆ ಆದೇಶ ಅಗಣಿತ ತಕರಾರುಗಳಿಗೆ ದಾರಿ

ಮಥುರಾ ನಗರದಲ್ಲಿ ಇರುವ ಶಾಹಿ ಈದ್ಗಾ ಮಸೀದಿಯ ಸರ್ವೆ ನಡೆಸಲು ಕಂದಾಯ ಇಲಾಖೆಗೆ ಅಲ್ಲಿನ ಜಿಲ್ಲಾ ನ್ಯಾಯಾಲಯವೊಂದು ನೀಡಿರುವ ಅನುಮತಿಯು ಕೆಲವು ಕಳವಳಕಾರಿ ಪ್ರಶ್ನೆಗಳನ್ನು ಮೂಡಿಸುವಂಥದ್ದು. ಇದೇ ಬಗೆಯ ಪ್ರಶ್ನೆಗಳು ಹಿಂದಿನ ವರ್ಷದ ಆರಂಭದಲ್ಲಿ ವಾರಾಣಸಿಯಲ್ಲಿ ಸರ್ವೆ ನಡೆಸಲು ನ್ಯಾಯಾಲಯವು ಅನುಮತಿ ನೀಡಿದ್ದಾಗಲೂ ಮೂಡಿದ್ದವು. ಬಾಲ ಕೃಷ್ಣನನ್ನು ತಾನು ಪ್ರತಿನಿಧಿಸುತ್ತೇನೆ ಎಂದು ಹೇಳಿಕೊಂಡಿರುವ ಹಿಂದೂ ಸೇನಾ ಎಂಬ ಸಂಘಟನೆಯು ಈದ್ಗಾ ಇರುವ ಜಮೀನಿನ ಮಾಲೀಕತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯವು ಸರ್ವೆ ನಡೆಸಲು ಅನುಮತಿ ನೀಡಿದೆ. ಸರ್ವೆ ನಡೆಸಿ, ವರದಿಯನ್ನು ಜನವರಿ 20ರೊಳಗೆ ಸಲ್ಲಿಸಬೇಕು ಎಂದು ಇಲಾಖೆಗೆ ಕೋರ್ಟ್ ಸೂಚನೆ ನೀಡಿದೆ. ಶ್ರೀಕೃಷ್ಣನು ಹುಟ್ಟಿದ ಸ್ಥಳ ಎಂದು ಭಾವಿಸಲಾಗಿರುವ ಸ್ಥಳದ ಪಕ್ಕದಲ್ಲಿ ಈ ಈದ್ಗಾ ಇದೆ. ಕಾಶಿಯ ವಿಶ್ವನಾಥ ದೇವಸ್ಥಾನಕ್ಕೆ ಹೊಂದಿಕೊಂಡಂತೆ ಇರುವ ಜ್ಞಾನವಾಪಿ ಮಸೀದಿಯ ಸರ್ವೆಗೆ ನ್ಯಾಯಾಲಯವೊಂದು ಕಳೆದ ವರ್ಷ ಆದೇಶಿಸಿತು. ಅದರ ಮರುಕಳಿಕೆಯಂತೆ ಇದೆ ಮಥುರಾದಲ್ಲಿನ ವಿದ್ಯಮಾನ. ಕಾಶಿಯಲ್ಲಿನ ಸರ್ವೆಗೆ ಸುಪ್ರೀಂ ಕೋರ್ಟ್ ಅವಕಾಶ ನೀಡಿತು. ವಾರಾಣಸಿ ನ್ಯಾಯಾಲಯವು ಮಸೀದಿಯೊಳಗೆ ಹಿಂದೂಗಳಿಗೆ ಪೂಜೆ ಸಲ್ಲಿಸಲು ಕೂಡ ಅವಕಾಶ ನೀಡಿದೆ. ಮಸೀದಿಯ ವಿಚಾರವಾಗಿ ತಕರಾರು ಇದೆ ಎಂಬುದನ್ನು ಒಪ್ಪಿಕೊಂಡಂತಿದೆ ಕೋರ್ಟ್‌ನ ತೀರ್ಮಾನ. ಮಥುರಾದ ಪ್ರಕರಣ ಕೂಡ ಇದೇ ರೀತಿಯಲ್ಲಿ ಸಾಗುವ ಸಾಧ್ಯತೆ ಇದ್ದಂತಿದೆ.

ಹೊಸದಾಗಿ ಹಕ್ಕು ಪ್ರತಿಪಾದಿಸುವುದರಿಂದ ಉಂಟಾಗುವ ಸಂಘರ್ಷ ಹಾಗೂ ಅನಿಶ್ಚಿತತೆಯ ರಾಜಕೀಯ ಲಾಭ ಪಡೆಯಲು 1991ರ ಕಾಯ್ದೆಯನ್ನು ಹೊಸ ಬಗೆಯಲ್ಲಿ ವ್ಯಾಖ್ಯಾನಿಸುವುದು ತಪ್ಪಾಗುತ್ತದೆ

ಪೂಜಾ ಸ್ಥಳಗಳ ಕಾಯ್ದೆ– 1991 ನಿರ್ದಿಷ್ಟವಾಗಿ ಇಂತಹ ಪರಿಸ್ಥಿತಿಗಳು ಸೃಷ್ಟಿಯಾಗುವುದನ್ನು ತಡೆಯುವ ಉದ್ದೇಶ ಹೊಂದಿದೆ. ದೇಶದ ಎಲ್ಲ ಪೂಜಾ ಸ್ಥಳಗಳು 1947ರ ಆಗಸ್ಟ್ 15ರಂದು ಧಾರ್ಮಿಕವಾಗಿ ಯಾವ ಸ್ಥಿತಿಯಲ್ಲಿ ಇದ್ದವೋ ಅದೇ ಸ್ಥಿತಿಯಲ್ಲಿ ಮುಂದುವರಿಯಬೇಕು ಎಂದು ಕಾಯ್ದೆ ಹೇಳಿದೆ. 2019ರಲ್ಲಿ ನೀಡಿದ ರಾಮಜನ್ಮಭೂಮಿ ಪ್ರಕರಣದ ತೀರ್ಪಿನಲ್ಲಿ ಸುಪ್ರೀಂ ಕೋರ್ಟ್ ಈ ಕಾಯ್ದೆಯ ಸಿಂಧುತ್ವವನ್ನು ಎತ್ತಿ ಹಿಡಿದಿದೆ. 1947ರ ಆಗಸ್ಟ್ 15ಕ್ಕೂ ಮೊದಲು ಕೂಡ ಮಸೀದಿಯಲ್ಲಿ ಪೂಜೆ ನಡೆಯುತ್ತಿತ್ತು ಎಂಬುದನ್ನು ಸಾಬೀತು ಮಾಡಿದರೆ, ಹಿಂದೂಗಳು ಸಲ್ಲಿಸಿರುವ ಅರ್ಜಿಯು ಕಾಲಮಿತಿಯನ್ನು ಮೀರಿದ್ದು ಎಂದು ಆಗುವುದಿಲ್ಲ ಎಂಬ ಮಾತನ್ನು ವಾರಾಣಸಿ ನ್ಯಾಯಾಲಯ ಹೇಳಿತು. ಮಥುರಾದಲ್ಲಿ ಕೂಡ ವಿವಾದಕ್ಕೆ ಮತ್ತೆ ಜೀವ ಕೊಡಲು, ವಿವಾದವನ್ನು ತೀವ್ರಗೊಳಿಸಲು ಲೋಪವನ್ನು ಹುಡುಕಲಾಗುತ್ತಿದೆ. ಕಳೆದುಹೋದ ಕಾಲವೊಂದಕ್ಕೆ ಸೇರಿದ ಮಂದಿರ-ಮಸೀದಿ ವಿವಾದದ ಹೆಸರಿನಲ್ಲಿ ಮತ್ತೆ ಕೋಮು ಧ್ರುವೀಕರಣ ನಡೆಸಲು ಈ ಎರಡು ವಿವಾದಗಳನ್ನು ಈಗ ಬಳಸಲಾಗುತ್ತಿದೆ.

ಕೆಳ ಹಂತದ ನ್ಯಾಯಾಲಯಗಳು 1991ರ ಕಾಯ್ದೆಯ ಆಶಯಗಳನ್ನು ಪಾಲನೆ ಮಾಡುತ್ತಿಲ್ಲ. ಈ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅನುಮೋದಿಸಿದ್ದರೂ, ಕೆಳ ಹಂತದ ನ್ಯಾಯಾಲಯಗಳು ಅದನ್ನು ಅನುಸರಿಸುತ್ತಿಲ್ಲ. 'ಧರ್ಮನಿರಪೇಕ್ಷ ತತ್ವಗಳಿಗೆ ನಾವು ಹೊಂದಿರುವ ಬದ್ಧತೆಯನ್ನು ಜಾರಿಗೆ ತರುವ ವಿಚಾರದಲ್ಲಿ ಈ ಕಾಯ್ದೆಯು ರಾಜ್ಯದಲ್ಲಿನ ಆದೇಶವೊಂದನ್ನು ನೀಡಿದೆ' ಎಂದು ಕೋರ್ಟ್ ಹೇಳಿದೆ. ಈ ಕಾಯ್ದೆಯು ಸಮಾಜದ ಧರ್ಮನಿರಪೇಕ್ಷ ಗುಣವನ್ನು ಕಾಯುವ ಉದ್ದೇಶವನ್ನು ಹೊಂದಿದೆ. ಹೊಸದಾಗಿ ಹಕ್ಕು ಪ್ರತಿಪಾದಿಸುವುದರಿಂದ ಉಂಟಾಗುವ ಸಂಘರ್ಷ ಹಾಗೂ ಅನಿಶ್ಚಿತತೆಯ ರಾಜಕೀಯ ಲಾಭ ಪಡೆಯಲು 1991ರ ಕಾಯ್ದೆಯನ್ನು ಹೊಸ ಬಗೆಯಲ್ಲಿ ವ್ಯಾಖ್ಯಾನಿಸುವುದು ತಪ್ಪಾಗುತ್ತದೆ. ರಾಮಜನ್ಮಭೂಮಿ ಚಳವಳಿಯ ನೇತೃತ್ವ ವಹಿಸಿದ್ದವರು, ಬೇರೆ ಯಾವುದೇ ಪೂಜಾಸ್ಥಳದ ಮೇಲೆ ಹಕ್ಕು ಸಾಧಿಸಲು ಮುಂದಾಗುವುದಿಲ್ಲ ಎಂದು ಹೇಳಿದ್ದನ್ನು ಈಗ ನೆನಪಿಸಿಕೊಳ್ಳಬೇಕು. ಆದರೆ ಈಗ ಬಲಪಂಥಕ್ಕೆ ಸೇರಿದ ಕೆಲವು ಸಣ್ಣ ಗುಂಪುಗಳು ವಿವಾದವನ್ನು ಸೃಷ್ಟಿಸುತ್ತಿವೆ. ಈ ವಿಚಾರವಾಗಿ ಸರ್ಕಾರವು ತನ್ನ ನಿಲುವನ್ನು ಸ್ಪಷ್ಟಪಡಿಸದೇ ಇರುವುದು ದುರದೃಷ್ಟಕರ. ಪಕ್ಷಪಾತಿ, ವಿಧ್ವಂಸಕಾರಿ ಸಾಮಾಜಿಕ ಮತ್ತು ರಾಜಕೀಯ ಉದ್ದೇಶಗಳಿಗಾಗಿ ನ್ಯಾಯಾಂಗದ ವೇದಿಕೆಗಳನ್ನು ಯಾರೂ ಬಳಕೆ ಮಾಡಿಕೊಳ್ಳದಂತೆ ಸುಪ್ರೀಂ ಕೋರ್ಟ್ ನಿಗಾ ವಹಿಸಬೇಕು.

ನೈಸರ್ಗಿಕ ಪರಿಸರ, ಪಾರಂಪರಿಕ ಜೀವನವಿಧಾನ ನಷ್ಟವಾದಂತೆಲ್ಲ ಬದುಕು–ಭಾಷೆ ಬರಡೇ ಸರಿ!

ಇಳೆ ತಂಪಿರದೆ ಭಾಷೆ ಅರಳೀತು ಹೇಗೆ?

ವಿಶ್ಲೇಷಣೆ

ಡಾ. ಕೇಶವ ಎಚ್. ಕೊರ್ಸೆ

ಕನ್ನಡ ಸಾಹಿತ್ಯ ಸಮ್ಮೇಳನದ ಹೊಣೆ ಹೊತ್ತ ಹಾವೇರಿಯೆಡೆಗೆ ಈಗ ಎಲ್ಲರ ಚಿತ್ತ. ಕನಕ- ಸರ್ವಜ್ಞರ ನೆಲದ ಈ ಜಿಲ್ಲೆ, ಪಕ್ಕದ ಮಲೆನಾಡಿಗರಿಗಂತೂ ಸಮೃದ್ಧ ಒಳನಾಡಿನ ಪ್ರತೀಕ. ಹಾವೇರಿ ಜಾನುವಾರು ಜಾತ್ರೆಯಿಂದ ತಂದ ಸಶಕ್ತ ಎತ್ತುಗಳೇ ಇಲ್ಲಿನ ಹೊಲಗಳನ್ನು ಈವರೆಗೂ ಉತ್ತಿದ್ದು, ಅಲ್ಲಿಂದ ಬಂದ ಎಮ್ಮೆಗಳೇ ಇಲ್ಲಿನ ಮನೆಗಳಲ್ಲಿ ಹಾಲು- ಮೊಸರು ಸ್ರವಿಸಿದ್ದು. ಬ್ಯಾಡಗಿ ಕೆಂಪುಮೆಣಸಿನ ಸಾರು, ಸವಣೂರು ವೀಳ್ಯದೆಲೆ, ಹಾನಗಲ್ ತರಕಾರಿ– ಇವನ್ನೆಲ್ಲ ಬಳಸದ ಉತ್ತರ ಕನ್ನಡದ ಮಲೆನಾಡ ಮನೆಗಳೇ ಇರಲಿಕ್ಕಿಲ್ಲ. ಅಲ್ಲಿನ ಗೀಗೀಪದ, ಸುಡುಗಾಡು ಸಿದ್ಧರ ಜಾದೂ, ಕಂಪನಿ ನಾಟಕಗಳು- ಇವೆಲ್ಲವೂ ಜನಮಾನಸದ ಭಾವಕೋಶದ ಭಾಗವೇ ಆಗಿವೆ!

ವಿಭಿನ್ನ ಪರಿಸರದ ಸಮುದಾಯಗಳು ಎಷ್ಟೋ ಕಾಲದಿಂದ ಬೆರೆತು ಎರಕಗೊಂಡಿರುವ ವಿಶಿಷ್ಟ ಗ್ರಾಮೀಣ ಸಂಸ್ಕೃತಿಯೊಂದರ ತುಣುಕು ಇದು. ಹಾವೇರಿ ಸೀಮೆಯ ಅದೆಷ್ಟೋ ಊರು, ಜನ, ಮಾತು, ಬೆಳೆಗಳ ಹೆಸರುಗಳೆಲ್ಲ ಮಲೆನಾಡಿನ ಆಡುಮಾತಿನಲ್ಲಿ ಬೆಸೆದುಹೋಗಿವೆ. ಸಮಾಜವೇ ಪೋಷಿಸಿಕೊಂಡ ಕರುಳಬಳ್ಳಿ ಸಂಬಂಧವಿದು. ಸಾಹಿತ್ಯ ಸಮ್ಮೇಳನದ ನೊಗ ಹೊತ್ತ ಹಾವೇರಿಯನ್ನು ಮತ್ತೊಮ್ಮೆ ಸುತ್ತಿಬರಬೇಕೆಂದು ಇತ್ತೀಚೆಗೆ ನನಗನಿಸಿದ್ದು, ಎಳವೆಯಿಂದಲೂ ಭಾವ ಜಗತ್ತನ್ನು ಪೋಷಿಸುತ್ತಿರುವ ಈ ಭಾಷೆ- ಬದುಕುಗಳೇ ಇರಬೇಕು!

ಫಲವತ್ತಾದ ಕಪ್ಪುಮಣ್ಣಿರುವ ಮಧ್ಯಕರ್ನಾಟಕದ ಸಮೃದ್ಧ ನೆಲವಾದ ಹಾವೇರಿ ಜಿಲ್ಲೆಯಾದ್ಯಂತ ಈಗ ಓಡಾಡಿದರೆ ತೋರುವುದೇನು? ಕಣ್ಮರೆಯಾದ ಕಾನು, ಬರಿದಾದ ಗೋಮಾಳ, ಕಾಣೆಯಾಗುತ್ತಿರುವ ಕೆರೆ-ಕಟ್ಟೆಗಳು, ಒಣಗಿದ ಹಳ್ಳ-ಕಾಲುವೆಗಳು! ನೀರಿಲ್ಲವೆಂದು ಕೊಳವೆಬಾವಿ ತೋಡುತ್ತಿರುವ ರೈತರು. ಭತ್ತ, ಜೋಳ, ಮೆಣಸು, ಶೇಂಗಾ, ಸೂರ್ಯಕಾಂತಿ, ಸಿರಿಧಾನ್ಯ, ತರಕಾರಿಗಳು ನಳನಳಿಸುತ್ತಿದ್ದ ಹೊಲಗಳನ್ನೆಲ್ಲ ವಾಣಿಜ್ಯಬೆಳೆ ಕಬ್ಬು, ಅಡಿಕೆಗಳು ಭಕ್ಷಿಸುತ್ತಿರುವುದು. 'ಈ ವರ್ಷ ಯಾವ ತಳಿ ಭತ್ತ ಬಿತ್ತಿದ್ರಿ?' ಎಂದು ಕೇಳಿದರೆ, 'ಗೊತ್ತಿಲ್ರಿ, ಅಪ್ಪಾರ ಕೇಳಬೇಕ್ರಿ' ಎಂದು ಮುಂದೆ ಸಾಗುವ ಯುವಕ! ಯುವಜನರು ನಗರಮುಖಿಗಳಾದಂತೆ, ಹೊಲ ಕ್ಕಿಳಿಯಲೇಬೇಕಾದ ವೃದ್ಧರು-ಮಹಿಳೆಯರು. ಊರ ಹೊರಗಿನ ಪ್ರಕೃತಿ ಹಾಗೂ ಕೇರಿಯೊಳಗಣ ಸಂಸ್ಕೃತಿ ಎರಡೂ ಎಷ್ಟು ವೇಗವಾಗಿ ಬದಲಾಗುತ್ತಿವೆ! ಕೇವಲ ಎರಡು-ಮೂರು ದಶಕಗಳಲ್ಲಾದ ಭಾರಿ ಪಲ್ಲಟಗಳಿವು.

ಇದನ್ನೇ ವಿವರವಾಗಿ ಅರ್ಥಮಾಡಿಕೊಳ್ಳಲು, ಶಿಗ್ಗಾವಿ-ಹಾನಗಲ್-ಹಿರೇಕೆರೂರು ಸೀಮೆಗಳ ಜಲಾನಯನ ಪ್ರದೇಶಗಳನ್ನು ಪ್ರಾತಿನಿಧಿಕವಾಗಿ ಪರಿಶೀಲಿಸಬಹುದು. ಊರಹೊರಗಿನ ಗುಡ್ಡದ ಕಾಡೆಲ್ಲ ಅಕೇಶಿಯಾ ಮರದ ನೆಡುತೋಪು ಅಥವಾ ಭೂದಾಹದ ಬಲಾಢ್ಯರ ಒತ್ತುವರಿಗೆ ಬಲಿಯಾಗುತ್ತಿದೆ. ಹಸಿರುನೆಲೆಯಿಲ್ಲವಾಗಿ ವನ್ಯಜೀವಿ ಪ್ರಭೇದಗಳೆಲ್ಲ ಮಾಯವಾಗುತ್ತಿವೆ. ಮನುಷ್ಯನ ಪರಿಸರಕ್ಕೆ ಯಶಸ್ವಿಯಾಗಿ ಹೊಂದಿಕೊಂಡ ಮಂಗ, ಹಂದಿಗಳಂಥವು ಮಾತ್ರ ವಿಪರೀತ ವೃದ್ಧಿಯಾಗಿ, ಮಾನವ- ವನ್ಯಪ್ರಾಣಿ ಸಂಘರ್ಷ ಹೆಚ್ಚುತ್ತಿದೆ. ನೀಲಗಿರಿ ಮರಗಳ ಕೈಗಾರಿಕಾ ನೆಡುತೋಪುಗಳು ಹಾಗೂ ತಗ್ಗು, ದಿನ್ನೆಗಳನ್ನೆಲ್ಲ ಬಯಲಾಗಿಸುತ್ತಿರುವ ಜೆಸಿಬಿ ಯಂತ್ರಗಳು ಗೋಮಾಳಗಳನ್ನೂ ಬರಿದಾಗಿಸುತ್ತಿವೆ. ಲಾಗಾಯ್ತಿನಿಂದ ಬೇಸಾಯದ ಜೊತೆ ಗ್ರಾಮೀಣರ ಬದುಕು ಪೊರೆದಿದ್ದ ಎಮ್ಮೆ, ಆಕಳು, ಕುರಿಗಳ ಹೈನುಗಾರಿಕೆ ಹಸಿರುಮೇವಿಲ್ಲದೆ ಬಸವಳಿಯುತ್ತಿದೆ!

ಇದರ ಪರಿಣಾಮ ಅಷ್ಟಕ್ಕೇ ನಿಲ್ಲುವುದೇ? ಜಲಾನಯನ ಪ್ರದೇಶವೊಂದರ ಮೇಲ್ಭಾಗದ ಕಾನು, ಗೋಮಾಳಗಳ ಹಸಿರುಹೊದಿಕೆ ನಾಶವಾದಂತೆಲ್ಲ, ಮಳೆಗಾಲದಲ್ಲಿ ಮೇಲ್ಮಣ್ಣು ಸವೆತ ಹೆಚ್ಚಾಗತೊಡಗಿತು. ಸಣ್ಣಮಳೆಗೂ ನೀರು ಕಾಲುವೆ, ಹಳ್ಳಗಳಲ್ಲಿ ನೆರೆಯಾಗಿ ತಗ್ಗಿನ ಕೆರೆಗಳಲ್ಲಿ ಹೂಳು ತುಂಬತೊಡಗಿತು. ಸಣ್ಣ ನೀರಾವರಿ ಹಾಗೂ ಪಂಚಾಯತ್ ಇಲಾಖೆಗಳು ಕೆರೆಯ ಮಾಲೀಕರೆಂದು ಸರ್ಕಾರ ಹೇಳಿದಮೇಲೆ, ಈವರೆಗೂ ಕೆರೆ-ಕಟ್ಟೆಗಳನ್ನು ನಿರ್ವಹಿಸುತ್ತಿದ್ದ ಗ್ರಾಮೀಣರು ತಮ್ಮ ಸಾಮೂಹಿಕ ಜವಾಬ್ದಾರಿ ಮರೆತರು. ಊರ ಜನರನ್ನು ಒಳಗೊಂಡ ಸಶಕ್ತ 'ನಿರ್ವಹಣಾ ಸಮಿತಿ'ಗಳನ್ನು ರಚಿಸಿ ಕೆರೆಗಳನ್ನು ನಿರ್ವಹಿಸಲು ಸರ್ಕಾರವೂ ವಿಫಲವಾಯಿತು. ಹೀಗಾಗಿ, ಕೆರೆಯ ತಳದಲ್ಲಿ ಹೂಳು ತುಂಬಿದರೆ, ಕೆರೆಯಂಚೆಲ್ಲ ಒತ್ತುವರಿಯಾಯಿತು. ಊರಿನ ಕೊಳಚೆ ಸೇರಿದ್ದರಿಂದ ಕೆರೆ ನೀರು ಕಲುಷಿತವಾಗತೊಡಗಿತು. ಅದನ್ನಾಧರಿಸಿದ್ದ ಏಡಿ, ಕಪ್ಪೆ, ಹಾವು, ಮೀನುಗಳಂಥ ಜಲಚರ ವೈವಿಧ್ಯ ಕುಸಿಯತೊಡಗಿತು. ಕೃಷಿ-ಜಾನುವಾರುಗಳನ್ನು ಈವರೆಗೂ ಪೋಷಿಸಿದ್ದ ಜಲಾನಯನ ಪ್ರದೇಶಗಳೆಲ್ಲ ಛಿದ್ರವಾಗುತ್ತಿರುವ ಬಗೆಯಿದು!

ಇದು ಹಾವೇರಿಯ ಕಥೆ ಮಾತ್ರವಲ್ಲ. ನಾಡಿನೆಲ್ಲೆಡೆ ಕಾಣಸಿಗುವ, ವೇಗವಾಗಿ ಬದಲಾಗುತ್ತಿರುವ ಗ್ರಾಮೀಣ ಪರಿಸರದ ಚಿತ್ರ. ನಿಸರ್ಗ ನಾಶ ಹೆಚ್ಚಿದಂತೆ, ಆ ಸಮೃದ್ಧ ಪ್ರಕೃತಿಗೆ ಅಂಟಿಕೊಂಡು ಬದುಕು ಕಟ್ಟಿಕೊಂಡಿದ್ದ ಗ್ರಾಮೀಣ ಸಮುದಾಯಗಳೆಲ್ಲ ತಮ್ಮ ಸಹಜ ಜೀವನಶೈಲಿ ಹಾಗೂ ಜೀವನೋಪಾಯಗಳನ್ನು ಕಳೆದುಕೊಳ್ಳುತ್ತಿವೆ. ಕೃಷಿಕರು, ಹೈನುಗಾರರು, ಮೀನುಗಾರರು, ಕುಶಲ ಕರ್ಮಿಗಳು, ಕೂಲಿಕಾರರು- ಇವರೆಲ್ಲರ ಜೀವನದಲ್ಲೂ ಈ ಬದಲಾವಣೆಯ ಸ್ಫೋಟವಾಗುತ್ತಿದೆ!

ಪರಿಸರ ಹಾಗೂ ಜನಜೀವನದಲ್ಲಾಗುವ ಈ ಬಗೆಯ ಹಠಾತ್ ಬದಲಾವಣೆಯು ಭಾಷೆಯನ್ನು ಪ್ರಭಾವಿಸುವ ಬಗೆ ಹೇಗೆ? ಭಾಷಾಶಾಸ್ತ್ರಜ್ಞರು ಸದಾ ಕುತೂಹಲದಿಂದ ಅಭ್ಯಸಿಸುವ ಪ್ರಶ್ನೆಯಿದು. ಕಾಡು-ಗೋಮಾಳ, ಕೆರೆ-ಕಟ್ಟೆ, ಪಾರಂಪರಿಕ ಬೇಸಾಯ, ಕಸುಬುಗಳೆಲ್ಲ ಶಿಥಿಲವಾದಂತೆಲ್ಲ, ಅವನ್ನೆಲ್ಲ ಈವರೆಗೂ ನಿರೂಪಿಸುತ್ತಿದ್ದ ಧ್ವನಿ, ಶಬ್ದ, ನುಡಿಗಟ್ಟು, ಗಾದೆಮಾತು, ಜನಪದಹಾಡು ಎಲ್ಲವೂ ಮಾಯವಾಗತೊಡಗುತ್ತವೆ. ಜೊತೆಯಾಗಿ ಬಿತ್ತುವ, ತೂರುವ ರೂಢಿಗಳೇ ಮಾಯವಾದರೆ, ಗದ್ದೆಗಳಲ್ಲಿ ಸುಗ್ಗಿಹಾಡು ಹೇಗೆ ಅನುರಣಿಸೀತು? ಕೆಂಪುಮೆಣಸಿನ ಬೇಸಾಯ ಅರಿಯದವಗೆ 'ಕಡ್ಡಿಕರೆ' ಹಾಗೂ 'ಡಬ್ಬಿಮೆಣಸಿನ' ವ್ಯತ್ಯಾಸ ಹೇಗೆ ತಿಳಿಯಬೇಕು? ಬೇಸಾಯದ ಋತುಚಕ್ರ ಮರೆತವಗೆ ಶೀಗೆಹುಣ್ಣಿಮೆ ಅಥವಾ ಎತ್ತಿನ ಅಮಾವಾಸ್ಯೆಯ ವೈಶಿಷ್ಟ್ಯ ಅರಿವಾದೀತೇ? ಕೊಳವೆಬಾವಿ ನೀರೇ ಜಲಮೂಲವಾದಾಗ, ಕೆರೆಯಲ್ಲಿ ಮೀನು ಹಿಡಿಯುವ ಗ್ರಾಮಸ್ಥರ ಕೆರೆಬೇಟೆ ಕ್ರೀಡೆ ಉಳಿದೀತಾದರೂ ಹೇಗೆ? ಕಾಡಲ್ಲಿ ಜೇನುಸಂಕುಲ ನಾಶವಾದರೆ, ಆ ಜೇನುತುಪ್ಪ ಸಂಗ್ರಹಿಸುವ ಕುಶಲಿಗಳ ನುಡಿಗಟ್ಟುಗಳನ್ನು ಇನ್ನಾರು ನುಡಿದಾರು?

ಭೌತಿಕ ಪರಿಸರ, ಅದರೊಳಗಣ ಜೈವಿಕ ಪ್ರಕೃತಿ ಹಾಗೂ ಅವನ್ನು ಅವಲಂಬಿಸಿದ ಜನಜೀವನ- ಇವು ಬದಲಾದಂತೆಲ್ಲ, ಅವನ್ನು ಪ್ರತಿನಿಧಿಸುವ ಭಾಷಾದ್ರವ್ಯಗಳೂ ಕಣ್ಮರೆಯಾಗುತ್ತವೆ. ನಮ್ಮ ನಾಡಿನ ಗ್ರಾಮ್ಯ ಪರಿಸರದಲ್ಲೂ ಈ ಪಲ್ಲಟವಾಗುತ್ತಿದ್ದು, ಕನ್ನಡ ಭಾಷೆಯನ್ನು ರೂಪಿಸಿರುವ ಅದರೊಡಲಿನ ಪ್ರಾದೇಶಿಕ ವೈವಿಧ್ಯಗಳೆಲ್ಲ ನೇಪಥ್ಯಕ್ಕೆ ಸರಿಯುತ್ತಿವೆ. ಅನನ್ಯವಾದ ಈ ದೇಸಿತನ ಕಳೆದುಹೋದಂತೆ, ನಷ್ಟವಾಗುವುದು ಭಾಷೆಗೆ ಮಾತ್ರವಲ್ಲ.

ಭಾಷೆಯೊಂದು ತನ್ನ ಸಂವಹನದ ಕಾರ್ಯದೊಟ್ಟಿಗೆ, ಆ ಪರಿಸರದಲ್ಲಿ ಜ್ಞಾನಸೃಷ್ಟಿಯನ್ನೂ ಮಾಡುತ್ತಿರುತ್ತದೆ ಎನ್ನುತ್ತಾರೆ ಭಾಷಾಶಾಸ್ತ್ರಜ್ಞರು ಹಾಗೂ ಮಿದುಳುತಜ್ಞರು. ಅಂದರೆ, ಭಾಷೆಯೊಂದರ ಅಂಗಾಂಶಗಳು ನಾಶವಾಗತೊಡಗಿದರೆ, ಅವು ಸೃಜಿಸುತ್ತಿದ್ದ ಜ್ಞಾನಸಂಪತ್ತು ಕುಸಿದು ಮುಂದಿನ ತಲೆಮಾರು ಅದರಿಂದ ವಂಚಿತವಾಗುತ್ತದೆ!

ಇಲ್ಲೊಂದು ಸಂಗತಿ ಗಮನಿಸಬೇಕು. ಜಾಗತಿಕ ಹವಾಮಾನ ಬದಲಾವಣೆಯಿಂದಾಗಿ ಮೂರು ದಶಕಗಳಿಂದ ಜೀವಪ್ರಭೇದಗಳು ವ್ಯಾಪಕವಾಗಿ ನಾಶವಾಗುತ್ತಿವೆ. ಪ್ರಾಗೈತಿಹಾಸದಲ್ಲೇ ಆರನೇ ದೊಡ್ಡ 'ಸಾಮೂಹಿಕ ಅಳಿವಿನ' ಕಾಲಘಟ್ಟದಲ್ಲಿಂದು ನಾವಿದ್ದೇವೆ ಎಂದು ವಿಜ್ಞಾನಿಗಳು ಸಾರುತ್ತಿರುವುದು ಈ ಕಾರಣಕ್ಕಾಗಿ. ಕೌತುಕದ ವಿಷಯವೆಂದರೆ, ಈ ಬಗೆಯ ವಿದ್ಯಮಾನ ಸಮಾನಾಂತರವಾಗಿ ಜಾಗತಿಕ ಭಾಷಾಲೋಕದಲ್ಲೂ ಘಟಿಸುತ್ತಿದೆ! ಯುನೆಸ್ಕೊದ ಇತ್ತೀಚಿನ ಅಧ್ಯಯನದಂತೆ, ಪ್ರಪಂಚದಲ್ಲಿನ ಏಳು ಸಾವಿರಕ್ಕೂ ಮಿಕ್ಕ ಭಾಷೆಗಳಲ್ಲಿ ಸುಮಾರು ಅರ್ಧದಷ್ಟು ಅಳಿವಿನಂಚಿಗೆ ಜಾರುತ್ತಿವೆ. ಜೈವಿಕ ತಳಿಸಂಪತ್ತು ಕರಗಿದಂತೆ, ಮಾನವಸಮಾಜದ ಅಮೂಲ್ಯ ಕಾಣ್ಕೆಗಳಾದ ಭಾಷಾ ಪ್ರಕಾರಗಳೂ ಕಣ್ಮರೆಯಾಗುತ್ತಿವೆ! ಕನ್ನಡದ ಸಂದರ್ಭದಲ್ಲೂ ಇದು ನಿಜ.

ಮೇಲ್ನೋಟದಲ್ಲಿ ಕನ್ನಡ ಸಶಕ್ತವೆನ್ನಿಸಿದರೂ, ಅದರ ಅಂತಃಸತ್ವವಾದ ಧ್ವನಿ, ಶಬ್ದ, ನುಡಿಗಟ್ಟು, ಹಾಡುಗಳ ಪ್ರಾದೇಶಿಕ ವೈವಿಧ್ಯವು ವೇಗವಾಗಿ ಕರಗುತ್ತಿದೆ. ಆಮಟ್ಟಿಗೆ ಭಾಷೆ ಸೊರಗುತ್ತಿದೆ!

ಭಾಷೆ- ಸಂಸ್ಕೃತಿಗಳು ಅರಳಲು ಬಾಳು ಬೆಳಗಬೇಕು. ಅದಕ್ಕೆ ಇಳೆಯು ಹಸಿರಾಗಿರಬೇಕು. ಸರ್ವಜ್ಞ-ಕನಕರ ಮಾತು, ಹಾಡುಗಳಲ್ಲೂ ಇದು ಢಾಳಾಗಿ ಪ್ರತಿಫಲಿಸಿದೆ. ವರ್ತಮಾನದ ಇಂಥ ಸವಾಲುಗಳನ್ನೆಲ್ಲ ಗುರುತಿಸಿ ಚಿಂತಿಸಲು ಪ್ರೇರೇಪಿಸಿದರೆ, ಸಾಹಿತ್ಯ ಸಮ್ಮೇಳನದ ಔಚಿತ್ಯ ಹೆಚ್ಚೀತು. ಹಾವೇರಿ ನೆಲದಿಂದ ಅಂಥ ವಿವೇಕವು ಮಾರ್ದನಿಸಲಿ.

ಚುರುಮುರಿ

ಜೋಡೊ- ಜೋಡಿ

• ನಾರಾಯಣ ರಾಯಚೂರ್

'ರೀ, ನಾನು ಹೊಸದಾಗಿ ಸೇರಿಕೊಂಡಿದಿನಲ್ಲಾ, ಆ ನಡಿಗೆದಾರರ ಸಂಘದ ಚಲಪತಿ ರಾವ್ ಅವರು ಹೇಳ್ತಾ ಇದ್ರು ವಾಕ್ ಮಾಡೋದರಿಂದ ಏನೆಲ್ಲಾ ಪ್ರಯೋಜನ ಅಂತ'.

'ವೇಟ್ ಕಮ್ಮಿ ಮಾಡ್ಕೊಳೋದು ಅಂತ ತಾನೇ?! ಊಟ ಕಮ್ಮಿ ಮಾಡ್ಕೊಂಡೂ ಮಾಡ್ಕೋಬಹುದು...'

'ಅಷ್ಟೇ ಅಲ್ಲಾರೀ... ನಿರ್ಧಾರ ತಗೋಳೊ ಅಂಥ ಗಟ್ಟಿ ಮನಸು ಮಾಡೋಕೂ ನಡಿಗೆ ಉಪಯುಕ್ತ ಅಂತೆ'.

'ಚಲನೆ ಅನ್ನೋದು ಚಂಚಲ, ನಿರ್ಧಾರ ಅನ್ನೋದು ಸ್ಥಿರ... ಎತ್ತಣಿಂದೆತ್ತ ಸಂಬಂಧವಯ್ಯಾ!'

'ಸಂಬಂಧದ ವಿಚಾರವೇ ಅವರೂ ಹೇಳಿದ್ದು. ಪಾದಯಾತ್ರೆ ಮಾಡ್ತಿರೊ ಬ್ಯಾಚುಲರ್ ರಾಹುಲ್ ಗಾಂಧಿ, ಪಾದಯಾತ್ರೆಯ ಶತ ದಿನೋತ್ಸವಾನೂ ಮುಗಿಸಿ, ಹೆಜ್ಜೆಯಿಂದ ಹೆಜ್ಜೆಗೆ ಸ್ಟ್ರಾಂಗ್ ಆಗಿ, 'ಅಜ್ಜಿ ಇಂದಿರಾ ಗಾಂಧಿ ಹಾಗೂ ಅಮ್ಮ ಸೋನಿಯಾ ಅವರಂತಹ ಗುಣ-ಲಕ್ಷಣದ ಹುಡುಗಿ ಸಿಕ್ಕರೆ ಮದುವೆಗೆ ಸಿದ್ಧ' ಅಂದಿದಾರಂತೆ'.

'ಕನ್ಯಾಕುಮಾರಿಯಿಂದ ಪಾದಯಾತ್ರೆ ಶುರುವಾದಾಗಲೇ ಅನ್ಕೊಂಡಿದ್ದೆ, ತಮಿಳುನಾಡಿನಲ್ಲಿ ಕೆಲವು ಹೆಂಗಸರು 'ನಿಮಗೆ ತಮಿಳುನಾಡಿನ ಕನ್ಯೆ ಆದ್ರೆ ಸರೀನಾ?' ಅಂತ ಕೇಳಿದ್ರಂತಲ್ಲಾ?!'

'ಅದೇರೀ... ಆವಾಗ 'ಇನ್ನೂ ನಿರ್ಧರಿಸಿಲ್ಲ' ಅಂದಿದ್ದ ರಾಹುಲ್, ನಡೆದೂ ನಡೆದೂ ಕಾಲು ಗಟ್ಟಿಯಾಗಿ ಗಟ್ಟಿ ನಿರ್ಧಾರಕ್ಕೆ ಬರೋದು ಸುಲಭ-ವಾಗಿರಬೇಕು. ಅಲ್ಲದೆ ಮದುವೆಗೂ ನಡಿಗೆಗೂ ಎಡೆಬಿಡದ ನಂಟಲ್ಲವೇ? ಮರೆತುಬಿಟ್ರಾ, ತಾಳಿ ಕಟ್ಟೋವಾಗ ಸಪ್ತಪದಿ ತುಳಿದದ್ದು?!'

'ಆದರೆ ಪಾದಯಾತ್ರೆ ಮಾಡೋರು ಸ್ಟೇಟ್ ಹೈವೆ, ನ್ಯಾಷನಲ್ ಹೈವೇಲಿ ಓಡಾಡೋದು'.

'ಬಾಳ ಪಥಾನೂ ಒಂದು 'ವೇ'ನೇ. ಅದಕ್ಕೇ ವಿವಾಹಕ್ಕೆ ಮದುway ಅನ್ನೋದು. ಹೀಗೆ ಯಾತ್ರೆ ಮಾಡಿ ಮಾಡಿ ಗಟ್ಟಿಯಾದರೆ ಗಟ್ಟಿಮೇಳಾನೂ ನೆಮ್ಮದಿಯಿಂದ ಕೇಳಿಸ್ಕೊಬಹುದು'.

'ಪಾದಯಾತ್ರೆಯಿಂದ ಪಾಣಿಗ್ರಹಣ ಸುಲಭವಾಗಿ ಆಗೋದಾದ್ರೆ, ಸೋನಿಯಾಜಿ ಅವರೂ ಸೊಸೇನ ಪಡ್ಕೊಳ್ಳೋ ಸಂಭ್ರಮಕ್ಕೆ ಬೇಗ ಸಜ್ಜಾಗಬಹುದು'.

'ಹಾಗೇ... ಸೊಸೆ, ಮೊಮ್ಮಕ್ಕಳಿಗೆ ಕಾಯ್ತಾಯಿರೊ ಲಕ್ಷಾಂತರ ತಾಯಂದಿರೂ ಪಾದಯಾತ್ರೆಗೆ ಜೈ ಅನ್ನಬಹುದು!'

ದಿನದ ಟ್ವೀಟ್

ತೆರಿಗೆ ವಂಚಿಸುವಂತಿಲ್ಲ

ಕಳೆದ ಮೂರು ವರ್ಷಗಳಲ್ಲಿ, ಜಿಎಸ್‌ಟಿ ವಂಚಿಸಿದವರನ್ನು ಸರಾಸರಿ ದಿನಕ್ಕೆ ಒಬ್ಬರಂತೆ ಬಂಧಿಸಲಾಗಿದೆ. ತಳಮಟ್ಟದ ಅಧಿಕಾರಿಗಳಲ್ಲಿ ಒಂದಿಷ್ಟು ಭ್ರಷ್ಟಾಚಾರ ಇರಬಹುದು. ಆದರೆ, ತೆರಿಗೆ ವಂಚಿಸುವವರನ್ನು ಶಿಕ್ಷಿಸುವ ವಿಚಾರದಲ್ಲಿ ಸರ್ಕಾರ ಗಂಭೀರವಾಗಿದೆ. ತೆರಿಗೆ ನೆಲೆ ಹಾಗೂ ತೆರಿಗೆ ಸಂಗ್ರಹವು ಕಳೆದ ಕೆಲವು ವರ್ಷಗಳಲ್ಲಿ ಹೆಚ್ಚಳ ಕಂಡಿರುವುದಕ್ಕೆ ಇದು ದೊಡ್ಡ ಕಾರಣ.

ಚಿರಾಗ್ ಚೌಹಾಣ್, ಚಾರ್ಟರ್ಡ್ ಅಕೌಂಟೆಂಟ್

ಕಿಡಿನುಡಿ



ಮೀಸಲಾತಿ ವಿಷಯದಲ್ಲಿ ಸರ್ಕಾರ ಮೋಸ ಮಾಡುತ್ತಿದೆ. ಮೀಸಲಾತಿಯ ಅರ್ಥವನ್ನೇ ಬುಡಮೇಲು ಮಾಡಿದೆ. ಕಡಲೆಕಾಯಿ ತಿನ್ನುವವರಿಂದ ಕಿತ್ತುಕೊಂಡು ಬಾದಾಮಿ ತಿನ್ನುವವರಿಗೆ ನೀಡಲಾಗುತ್ತಿದೆ.

ಎಚ್.ವಿಶ್ವನಾಥ್, ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 5-1-1998

• **ಹೆಗಡೆ ಬೆಂಬಲಿಗರಲ್ಲಿ ಗಡುವು ತಂದ ಜಿಜ್ಞಾಸೆ**

ಬೆಂಗಳೂರು, ಜನವರಿ 4– ಲೋಕಶಕ್ತಿ ಸೇರಲು ಜನತಾದಳ ಶಾಸಕರು ಹಾಗೂ ಸಚಿವರಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ರಾಮಕೃಷ್ಣ ಹೆಗಡೆಯವರು ನೀಡಿರುವ ಗಡುವು ಮುಗಿಯುವ ದಿನ ಹತ್ತಿರವಾಗುತ್ತಿದ್ದಂತೆಯೇ, ಹೆಗಡೆಯವರ ಬೆಂಬಲಿಗರಲ್ಲಿ ಈಗ ಭಾರಿ ಜಿಜ್ಞಾಸೆ ಉಂಟಾಗಿದೆ.

ಜನತಾದಳಕ್ಕೆ ರಾಜೀನಾಮೆ ನೀಡುವುದೇ ಅಥವಾ ಲೋಕಶಕ್ತಿಯನ್ನು ಸೇರುವುದೇ ಅಥವಾ ಜನತಾದಳದಲ್ಲಿ ಇದ್ದುಕೊಂಡೇ ಹೆಗಡೆಯವರಿಗೆ ಬೆಂಬಲ ನೀಡುವುದೇ ಅಥವಾ ಶಾಸಕ ಸ್ಥಾನಮಾನವನ್ನು ಉಳಿಸಿಕೊಂಡು ಬೆಂಬಲ ನೀಡುವುದೇ ಎಂಬ ಜಿಜ್ಞಾಸೆಯಲ್ಲಿ ದಳದ ಹಲವಾರು ಶಾಸಕರು, ಸಚಿವರು ನಿರತರಾಗಿದ್ದಾರೆ ಎಂದು ಗೊತ್ತಾಗಿದೆ.

• **ರೈತರಿಗೆ ಸಾಲದ ಜೊತೆ ತಂತ್ರಜ್ಞಾನ ನೆರವಿಗೆ ಪ್ರಧಾನಿ ಐ.ಕೆ. ಗುಜ್ರಾಲ್ ಕರೆ**

ಬೀದರ್, ಜನವರಿ 4– ಸಹಕಾರ ಚಳವಳಿಯ ಮೂಲಕ ದೇಶದಲ್ಲಿ ಸಾಮಾಜಿಕ ಬದಲಾವಣೆ ತರುವುದಕ್ಕಾಗಿ ಮುಂದಾಗಬೇಕು ಎಂದು ಪ್ರಧಾನಿ ಐ.ಕೆ. ಗುಜ್ರಾಲ್ ಕರೆ ನೀಡಿದರು.

'ಸಹಕಾರ ಸಂಘಗಳು ಮತ್ತು ಬ್ಯಾಂಕ್‌ಗಳು ರೈತರ ಸಾಲ ವಿತರಣೆಗೆ ಸೀಮಿತಗೊಳ್ಳದೆ ಅವರಿಗೆ ವೈಜ್ಞಾನಿಕ ಕೃಷಿ ಕೈಗೊಳ್ಳಲು ಸಲಹೆಗಾರರಾಗಿಯೂ ಕೆಲಸ ಮಾಡಬೇಕು. ಹೊಸ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳಲು ರೈತರನ್ನು ಪ್ರೇರೇಪಿಸುವ ಕೆಲಸವನ್ನು ಸಹಕಾರ ಚಳವಳಿಯ ಮೂಲಕ ಮಾಡಬೇಕು' ಎಂದರು.

• **ಗುಜರಾತ್: ಇಂದು ಪಾರೀಖ್ ರಾಜೀನಾಮೆ**

ಗಾಂಧಿನಗರ, ಜನವರಿ 4 (ಪಿಟಿಐ)– ಗುಜರಾತಿನ ಮುಖ್ಯಮಂತ್ರಿ ದಿಲೀಪ್ ಪಾರೀಖ್ ಸೋಮವಾರ ತಮ್ಮ ರಾಜೀನಾಮೆಯನ್ನು ರಾಜ್ಯಪಾಲ ಕೃಷ್ಣಪಾಲ್ ಸಿಂಗ್ ಅವರಿಗೆ ಸಲ್ಲಿಸಲಿದ್ದಾರೆ.

ಆರ್‌ಜೆಪಿಯ ಸಂಸದೀಯ ಮಂಡಳಿ ಸಭೆಯು ಅವರಿಗೆ ರಾಜೀನಾಮೆ ನೀಡುವಂತೆ ಸೂಚಿಸಿದೆ ಎನ್ನಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 5-1-1973

• **ತ್ವರಿತವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾಲುವೆ ಕಾರ್ಯ ಆರಂಭ**

ಬೆಂಗಳೂರು, ಜನವರಿ 4– ಕಲ್ಬುರ್ಗಿ, ಬಿಜಾಪುರ ಜಿಲ್ಲೆಗಳ ಜನತೆಯನ್ನು ತೀವ್ರವಾಗಿ ಕಾಡುತ್ತಿರುವ ಕ್ಷಾಮವು ದುಸ್ಸಾಧ್ಯ ಸಂಕಷ್ಟ ತಂದರೂ, ಪರೋಕ್ಷವಾಗಿ ಅವರ ಬಹುಕಾಲದ ಬೇಡಿಕೆಯೊಂದನ್ನು ಈಡೇರಿಸಲು ತ್ವರಿತ ಗಮನ ನೀಡಲು ಕಾರಣವಾಗಿದೆ.

ಬರಗಾಲಪೀಡಿತ ಜನರಿಗೆ ಉದ್ಯೋಗ ಕಲ್ಪಿಸಲು ಸರ್ಕಾರವು ಕೃಷ್ಣಾ ಮೇಲ್ದಂಡೆ ಕಾಲುವೆ ಕೆಲಸವನ್ನು ತ್ವರಿತವಾಗಿ ಪ್ರಾರಂಭಿಸಲು ನಿರ್ಧರಿಸಿದೆ.

• **'ಸುಯೋಗ, ದೊಡ್ಡ ಗೌರವ': ಹೊಸ ದಂಡನಾಯಕ ಬೇವೂರ್ ಪ್ರತಿಕ್ರಿಯೆ**

ಪುಣೆ, ಜನವರಿ 4– 'ಈ ಹುದ್ದೆಗೆ ನಾನು ಆಯ್ಕೆಯಾಗಿರುವುದು ನನ್ನ ಸುಯೋಗ. ನನಗೆ ದೊರೆತಿರುವ ದೊಡ್ಡ ಗೌರವ'.

–ಭೂಸೇನೆಯ ಪ್ರಧಾನ ದಂಡನಾಯಕರಾಗಿ ನೇಮಕಗೊಂಡಿರುವ ಪೂರ್ವವಲಯದ ದಂಡನಾಯಕ ಲೆಫ್ಟಿನೆಂಟ್ ಜನರಲ್ ಬೇವೂರ್ ಅವರನ್ನು ಸುದ್ದಿಗಾರರು ಅಭಿನಂದಿಸಿದಾಗ ಅವರು ಈ ರೀತಿ ಪ್ರತಿಕ್ರಿಯಿಸಿದರು.

ಸಂಗತ

ಪ್ರಾಣ ತೆಗೆಯದಿರಲಿ ಪ್ರೀತಿ!

ಯುವಜನರಿಗೆ ವಯೋಸಹಜ ಪ್ರೀತಿ, ಆಕರ್ಷಣೆಗಳ ಬಗ್ಗೆ ತಿಳಿಸುವುದರ ಜತೆಗೆ, ಅದಕ್ಕಿರುವ ಮಿತಿ, ಆಗಬಹುದಾದ ಅಪಾಯಗಳನ್ನೂ ಮನದಟ್ಟು ಮಾಡಿಸಬೇಕು

• ಡಾ. ಕೆ.ಎಸ್.ಚೈತ್ರಾ

ಬೆಂಗಳೂರಿನಲ್ಲಿ ಹತ್ತೊಂಬತ್ತು ವರ್ಷದ ವಿದ್ಯಾರ್ಥಿನಿಯನ್ನು ಇತ್ತೀಚೆಗೆ ಹಲವು ಬಾರಿ ಚಾಕುವಿನಿಂದ ಇರಿದು ಕೊಂದು ನಂತರ ಆತ್ಮಹತ್ಯೆಗೆ ತಾನೂ ಪ್ರಯತ್ನಿಸಿದ ಯುವಕನ ಬಗ್ಗೆ ವರದಿಯಾಗಿತ್ತು. ವರ್ಷದ ಹಿಂದೆ ಯುವವೈದ್ಯೆಯೊಬ್ಬಳು ದಾರಿಯಲ್ಲಿ ನಡೆದು ಹೋಗುತ್ತಿದ್ದಾಗ ಸ್ಕೂಟರ್‌ನಲ್ಲಿ ಬಂದ ಮೂವರು ಯುವಕರು ಆಕೆಯ ಮೇಲೆ ಆ್ಯಸಿಡ್ ಎರಚಿ ಪರಾರಿಯಾಗಿದ್ದರು. ಒಂದೇ ಎರಡೇ... ಕೇಳಿದೊಡನೆ ಎದೆ ನಡುಗಿಸುವ ಇಂಥ ದುರಂತಗಳ ಮೂಲ ಪ್ರೀತಿಯ ನಿರಾಕರಣೆ.

ಪ್ರೀತಿ ಎನ್ನುವುದು ಪರಸ್ಪರ ಮನಸ್ಸುಗಳ ನಡುವಿನ ಸುಂದರ ಅನುಭೂತಿ, ಮನಸ್ಸುಗಳನ್ನು ಅರಳಿಸುವ ಶಕ್ತಿ. ಅದು ಬದಲಾಗಿ ಈ ರೀತಿ ಪ್ರಾಣ ತೆಗೆಯುವ, ಬದುಕನ್ನು ನರಕ ಮಾಡುವ ಹಾಗಾಗಿರುವುದು ನಿಜಕ್ಕೂ ಗಂಭೀರವಾದ ವಿಷಯ. ನಮ್ಮ ಭವಿಷ್ಯ ಎಂದು ಪರಿಗಣಿಸಲಾದ ಹದಿಹರೆಯದವರ ಈ ನಡವಳಿಕೆಯು ಆತಂಕ ಮೂಡಿಸುವ ವಿಷಯ.

ಹರೆಯ ಎಂಬುದು ಸುಂದರ ಕಾಲವಷ್ಟೇ ಅಲ್ಲ, ಸೂಕ್ಷ್ಮ ಹಾಗೂ ಮಹತ್ವದ ಘಟ್ಟವೂ ಹೌದು. ಕಾಲೇಜಿಗೆ ಕಾಲಿಟ್ಟ ಹರೆಯದವರಿಗೆ ಸ್ವತಂತ್ರವಾದ ಸಂಭ್ರಮ. ಈ ಸಮಯದಲ್ಲಿ ದೇಹದಲ್ಲಿ ನಾನಾ ಬದಲಾವಣೆಗಳ ಜತೆ ಮಾನಸಿಕವಾಗಿಯೂ ಪ್ರೀತಿ, ಪ್ರೇಮ, ಸಂಗಾತಿಯ ಬಯಕೆ ಹೀಗೆ ಭಾವನೆಗಳ ಕುದಿಸಮಯ. ಮನದಲ್ಲಿ ಹೊತ್ತಿಕೊಂಡ ಆಕರ್ಷಣೆಯ ಕಿಡಿಗೆ ಮಾಧ್ಯಮಗಳಿಂದ ಗಾಳಿ ಹಾಕುವ ಕೆಲಸ ನಡೆಯುತ್ತದೆ. ಸಿನಿಮಾ, ಧಾರಾವಾಹಿ, ಜಾಹೀರಾತುಗಳ ಮುಖ್ಯ ಬಂಡವಾಳ ಯುವಜನರ ಸೂಕ್ಷ್ಮ ಸಂವೇದನೆಗಳನ್ನು ಕೆರಳಿಸುವುದು. ಪ್ರೀತಿ ಎಂಬುದನ್ನು ದೈಹಿಕ ಆಕರ್ಷಣೆ ಎಂದು ಬಿಂಬಿಸಿ ಅದಕ್ಕೆ ತಕ್ಕದಾಗಿ ಕಾಮಪ್ರಚೋದನೆ ಇವೆಲ್ಲದರ ಮುಖ್ಯ ಗುರಿ.

ಪ್ರೀತಿ– ಪ್ರೇಮ ಯಾವಾಗ ಯಾರೊಂದಿಗೆ ಆಗುತ್ತದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೂ ಪ್ರೀತಿಸಬೇಕೆಂಬ ಸಹಜ ಬಯಕೆ ಅತ್ಯಂತ ತೀವ್ರವಾಗುವುದು ಹದಿನೈದರಿಂದ ಹತ್ತೊಂಬತ್ತರ ಹದಿಹರೆಯದಲ್ಲೇ! ಹುಮ್ಮಸ್ಸಿನಲ್ಲಿ ಅದಕ್ಕೊಂದು ಕಾರಣವೂ ಬೇಕಿಲ್ಲ. ಕಣ್ಣಿಗೆ ಚೆಂದ ಕಂಡಿದ್ದು, ಮನಸ್ಸಿಗೆ ಖುಷಿ ಕೊಟ್ಟಿದ್ದು ಎಲ್ಲವೂ ಪ್ರೀತಿಯೇ. ಪರಿಚಿತ ಹುಡುಗಿ, ದೂರದ ಸಂಬಂಧಿ, ನಗುತ್ತಾ ಮಾತನಾಡಿದ ಗೆಳತಿ, ನೋಟ್ಸ್ ಕೊಟ್ಟ ಕ್ಲಾಸ್‌ಮೇಟ್ ಹೀಗೆ ಕಂಡಲ್ಲೆಲ್ಲಾ ಪ್ರೀತಿಯ ಮಾಯೆ. ವಯಸ್ಸೇ ಹಾಗೆ ಅಂದರೂ ವಾಸ್ತವದ ತಳಹದಿಯೇ ಇಲ್ಲದ, ಹಸಿಬಿಸಿ ಭಾವನೆಗಳೇ ಪ್ರಧಾನವಾಗಿರುವ ಪ್ರೀತಿಯಿಂದ ಆಗುವ ಅಪಾಯ, ಸಮಸ್ಯೆಗಳು ಹಲವಾರು.

ಪ್ರೀತಿ ಎನ್ನುವುದು ಮಾನವರಿಗಿರುವ ತೀವ್ರವಾದ ತುಡಿತ, ಅವಶ್ಯಕತೆ. ಹರೆಯದಲ್ಲಿ ಮಧುರ ಪ್ರೀತಿ (ರೊಮ್ಯಾಂಟಿಕ್) ಮುಖ್ಯವಾದದ್ದು. ಸುರಕ್ಷೆ ಮತ್ತು ನೆಮ್ಮದಿ ನೀಡುವ ಬಾಂಧವ್ಯದ ಬಗ್ಗೆ ಅರಿವೇ ಇಲ್ಲ. ಈ ಹಂತ ತಲುಪಲು ಪರಸ್ಪರ ಒಪ್ಪಿತ ದೀರ್ಘಕಾಲದ ಸಂಬಂಧಗಳಲ್ಲಿ ಮಾತ್ರ ಸಾಧ್ಯ ಎಂಬುದು ಕುರುಡು ಪ್ರೀತಿಗೆ ಕಾಣದು. ಸಹಜವಾದ ಸ್ನೇಹ-ಸಲುಗೆಯನ್ನು ಪ್ರೀತಿಯೆಂದು ಭ್ರಮಿಸಿ ಪ್ರೇಮದ ಅತಿಯಾದ ವೈಭವೀಕರಣದಿಂದ ಪ್ರಭಾವಿತರಾಗಿ ಒಟ್ಟಿಗೇ ತಿರುಗುವ, ತಿನ್ನುವ, ಹಾಡಿ-ಕುಣಿಯುವ ಕಲ್ಪನಾ ಜಗತ್ತಿನಲ್ಲಿ ವಿಹರಿಸುತ್ತಿರುವವರಿಗೆ ಪ್ರೀತಿಯ ನಿರಾಕರಣೆ ಅತೀವ ಆಘಾತವನ್ನುಂಟು ಮಾಡುವುದು ಸಹಜವೇ. ಹೆಚ್ಚಿನವರು ಒಂದಷ್ಟು ದುಃಖಿಸಿ ಸಾಮಾನ್ಯ ಜೀವನಕ್ಕೆ ಮರಳುತ್ತಾರೆ. ಆದರೆ ಅನೇಕರು ಜೀವನವೇ ಮುಗಿಯಿತೆಂಬಂತೆ ನಿರಾಶೆಗೆ ಒಳಗಾಗುತ್ತಾರೆ. ವಿದ್ಯಾಭ್ಯಾಸ, ಕೌಟುಂಬಿಕ ಜೀವನವನ್ನೂ ನಿರ್ಲಕ್ಷಿಸುತ್ತಾರೆ. ದುಃಖ ಮರೆಯಲು ಕೆಟ್ಟ ಚಟಗಳಿಗೆ ಮೊರೆ ಹೋಗುವ ಸಾಧ್ಯತೆ ಇರುತ್ತದೆ. ಸ್ವಮರುಕ, ಖಿನ್ನತೆ, ಕೀಳರಿಮೆಯಿಂದ ಆತ್ಮಹತ್ಯೆಯ ಯೋಚನೆಯನ್ನೂ ಮಾಡಬಹುದು.

ಇದರೊಂದಿಗೆ ಹಲವರಲ್ಲಿ ತಾನು ಪ್ರೀತಿಸುವ ವ್ಯಕ್ತಿಯ ಬಗ್ಗೆ ಸಂಪೂರ್ಣ ಅಧಿಕಾರ ತನಗಿದೆ ಎಂಬ ಭಾವನೆ ಆಳವಾಗಿ ಬೇರೂರಿರುತ್ತದೆ. ಹಾಗಾಗಿ ಆ ವ್ಯಕ್ತಿ ಇನ್ನೊಬ್ಬರೊಡನೆ ಒಡನಾಡಿದರೆ ಅಸೂಯೆ. ವ್ಯಕ್ತಿಯ ನಿಕಟವರ್ತಿಗಳು, ಪ್ರೀತಿಪಾತ್ರರ ಬಗ್ಗೆ ಸಂಶಯ, ಸಿಟ್ಟಿನಿಂದ ಮನಸ್ಸು ಉರಿಯುತ್ತದೆ. ನಿರಾಕರಣೆಗೆ ಬುದ್ಧಿ ಕಲಿಸಬೇಕು, ತನಗಾದ ಅಪಮಾನಕ್ಕೆ ಪ್ರತೀಕಾರ ಕೈಗೊಳ್ಳಬೇಕು, ತನಗೆ ಸಿಗಲಾರದ್ದು ಯಾರಿಗೂ ಸಿಗಬಾರದು... ಹೀಗೆ ದ್ವೇಷ, ಸೇಡಿನ ಮನೋಭಾವವೂ ಮೂಡಬಹುದು. ನಡತೆಯ ಬಗ್ಗೆ ಅಪಪ್ರಚಾರ, ಜಾಲತಾಣಗಳ ಮೂಲಕ ಬೆದರಿಕೆ, ಅಸಭ್ಯ ಕರೆ-ಫೋಟೊ, ದೈಹಿಕ ಹಲ್ಲೆ, ಕೊಲೆ ಪ್ರಯತ್ನ ಹೀಗೆ ಅಪಾಯಕಾರಿ ಮಾರ್ಗ ಹಿಡಿಯಬಹುದು. ಪರಿಣಾಮವಾಗಿ, ಪ್ರೀತಿ ಬಾಳಿನ ಬುತ್ತಿಯಾಗಿರದೇ ಸುಡುವ ಬತ್ತಿಯಾದೀತು!

ಈ ದಿಸೆಯಲ್ಲಿ ಮನೆಯಲ್ಲಿ ತೀರಾ ನಿರ್ಬಂಧಿತವಲ್ಲದ, ಹೆಣ್ಣು-ಗಂಡು ಸಹಜವಾಗಿ ಒಡನಾಡುವ, ಪರಸ್ಪರ ಗೌರವ, ವಿಶ್ವಾಸದಿಂದ ಕಾಣುವ ವಾತಾವರಣವನ್ನು ಬಾಲ್ಯದಿಂದಲೇ ಪ್ರೋತ್ಸಾಹಿಸಬೇಕು. ಹರೆಯದಲ್ಲಿ ಮಕ್ಕಳಿಗೆ ಸ್ವಾತಂತ್ರ್ಯ ನೀಡಿದರೂ ಅವರ ಚಟುವಟಿಕೆ, ಸ್ನೇಹಿತರ ಬಗ್ಗೆ ಗಮನವಿಡುವುದು ಅಗತ್ಯ. ಶಾಲಾ ಕಾಲೇಜುಗಳಲ್ಲಿ ಯುವಜನರಿಗೆ ವಯೋಸಹಜ ಪ್ರೀತಿ, ಆಕರ್ಷಣೆಗಳ ಬಗ್ಗೆ ತಿಳಿಸುವುದರ ಜತೆಗೆ ಅದಕ್ಕಿರುವ ಮಿತಿ, ಆಗಬಹುದಾದ ಅಪಾಯಗಳನ್ನೂ ಮನದಟ್ಟು ಮಾಡಿಸಬೇಕು.

ಯುವಜನರು ಮಾಧ್ಯಮಗಳನ್ನು ಅತಿಯಾಗಿ ಅವಲಂಬಿಸದೇ ಇರುವುದರ ಜತೆಗೆ ವಸ್ತುನಿಷ್ಠವಾಗಿ ಜೀವನವನ್ನು ಗ್ರಹಿಸಲು ಕಲಿಯಬೇಕು. ಚಂಚಲ ಮನಸ್ಸನ್ನು ಹಿಡಿತದಲ್ಲಿಡಲು ಸಾಹಿತ್ಯ, ಕಲೆ, ನಡಿಗೆ, ಪ್ರವಾಸದಂತಹ ಉತ್ತಮ ಹವ್ಯಾಸಗಳು ಸಹಾಯಕ.

ವಾಚಕರ ವಾಣಿ

ಅತೃಪ್ತರು ಮತ್ತು ಕ್ರಾಂತಿ!

ವಿಧಾನಸಭಾ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ಸಂಕ್ರಾಂತಿಗೆ ಬಿಡುಗಡೆಯಾಗಲಿದೆ ಎಂಬ ಸುದ್ದಿ ಇದೆ. ಆರು ತಿಂಗಳ ಮೊದಲೇ ಪಟ್ಟಿ ಬಿಡುಗಡೆ ಎಂದಿದ್ದ ಕಾಂಗ್ರೆಸ್ (ಈಗ ಉಳಿದಿರುವುದು ನಾಲ್ಕೇ ತಿಂಗಳು) ಸಹ ಈಗ ಸಂಕ್ರಾಂತಿಗೆ ಎನ್ನುತ್ತಿದೆ! ಇನ್ನು ಸಂಪುಟ ವಿಸ್ತರಣೆಯು ಸಂಕ್ರಾಂತಿಗೆ ಎಂದು ಬಿಜೆಪಿ ಹೇಳುತ್ತಿದೆ. ಬಹುಶಃ ಇವರ ಪಟ್ಟಿ, ಅವೆರಡು ಪಕ್ಷಗಳ ಪಟ್ಟಿಯಲ್ಲಿನ ಹೆಸರು ನೋಡಿ ಬಿಡುಗಡೆಯಾಗಬಹುದೇನೋ?! ಒಟ್ಟಾರೆ, ಈ ಬಾರಿ ಚುನಾವಣೆಗೆ ಟಿಕೆಟ್ ಗಿಟ್ಟಿಸಿದವರು, ಸಂಪುಟದಲ್ಲಿ ಸ್ಥಾನ ಪಡೆದವರು ಆಚರಿಸುವರು ಸಂಕ್ರಾಂತಿ ಬಲು ಜೋರು! ಹಾಗೇ ಅತೃಪ್ತರು, ಇತ್ತಿಂದತ್ತ ಅತ್ತಿಂದಿತ್ತ ಹಾರಿ 'SOME' ಕ್ರಾಂತಿ ಮಾಡುವರೇನೋ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ರಾರಾಜಿಸುತ್ತಿದೆ ಓಲೈಕೆ ರಾಜಕಾರಣ

'ಸಾಹಿತ್ಯ ಪರಿಷತ್ತು ಎಷ್ಟು ಪ್ರಾತಿನಿಧಿಕ?' ಎಂಬ ಲೇಖನದಲ್ಲಿ (ಪ್ರ.ವಾ., ಜ. 4) ಚಂದ್ರಕಾಂತ ವಡ್ಡು ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಸಮಯೋಚಿತವಾಗಿವೆ. ಸರ್ಕಾರದ ಅನುದಾನ ಅವಲಂಬಿಸಿದ ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಗಳನ್ನು ಪ್ರಶ್ನಿಸುವ, ಕಟಕಟೆಯಲ್ಲಿ ನಿಲ್ಲಿಸುವ ಎಲ್ಲಾ ಅವಕಾಶಗಳು, ಹಕ್ಕುಗಳು ಜವಾಬ್ದಾರಿಯುತ ಪ್ರಜೆಗಳಿಗಿವೆ ನಿಜ. ಇಂತಹ ಜವಾಬ್ದಾರಿಯನ್ನು ಮೊದಲು ಕೈಗೆತ್ತಿಕೊಳ್ಳಬೇಕಾದವರು ಲೇಖಕರು ಮತ್ತು ಸಾಹಿತ್ಯದ ಅಭಿಮಾನಿಗಳು. ಆದರೆ ಪರಿಸ್ಥಿತಿ ಹೇಗಿದೆಯೆಂದರೆ, ಓಲೈಕೆಯ ರಾಜಕಾರಣ ಸಾಹಿತ್ಯ ವಲಯದಲ್ಲಿಯೂ ರಾರಾಜಿಸುತ್ತಿದೆ.

ಕೆಲವರಂತೂ ತಮಗೆ ದೊರಕಬಹುದಾದ ಪ್ರಶಸ್ತಿ, ಪುರಸ್ಕಾರಗಳಿಗೆ, ವೇದಿಕೆಯಲ್ಲಿನ ಅವಕಾಶಕ್ಕಾಗಿ ಸಾಲುಗಟ್ಟಿ ನಿಂತಿದ್ದಾರೆ. ಕಸಾಪ ನಡೆಸುವ ಸಾಹಿತ್ಯ ಸಮ್ಮೇಳನಗಳಲ್ಲಿ ಮೆರವಣಿಗೆ, ಹಾರ, ತುರಾಯಿ, ಶಾಲು ಸನ್ಮಾನ ಮತ್ತು ಊಟೋಪಚಾರಗಳದ್ದೇ ಸುದ್ದಿಗಳು. ಕರ್ನಾಟಕದ ಜ್ವಲಂತ ಸಮಸ್ಯೆಗಳ ಕುರಿತು ಗಂಭೀರ ಚರ್ಚೆಗಳಂತೂ ನಡೆಯಲಾರವು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಪ್ರಜ್ಞಾವಂತ ಸಮುದಾಯ ಎಚ್ಚೆತ್ತು ಪರ್ಯಾಯ ಸಂಘಟನೆ ಕಟ್ಟಿ-ಕೊಳ್ಳುವುದರತ್ತ ಆಲೋಚಿಸಬೇಕು.

ಡಾ. ಕೆ.ಆರ್.ದುರ್ಗಾದಾಸ್, ಧಾರವಾಡ

ಸಿದ್ಧೇಶ್ವರ ಶ್ರೀ ಮತ್ತು ಆದರ್ಶ ಪಾಲನೆ

ಸಿದ್ಧೇಶ್ವರ ಸ್ವಾಮಿಯವರ ಅಂತಿಮದರ್ಶನವನ್ನು ಅನೇಕ ಗಣ್ಯರು ಪಡೆದಿದ್ದಾರೆ. ಹಲವು ರಾಜಕಾರಣಿಗಳು ಸಹ ಭೇಟಿ ನೀಡಿ ಮಾಧ್ಯಮದ ಮುಂದೆ ಎಂದಿನ ವರಸೆಯಲ್ಲಿ ಮಾತನಾಡಿದ್ದಾರೆ. ಆದರೆ ನಮ್ಮ ರಾಜಕಾರಣಿಗಳಲ್ಲಿ ಯಾರೊಬ್ಬರೂ ಸಿದ್ಧೇಶ್ವರ ಶ್ರೀಗಳ ತತ್ವ– ಆದರ್ಶಗಳನ್ನು ಪಾಲಿಸುತ್ತೇವೆ ಎಂದು ಹೇಳಿದ ನಿದರ್ಶನ ಗೋಚರಿಸಲಿಲ್ಲ. ಕೆಲವರಾದರೂ ಅಂತಹ ಮಾತು ಆಡಿದ್ದಿದ್ದರೆ ಸಮಾಧಾನ ಆಗುತ್ತಿತ್ತು.

ಈಗ ಮಾತು ಕೊಡದಿದ್ದರೂ ಪರವಾಗಿಲ್ಲ. ಸಿದ್ಧೇಶ್ವರ ಶ್ರೀಗಳ ಬಗ್ಗೆ ನಿಜವಾದ ಗೌರವ ಹೊಂದಿದ್ದರೆ ಅಂತಹ ರಾಜಕಾರಣಿಗಳು ಮುಂದಿನ ದಿನಗಳಲ್ಲಿ ಖಂಡಿತ ಬದಲಾಗುತ್ತಾರೆ ಎಂಬ ಭರವಸೆ ಹೊಂದೋಣವೇ?

ಬಿ.ಬಿ.ಎಲ್. ಗೌಡ, ಮೈಸೂರು

ಹೆಚ್ಚಿನ ತಾಣಗಳಲ್ಲಿ ಅದೇ ಅವ್ಯವಸ್ಥೆ

'ಪ್ರವಾಸ ಮತ್ತು ಪ್ರಯಾಸ' ಎಂಬ ಲೇಖನದಲ್ಲಿ (ಪ್ರ.ವಾ., ಜ. 3) ಪ.ರಾಮಕೃಷ್ಣ ಶಾಸ್ತ್ರಿ ಅವರು ಮೈಸೂರು ಜಿಲ್ಲೆಯ ಕೆಲವು ಪ್ರೇಕ್ಷಣೀಯ ಸ್ಥಳಗಳಲ್ಲಿನ ಅವ್ಯವಸ್ಥೆ ಬಗ್ಗೆ ಬರೆದಿದ್ದಾರೆ. ಇದು ಅಲ್ಲಿಗೆ ಮಾತ್ರ ಸೀಮಿತವಲ್ಲ. ರಾಜ್ಯದ ಹೆಚ್ಚಿನ ಪ್ರವಾಸಿ ಸ್ಥಳಗಳಲ್ಲಿ ಅದೇ ಅವ್ಯವಸ್ಥೆಯ ಚಿತ್ರಣ ಇದೆ.

ಕೆ.ಎಸ್.ಸೋಮೇಶ್ವರ, ಬೆಂಗಳೂರು

ಬಸ್ ಟಿಕೆಟ್ ದರ ಹೀಗೇಕೆ?

ಶಿವಮೊಗ್ಗಕ್ಕೆ ತೆರಳುವ ಸಲುವಾಗಿ ದಾವಣಗೆರೆಯಿಂದ ನಮ್ಮ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ನಲ್ಲಿ ಇತ್ತೀಚೆಗೆ ಪ್ರಯಾಣಿಸುತ್ತಿದ್ದಾಗ, ಪ್ರಯಾಣಿಕರಿಂದ ಟಿಕೆಟ್ ಹಣ ತೆಗೆದುಕೊಳ್ಳುವಾಗ ಕಂಡಕ್ಟರ್ ಗೊಣಗುತ್ತಿದ್ದುದು ಕೇಳಿಸಿತು. 'ಶಿವಮೊಗ್ಗಕ್ಕೆ ಒಂದು ಸೀಟಿಗೆ 500 ರೂಪಾಯಿ ಕೊಟ್ಟರೆ ನಾನು ಮಿಕ್ಕ 399 ಚಿಲ್ಲರೆ ಎಲ್ಲಿಂದ ತರಲಿ, ಬರುವಾಗ ಚಿಲ್ಲರೆ ಇಟ್ಕೊಂಡು ಬರಬೇಕಪ್ಪ' ಎಂದು ಅವರು ಹೇಳುತ್ತಿದ್ದರು. ಕಾರಣ, ದಾವಣಗೆರೆಯಿಂದ ಶಿವಮೊಗ್ಗಕ್ಕೆ ಬಸ್ ಟಿಕೆಟ್ ದರ ₹ 101 ಇದೆ. ಪ್ರತೀ ಪ್ರಯಾಣಿಕ ₹ 500, ₹ 200 ಅಥವಾ ₹ 150 ಹೀಗೆ ಕೊಟ್ಟು ಮೇಲಿನ ಒಂದು ರೂಪಾಯಿ ಚಿಲ್ಲರೆ ಕೊಡುತ್ತಿರಲಿಲ್ಲ. ಕಂಡಕ್ಟರ್ ಪರಿಸ್ಥಿತಿಯಂತೂ ಹೇಳತೀರದು. ಎಲ್ಲರಿಗೂ ಅವರು ಚಿಲ್ಲರೆ ಹಣ ಎಲ್ಲಿಂದ ತರುತ್ತಾರೆ? ಚಿಲ್ಲರೆ ಸಲುವಾಗಿ ಕೆಲವೊಮ್ಮೆ ಜಗಳಗಳಾಗುವುದೂ ಉಂಟು.

ಸಾರಿಗೆ ಅಧಿಕಾರಿಗಳು ರಾಜ್ಯದ ಯಾವುದೇ ಸ್ಥಳಕ್ಕೆ ಟಿಕೆಟ್ ದರ ನಿಗದಿಪಡಿಸುವ ಮುನ್ನ ಪ್ರಯಾಣಿಕರು ಮತ್ತು ಕಂಡಕ್ಟರ್ ನಡುವೆ ಈ ರೀತಿ ಚಿಲ್ಲರೆಗೆ ತೊಂದರೆಯಾಗದಂತೆ ಜಾಗ್ರತೆ ವಹಿಸಬೇಕು. ಇಲ್ಲವೇ ಪರ್ಯಾಯವಾಗಿ ಪ್ರತಿಯೊಂದು ಬಸ್‌ನಲ್ಲೂ ಯುಪಿಐ ಮೂಲಕ ಪಾವತಿ ಮಾಡುವ ವ್ಯವಸ್ಥೆಯನ್ನಾದರೂ ಮಾಡಬೇಕು.

ಮುರುಗೇಶ ಡಿ., ದಾವಣಗೆರೆ

ಕನ್ನಡದ ಕಂಪು ಬೀರಲಿ

ಶುಕ್ರವಾರದಿಂದ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ 'ಏಲಕ್ಕಿ ನಗರ' ಎಂದು ಕರೆಯಲಾಗುವ ಹಾವೇರಿಯು ಮದುವಣಗಿತ್ತಿಯಂತೆ ಸಿಂಗಾರಗೊಂಡು ಕಂಗೊಳಿಸುತ್ತಿದೆ. ಸಾಹಿತ್ಯ ಸಮ್ಮೇಳನವು ಕನ್ನಡ ನಾಡು- ನುಡಿ, ಸಾಹಿತ್ಯ, ಸಂಗೀತ, ಕಲೆಯಂತಹ ವಿಷಯಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ. ಆದರೆ ಇಂದು ಕನ್ನಡ ನಾಡಿನಲ್ಲಿ ಕನ್ನಡತನವೇ ಮರೆಯಾಗುತ್ತಿದೆ. ದಾಖಲಾತಿ ಇಲ್ಲದೆ ಕನ್ನಡ ಮಾಧ್ಯಮ ಶಾಲೆಗಳನ್ನು ಮುಚ್ಚುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗಿ ಇಂಗ್ಲಿಷ್ ಮಾಧ್ಯಮ ಶಾಲೆಗಳತ್ತ ಮುಖ ಮಾಡಿದ್ದಾರೆ. ರಾಜ್ಯದ ಕೆಲವು ಶಾಲೆಗಳಲ್ಲಿ ಇಂದು ಕನ್ನಡವನ್ನು ದ್ವಿತೀಯ, ತೃತೀಯ ಭಾಷೆಯಾಗಿ ಕಲಿಸಲಾಗುತ್ತಿದೆ. ಇದರಿಂದ ಮಕ್ಕಳಲ್ಲಿ ಕನ್ನಡ ಸಾಹಿತ್ಯದ ಅಭಿರುಚಿ ಮರೆಯಾಗುತ್ತಿದೆ.

ಈ ವರ್ಷದ ಸಾಹಿತ್ಯ ಸಮ್ಮೇಳನವು ಇಂತಹ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಿ, ಮಕ್ಕಳಲ್ಲಿ ಮತ್ತು ನಾಡಿನ ಜನರಲ್ಲಿ ಕನ್ನಡದ ಕಂಪನ್ನು ಬೀರುವಂತೆ ಆಗಬೇಕು.

ವಿಶ್ವನಾಥ್ ಎಂ., ಜಡೆ, ಚಗಟೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಹುರಾಜ್ಯ ಸಹಕಾರ ಸಂಘ ಕೇಂದ್ರ ಸರ್ಕಾರಕ್ಕೇ ಪರಮಾಧಿಕಾರ

ಬೇರೆ-ಬೇರೆ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳನ್ನು ಒಗ್ಗೂಡಿಸಿ ಬಹುರಾಜ್ಯ ಸಹಕಾರ ಸಂಘಗಳನ್ನು ರಚಿಸುವ ಕಾನೂನಿಗೆ ತಿದ್ದುಪಡಿ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಇಂತಹ ಬಹುರಾಜ್ಯ ಸಹಕಾರ ಸಂಘಗಳ ರಚನೆಯ ನಂತರ, ಸಹಕಾರ ಸಂಘಗಳ ಕಾರ್ಯನಿರ್ವಹಣೆಯಲ್ಲಿ ಭಾಗಿಯಾಗಲು ಕೇಂದ್ರ ಸರ್ಕಾರಕ್ಕೆ ಈ ತಿದ್ದುಪಡಿಯು ಅವಕಾಶ ಮಾಡಿಕೊಡುತ್ತದೆ. ಕೇಂದ್ರ ಸರ್ಕಾರಕ್ಕೆ ಈವರೆಗೆ ಇಲ್ಲದೇ ಇದ್ದ ಅಧಿಕಾರಗಳನ್ನು ಈ ತಿದ್ದುಪಡಿಯು ನೀಡುತ್ತದೆ. ಗುಜರಾತಿನ ಅಮೂಲ್ ಮತ್ತು ಕರ್ನಾಟಕದ ಕೆಎಂಎಫ್ ಒಟ್ಟಿಗೆ ಕೆಲಸ ಮಾಡುತ್ತವೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆಯು, ಈ ತಿದ್ದುಪಡಿಯ ಕಾರಣದಿಂದ ಮಹತ್ವ ಪಡೆದಿದೆ

ಪ್ರಜಾವಾಣಿ ವಾರ್ತೆ

'ಸಹಕಾರ ಸಂಘಗಳು ಮತ್ತು ಬಹುರಾಜ್ಯ ಸಹಕಾರ ಸಂಘಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಬಹುರಾಜ್ಯ ಸಹಕಾರ ಸಂಘ ಕಾಯ್ದೆ-2022ಕ್ಕೆ ತಿದ್ದುಪಡಿ ತರಲಾಗುತ್ತಿದೆ' ಎಂದು ಕೇಂದ್ರ ಸರ್ಕಾರ ಹೇಳಿದೆ. ಇದರ ಭಾಗವಾಗಿ ಬಹುರಾಜ್ಯ ಸಹಕಾರ ಸಂಘ ಮಸೂದೆ-2022ನ್ನು ಈಚೆಗೆ ಸಂಸತ್ತಿನಲ್ಲಿ ಮಂಡಿಸಲಾಗಿದೆ. ವಿರೋಧ ಪಕ್ಷಗಳಿಂದ ಆಕ್ಷೇಪ ವ್ಯಕ್ತವಾದ ಕಾರಣ, ಈ ಮಸೂದೆಯನ್ನು ಸಂಸದೀಯ ಸಮಿತಿಯ ಪರಾಮರ್ಶೆಗೆ ಕಳುಹಿಸಲಾಗಿದೆ. ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳ ಅಧಿಕಾರವನ್ನು ಈ ಮಸೂದೆ ಮೊಟಕುಗೊಳಿಸುತ್ತದೆ ಎಂಬುದು ವಿರೋಧ ಪಕ್ಷಗಳ ಪ್ರಮುಖ ಆಕ್ಷೇಪ.

ರಾಜ್ಯದಲ್ಲಿ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲು ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರ ಎಂಬ ಪ್ರತ್ಯೇಕ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಈ ಪ್ರಾಧಿಕಾರಗಳು ಸಂಪೂರ್ಣ ಸ್ವಾಯತ್ತೆ ಹೊಂದಿವೆ. ಈಗ ಬಹುರಾಜ್ಯ ಸಹಕಾರ ಸಂಘಗಳ ನಿರ್ದೇಶಕ ಮಂಡಳಿಗೆ ಚುನಾವಣೆ ನಡೆಸಲು ರಾಷ್ಟ್ರ ಮಟ್ಟದಲ್ಲಿಯೂ ಸಹಕಾರ ಚುನಾವಣಾ ಪ್ರಾಧಿಕಾರವನ್ನು ರಚಿಸಲು ಈ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ರಾಜ್ಯಮಟ್ಟದ ಚುನಾವಣಾ ಪ್ರಾಧಿಕಾರಗಳಿಗೆ ಹೋಲಿಸಿದರೆ, ರಾಷ್ಟ್ರ ಮಟ್ಟದ ಚುನಾವಣಾ ಪ್ರಾಧಿಕಾರದ ಅಧಿಕಾರ ಹೆಚ್ಚು. ಈ ಪ್ರಾಧಿಕಾರದ ರಚನೆ ಮತ್ತು ಅಧಿಕಾರಗಳ ಬಗ್ಗೆಯೇ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಈ ಮಸೂದೆಯಲ್ಲಿರುವ ಸೆಕ್ಷನ್‌ಗಳ ಅಡಿಯಲ್ಲಿ ಸ್ಥಾಪಿಸಲಾದ ಬಹುರಾಜ್ಯ ಸಹಕಾರ ಸಂಘಗಳ ನಿರ್ದೇಶಕ ಮಂಡಳಿಗೆ ರಾಷ್ಟ್ರ ಮಟ್ಟದ ಚುನಾವಣಾ ಪ್ರಾಧಿಕಾರವು ಚುನಾವಣೆ ನಡೆಸಲಿದೆ. ಈ ಪ್ರಾಧಿಕಾರವು ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಗರಿಷ್ಠ ಮೂವರು ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಕ ಮಾಡಬಹುದು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗೆ ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ರ‍್ಯಾಂಕ್‌ನ ಅಧಿಕಾರಿಗಳನ್ನು ನೇಮಕ ಮಾಡಲು ಈ ಮಸೂದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಆದರೆ, ಉಳಿದ ಮೂವರು ಸದಸ್ಯರ ಆಯ್ಕೆ ಹೇಗೆ ನಡೆಯುತ್ತದೆ ಎಂಬುದರ ವಿವರ ಮಸೂದೆಯಲ್ಲಿ ಇಲ್ಲ. ಬದಲಿಗೆ, 'ಸದಸ್ಯರಾಗುವವರಿಗೆ ಇರಬೇಕಾದ ಅರ್ಹತೆಗಳೇನು ಎಂಬುದನ್ನು ಆಯ್ಕೆ ಸಂದರ್ಭದಲ್ಲಿ ವಿವರಿಸಲಾಗುತ್ತದೆ' ಎಂದಷ್ಟೇ ಮಸೂದೆಯಲ್ಲಿ ವಿವರಿಸಲಾಗಿದೆ.

ಈ ಬಗ್ಗೆ ಲೋಕಸಭೆಯಲ್ಲಿ ಕಾಂಗ್ರೆಸ್ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. 'ಸರ್ಕಾರವು ತನಗೆ ಬೇಕಾದವರನ್ನು ಪ್ರಾಧಿಕಾರಕ್ಕೆ ನೇಮಕಾತಿ ಮಾಡಬಹುದು. ಹೀಗಾಗಿ ಸದಸ್ಯರು ಯಾರಾಗಬೇಕು ಎಂಬುದನ್ನು ಸ್ಪಷ್ಟವಾಗಿ ವಿವರಿಸಬೇಕು' ಎಂದು ಕಾಂಗ್ರೆಸ್‌ನ ಅಧೀರ್ ರಂಜನ್ ಚೌಧರಿ ಅವರು ಮಸೂದೆ ಮೇಲಿನ ಚರ್ಚೆಯ ವೇಳೆ ಒತ್ತಾಯಿಸಿದ್ದರು.

ಈ ಪ್ರಾಧಿಕಾರದ ಕೆಲವು ಅಧಿಕಾರಗಳ ಬಗ್ಗೆಯೂ ವಿರೋಧ ಪಕ್ಷಗಳು ಸಂಸತ್ತಿನಲ್ಲಿ ತಮ್ಮ ಆಕ್ಷೇಪವನ್ನು ದಾಖಲಿಸಿದೆ. ಬಹುರಾಜ್ಯ ಸಹಕಾರ ಸಂಘಗಳ ನಿರ್ದೇಶಕರ ಮಂಡಳಿಗೆ ನಡೆದ ಚುನಾವಣೆಯನ್ನು ಮತ್ತು ಚುನಾವಣೆಯ ಮೂಲಕ ಆದ ಆಯ್ಕೆಯನ್ನು ಸಂಪೂರ್ಣವಾಗಿ ರದ್ದುಪಡಿಸುವ ಅಧಿಕಾರ ಕೇಂದ್ರ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಇದೆ. ಇದನ್ನು ಮಸೂದೆಯ 123ನೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ. ಪ್ರಜಾಸತ್ತಾತ್ಮಕವಾಗಿ ನಡೆದ ಚುನಾವಣೆಯ ಮೂಲಕ ಆಯ್ಕೆಯಾದವರನ್ನು, ಸರ್ಕಾರದಿಂದ ನೇಮಕವಾದ ಪ್ರಾಧಿಕಾರಕ್ಕೆ ಸಂಪೂರ್ಣವಾಗಿ ಅಮಾನತು ಮಾಡಲು ಅಥವಾ ಆಯ್ಕೆಯನ್ನೇ ರದ್ದುಪಡಿಸುವ ಅಧಿಕಾರ ನೀಡಲಾಗಿದೆ. ಇದು ಸಹಕಾರ ತತ್ವಕ್ಕೇ ವಿರುದ್ಧವಾದುದು ಎಂಬುದು ವಿರೋಧ ಪಕ್ಷಗಳ ಆಕ್ಷೇಪ.

ಅನಿರ್ದಿಷ್ಟಾವಧಿವರೆಗೆ ಆಡಳಿತಾಧಿಕಾರಿ ನೇಮಕಕ್ಕೆ ಅವಕಾಶ

ಬಹುರಾಜ್ಯ ಸಹಕಾರ ಸಂಘಗಳ ಕಾರ್ಯನಿರ್ವಹಣೆಯಲ್ಲಿ ಸರ್ಕಾರವು ನೇರವಾಗಿ ಭಾಗಿಯಾಗಲು ತಿದ್ದುಪಡಿ ಮಸೂದೆಯು ಅವಕಾಶ ಮಾಡಿಕೊಡುತ್ತದೆ. 'ಬಹುರಾಜ್ಯ ಸಹಕಾರ ಸಂಘಗಳ ನಿರ್ದೇಶಕರ ಮಂಡಳಿಯು ಸಹಕಾರ ತತ್ವಗಳಿಗೆ ವಿರುದ್ಧವಾಗಿ, ಸಂಘ ಮತ್ತು ಸಂಘದ ಸದಸ್ಯರ ನ್ಯಾಯಬದ್ಧ ಹಿತಾಸಕ್ತಿಗೆ ವಿರುದ್ಧವಾಗಿ ನಡೆದುಕೊಂಡಿದೆ ಎಂದು ಸರ್ಕಾರವು ಭಾವಿಸಿದರೆ ಮಂಡಳಿಯನ್ನು ರದ್ದುಪಡಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ' ಎಂದು ಈ ಮಸೂದೆಯ 123ಮೇ (1)(ಎ) ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಇದೇ ಸೆಕ್ಷನ್‌ನಲ್ಲಿ, 'ಸಾರ್ವಜನಿಕ ಹಿತಾಸಕ್ತಿಯ ದೃಷ್ಟಿಯಿಂದ ಸಹಕಾರ ಚುನಾವಣಾ ಪ್ರಾಧಿಕಾರವು ನೀಡಿದ ನಿರ್ದೇಶನವನ್ನು ಮತ್ತು ಚುನಾವಣೆ ನಡೆಸುವಂತೆ ನೀಡಲಾದ ಸೂಚನೆಯನ್ನು ಪಾಲಿಸುವಲ್ಲಿ ನಿರ್ದೇಶಕ ಮಂಡಳಿಯು ವಿಫಲವಾದರೆ, ಅಂತಹ ನಿರ್ದೇಶಕ ಮಂಡಳಿಯನ್ನು ರದ್ದುಪಡಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಇದೆ' ಎಂದು ವಿವರಿಸಲಾಗಿದೆ. ಜತೆಗೆ, 'ನಿರ್ದೇಶಕ ಮಂಡಳಿಯನ್ನು ರದ್ದುಪಡಿಸದೇ ಅಥವಾ ಅಮಾನತು ಮಾಡದೇ ಇದ್ದರೆ, ಸಹಕಾರ ಸಂಘದ ಕಾರ್ಯನಿರ್ವಹಣೆಗೆ ಗರಿಷ್ಠ ಇಬ್ಬರು ಆಡಳಿತಾಧಿಕಾರಿಗಳನ್ನು ಕೇಂದ್ರ ಸರ್ಕಾರವು ನೇಮಕ ಮಾಡಬಹುದು. ಅಂತಹ ಆಡಳಿತಾಧಿಕಾರಿಯ ಅಧಿಕಾರದ ಅವಧಿ ಆರು ತಿಂಗಳು ಮೀರಬಾರದು ಅಥವಾ ಅವರ ಅಧಿಕಾರದ ಅವಧಿ ಎಷ್ಟು ಎಂಬುದನ್ನು ಸರ್ಕಾರವು ತನ್ನ ಆದೇಶದಲ್ಲಿ ಉಲ್ಲೇಖಿಸಬಹುದು' ಎಂದು ಇದೇ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ತನ್ನ ವಿರುದ್ಧ ಬಂದಿರುವ ಆರೋಪಗಳಿಗೆ ನಿರ್ದೇಶಕ ಮಂಡಳಿಯು ಸ್ಪಷ್ಟನೆ ನೀಡಲು ಅವಕಾಶವಿದೆಯಾದರೂ, ಕೇಂದ್ರ ಸರ್ಕಾರವು ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ. ಜತೆಗೆ ಬಹುರಾಜ್ಯ ಸಹಕಾರ ಸಂಘಗಳಿಗೆ ಅನಿರ್ದಿಷ್ಟಾವಧಿವರೆಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಈ ಮಸೂದೆ ನೀಡುತ್ತದೆ. ಈ ಮಸೂದೆಯು ಕಾಯ್ದೆಯಾದರೆ, ಬಹುರಾಜ್ಯ ಸಹಕಾರ ಸಂಘಗಳ ಮೇಲೆ ಸಂಪೂರ್ಣ ಹಿಡಿತ ಕೇಂದ್ರ ಸರ್ಕಾರಕ್ಕೆ ದೊರೆಯುತ್ತದೆ.

ಲಾಭ ಹಂಚಿಕೊಳ್ಳಬೇಕು...

ದೇಶದ ಹಲವು ಬಹುರಾಜ್ಯ ಸಹಕಾರ ಸಂಘಗಳು ವಿವಿಧ ಕಾರಣಗಳಿಂದ ನಷ್ಟದಲ್ಲಿವೆ. ಇಂತಹ ಸಂಘಗಳನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡುವ ಉದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ. ನಷ್ಟದಲ್ಲಿ ಸಿಲುಕಿರುವ ಸಹಕಾರ ಸಂಘಗಳಿಗೆ ಚೈತನ್ಯ ನೀಡುವ ಉದ್ದೇಶದಿಂದ ಸಹಕಾರ ನಿಧಿ ಅಸ್ತಿತ್ವಕ್ಕೆ ತರಲು ತಿದ್ದುಪಡಿ ಮಸೂದೆಯಲ್ಲಿ ಪ್ರಸ್ತಾಪ ಮಾಡಲಾಗಿದೆ. ಆದರೆ ಈ ಉದ್ದೇಶಕ್ಕಾಗಿ ಹಾಕಿಕೊಂಡಿರುವ ಕಾರ್ಯಕ್ರಮಕ್ಕೆ ಆಕ್ಷೇಪ ವ್ಯಕ್ತವಾಗಿದೆ. ನಷ್ಟದಲ್ಲಿರುವ ಸಹಕಾರ ಸಂಘಗಳನ್ನು ಮೇಲೆತ್ತುವ ಹೊಣೆಯನ್ನು ಲಾಭದಲ್ಲಿರುವ ಸಹಕಾರ ಸಂಘಗಳಿಗೆ ಹೊರಿಸಲು ಈ ಮಸೂದೆಯಲ್ಲಿ ಅವಕಾಶವಿದೆ.

ಸತತ ಮೂರು ವರ್ಷಗಳಿಂದ ಲಾಭದಲ್ಲಿ ಇರುವ ಸಹಕಾರ ಸಂಘಗಳು 'ಬಹುರಾಜ್ಯ ಸಹಕಾರ ಸಂಘಗಳ ಪುನಶ್ಚೇತನ ಹಾಗೂ ಅಭಿವೃದ್ಧಿ ನಿಧಿ'ಗೆ ಹಣಕಾಸು ನೆರವು ನೀಡಬೇಕು ಎಂದು ಮಸೂದೆ ಹೇಳುತ್ತದೆ. 2002ರ ಕಾಯ್ದೆಯ ಸೆಕ್ಷನ್ 63ಕ್ಕೆ ಹೊಸದಾಗಿ ಸೇರಿಸಲಾಗಿರುವ ಉಪ ಸೆಕ್ಷನ್‌ನಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. ಸತತ 3 ವರ್ಷಗಳಿಂದ ಲಾಭದಲ್ಲಿರುವ ಸಹಕಾರ ಸಂಘಗಳು ತಮ್ಮ ಲಾಭಾಂಶದ ಶೇಕಡ ಒಂದರಷ್ಟನ್ನು ಅಥವಾ ₹1 ಕೋಟಿ ಹಣವನ್ನು ಐದು ವರ್ಷಗಳ ಕಾಲ ಈ ನಿಧಿಗೆ ನೆರವಿನ ರೂಪದಲ್ಲಿ ನೀಡಬೇಕು ಎಂದು ತಿದ್ದುಪಡಿ ಮಸೂದೆಯು ಹೇಳುತ್ತದೆ.

ಸಹಕಾರ ಸಂಘಗಳು ತಮ್ಮ ಲಾಭಾಂಶವನ್ನು ಸಂಘದ ಸದಸ್ಯರಿಗೆ ಮತ್ತು ಷೇರುದಾರರಿಗೆ ಹಂಚಿಕೆ ಮಾಡುತ್ತವೆ. ಆದರೆ ತಿದ್ದುಪಡಿ ಸಮೂದೆಯಿಂದಾಗಿ, ಸಂಘಗಳ ಲಾಭಾಂಶದ ಹಣವು ಸಹಕಾರ ಖಜಾನೆಗೆ ಸೇರುತ್ತದೆ. ಸಹಕಾರ ಸಂಘದ ಲಾಭಕ್ಕೆ ಕಾರಣರಾದ ಸದಸ್ಯರಿಗೆ ಈ ಹಣ ತಲುಪುವ ಬದಲು ನಷ್ಟದಲ್ಲಿರುವ ಬೇರೆ ಯಾವುದೋ ಒಂದು ಸಂಘದ ಪುನಶ್ಚೇತನಕ್ಕೆ ಬಳಕೆಯಾಗುತ್ತದೆ. ದಕ್ಷಿಣ ಭಾರತದ ಸಾಕಷ್ಟು ಸಹಕಾರ ಸಂಘಗಳು ಉತ್ತಮ ಸ್ಥಿತಿಯಲ್ಲಿದ್ದರೆ, ಉತ್ತರ ಭಾರತದ ಬಹುತೇಕ ಸಹಕಾರಿ ಸಂಘಗಳು ನಷ್ಟದಲ್ಲಿವೆ ಎಂಬುದು ಇಲ್ಲಿ ಗಮನಾರ್ಹ. ಸಹಕಾರ ನಿಧಿಯನ್ನು ಸೂಕ್ತವಾಗಿ ನಿರ್ವಹಣೆ ಮಾಡಲು ಹೊಸದಾಗಿ ಸಮಿತಿಯೊಂದನ್ನು ರಚಿಸುವ ಪ್ರಸ್ತಾವವನ್ನು ತಿದ್ದುಪಡಿ ಮಸೂದೆಯು ಮುಂದಿಟ್ಟಿದೆ. ಕೇಂದ್ರ ಸರ್ಕಾರದ ಅಧಿಸೂಚನೆಯ ಮೂಲಕ ರಚನೆಯಾಗಲಿರುವ ಈ ಸಮಿತಿಯು ಹಣಕಾಸು ನಿಧಿಯ ನಿರ್ವಹಣೆ, ನಿಧಿಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಲೆಕ್ಕಪತ್ರಗಳ ನಿರ್ವಹಣೆ ಹಾಗೂ ಇತರೆ ದಾಖಲೆಗಳ ನಿರ್ವಹಣೆ ಮಾಡಬೇಕಿದೆ. ಸಿಎಜಿ ಜೊತೆ ಸಂಹವನ ನಡೆಸಿದ ಬಳಿಕ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಿದ ಸ್ವರೂಪದಲ್ಲಿ ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡಬೇಕಿರುವುದು ಈ ಸಮಿತಿಯ ಜವಾಬ್ದಾರಿಯಾಗಿರುತ್ತದೆ. ಈ ನಿಧಿಯು ಕೇಂದ್ರ ಸರ್ಕಾರದ ಸಂಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ ಎನ್ನಲಾಗಿದೆ.

ಯಾವ ಸಂದರ್ಭದಲ್ಲಿ ನಿಧಿಯನ್ನು ಬಳಕೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ. ಕೇಂದ್ರೀಯ ರಿಜಿಸ್ಟ್ರಾರ್ ಅವರು, ಬಹುರಾಜ್ಯ ಸಹಕಾರ ಸಂಘವೊಂದು ನಷ್ಟದಲ್ಲಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರೆ, ಅಥವಾ ಅದು ನಷ್ಟದಲ್ಲಿದೆ ಎಂದು ಘೋಷಿಸಿದರೆ, ಈ ನಿಧಿಯನ್ನು ನಷ್ಟದಲ್ಲಿರುವ ಸಂಘದ ಪುನಶ್ಚೇತನಕ್ಕೆ ಬಳಕೆ ಮಾಡಬಹುದು. ಸೆಕ್ಷನ್ 63(1)ರ ಅಡಿಯಲ್ಲಿ ಬಹುರಾಜ್ಯ ಸಹಕಾರ ಸಂಘವೊಂದು ನಷ್ಟದಲ್ಲಿರುವುದಾಗಿ ಘೋಷಿಸಿಕೊಂಡರೆ ಮತ್ತು ಸಂಘ ನಷ್ಟದಲ್ಲಿದೆ ಎಂದು ಕೇಂದ್ರ ಸರ್ಕಾರದ ಅಥವಾ ಇತರೆ ಪ್ರಾಧಿಕಾರಗಳ ಅಧಿಕಾರಿಗಳು ಪ್ರಮಾಣೀಕರಿಸಿದರೆ, ಆ ಸಂಘವು ಪುನಶ್ಚೇತನ ನಿಧಿ ಯೋಜನೆಗೆ ಅರ್ಹತೆ ಪಡೆಯುತ್ತದೆ. ನಷ್ಟದಲ್ಲಿರುವ ಸಂಘವು ಕೇಂದ್ರ ಸಹಕಾರ ನಿಧಿ ಯೋಜನೆಗೆ ಒಳಪಟ್ಟರೆ, ಅದು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಹೋದಂತಾಗುತ್ತದೆ. ಕಾರ್ಯಕಾರಿ ಮಂಡಳಿ ಶಿಫಾರಸಿನ ಮೇರೆಗೆ, ನಷ್ಟದಲ್ಲಿರುವ ಸಂಘದ ಮಂಡಳಿಯ ಸದಸ್ಯರನ್ನು ಬದಲಾವಣೆ ಮಾಡಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ.

ಸಹಕಾರ ನಿಧಿಗೆ ಸತತವಾಗಿ ಐದು ವರ್ಷಗಳ ಕಾಲ ಹಣಕಾಸು ನೆರವು ನೀಡಿದ ಬಹುರಾಜ್ಯ ಸಹಕಾರ ಸಂಘವು ಅರ್ಜಿ ಸಲ್ಲಿಸುವ ಮೂಲಕ, ಸಂಘದ ಮೂಲಸೌಕರ್ಯ ಕೆಲಸಗಳಿಗೆ ಹಣಕಾಸಿನ ನೆರವನ್ನು ಕೋರಬಹುದು. ಸಂಘದ ಕೋರಿಗೆ ಸೂಕ್ತವಾಗಿದ್ದಲ್ಲಿ, ಕೇಂದ್ರ ಸರ್ಕಾರವು ಹಣಕಾಸು ನೆರವು ನೀಡಬಹುದು ಎಂದು ಮಸೂದೆ ಹೇಳುತ್ತದೆ.

1.3 ಕೋಟಿ ಪಾಲುದಾರರು

ಕೇಂದ್ರ ಸಹಕಾರ ಸಚಿವಾಲಯದ ಮಾಹಿತಿ ಪ್ರಕಾರ, ದೇಶದಲ್ಲಿ 8.5 ಲಕ್ಷ ಸಹಕಾರ ಸಂಘಗಳಿವೆ. 1.3 ಕೋಟಿ ಜನರು ಈ ಸಂಘಗಳ ನೇರ ಪಾಲದಾರರು. ಕೆಲವು ಸಂಘಗಳು ಹಲವು ರಾಜ್ಯಗಳಿಗೆ ತಮ್ಮ ನೆಲೆಯನ್ನು ವಿಸ್ತರಿಸಿಕೊಂಡ ಬಳಿಕ ಅವು ಬಹುರಾಜ್ಯ ಸಹಕಾರ ಸಂಘ (ಎಂಎಸ್‌ಸಿಎಸ್) ಎನಿಸಿಕೊಂಡವು. ಉದಾಹರಣೆಗೆ, ಧಾನ್ಯಗಳನ್ನು ಬೆಳೆಯುವ, ಖರೀದಿಸುವ ಹಾಗೂ ಪೂರೈಸುವ ಸಂಘಗಳು ಹಲವು ರಾಜ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇಂತಹ 1,500 ಬಹುರಾಜ್ಯ ಸಹಕಾರ ಸಂಘಗಳು ನೋಂದಣಿಯಾಗಿವೆ. ಈ ಸ್ವರೂಪದ ಅತಿಹೆಚ್ಚು ಸಂಘಗಳು ಮಹಾರಾಷ್ಟ್ರದಲ್ಲಿವೆ. ಪತ್ತಿನ ಸಹಕಾರ ಸಂಘಗಳು, ಕೃಷಿ ಉತ್ಪನ್ನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಸಹಕಾರ ಬ್ಯಾಂಕ್‌ಗಳು ಈ ವಲಯದಲ್ಲಿವೆ. ಎಲ್ಲ ರಾಜ್ಯಗಳಲ್ಲಿ ಬಹುತೇಕ ಸಂಘಗಳು ರಾಜಕೀಯ ಮುಖಂಡರ ನಿಯಂತ್ರಣದಲ್ಲಿವೆ. ಸಂಘಗಳ ಚಟುವಟಿಕೆಗಳಲ್ಲಿ ಪಾರದರ್ಶಕತೆಯನ್ನು ತರುವ, ಸಂಘಗಳನ್ನು ಬಲಗೊಳಿಸುವ, ಆರ್ಥಿಕ ಶಿಸ್ತು ತರುವ ನಿಟ್ಟಿನಲ್ಲಿ ಕಾಯ್ದೆಗೆ ತಿದ್ದುಪಡಿ ತರಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಆಧಾರ: ಬಹುರಾಜ್ಯ ಸಹಕಾರ ಸಂಘಗಳ ಕಾಯ್ದೆ-2002, ಬಹುರಾಜ್ಯ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ-2022, ಪಿಟಿಐ, ಪಿಐಬಿ ಪ್ರಕಟಣೆಗಳು

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಜೈನ್ ಸಮುದಾಯದ ಧಾರ್ಮಿಕ ಕೇಂದ್ರವಾದ ಶ್ರೀ ಸಮೇದ್ ಶಿಖರ್ಜಿ ಅನ್ನು ಪ್ರವಾಸಿ ತಾಣವಾಗಿ ಪರಿವರ್ತಿಸುವ ಜಾರ್ಖಂಡ್ ರಾಜ್ಯ ಸರ್ಕಾರದ ನಿರ್ಧಾರ ಸಮರ್ಥನೀಯವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಹಸಿರು ಜಲಜನಕ ಕಾರ್ಯಕ್ರಮಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶದಲ್ಲಿ ಜಲಜನಕ ಉತ್ಪಾದನೆಯನ್ನು ಉತ್ತೇಜಿಸುವ 'ರಾಷ್ಟ್ರೀಯ ಹಸಿರು ಜಲಜನಕ ಕಾರ್ಯಕ್ರಮ'ಗೆ ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ. ಇದಕ್ಕಾಗಿ ಹಲವು ಹಂತಗಳಲ್ಲಿ ಒಟ್ಟು ₹19,744 ಕೋಟಿಯನ್ನು ವೆಚ್ಚ ಮಾಡಲು ಸಚಿವ ಸಂಪುಟವು ಅನುಮೋದನೆ ನೀಡಿದೆ. 2030ರ ವೇಳೆಗೆ ಹಲವು ಮೈಲುಗಲ್ಲುಗಳನ್ನು ಸಾಧಿಸುವ ಗುರಿಯನ್ನು ಕೇಂದ್ರ ಸರ್ಕಾರವು ಹಾಕಿಕೊಂಡಿದೆ.

ಹಸಿರು ಜಲಜನಕ ಪರಿಕಲ್ಪನೆ



ನವೀಕರಿಸಬಹುದಾದ ಇಂಧನ ಮೂಲಗಳಿಂದ ಉತ್ಪಾದಿಸಲಾದ ಜಲಜನಕವನ್ನು ಹಸಿರು ಜಲಜನಕ ಎಂದು ಕರೆಯಲಾಗುತ್ತದೆ. ಹಸಿರು ಜಲಜನಕಕ್ಕೆ ಬೇಡಿಕೆ ಹೆಚ್ಚಿಸುವುದು, ಉತ್ಪಾದನೆ, ಬಳಕೆ ಹಾಗೂ ರಫ್ತು ಹೆಚ್ಚಿಸಲು ನೆರವು ನೀಡುವುದು ಈ ಕಾರ್ಯಕ್ರಮದ ಉದ್ದೇಶ. ಈ ಕಾರ್ಯಕ್ರಮದ ಅಡಿಯಲ್ಲಿ, ದೇಶೀಯವಾಗಿ ಜಲಜನಕ ಜನರೇಟರ್‌ಗಳ ತಯಾರಿಕೆ ಹಾಗೂ ಹಸಿರು ಜಲಜನಕ ಉತ್ಪಾದನೆ ಎಂಬ ಎರಡು ರೀತಿಯ ಹಣಕಾಸು ಉತ್ತೇಜನ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅಧಿಕ ಪ್ರಮಾಣದಲ್ಲಿ ಜಲಜನಕ ಉತ್ಪಾದಿಸುವ ಹಾಗೂ ಬಳಕೆ ಮಾಡುವ ಪ್ರದೇಶಗಳನ್ನು ಗುರುತಿಸಿ, ಅವುಗಳನ್ನು ಹಸಿರು ಜಲಜನಕ ಕೇಂದ್ರಗಳನ್ನಾಗಿ (ಹಬ್) ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ದೇಶದಲ್ಲಿ ಹಸಿರು ಜಲಜನಕ ಉತ್ಪಾದನೆ ಹಾಗೂ ಬಳಕೆಯ ವಾತಾವರಣವನ್ನು ಉತ್ತೇಜಿಸಲು ಹಾಗೂ ಕಾರ್ಯಕ್ರಮ ಅನುಷ್ಠಾನಕ್ಕೆ ಬೇಕಿರುವ ನೀತಿಗಳನ್ನು ರೂಪಿಸಲಾಗುತ್ತದೆ. ಸಶಕ್ತ ಮಾನದಂಡಗಳು ಹಾಗೂ ನಿಯಮಗಳ ಚೌಕಟ್ಟು ರಚನೆಯಾಗಲಿದೆ. ಸಂಶೋಧನೆ ಮತ್ತು ಅಭಿವೃದ್ಧಿಗೆ (ಆರ್ ಅಂಡ್ ಡಿ) ಸಂಬಂಧಿಸಿದ ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವ ನಿಯಮಗಳನ್ನು ಈ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಲಾಗುತ್ತದೆ. ಆರ್ ಅಂಡ್ ಡಿ ಯೋಜನೆಯು ಗುರಿ ಆಧರಿತ, ಸಮಯದ ಮಿತಿ ಹೊಂದಿರುವ, ಜಾಗತಿಕ ಸ್ಪರ್ಧಾತ್ಮಕ ತಾಂತ್ರಿಕತೆಗೆ ಹೊಂದಾಣಿಕೆಯಾಗುವ ರೀತಿಯಲ್ಲಿ ಇರಲಿದೆ.

2030ರ ವೇಳೆಗೆ...

- ದೇಶದಲ್ಲಿ ವಾರ್ಷಿಕ ಹಸಿರು ಜಲಜನಕ ಉತ್ಪಾದನಾ ಸಾಮರ್ಥ್ಯವನ್ನು 50 ಲಕ್ಷ ಟನ್‌ಗಳಿಗೆ ಹೆಚ್ಚಿಸಲಾಗುತ್ತದೆ
- ಈ ಅವಧಿಯಲ್ಲಿ ಒಟ್ಟು ₹ 8 ಲಕ್ಷ ಕೋಟಿ ಹೂಡಿಕೆ
- ಈ ಕ್ಷೇತ್ರದಲ್ಲಿ ಒಟ್ಟು 6 ಲಕ್ಷ ಉದ್ಯೋಗಗಳ ಸೃಷ್ಟಿ
- ಪಳೆಯುಳಿಕೆ ಇಂಧನ ವಾರ್ಷಿಕ ಆಮದು ಮೊತ್ತದಲ್ಲಿ ₹1 ಲಕ್ಷ ಕೋಟಿಯಷ್ಟು ಇಳಿಕೆ
- ಇಂಗಾಲ ಆಧರಿತ ಮಾಲಿನ್ಯದ ಪ್ರಮಾಣವನ್ನು ವಾರ್ಷಿಕ 5 ಕೋಟಿ ಟನ್‌ಗಳಷ್ಟು ಇಳಿಕೆ ಮಾಡಲಾಗುತ್ತದೆ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

2022ರ ಡಿಸೆಂಬರ್ 28ರಂದು ಬಿಹಾರದ ಬಿಜೆಪಿ ಘಟಕ ಮಾಡಿದ ಟ್ವೀಟ್‌ನಲ್ಲಿ ಜನರ ಗುಂಪೊಂದು ಪೊಲೀಸರ ಮೇಲೆ ಹಲ್ಲೆ ನಡೆಸುತ್ತಿರುವ ವಿಡಿಯೊವನ್ನು ಹಂಚಿಕೊಳ್ಳಲಾಗಿತ್ತು. 'ಇದು ಬಿಹಾರದ ಮದ್ಯ ಮಾಫಿಯಾದ ಪರಿಸ್ಥಿತಿ' ಎಂಬುದಾಗಿ ವಿವರಣೆ ನೀಡಲಾಗಿತ್ತು. 'ಬಿಹಾರದಲ್ಲಿ ಅಧಿಕಾರದಲ್ಲಿರುವ ಜೆಡಿಯು-ಆರ್‌ಜೆಡಿ ನೇತೃತ್ವದ ಸರ್ಕಾರದಲ್ಲಿ ಮದ್ಯ ಮಾಫಿಯಾ ಪ್ರಬಲವಾಗಿದೆ' ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಆದರೆ ಈ ವಿಡಿಯೊ ಇತ್ತೀಚಿನದ್ದಲ್ಲ.

ಬಿಜೆಪಿ ಟ್ವೀಟ್‌ನಲ್ಲಿ ಹಂಚಿಕೊಂಡಿರುವ ವಿಡಿಯೊ ಎರಡು ವರ್ಷಗಳ ಹಿಂದಿನದ್ದಾಗಿದ್ದು, ಬಿಜೆಪಿ-ಜೆಡಿಯು ಮೈತ್ರಿ ಸರ್ಕಾರ ಅಧಿಕಾರದಲ್ಲಿದ್ದಾಗ ನಡೆದ ಘಟನೆ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. 2020ರ ಸೆಪ್ಟೆಂಬರ್‌ನಲ್ಲಿ ಆರ್‌ಜೆಡಿ ನಾಯಕ ತೇಜ್‌ಪ್ರತಾಪ್ ಯಾದವ್ ಅವರು ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಮದ್ಯ ನಿಷೇಧವಿದ್ದರೂ, ರಾಜ್ಯದಲ್ಲಿ ಮದ್ಯ ಸಾಗಾಟ ನಿರಂತರವಾಗಿ ನಡೆಯುತ್ತಿದೆ ಎಂದು ಅವರು ಉಲ್ಲೇಖಿಸಿದ್ದರು. ಅಕ್ರಮ ಮದ್ಯ ಸಾಗಾಟದ ಬೆನ್ನುಹತ್ತಿದ್ದ ಪೊಲೀಸರ ಮೇಲೆ ಗುಂಪೊಂದು ದಾಳಿ ನಡೆಸಿತ್ತು. 2020ರ ಆಗಸ್ಟ್ 5ರಂದು ನಡೆದ ಈ ಘಟನೆ ಬಗ್ಗೆ ಹಲವು ಸುದ್ದಿ ಮಾಧ್ಯಮಗಳು ವರದಿ ಮಾಡಿದ್ದವು. ಆದರೆ ಈ ವಿಡಿಯೊವನ್ನು ಇತ್ತೀಚಿನದ್ದು ಎಂಬುದಾಗಿ ಬಿಹಾರದ ಬಿಜೆಪಿ ಘಟಕ ತಪ್ಪಾಗಿ ಹಂಚಿಕೊಂಡಿದೆ ಎಂದು ಆಲ್ಟ್ ನ್ಯೂಸ್ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಬುದ್ಧಿವಂತಿಕೆಯ ನಾಟಕ

ನಾನೆಂಬುದೊಂದಂಶವಿತರ ಜಗವೊಂದಂಶ |
ನಾನು ನೀನುಗಳಳಿದ ಸರ್ವೈಕ್ಯವೊಂದು ||
ಧ್ಯಾನಿಸುತ್ತೈಕ್ಯವನು ಪಾಲಿಸುವುದುಭಯವನು |
ಜಾಣಿನಾ ನಾಟಕವೊ - ಮಂಕುತಿಮ್ಮ || 793 ||

ಪದ-ಅರ್ಥ: ನಾನೆಂಬುದೊಂದಂಶವಿತರ = ನಾನು + ಎಂಬುದು + ಒಂದು + ಅಂಶ + ಇತರ ಜಗವೊಂದಂಶ = ಜಗವು + ಒಂದು + ಅಂಶ, ನೀನುಗಳಳಿದ = ನೀನುಗಳು + ಅಳಿದ, ಪಾಲಿಸುವುದುಭಯವನು = ಪಾಲಿಸುವುದು + ಉಭಯವನು(ಎರಡನ್ನು), ಜಾಣಿನಾ = ಜಾಣಿನ(ಬುದ್ಧಿವಂತಿಕೆಯ) + ಆ.

ವಾಚ್ಯಾರ್ಥ: ನಾನು ಎಂಬುದು ಒಂದು ಅಂಶ. ಉಳಿದ ಜಗತ್ತು ಇನ್ನೊಂದು ಅಂಶ. ನಾನು ಮತ್ತು ಜಗತ್ತು ಇವೆರಡೂ ಮರೆಯಾಗಿ, ಐಕ್ಯವಾದಾಗ ಉಳಿಯುವುದು ಬ್ರಹ್ಮವಸ್ತು. ಆ ಐಕ್ಯವನ್ನು ಧ್ಯಾನದಲ್ಲಿಟ್ಟುಕೊಂಡೂ, ಎರಡನ್ನೂ ಪಾಲಿಸುವುದು ಜಾಣತನದ ನಾಟಕ.

ವಿವರಣೆ: ನಮ್ಮ ಅನುಭವದಲ್ಲಿ ಎರಡು ವಸ್ತುಗಳು ಕಾಣುತ್ತವೆ. ಒಂದು, ಜೀವ. ಅದು ನಾನು ಎಂಬುದು. ಎರಡು, ಪ್ರಪಂಚ. ಕ್ಷಣಕ್ಷಣಕ್ಕೂ ಬೇರೆಯಾಗುವ, ಕಣ್ಣಿಗೆ ಬೆರಗು ತರುವ, ಮನಸ್ಸನ್ನು ಸೆಳೆಯುವ ಆಕರ್ಷಕ ವಿಶ್ವ. ಎರಡೂ ಅನಿತ್ಯವಾದವುಗಳು. ಜೀವಕ್ಕೆ ಕೆಲವೇ ವರ್ಷಗಳ ಅವಧಿ ಇದೆ. ಆ ಕಾಲ ಮುಗಿದ ತಕ್ಷಣ ಅದು ಇಲ್ಲದಂತಾಗುತ್ತದೆ. ಪ್ರಪಂಚ ದೀರ್ಘಕಾಲ ಇರುವುದೆಂದರೂ ಕೂಡ, ಅದಕ್ಕೂ ಒಂದು ಜೀವಿತಾವಧಿ ಇದೆ. ನಂತರ ಅದೂ ಇಲ್ಲವಾಗುತ್ತದೆ. ಈ ಜೀವಕ್ಕೆ ಮತ್ತು ಪ್ರಪಂಚಕ್ಕೆ ಮೂಲವಾದದ್ದು ಬ್ರಹ್ಮವಸ್ತು. ಅನಿತ್ಯಗಳ ಹಿಂದೆ ಮತ್ತು ಒಳಗಡೆಗೆ ಕೆಲಸ ಮಾಡುತ್ತಿರುವ ಚೈತನ್ಯವೇ ಬ್ರಹ್ಮ. ಹೀಗೆ ನಿತ್ಯವಾದಬ್ರಹ್ಮವಸ್ತು ಅನಿತ್ಯವಾದ ಜೀವ ಮತ್ತು ಜಗತ್ತೆಂಬ ವಸ್ತುಗಳನ್ನು ನಿರ್ಮಾಣ ಮಾಡಿ ನಿರ್ವಹಿಸಿತು. ಈ ವಿಷಯವನ್ನು ಕಗ್ಗ ಪ್ರಸ್ತುತಪಡಿಸುತ್ತದೆ. ನಾನು, ಎಂದರೆ ಜೀವ ಒಂದಂಶ. ಉಳಿದ ಪ್ರಪಂಚ ಇನ್ನೊಂದು ಅಂಶ. ಇವೆರಡೂ ಕರಗಿ ಹೋದ ಮೇಲೆ ಉಳಿಯುವುದು ಒಂದೇ ಅಂಶ. ಅದೇ ಶಾಶ್ವತವಾದ, ಅನಂತವಾದ ಪರಮತತ್ವ, ಬ್ರಹ್ಮವಸ್ತು. ಆದರೆ ಜೀವ, ಪ್ರಪಂಚದ ಮಾಯಾಜಾಲದೊಳಗೆ ಸಿಲುಕಿಕೊಂಡು, ತನ್ನ ಹಾಗೂ ಪ್ರಪಂಚದ ಮೂಲವಾದ ಪರಮಾತ್ಮ ವಸ್ತುವನ್ನು ಮರೆತು ದೇಹ ಸುಖವನ್ನೇ ನಂಬಿ, ಸುಖಸಾಮಗ್ರಿಗಳಿಗಾಗಿ ಪರದಾಡುತ್ತಿರುತ್ತದೆ. ಈ ಭ್ರಾಂತಿಯನ್ನು ನೀಗಿ, ಆತ್ಮಸ್ವರೂಪವನ್ನು, ಭಗವದ್ ಸ್ವರೂಪವನ್ನು ಕಂಡುಕೊಂಡು ವರ್ತಿಸುವುದು ಧರ್ಮ ಎಂಬುದು ಯಾಜ್ಞವಲ್ಕ್ಯರ ಮತ. ಹಾಗಾದರೆ ಪ್ರಪಂಚದಲ್ಲಿ ಬದುಕಿರುವ ನಮಗೆ ಧರ್ಮ ಯಾವುದು? ಎಲ್ಲಿಯವರೆಗೂ ದೇಹವಿದೆಯೋ ಅಲ್ಲಿ ವರೆಗೆ ಕರ್ಮ ಮಾಡುವುದು ತಪ್ಪುವುದಿಲ್ಲ, ತಪ್ಪಲೂ ಬಾರದು. ಕರ್ಮವೇ ಧರ್ಮ. ನಮ್ಮ ನಮ್ಮ ಸ್ವಭಾವಕ್ಕನುಗುಣವಾಗಿ, ಪ್ರಪಂಚದ ಒಳಿತಿಗಾಗಿ ದುಡಿಯುವುದೇ ಧರ್ಮ. ಆದರೆ ಜೀವ ಮತ್ತು ಪ್ರಪಂಚಗಳು ಅನಿತ್ಯ, ಅವುಗಳನ್ನು ಸೃಷ್ಟಿ ಸಿದ ಪರತತ್ವವೇ ನಿತ್ಯಸತ್ಯವೆಂಬುದನ್ನು ಮರೆಯದಿರುವುದು ವಿವೇಕ. ಹೀಗೆ ಅನಿತ್ಯವಾಗಿದ್ದುಕೊಂಡು, ಕರ್ತವ್ಯ ಮಾಡುತ್ತಲೇ, ಕರ್ತವ್ಯದ ಫಲವನ್ನು ಪರಮಸತ್ವಕ್ಕೆ ನೀಡುತ್ತ, ಅದನ್ನು ಒಪ್ಪಿಕೊಳ್ಳುವುದೇ ಜಾಣತನದ ನಾಟಕ. ನಾಟಕ ಏಕೆಂದರೆ, ನಾನು ನಿಜವಾಗಿಯೂ ನಾನಲ್ಲ, ನಾನೊಂದುಪರಮಸತ್ಯದ ಒಂದಂಶ ಎಂಬುದನ್ನು ತಿಳಿದೂ ಕರ್ಮಮಾಡಿ ಬದುಕುವುದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಜನವರಿ 5, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಚತುರ್ದಶಿ ಗಂ. 26-15 ನಕ್ಷತ್ರ: ಮೃಗಶಿರ ಗಂ. 21-26 ಯೋಗ: ಶುಕ್ಲ ಗಂ. 07-33, ಕರಣ: ಗರಜೆ ಗಂ. 13-06, ಧನುರ್ ಮಾಸದ 20 ನೇ ದಿನ.

ರಾಹುಕಾಲ: ಮಧ್ಯಾಹ್ನ 01-30-03-00

ಸೂರ್ಯೋದಯ: 06-59 ಸೂರ್ಯಾಸ್ತ: 06-13

ಮುಸ್ಲಿಂ ದಿನಾಂಕ: 12 ಜುಮಾದುಸ್ಸಾನಿ

ಅದೃಷ್ಟ ಸಂಖ್ಯೆ: 8, 9

ಮೇಷ: ಬುದ್ಧಿವಂತಿಕೆ ಮತ್ತು ಶೀಘ್ರ ಪ್ರತಿಕ್ರಿಯೆ ನೀಡುವ ಗುಣವನ್ನು ಮೇಲಧಿಕಾರಿಗಳು ಗುರುತಿಸುತ್ತಾರೆ. ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು.

ವೃಷಭ: ಅನಿವಾರ್ಯಕ್ಕೆ ಇಷ್ಟ ಮಿತ್ರರಿಂದ ಸಕಾಲದಲ್ಲಿ ಸಹಕಾರ ಒದಗಿ ಬರಲಿದೆ. ಶೈಕ್ಷಣಿಕ ರಂಗದ ಉನ್ನತ ಅಧಿಕಾರಿಗಳಿಗೆ ವರ್ಗಾವಣೆಯಾಗುವ ಸಾಧ್ಯತೆ.

ಮಿಥುನ: ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನ ಗೊಳ್ಳುತ್ತಾ ಅಭಿವೃದ್ಧಿ ತೋರಿ ಬರುವುದು. ಈಶ್ವರನ ಆರಾಧನೆ ಕೋರ್ಟು ಯಶಸ್ಸನ್ನು ತಂದು ಕೊಡುವುದು.

ಕರ್ಕಾಟಕ: ಕಾರ್ಯಕ್ಷೇತ್ರದಲ್ಲಿ ಅಭಿವೃದ್ಧಿಯಿಂದ ಬಹುಮಟ್ಟಿಗೆ ಮನಸ್ಸು ಸಂತೃಪ್ತಗೊಳ್ಳಲಿದೆ. ರಹಸ್ಯವಾಗಿ ಸಿಗುವ ಬೆಂಬಲದಿಂದ ಕನಸುಗಳು ನನಸಾಗುವುದು.

ಸಿಂಹ: ಸ್ವಂತವಾಗಿ ವ್ಯಾಪಾರ ಮಾಡಲು ಯೋಚಿಸಿದ ನಿಮಗೆ ತಂದೆಯವರು ನೆರವಿಗೆ ನಿಲ್ಲಲಿದ್ದಾರೆ. ಮುದ್ರಣ ವೃತ್ತಿಯವರಿಗೆ ಉತ್ತಮ ಬೇಡಿಕೆ ಪ್ರಾಪ್ತಿ. ಯಂತ್ರೋಪಕರಣಗಳ ಮಾರಾಟದಿಂದ ಹೆಚ್ಚಿನ ಲಾಭ

ಕನ್ಯಾ: ವಾಗ್ವಾದದಲ್ಲಿ ಮೀರಿಸುವವರೇ ಇಲ್ಲ. ಹಾಗೆಯೇ ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಮನಸ್ಥಿತಿಗೆ ಹೊಂದಿಕೊಳ್ಳುವುದು. ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ.

ತುಲಾ: ಸಾಲಗಳಿಂದ ಮುಕ್ತರಾಗಿ ಆಪದ್ಧನ ಸಂಗ್ರಹಿಸಿಟ್ಟುಕೊಳ್ಳುವ ಯೋಗ ಬರಲಿದೆ. ಬಹಳದಿನಗಳಿಂದ ಉಳಿದುಕೊಂಡಿದ್ದ ಕೆಲಸ ಮುಂದುವರಿಸಲು ಕಾಲ ಕೂಡಿಬರಲಿದೆ. ಧಾರ್ಮಿಕ ವಿಚಾರದ ಬಗ್ಗೆ ಗಮನಹರಿಸಿ.

ವೃಶ್ಚಿಕ: ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ವಹಿಸಿರಿ. ಕಲೆಗೆ ಪ್ರೋತ್ಸಾಹ ಸಿಗಲಿದೆ. ಕಲಾವಿದರಿಗೆ ಮತ್ತು ಹಾಡುಗಾರರಿಗೆ ಒಳ್ಳೆಯ ದಿನಗಳು ಬರಲಿವೆ. ಸಮಯ ಅಭಾವದಿಂದ ನಷ್ಟ.

ಧನು: ಈ ದಿನ ನಿಮಗೆ ಸುಖ-ದುಃಖದ ಮಿಶ್ರಫಲ ಅನುಭವಕ್ಕೆ ಬರಲಿದೆ. ಅಧಿಕಾರಿಗಳೊಂದಿಗೆ ಹೊಂದಿಕೊಳ್ಳುವ ಗುಣ ಬುದ್ಧಿವಂತಿಕೆಯ ಸಾಮರ್ಥ್ಯ ಏಳಿಗೆಯಲ್ಲಿ ಮುಖ್ಯ ಪಾತ್ರವಹಿಸುವುದು.

ಮಕರ: ಆರ್ಥಿಕ ಪರಿಸ್ಥಿತಿಗಳು ಸದ್ಯದಲ್ಲೇ ಸುಧಾರಿಸಲಿದೆ. ವಾಣಿಜ್ಯ ಅಥವಾ ಆರ್ಥಿಕ ಒಪ್ಪಂದಗಳ ನಿಯಮ ಉಲ್ಲಂಘನೆಯಾಗದಂತೆ ಜಾಗ್ರತರಾಗಿರಿ. ನೀರಿನ ವ್ಯತ್ಯಾಸಗಳಾಗಿ ಅನಾರೋಗ್ಯ ಸಂಭವಿಸಬಹುದು.

ಕುಂಭ: ಅದ್ಭುತವಾದ ಆಲೋಚನೆಗಳಿವೆ. ಅದನ್ನು ಕಾರ್ಯ ರೂಪಕ್ಕೆ ತರಲು ಸೃಜನಶೀಲ ಗೆಳೆಯರನ್ನು ಆರಿಸಿಕೊಳ್ಳಬೇಕಷ್ಟೆ. ಸಿವಿಲ್ ಎಂಜಿನಿಯರ್‌ಗಳಿಗೆ ಬೃಹತ್ ವಾಣಿಜ್ಯ ಮಳಿಗೆಯ ಕಾರ್ಯಭಾರ ಸಿಗಬಹುದು.

ಮೀನ: ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ. ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ವಿದ್ಯಾರ್ಥಿಗೆ ಶಿಕ್ಷಣ ಮುಂದುವರಿಸಲು ಸಹಾಯ ದೊರಕುವುದು.

ಪದಬಂಧ 5190

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇಹಲೋಕಕ್ಕೆ ಸಂಬಂಧಿಸಿದ್ದು (3)
3.ಸೊಳ್ಳೆ ಇಲ್ಲಿ ಬಂದಿದೆಯಲ್ಲಾ! (3)
5.ಇದು ಸೂರ್ಯನ ರಶ್ಮಿ (5)
6.ತಡಸಲನ್ನು ಸೇರುವಾಗಲೇ ನಿಧಾನ! (2)
8.ಶಹನಾಯಿಯ ಹತ್ತಿರವಿರುವ ಶುನಕ (2)
9.ನಾಗರಿಕನ ಹತ್ತಿರ ಸ್ತ್ರೀ ಬಂದಿದ್ದಾಳಲ್ಲಾ! (2)
10.ಕಲಾವಿದನಿಗಾಗಿ ತೆರೆದ ಬಾಗಿಲು (2)
14.ಮನುಷ್ಯನನ್ನು ತಿನ್ನುವ ಪ್ರಾಣಿ (5)
15.ಕಮಂಡಲು ಹಿಡಿದವನು ನೋಡುತ್ತಿರುವ ಸಮುದ್ರ (3)
16.ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ

1.ಇಂದ್ರನ ಆನೆಯಿದು (4)
2.ಕಡಿಯಲು ಬಂದಿರುವ ಭಲ್ಲೂಕ (3)
3.ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4.ಇನ್ನೂ ಬಲಿಯದ ಕಾಯಿ (4)
7.ಅಗಲ ಬಾಯುಳ್ಳ ಲೋಹದ ಪಾತ್ರೆ (3)
8.ದೇವರನ್ನು ನಂಬದವನು (3)
9.ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
11.ಹತ್ತನೆಯ ಒಂದು ಭಾಗ (4)
12.ಪ್ರವಾಹವನ್ನು ಹೀಗೂ ಹೇಳುವರು (3)
13.ಈತ ಕೆಟ್ಟ ಕವಿ (3)



5189ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಗುರಿ 3.ಅನುರಾಗ 5.ರಾವಣ 6.ವಾತಾಯನ 8.ತಡಸಲು 12.ಜನಹಿತ 14.ಪರಧನ 15.ನಗಾರಿ 16.ರಸಾಯನ 17.ಕಂತೆ

ಮೇಲಿಂದ ಕೆಳಕ್ಕೆ:
1.ಪರಾವಲಂಬಿ 2.ಗುಣವಂತ 3.ಅಹವಾಲು 4.ಗಹನ 7.ಯಕ್ಷ 9.ಸದನ 10.ದಟ್ಟದಾರಿದ್ರ್ಯ 11.ಕ್ಷೌರ 12.ಜನಮನ 13.ತಲ್ಲೀನತೆ 14.ಪಗಾರ

ಸುಡೊಕು 5576

				2		3		5
3		6	5		8		1	
	4			7	3	2		6
	6						7	9
9		1		8			6	
						1		8
		2	3		7		5	
7	1					6		
		3	4		2		9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5575 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ಚಿನ್ನದ ಧಾರಣೆ ₹ 378ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರವು 10 ಗ್ರಾಂಗೆ ₹ 378ರಷ್ಟು ಹೆಚ್ಚಾಗಿ, ₹56,130ಕ್ಕೆ ತಲುಪಿದೆ.

ಚಿನ್ನದ ಬೆಲೆಯು ಜಾಗತಿಕ ಮಾರುಕಟ್ಟೆಗಳಲ್ಲಿಯೂ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಆದರೆ ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 147ರಷ್ಟು ಕಡಿಮೆ ಆಗಿದ್ದು ₹ 70,675ಕ್ಕೆ ತಲುಪಿದೆ. ಈ ವರ್ಷದಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 60 ಸಾವಿರದ ಮಟ್ಟ ತಲುಪಬಹುದು ಎಂದು ಮಾರುಕಟ್ಟೆ ತಜ್ಞರು ಈಚೆಗೆ ಅಂದಾಜು ಮಾಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು | Log on to : https://homages.deccanherald.com or Scan QR code to access booking form

20ನೇ ವರ್ಷದ ಚಿರಸ್ಮರಣೆ



ಎನ್. ಗೋವಿಂದಯ್ಯ
ಜನನ: 18-09-1936
ಮರಣ: 05-01-2003

ನಿಮ್ಮ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿರುವ ಶ್ರೀಮತಿ ಅಮ್ಮಯ್ಯಮ್ಮ ಮತ್ತು ಕುಟುಂಬವರ್ಗ

1) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ., ಮಾಲೂರು
2) ಬನಶಂಕರಿ ಇಂಡಸ್ಟ್ರೀಸ್ ಪ್ರೈ. ಲಿ.
3) ಬನಶಂಕರಿ ಕೆಮಿಕಲ್ಸ್ ಪ್ರೈ. ಲಿ. (SEZ ಹಾಸನ)
4) ಎಲ್. ಎನ್. ಸಾಲ್‌ವೆಂಟ್ಸ್ ಪ್ರೈ. ಲಿ., ಹೊಸಕೋಟೆ
5) ಇಂಡ್ ಪ್ಯೂರ್ ಕೆಮ್
6) ಬಿ.ಎಸ್.ಕೆ. ಪ್ಯೂರ್ ಕೆಮ್, ಬೊಮ್ಮಸಂದ್ರ
7) ಆದಿತ್ಯ ಕೆಮ್ ಫಾರ್ಮಾ
8) ಎಲ್. ಎನ್. ಬ್ರಿವರೀಸ್ ಪ್ರೈ. ಲಿ., ಚಾಮರಾಜನಗರ
9) ಭವಾನಿ ಎಂಟರ್‌ಪ್ರೈಸಸ್, ಪೀಣ್ಯ
10) ಶ್ರೀ ಸಾಯಿ ಇಂಡಸ್ಟ್ರೀಸ್, ಮದ್ದೂರು
11) ಬಿ.ಎಸ್.ಕೆ. ಸಾಲ್‌ವೆಂಟ್ಸ್ ಅಂಡ್ ಕೆಮಿಕಲ್ಸ್ ಪ್ರೈ.ಲಿ.

– ಸಿಬ್ಬಂದಿ ವರ್ಗ

For Online Classified Booking
Name Change / Education / Property / Job / Services & many more
Log on to :
dhclassifieds.com

ಸವಿನೆನಪು



ಶ್ರೀ ಕೆ. ಬಿ. ಮಲ್ಲಪ್ಪ
ನಿಧನ: 05-01-2013
ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಅರಕಲಗೂಡು ತಾ॥ ಹಾಸನ ಜಿಲ್ಲೆ
ಸದಾ ನಿಮ್ಮ ನೆನಪಿನಲ್ಲಿರುವ...
ಪತ್ನಿ–ಶಾರದಮ್ಮ ಮತ್ತು ಕುಟುಂಬದವರು ಹಾಗೂ ಅಪಾರ ಬಂಧುಮಿತ್ರರು
ಫೋ: 9448134242

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಚಿರಸ್ಮರಣೆ

ಸಿ. ಅಪ್ಪಾಜಿ
(ಮಾಜಿ ಶಾಸಕರು, ಕನಕಪುರ)
ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಇಂದಿಗೂ ಹಚ್ಚ ಹಸಿರಾಗಿ
ನಮ್ಮ ಬಾಳಿನಲ್ಲಿ ನಂದಾದೀಪವಾಗಿ ಪ್ರಜ್ವಲಿಸುತ್ತಿದೆ.
ನಿಮ್ಮ ಆದರ್ಶಗಳೆಲ್ಲವೂ ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಿದೆ.
ಮಕ್ಕಳು, ಮೊಮ್ಮಕ್ಕಳು ಮತ್ತು ಬಂಧು–ಮಿತ್ರರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

WANTED
B.Sc/ M.Sc. in Geology
B.Sc /M.Sc. in Agriculture / BSW /MSW /BA /MA in Social Science
BA /MA /SSLC /PUC/ Diploma /Data Entry
Interested Can Send Your CV and Marks card Convocation Certificate and photo to the below e-mail ID : mahatmagandhitrust@gmail.com
Place of work : Devanahalli, Nelamangala, Hosakote, Bangalore for 3 years Central GOVT. Project.
Interview held on : 4th to 10th Jan. 2023 @ 3:00 pm to 5:00 pm
Mahathma Gandhi Trust (R)
0821-2420374
93438 28203
99454 25447
www.mahatmagandhitrust.com

ರಾಹುಲ್ ಫೆಸಿಲಿಟಿ ಸರ್ವೀಸಸ್ ಪ್ರೈವೆಟ್ ಲಿಮಿಟೆಡ್ ಕಂಪನಿಗೆ ಡಿಪ್ಲೊಮಾ ಮತ್ತು ಎಎಂಪಿ; ಬಿ.ಇ (ಮೆಕ್ಯಾನಿಕಲ್, ಇಲೆಕ್ಟ್ರಿಕಲ್, ಇಲೆಕ್ಟ್ರಾನಿಕ್), (ಪುರುಷ) ಅಭ್ಯರ್ಥಿಗಳು ಬೇಕಾಗಿದ್ದಾರೆ. ವೇತನ ರೂ.15,000 ರಿಂದ 25,000/- ಮತ್ತು ಎಎಂಪಿ; 2 ಟೂ ವ್ಹೀಲರ್, 4 ವ್ಹೀಲರ್ ಮತ್ತು ಎಎಂಪಿ; ಕಾರ್ ಮೆಕ್ಯಾನಿಕ್ ಬೇಕಾಗಿದ್ದಾರೆ. ವೇತನ ರೂ. 15,000 ದಿಂದ 30,000/- (ಫ್ರೆಶರ್ & ಎಎಂಪಿ; ಅನುಭವಿ). ಕೆಲಸದ ಸ್ಥಳ: ದೇವನಹಳ್ಳಿ ಬೆಂಗಳೂರು ಸಂಪರ್ಕಿಸಿ:9611354734, 9361282450, 9600333441, 9715541512

✓ ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

Wanted

ಸಿನಿಮಾ, ಧಾರಾವಾಹಿ, ರಿಯಾಲಿಟಿ ಶೋಗಾಗಿ, ನಟ-ನಟಿಯರ ಮಕ್ಕಳ ಪೋಷಕರ ಪಾತ್ರಗಳ ಆಯ್ಕೆ ನಡೆಯುತ್ತಿದ್ದು ಹೊಸ ಪ್ರತಿಭೆಗಳಿಗೆ ಅವಕಾಶವುಂಟು ಸಂಪರ್ಕಿಸಿ: 8660330943

ಬೇಕಾಗಿದ್ದಾರೆ: ಪುತ್ತೂರು ಸಮೀಪ ಬ್ರಾಹ್ಮಣ ಕುಟುಂಬಕ್ಕೆ ಸಸ್ಯಾಹಾರಿ ಅಡುಗೆ ತಿಳಿದಿರುವ ಶುದ್ಧ ಸಸ್ಯಹಾರಿ ಹೆಂಗಸು ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ. 9986066160

ಬೇಕಾಗಿದ್ದಾರೆ: ಕೊಡಗಿನ ಬಾರ್ & ರೆಸ್ಟೋರೆಂಟ್ ಗೆ ಅಡುಗೆಯವರು ಕ್ಯಾಶಿಯರ್ ಮತ್ತು ಸಪ್ಲಾಯರ್ಸ್. 9448472177

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 16,000-20,000 ಗಳಿಸಿ.(ಕೊರಿಯರ್ ಇದೆ) 8904715353, 8904725353.

General

ಲಿಮಿಟೆಡ್ ಕಂಪನಿಗಳಿಗೆ ಹಾಗು ಆಫೀಸ್‌ಗಳಿಗೆ ಬಿಲ್ಲಿಂಗ್, ಪ್ರೊಡಕ್ಷನ್, ಮ್ಯಾನೇಜ್ಮೆಂಟ್ ಡಿಪಾರ್ಟ್ಮೆಂಟ್ಗಳಿಗೆ ವಿದ್ಯಾರ್ಹತೆಯಿರುವ, ವಿದ್ಯಾರ್ಹತೆಯಿಲ್ಲದಿರುವ ಯುವಕರು/ಯುವತಿಯರು ಬೇಕಾಗಿದ್ದಾರೆ. ಊಟ,ವಸತಿಯೊಂದಿಗೆ 17,000-28,000/- 8884611125, 8884611126.

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

EDUCATION CORNER

GRACE IAS
Vijayanagar, Bengaluru - 40
Admission Open for
IAS | KAS | PSI
SSC | RRB | Banking
Call : 7899678279

✓ ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿವುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/ 9611225344

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 5/12 ದಿನಗಳು. 28.01.2023 ಗೋವ,ಕಾರವಾರ,ಗೋಕರಣ ಮುರುಡೇಶ್ವರ ಕೊಲ್ಲೂರು 7500/-. 07.02.2023 ಗುಜರಾತ್ ಮದ್ಯಪ್ರದೇಶ 04.03.2023 ಕೇರಳ. 01.04.2023 ಕಾಶಿ,ಅಯೋಧ್ಯ. 22.04.2023 ವೈಷ್ಣೋದೇವಿ. 9448390735 9449721678

ಮಹಾಶಿವರಾತ್ರಿ`ಪ್ರಯುಕ್ತ 9/2/2023`ಮತ್ತು 24/2/2023ರಿಂದ`ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ`13/16 ದಿನಗಳ`ನೈಮಿಶಾರಣ್ಯ ಮುಕ್ತಿನಾಥ್,ಪಶುಪತಿನಾಥ್, ಫೋಕ್ರ,ಭಕ್ತಿಪುರ್,ಕಾಶಿ,ಪೂರಿ, ಕೋಲ್ಕತ್ತಾ,`ಇತ್ಯಾದಿ.ಹಾಗೂ 27/4/2023ರಿಂದ`34ದಿನಗಳ ಚಾರಧಾಮ್`ಸಮೇತ`ವೈಷ್ಣೋ ದೇವಿ,ಅಮೃತ್`ಸರ್,ಕಾಶಿ, ಗುಲ್ಮಾರ್ಗ್,ಕಾಶ್ಮೀರ,ಹರಿದ್ವಾರ, ನವದೆಹಲಿ.~ಏಷ್ಯನ್`ಟ್ರಾವೆಲ್ ಲೈನ್ಸ್`164/3,ಅರ್.ವಿ.ರಸ್ತೆ ಬೆಂಗಳೂರು.~04,ಸಂಪರ್ಕಿಸಿ: ಷಣ್ಮುಗಾನಂದ:9480182865. 8105657052.

ವೈಯಕ್ತಿಕ

Change of Name

ಶ್ರೀ ಪ್ರಭಾತ್ ಸಜೀಪ S/o. ಶ್ರೀ ಸುಂದರರಾಮ ರಾವ್, 44 ವಯಸ್ಸು, ವಿಳಾಸ: ಕಲ್ಲಾರೆ ಹೌಸ್, ಪುತ್ತೂರು ಕಸಬಾ, ಪುತ್ತೂರು ದ.ಕ. ಕರ್ನಾಟಕ-574201 ಆದ ನಾನು, ನನ್ನ ಹೆಸರುಗಳಾದ ಪ್ರಭಾತ್ ಸಜೀಪ ಮತ್ತು ಪ್ರಭಾತ್ ಎಸ್. ರಾವ್ ಎರಡೂ ನನಗೆ ಅನ್ವಯವಾಗುತ್ತವೆ ಎಂಬುದಾಗಿ ಸಾರ್ವಜನಿಕರಿಗೆ ಈ ಮೂಲಕ ದೃಢೀಕರಿಸುತ್ತೇನೆ ಹಾಗೂ ಇದನ್ನು ಮಾನ್ಯ ನೋಟರಿ ಶ್ರೀ ಬಿ. ಎಂ. ಚಂದ್ರಶೇಖರ್, ಬೆಂಗಳೂರು, ಇವರ ಸಮ್ಮುಖದಲ್ಲಿ ದಿನಾಂಕ 03.01.2023 ರಂದು ಪ್ರಮಾಣಿಕರಿಸಿರುತ್ತೇನೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
conditions apply*
dhclassifieds@deccanherald.co.in www.dhclassifieds.com

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,232
ಇಂದಿನ ಅಂತ್ಯ	18,043
▼	189
ದಿನದ ಕನಿಷ್ಠ	18,020

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹565
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹567

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1280 (1290)
ಸೂರ್ಯಕಾಂತಿ (ರಿಫೈನ್ಡ್)	₹1330 (1335)
ಪಾಮೋಲಿನ್	₹965 (965)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1400-1600
ಮಧ್ಯಮ	₹1000-1200
ಸಣ್ಣ	₹500-800

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)

ಕನಿಷ್ಠ	₹11000
ಗರಿಷ್ಠ	₹11900
ಮಾದರಿ	₹11500
ಆವಕ (ಚೀಲ)	5700

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹135
ಆರ್‌ಎಸ್‌ಎಸ್-5	₹127
ಗುಡ್ ಲಾಟ್	₹121

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹495-680
ದ್ವಿತಳಿ (ಬಿ.ವಿ)	₹333-797

ಬೇಡಿಕೆ ಹೆಚ್ಚಳ: ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಪಿಎಂಐ ಸೂಚ್ಯಂಕ

ಏರಿಕೆ ಕಂಡ ಸೇವಾ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಡಿಸೆಂಬರ್‌ನಲ್ಲಿ ಆರು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿವೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮಾರುಕಟ್ಟೆ ಸ್ಥಿತಿಯು ಅನುಕೂಲಕರವಾಗಿ ಇರುವುದು ಹಾಗೂ ಹೊಸ ವಹಿವಾಟುಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವುದೇ ಇದಕ್ಕೆ ಕಾರಣ ಎಂದು ಅದು ತಿಳಿಸಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ನವೆಂಬರ್‌ನಲ್ಲಿ 56.4ರಷ್ಟು ಇದ್ದಿದ್ದು ಡಿಸೆಂಬರ್‌ನಲ್ಲಿ 58.5ಕ್ಕೆ ಏರಿಕೆ ಆಗಿದೆ. ಇದು 2022ರ ಮಧ್ಯಭಾಗದ ನಂತರದಲ್ಲಿ ಕಂಡುಬಂದಿರುವ ಅತ್ಯಂತ ವೇಗದ ಬೆಳವಣಿಗೆ.

ಮುಖ್ಯಾಂಶಗಳು
- ಸತತ 17ನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಬೆಳವಣಿಗೆ
- ಸೇವಾ ವಲಯದಲ್ಲಿ ವೆಚ್ಚ ಹೆಚ್ಚಳ

ಡಿಸೆಂಬರ್‌ನಲ್ಲಿ ಹೆಚ್ಚಿನ ಸಂಖ್ಯೆಯ ಉದ್ಯೋಗಗಳು ಸೃಷ್ಟಿಯಾಗಿವೆ. ಕಂಪನಿಗಳು 2023ರಲ್ಲಿ ತಮ್ಮ ವಹಿವಾಟಿನ ಬೆಳವಣಿಗೆಯ ಬಗ್ಗೆ ಹೆಚ್ಚಿನ ಆಶಾವಾದ ಹೊಂದಿವೆ. ಬೆಳ-

ವಣಿಗೆಯಲ್ಲಿ ಏರಿಕೆ ಕಂಡುಬರಲಿದೆ ಎಂದು ಶೇಕಡ 31ರಷ್ಟು ಕಂಪನಿಗಳು ಹೇಳಿದ್ದರೆ, ಇಳಿಕೆ ಕಾಣಲಿದೆ ಎನ್ನುವುದು ಶೇ 2ರಷ್ಟು ಕಂಪನಿಗಳ ನಿರೀಕ್ಷೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಕೆಲಸಗಾರರ ಮೇಲೆ ಮಾಡುತ್ತಿರುವ ವೆಚ್ಚ ಹೆಚ್ಚಾಗುತ್ತಿರುವುದು, ವಿದ್ಯುತ್, ಆಹಾರ ಮತ್ತು ಸಾಗಣೆ ವೆಚ್ಚದಲ್ಲಿ ಆಗುತ್ತಿರುವ ಏರಿಕೆಯಿಂದಾಗಿ ಕಂಪನಿಗಳ ವೆಚ್ಚವು ಡಿಸೆಂಬರ್‌ನಲ್ಲಿ ಇನ್ನಷ್ಟು ಹೆಚ್ಚಾಗಿದೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟು ಬೆಳವಣಿಗೆಯನ್ನು ಸೂಚಿಸುವ ಕಂಪೊಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ನವೆಂಬರ್‌ನಲ್ಲಿ 56.7ರಷ್ಟು ಇದ್ದಿದ್ದು, ಡಿಸೆಂಬರ್‌ನಲ್ಲಿ 59.4ಕ್ಕೆ ಏರಿಕೆ ಆಗಿದೆ.

ದಂಡದ ಶೇ 10ರಷ್ಟು ಪಾವತಿಸಿ: ಗೂಗಲ್‌ಗೆ ನಿರ್ದೇಶನ

ನವದೆಹಲಿ (ಪಿಟಿಐ): ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ವಿಧಿಸಿರುವ ₹ 1,337.76 ಕೋಟಿ ದಂಡದಲ್ಲಿ ಶೇ 10ರಷ್ಟು ಮೊತ್ತವನ್ನು ಪಾವತಿಸುವಂತೆ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಗೂಗಲ್‌ಗೆ ನಿರ್ದೇಶನ ನೀಡಿದೆ.

ಆ್ಯಂಡ್ರಾಯ್ಡ್ ಕಾರ್ಯಾಚರಣೆ ವ್ಯವಸ್ಥೆಯ ಬಳಕೆ ಇರುವಲ್ಲಿ ತಾನು ಹೊಂದಿರುವ ಪ್ರಬಲ ಸ್ಥಾನವನ್ನು ದುರ್ಬಳಕೆ ಮಾಡಿಕೊಂಡ ಕಾರಣಕ್ಕೆ ಗೂಗಲ್ ಕಂಪನಿಗೆ ಸಿಸಿಐ ದಂಡ ವಿಧಿಸಿದೆ.

ಇದಕ್ಕೆ ಗೂಗಲ್ ಕಂಪನಿಯು ಆಕ್ಷೇಪ ವ್ಯಕ್ತಪಡಿಸಿದೆ. ಸಿಸಿಐ ತೀರ್ಪಿಗೆ ತಕ್ಷಣವೇ ತಡೆ ನಿಡುವಂತೆ ಗೂಗಲ್ ಕಂಪನಿಯು ಎನ್‌ಸಿಎಲ್‌ಎಟಿಗೆ ಅರ್ಜಿ ಸಲ್ಲಿಸಿದೆ. ಅರ್ಜಿಯ ವಿಚಾರಣೆ ನಡೆಸಲು ನ್ಯಾಯಮಂಡಳಿಯು ಒಪ್ಪಿಗೆ ನೀಡಿದೆ. ಆದರೆ, ಸಿಸಿಐ ನೀಡಿರುವ ಆದೇಶಕ್ಕೆ ತಕ್ಷಣ ತಡೆ ನೀಡಲು ಅದು ನಿರಾಕರಿಸಿದೆ. ಪ್ರತಿವಾದಿಯ ಹೇಳಿಕೆಯ ಬಳಿಕ ನಿರ್ಧಾರಕ್ಕೆ ಬರುವುದಾಗಿ ಹೇಳಿದೆ.

₹ 1 ಲಕ್ಷ ಕೋಟಿ ಲಾಭದತ್ತ ರಾಷ್ಟ್ರೀಕೃತ ಬ್ಯಾಂಕ್‌ಗಳು

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು 2017ರಲ್ಲಿ ಒಟ್ಟು ₹ 85,390 ಕೋಟಿ ನಷ್ಟ ಕಂಡಿದ್ದವು. ಆದರೆ, ಪ್ರಸಕ್ತ ಹಣಕಾಸು ವರ್ಷದಲ್ಲಿ ಅವು ಒಟ್ಟು ₹ 1 ಲಕ್ಷ ಕೋಟಿ ಲಾಭ ಗಳಿಸುವ ನಿರೀಕ್ಷೆ ಇದೆ.

21 ರಾಷ್ಟ್ರೀಕೃತ ಬ್ಯಾಂಕ್‌ಗಳ ಪೈಕಿ 11 ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಗತಿ ಚೆನ್ನಾಗಿಲ್ಲ ಎಂಬ ಕಾರಣಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಒಂದು ಸಂದರ್ಭದಲ್ಲಿ ಆ ಬ್ಯಾಂಕ್‌ಗಳ ಮೇಲೆ ಕಠಿಣ ಸ್ವರೂಪದ ಆರ್ಥಿಕ ನಿರ್ಬಂಧಗಳನ್ನು ವಿಧಿಸಿತ್ತು. ಹಲವು ಬ್ಯಾಂಕ್‌ಗಳ ಷೇರು ಮೌಲ್ಯವು ತಳಕಚ್ಚಿತ್ತು.

2015–16ರಿಂದ 2019–20ರವರೆಗಿನ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಒಟ್ಟು ₹ 2.07 ಲಕ್ಷ ಕೋಟಿ ನಷ್ಟ ಕಂಡವು. ಆದರೆ ಈಗ ಅವು ಲಾಭದ ಹಳಿಗೆ ಬಂದಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ಹಿಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಹಾಗೂ ಹಣಕಾಸು ಸೇವೆಗಳ

ಕಾರ್ಯದರ್ಶಿ ರಾಜೀವ್ ಕುಮಾರ್ ಜೊತೆಗೂಡಿ ಕೈಗೊಂಡ ಸುಧಾರಣಾ ಕ್ರಮಗಳು ಇದಕ್ಕೆ ಕಾರಣ.

ಕಳೆದ ಐದು ಹಣಕಾಸು ವರ್ಷಗಳಲ್ಲಿ ಕೇಂದ್ರವು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ₹3.10 ಲಕ್ಷ ಕೋಟಿ ಬಂಡವಾಳ ನೆರವು ನೀಡಿದೆ.

ಬಂಡವಾಳದ ನೆರವು ಹಾಗೂ ಕೇಂದ್ರ ಹಣಕಾಸು ಸೇವೆಗಳ ಇಲಾಖೆಯಿಂದ ಸಿಕ್ಕ ಒತ್ತಾಸೆಯ ಕಾರಣದಿಂದಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಸಾಲ ಬಾಕಿ ಇರಿಸಿಕೊಂಡಿದ್ದವರ ವಿರುದ್ಧ ಬಿಗಿ ನಿಲುವು ಅನುಸರಿಸಿದವು. ದೊಡ್ಡ ಪ್ರಮಾಣದ ಸಾಲ ತೀರಿಸದೆ ಇದ್ದ ಭೂಷಣ್ ಸ್ಟೀಲ್, ಜೆಟ್ ಏರ್‌ವೇಸ್, ಎಸ್ಸಾರ್ ಸ್ಟೀಲ್, ರೊಟೊಮ್ಯಾಕ್ ನಂತಹ ಕಂಪನಿಗಳು, ನೀರವ್ ಮೋದಿಯಂತಹ ವ್ಯಕ್ತಿಗಳ ವಿರುದ್ಧ ಕ್ರಮಕ್ಕೆ ಮುಂದಾದವು. ಈ ಎಲ್ಲ ಕ್ರಮಗಳ ಪರಿಣಾಮವಾಗಿ ರಾಷ್ಟ್ರೀಕೃತ ಬ್ಯಾಂಕ್‌ಗಳು ಲಾಭ ಕಾಣುವಂತಾಯಿತು. ಹಿಂದಿನ ಹಣಕಾಸು ವರ್ಷದಲ್ಲಿ ಹಲವು ರಾಷ್ಟ್ರೀಕೃತ ಬ್ಯಾಂಕ್‌ಗಳು ಷೇರುದಾರರಿಗೆ ಡಿವಿಡೆಂಡ್ ಕೂಡ ನೀಡಿವೆ.

‘ಸೋರಿಕೆಗಳನ್ನು ತಡೆಯಲಾಗುತ್ತಿದೆ. ಬ್ಯಾಂಕ್‌ಗಳ ಆಸ್ತಿ ಗುಣಮಟ್ಟ ಸುಧಾರಿಸುತ್ತಿದೆ. ಈಗ ಬಡ್ಡಿ ದರ ಹೆಚ್ಚಾಗುತ್ತಿರುವ ಕಾರಣ ಬ್ಯಾಂಕ್‌ಗಳ ಲಾಭದ ಪ್ರಮಾಣವೂ ಹೆಚ್ಚಾಗಲಿದೆ. ಲಾಭದ ದೃಷ್ಟಿಯಿಂದ ಹೇಳುವುದಾದರೆ ರಾಷ್ಟ್ರೀಕೃತ ಬ್ಯಾಂಕ್‌ಗಳು ಈಗ ಸುವರ್ಣ ಕಾಲಘಟ್ಟದಲ್ಲಿ ಇವೆ’ ಎಂದು ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಸ್ವರೂಪ್ ಕುಮಾರ್ ಸಹಾ ಹೇಳಿದ್ದಾರೆ.

ಪ್ರಧಾನಿ ನೇತೃತ್ವದ ಸಭೆಯಲ್ಲಿ ಬಿಐಎನ್‌ಡಿ ಪ್ರಸ್ತಾವನೆಗೆ ಒಪ್ಪಿಗೆ

ಪ್ರಸಾರ ಭಾರತಿ ಮೇಲ್ದರ್ಜೆಗೆ ₹2,539 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪ್ರಸಾರ ಭಾರತಿ’ಯ ಮೂಲಸೌಕರ್ಯದ ಸಂಪೂರ್ಣ ಉನ್ನತೀಕರಣಕ್ಕಾಗಿ 2025–26ನೇ ಸಾಲಿನವರೆಗೆ ₹2,539.61 ಕೋಟಿ ವ್ಯಯಿಸಲು ಆರ್ಥಿಕ ವ್ಯವಹಾರಗಳ ಸಂಸದೀಯ ಸಮಿತಿ (ಸಿಸಿಇಎ) ಬುಧವಾರ ಒಪ್ಪಿಗೆ ಸೂಚಿಸಿದೆ.

ಆಕಾಶವಾಣಿ (ಎಐಆರ್) ಮತ್ತು ದೂರದರ್ಶನದ ಪ್ರಸಾರ ವ್ಯಾಪ್ತಿಯನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರು ‘ಪ್ರಸಾರ ಮೂಲಸೌಕರ್ಯ ಮತ್ತು ಜಾಲ ಅಭಿವೃದ್ಧಿ’ (ಬಿಐಎನ್‌ಡಿ) ಯೋಜನೆ ಪ್ರಸ್ತಾವನೆಯನ್ನು ಸಮಿತಿಗೆ ಸಲ್ಲಿಸಿದ್ದರು.

ಅನುರಾಗ್ ಠಾಕೂರ್

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಭೆಯು ಬಿಐಎನ್‌ಡಿಗೆ ಒಪ್ಪಿಗೆ ನೀಡಿದೆ.

ಪ್ರಸಾರದ ಮೂಲಸೌಕರ್ಯ, ಕಾರ್ಯಕ್ರಮಗಳ ವಸ್ತು ಉನ್ನತೀಕರಣ ಮತ್ತು ಸಂಸ್ಥೆಗೆ ಸಂಬಂಧಿಸಿದ ಕೆಲಸಗಳಿಗಾಗಿ ಪ್ರಸಾರ ಭಾರತಿಗೆ ಧನ ಸಹಾಯ ನೀಡುವ ಯೋಜನೆ ಇದಾಗಿದೆ ಎಂದು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಈ ಯೋಜನೆ ಮೂಲಕ ಎಫ್‌ಎಂ ರೇಡಿಯೊ ಪ್ರಸಾರ ವ್ಯಾಪ್ತಿಯನ್ನು ಭೌಗೋಳಿಕ ಪ್ರದೇಶ ಮಟ್ಟದಲ್ಲಿ ಶೇ 59ರಿಂದ ಶೇ 66ಕ್ಕೆ ಹೆಚ್ಚಿಸುವ ಮತ್ತು ಜನಸಂಖ್ಯೆ ಮಟ್ಟದಲ್ಲಿ ಶೇ 68ರಿಂದ ಶೇ 80ಕ್ಕೆ ಹೆಚ್ಚಿಸುವ ನಿರೀಕ್ಷೆಯನ್ನು ಸರ್ಕಾರ ಹೊಂದಿದೆ. ಜೊತೆಗೆ, ಅತಿ ದೂರದ ಪ್ರದೇಶಗಳು, ಬುಡಕಟ್ಟು ಜನಾಂಗಗಳು ವಾಸಿಸುವ ಪ್ರದೇಶಗಳು, ನಕ್ಸಲ್ ಹಾವಳಿಯಿಂದ ತತ್ತರಿಸಿರುವ ಪ್ರದೇಶಗಳು ಮತ್ತು ಗಡಿ ಪ್ರದೇಶಗಳಿಗೆ 8 ಲಕ್ಷ ಉಚಿತ ಸೆಟ್ ಟಾಪ್ ಬಾಕ್ಸ್‌ಗಳನ್ನು ವಿತರಿಸುವ ಉದ್ದೇಶವನ್ನೂ ಈ ಯೋಜನೆ ಹೊಂದಿದೆ.

ದೇಶದಲ್ಲಿಯ ಮತ್ತು ವಿದೇಶಿ ವೀಕ್ಷಕರನ್ನು ಗಮನದಲ್ಲಿರಿಸಿಕೊಂಡು ಉತ್ತಮ ಕಾರ್ಯಕ್ರಮಗಳನ್ನು ರೂಪಿಸುವುದು, ನೇರವಾಗಿ ಮನೆಗೆ (ಡಿಟಿಎಚ್) ವೇದಿಕೆಯ ಸಾಮರ್ಥ್ಯದಲ್ಲಿ ಸುಧಾರಣೆ ತರುವ ಮೂಲಕ ಹೆಚ್ಚು ವಾಹಿನಿಗಳ ಪ್ರಸಾರ ಮಾಡುವ ಉದ್ದೇಶ, ಹೊರಾಂಗಣ ಚಿತ್ರೀಕರಣ ಮತ್ತು ನೇರ ಪ್ರಸಾರ ಸೌಲಭ್ಯವಿರುವ ವಾಹನಗಳ (ಒಬಿ ವ್ಯಾನ್) ಖರೀದಿ, ದೂರದರ್ಶನದ ಮತ್ತು ಎಐಆರ್ ಸ್ಟುಡಿಯೋಗಳ ಡಿಜಿಟಲ್ ಉನ್ನತೀಕರಣವು ಈ ಯೋಜನೆಯಲ್ಲಿ ಸೇರಿದೆ.

ಮುಂದಿನ 20 ವರ್ಷಗಳಲ್ಲಿ ದೂರದರ್ಶನವು ಹೇಗೆ ಅಭಿವೃದ್ಧಿಗೊಂಡಿರುತ್ತದೆ ಎಂಬುದರ ರೂಪುರೇಷೆಯನ್ನು ಈ ಯೋಜನೆ ಹೊಂದಿದೆ ಎಂದು ಅನುರಾಗ್ ಹೇಳಿದ್ದಾರೆ.

61 ಸಾವಿರದಿಂದ ಕೆಳಗಿಳಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಹೂಡಿಕೆದಾರರು ಲಾಭ ಗಳಿಕೆಯ ವಹಿವಾಟಿಗೆ ಮುಂದಾಗಿದ್ದರಿಂದ ಷೇರುಪೇಟೆಗಳಲ್ಲಿ ಬುಧವಾರ ನಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 637 ಅಂಶ ಕಡಿಮೆಯಾಗಿ 61 ಸಾವಿರಕ್ಕಿಂತ ಕೆಳಕ್ಕೆ ಇಳಿದರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 189 ಅಂಶ ಇಳಿಕೆ ಕಂಡು 18,042 ಅಂಶಗಳಿಗೆ ತಲುಪಿತು.

ವಿದೇಶಿ ಬಂಡವಾಳ ಹೊರಹರಿವು ಸಹ ವಹಿವಾಟಿನ ಇಳಿಕೆಗೆ ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ. ಜಾಗತಿಕ ಮಾರುಕಟ್ಟೆಯ ಪರಿಣಾಮಕ್ಕೆ ಒಳಗಾಗಿ ದೇಶಿ ಷೇರುಪೇಟೆಗಳು ಇಳಿಕೆ ಕಾಣುವಂತಾಯಿತು. ಅಮೆರಿಕದ ಫೆಡರಲ್ ರಿಸರ್ವ್‌ನ ಸಭೆಯ ಸಾರಾಂಶವು ಬಿಡುಗಡೆ ಆಗಲಿದ್ದು, ಬಡ್ಡಿದರ ಇನ್ನಷ್ಟು ಹೆಚ್ಚಳವಾಗುವ ಆತಂಕದಿಂದ ಸೂಚ್ಯಂಕಗಳು ಇಳಿಕೆ ಕಂಡವು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ದೇಶಿ ಮಾರುಕಟ್ಟೆಯು ಕಾರ್ಪೊರೇಟ್ ಗಳಿಕೆಯ ಮೇಲೆ ಹೆಚ್ಚು ಗಮನ ಹರಿಸಲಿದೆ ಎಂದು ಅವರು ತಿಳಿಸಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 1.86ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 80.57 ಡಾಲರ್‌ಗೆ ತಲುಪಿತು.

ನಿರುದ್ಯೋಗ ಹೆಚ್ಚಳ: ವರದಿ ಅಲ್ಲಗಳೆದ ಕೇಂದ್ರ

ನವದೆಹಲಿ (ಪಿಟಿಐ): ನಿರುದ್ಯೋಗ ಹೆಚ್ಚಾಗಿದೆ ಎನ್ನುವ, ಸಮೀಕ್ಷೆಯನ್ನು ಆಧರಿಸಿದ ಸುದ್ದಿಗಳನ್ನು ಕೇಂದ್ರ ಕಾರ್ಮಿಕ ಸಚಿವಾಲಯವು ಅಲ್ಲಗಳೆದಿದೆ. ಹಲವು ಖಾಸಗಿ ಸಂಸ್ಥೆಗಳು ತಮ್ಮದೇ ಆದ ಮಾದರಿ ಅನುಸರಿಸಿ ಇಂತಹ ಸಮೀಕ್ಷೆ ನಡೆಸುತ್ತವೆ, ಇವು ಸಾಮಾನ್ಯವಾಗಿ ವೈಜ್ಞಾನಿಕವಾಗಿರುವುದಿಲ್ಲ, ಅಂತರರಾಷ್ಟ್ರೀಯ ನಿಯಮಗಳಿಗೆ ಅನುಗುಣವಾಗಿಯೂ ಇರುವುದಿಲ್ಲ ಎಂದು ಸಚಿವಾಲಯ ಹೇಳಿದೆ.

ಆದರೆ, ಸಚಿವಾಲಯವು ಯಾವುದೇ ನಿರ್ದಿಷ್ಟ ವರದಿ ಅಥವಾ ಸಂಸ್ಥೆಯ ಹೆಸರನ್ನು ಉಲ್ಲೇಖಿಸಿಲ್ಲ. 2022ರ ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ ಎಂಬ ವರದಿಯನ್ನು, ಖಾಸಗಿ ಸಂಸ್ಥೆಯೊಂದರ ಸಮೀಕ್ಷೆಯನ್ನು ಆಧರಿಸಿ ಕೆಲವು ಮಾಧ್ಯಮಗಳು ಪ್ರಕಟಿಸಿವೆ ಎಂದು ಹೇಳಿದೆ.

ಇಂತಹ ಸಂಸ್ಥೆಗಳು ಅನುಸರಿಸುವ ಮಾದರಿಯು ಸಾಮಾನ್ಯವಾಗಿ ನಿಷ್ಪಕ್ಷಪಾತವಾಗಿ ಇರುವುದಿಲ್ಲ. ನಿರುದ್ಯೋಗವನ್ನು ಹೆಚ್ಚಾಗಿ ಹೇಳುವ, ಉದ್ಯೋಗ ಪ್ರಮಾಣವನ್ನು ಕಡಿಮೆ ಹೇಳುವ ಸಾಧ್ಯತೆ ಇರುತ್ತದೆ ಎಂದು ಸಚಿವಾಲಯ ವಿವರಿಸಿದೆ.

ಡಿಸೆಂಬರ್‌ನಲ್ಲಿ ನಿರುದ್ಯೋಗ ಪ್ರಮಾಣವು ಶೇ 8.3ಕ್ಕೆ ಏರಿಕೆಯಾಗಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ ಸಂಸ್ಥೆ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	250-300
ನಡುಗೋಲು	450-480
ರಾಶಿ	480-500
ರಾಶಿ ಉತ್ತಮ	550-600
ಜರಡಿ	700-750
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1250-1350
ಕಾಳು ಮೆಣಸು	490
ಬಂಟ್ವಾಳ	
ಕೋಕ	12500-25000
ಹೊಸತು	22500-38000
ಹಳತು	48000-54500
ಕಾರ್ಕಳ	
ಹೊಸತು	30000-37500
ಹಳತು	40000-54500
ಕುಮಟ	
ಚಿಪ್ಪು	25609-32229
ಕೋಕ	17019-29809
ಹಳೆಚಾಲಿ	37769-41009
ಹೊಸಚಾಲಿ	32809-35819
ಶಿವಮೊಗ್ಗ	
ಬೆಟ್ಟೆ	46509-53599
ಗೊರಬಲು	17001-35299
ರಾಶಿ	39099-46596
ಸರಕು	55419-80099
ಸಿದ್ದಾಪುರ	
ಬಿಳಿಗೋಟು	28499-32899
ಚಾಲಿ	37699-41099
ಕೋಕ	26499-31109
ಕೆಂಪುಗೋಟು	20899-31899
ರಾಶಿ	44699-45329
ತಟ್ಟಿಬೆಟ್ಟೆ	42099-42099
ಶಿರಸಿ	
ಬೆಟ್ಟೆ	36009-42518
ಬಿಳಿಗೋಟು	22899-35499
ಚಾಲಿ	38109-42500
ಕೆಂಪುಗೋಟು	27399-34299
ರಾಶಿ	40819-45639

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13650	13800	13600	166.30 ಸೆಂಟ್ಸ್
ಎಸಿ	6720	7000	6000	
ಆರ್‌ಪಿ	8000	8200	7900	ಲಂಡನ್
ಆರ್‌ಸಿ	4550	166 on OT	4200	1852 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

4-1-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10600
ದಪ್ಪ ಗುಜರಾತ್(ಹೊಸ)	11600-11700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	--- (---)
ಪಾಮ್ ವಾರದ ಡೆಲಿವರಿ	963 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1220 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
55,900 (55,350)
ಬೆಳ್ಳಿ ಕೆ.ಜಿ 69,350 (69,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎಸ್‌. ಅಬ್ದುಲ್ ನಜೀರ್ ನಿವೃತ್ತಿ

‘ಮಹಿಳಾ ಪ್ರಾತಿನಿಧ್ಯದ ಕೊರತೆ ನೀಗಿಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮೂಲದ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಅವರು ಸುಪ್ರೀಂ ಕೋರ್ಟ್‌ನಿಂದ ಬುಧವಾರ ನಿವೃತ್ತರಾದರು.

ಎಸ್‌.ಅಬ್ದುಲ್ ನಜೀರ್

‘ನ್ಯಾಯಾಂಗದಲ್ಲಿ ಮಹಿಳೆಯರಿಗೆ ಸಾಕಷ್ಟು ಪ್ರಾತಿನಿಧ್ಯದ ಕೊರತೆ ಇದೆ ಮತ್ತು ನ್ಯಾಯಾಂಗವು ಲಿಂಗ ಅಸಮಾನತೆಗಳಿಂದ ಮುಕ್ತವಾಗಿದೆ ಎಂದು ಕರೆಯುವುದು ವಾಸ್ತವದಿಂದ ದೂರವಾಗಿತ್ತು’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ (ಎಸ್‌ಸಿಬಿಎ) ಆಯೋಜಿಸಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ನಜೀರ್, ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ಮಾರ್ಗದರ್ಶನದಲ್ಲಿ ಇಂದಿನ ಕ್ರಿಯಾತ್ಮಕ ಸನ್ನಿವೇಶದ ಸವಾಲುಗಳನ್ನು ಎದುರಿಸಲು ಸುಪ್ರೀಂ ಸಜ್ಜಾಗಿದೆ. ಆದರೆ, ಸುಧಾರಣೆಗೆ ಅವಕಾಶವಿತ್ತು ಎಂದರು.

‘ಸುಪ್ರೀಂ ಕೋರ್ಟ್ ಯಾವಾಗಲೂ ಉತ್ಕೃಷ್ಟತೆಗಾಗಿ ಶ್ರಮಿಸಿದೆ. ಸುಧಾರಣೆ ಮತ್ತು ಬದಲಾವಣೆಗಳಿಗೆ ಯಾವಾಗಲೂ ಅವಕಾಶವಿದೆ. ಉದಾಹರಣೆಗೆ, ಸಮಾಜದಲ್ಲಿ ಅಸ್ತಿತ್ವದಲ್ಲಿರುವ ಲಿಂಗ ಅಸಮಾನತೆಗಳಿಂದ ಭಾರತೀಯ ನ್ಯಾಯಾಂಗ ಮುಕ್ತವಾಗಿದೆ ಎಂದು ಹೇಳಿದರೆ, ನಾನು ವಾಸ್ತವದಿಂದ ದೂರ ವಿರಲು ಸಾಧ್ಯವಿಲ್ಲ. ನ್ಯಾಯಾಂಗದಲ್ಲಿ ಮಹಿಳೆಯರ ಪ್ರಾತಿನಿಧ್ಯ ಇನ್ನೂ ಕಡಿಮೆ ಇದೆ’ ಎಂದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ‘ನಜೀರ್ ಅವರು ಯಾವಾಗಲೂ ನ್ಯಾಯದ ಪರವಾಗಿದ್ದರು ಹಾಗೂ ಸೂಕ್ತ ನ್ಯಾಯದಾನ ಒದಗಿಸುವುದನ್ನು ಖಾತರಿಪಡಿಸಿಕೊಳ್ಳುತ್ತಿದ್ದರು’ ಎಂದರು.

ಹಲವು ಮಹತ್ವದ ತೀರ್ಪು: ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿದ್ದ ಅವಧಿಯಲ್ಲಿ ನಜೀರ್ ಅವರು ಹಲವು ಮಹತ್ವದ ತೀರ್ಪುಗಳನ್ನು ಪ್ರಕಟಿಸಿದ್ದಾರೆ. ರಾಜಕೀಯ ಸೂಕ್ಷ್ಮತೆ ಹೊಂದಿದ್ದ ಅಯೋಧ್ಯೆ ಭೂವಿವಾದ, ತ್ರಿವಳಿ ತಲಾಕ್ ಹಾಗೂ ಖಾಸಗಿತನದ ಹಕ್ಕು ಕೂಡ ಮೂಲಭೂತ ಹಕ್ಕು ಎಂದು ಘೋಷಿಸಿದ ತೀರ್ಪು ಸೇರಿದಂತೆ ಹಲವು ಮಹತ್ವದ ಆದೇಶಗಳನ್ನು ಪ್ರಕಟಿಸಿದ್ದಾರೆ.

2018ರ ಫೆಬ್ರುವರಿ 17ರಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದ ನಜೀರ್ ಅವರು, ಹಲವು ಸಾಂವಿಧಾನದ ಪೀಠಗಳ ಭಾಗವಾಗಿದ್ದರು. ₹500, ₹1000 ನೋಟುಗಳ ಅಮಾನ್ಯೀಕರಣ ಕಾನೂನುಬದ್ಧವಾಗಿದೆ ಎಂದು ತೀರ್ಪು ಕೊಟ್ಟ ಪಂಚ ಸದಸ್ಯರ ಸಾಂವಿಧಾನಿಕ ಪೀಠದಲ್ಲಿ ಇವರು ಒಬ್ಬರಾಗಿದ್ದರು.

ಬದಲಿ ನಿವೇಶನ ವಾಪಸ್‌ಗೆ ಆದೇಶ

ಮರು ಸ್ವಾಧೀನ ಪಡೆದಿರುವ ಅಥವಾ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಸಾರ್ವಜನಿಕ ಹರಾಜಿನ ಮೂಲಕ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕು ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಅಬ್ದುಲ್ ನಜೀರ್ ನೇತೃತ್ವದ ನ್ಯಾಯಪೀಠ 2021ರ ಅಕ್ಟೋಬರ್ 29ರಂದು ಆದೇಶಿಸಿತ್ತು.

ಬೆಂಗಳೂರಿನಲ್ಲಿ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಬಡಾವಣೆಯಲ್ಲಿ ರಾಜಕಾರಣಿಗಳಿಗೆ ಕಾನೂನುಬಾಹಿರವಾಗಿ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದ ನಜೀರ್ ನೇತೃತ್ವದ ನ್ಯಾಯಪೀಠ, ಈ ಬದಲಿ ನಿವೇಶನಗಳನ್ನು ಕಾನೂನು ಪ್ರಕ್ರಿಯೆಗಳ ಅನುಸಾರ ವಾಪಸ್ ಪಡೆಯುವಂತೆ ಪ್ರಾಧಿಕಾರಕ್ಕೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಆದೇಶ ನೀಡಿತ್ತು.

ಈ ಪ್ರಕರಣದಲ್ಲಿ ಪ್ರಾಧಿಕಾರದ ಆಯುಕ್ತರಾಗಿದ್ದ ಎಂ.ಬಿ.ರಾಜೇಶ ಗೌಡ ಹಾಗೂ ಇಬ್ಬರು ಉಪ ಕಾರ್ಯದರ್ಶಿಗಳ ವರ್ಗಾವಣೆಗೂ ನ್ಯಾಯಪೀಠ ಆದೇಶಿಸಿತ್ತು. ಬೆಂಗಳೂರಿನ ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ನ್ಯಾಯಪೀಠ ಹಲವು ಆದೇಶಗಳನ್ನು ನೀಡಿತ್ತು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ 1958ರ ಜನವರಿ 5ರಂದು ಜನಿಸಿದ ನಜೀರ್ ಅವರು, 1983ರ ಫೆಬ್ರುವರಿಯಲ್ಲಿ ವಕೀಲರಾಗಿ ಸೇವೆ ಆರಂಭಿಸಿದರು. 2003ರ ಮೇ 12ರಂದು ಅವರು ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2004ರ ಸೆಪ್ಟೆಂಬರ್‌ನಲ್ಲಿ ಅವರು ಕಾಯಂ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದರು.

ಸೋನಿಯಾ ಗಾಂಧಿ ಆಸ್ಪತ್ರೆಗೆ ದಾಖಲು

ನವದೆಹಲಿ: ವೈರಾಣು ಉಸಿರಾಟದ ಸೋಂಕಿನಿಂದ ಬಳಲುತ್ತಿರುವ ಕಾಂಗ್ರೆಸ್ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಬುಧವಾರ ಇಲ್ಲಿನ ಸರ್ ಗಂಗಾರಾಮ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪುತ್ರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸೋನಿಯಾ ಅವರನ್ನು ಬುಧವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಮೂಲಗಳು ಹೇಳಿವೆ.

‘ಸೋನಿಯಾ ಅವರನ್ನು ಎದೆ ರೋಗಗಳ ವೈದ್ಯಕೀಯ ವಿಭಾಗದಲ್ಲಿ ದಾಖಲಿಸಿಕೊಳ್ಳಲಾಗಿದ್ದು, ಡಾ. ಅರೂಪ್ ಬಸು, ಅವರ ತಂಡ ಚಿಕಿತ್ಸೆ ನೀಡುತ್ತಿದೆ. ಅವರಿಗೆ ವೈರಾಣು ಉಸಿರಾಟದ ಸೋಂಕು ತಗುಲಿದ್ದು, ಅವರ ಆರೋಗ್ಯದ ಬಗ್ಗೆ ನಿಗಾ ವಹಿಸಲಾಗಿದೆ’ ಎಂದು ಆಸ್ಪತ್ರೆಯ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಅಜಯ್ ಸ್ವರೂಪ್ ಅವರು ಮಾಹಿತಿ ನೀಡಿದ್ದಾರೆ.

‘ಮಂಗಳವಾರದಿಂದಲೇ ಸೋನಿಯಾ ಅಸ್ವಸ್ಥರಾಗಿದ್ದರು. ಹಾಗಾಗಿ, ಮಕ್ಕಳಾದ ರಾಹುಲ್ ಗಾಂಧಿ, ಪ್ರಿಯಾಂಕಾ ಮಂಗಳವಾರ ಉತ್ತರಪ್ರದೇಶ ಪ್ರವೇಶಿಸಿದ್ದ, ‘ಭಾರರ್ ಜೋಡೊ ಯಾತ್ರೆಯಲ್ಲಿ 7 ಕಿ.ಮೀ.ನಡೆದು ಬಳಿಕ ದೆಹಲಿಗೆ ವಾಪಸಾಗಿ ದ್ದರು. ಬುಧವಾರ ಯಾತ್ರೆಯು ಪುನರಾರಂಭವಾದಾಗ ಪ್ರಿಯಾಂಕಾ ಪಾಲ್ಗೊಳ್ಳಲಿಲ್ಲ’ ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನೀಯರರು,

ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

GSTIN:29BLR002252F1DR

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2022–23/6326, ದಿನಾಂಕ: 03.01.2023

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ.

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022–23 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆ ಅಡಿಯಲ್ಲಿನ ಯಾದಗಿರಿ ತಾಲೂಕಿನ ಕರಿಬೆಟ್ಟ ಕ್ರಾಸ್ ದಿಂದ ಮಾಧವಾರ ಗ್ರಾಮದವರೆಗೆ (ಆಯ್ದ ಭಾಗಗಳಲ್ಲಿ) (ಮುಧೋಳ–ಯಲಗೇರಾ ರಾಹೆ–127 ಕಿ.ಮೀ.63.42 ರಿಂದ 67.705 ರವರೆಗೆ) ರಸ್ತೆ ಸುಧಾರಣೆ. ಇಂಡೆಂಟ್ ಸಂಖ್ಯೆ: 163231 ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಗಿನಂತೆ ಇರುತ್ತದೆ. 2) ಕಾಮಗಾರಿ ಅಂದಾಜು ಮೊತ್ತ: ರೂ:680.306 ಲಕ್ಷಗಳು 3) ಗುತ್ತಿಗೆದಾರರ ಅರ್ಹತೆ ವಿವರ: 1ನೇ ದರ್ಜೆ ಹಾಗೂ ಮೇಲ್ಪಟ್ಟು 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ ಮತ್ತು ಕಾಲಾವಧಿ e-procurement ನಂತೆ, ಇ.ಎಮ್.ಡಿ. ರೂ:8,64,800.00 5) ಪ್ರೀ–ಬಿಡ್ ಮೀಟಿಂಗ್ ದಿನಾಂಕ: 13.01.2023 (11.30 ರ ನಂತರ) 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 16.01.2023 (17.30 ಗಂಟೆವರೆಗೆ) 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 18.01.2023 (16.00 ಗಂಟೆಯವರಿಗೆ) 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:20.01.2023 (11.30 ಗಂಟೆ ನಂತರ) 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್: 24.01.2023 (11.30 ಗಂಟೆ ನಂತರ) 10) ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ. 10) ಅಂತರ್ಜಾಲ ತಾಣದ ವಿಳಾಸ: www.e-proc.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು
ಲೋಕೋಪಾಯೋಗಿ ಇಲಾಖೆ, ವಿಭಾಗ
ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/391/ಕ.ರ.ಎಂ.ಸಿ.&ಎ/2022–23

‘ಘಟನೆ ದಿನ ಯುವತಿ ಮದ್ಯ ಸೇವಿಸಿರಲಿಲ್ಲ’

ಮೃತದೇಹ ಎಳೆದೊಯ್ದಿದ್ದ ಪ್ರಕರಣ: ಮರಣೋತ್ತರ ಪರೀಕ್ಷೆ ವರದಿ ಉಲ್ಲೇಖಿಸಿ ವೈದ್ಯರ ಹೇಳಿಕೆ

ನವದೆಹಲಿ (ಪಿಟಿಐ): ‘ಸ್ಕೂಟಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದಾಗಿ ಮೃತಪಟ್ಟಿದ್ದ 20 ವರ್ಷದ ಅಂಜಲಿ ಸಿಂಗ್, ಘಟನೆ ದಿನ ಮದ್ಯ ಸೇವಿಸಿರಲಿಲ್ಲ. ಆಕೆಯ ದೇಹದಲ್ಲಿ ಮದ್ಯದ ಅಂಶ ಪತ್ತೆಯಾಗಿಲ್ಲ’ ಎಂದು ಅಂಜಲಿ ಅವರ ಕುಟುಂಬದ ವೈದ್ಯ ಭೂಪೇಶ್, ಬುಧವಾರ ತಿಳಿಸಿದ್ದಾರೆ.

ದೆಹಲಿ ಹೊರಭಾಗದ ಸುಲ್ತಾನ್‌ಪುರಿಯಲ್ಲಿ ಭಾನುವಾರ ನಡೆದಿದ್ದ ಘಟನೆಯಲ್ಲಿ ಕಾರಿನಡಿ ಸಿಲುಕಿದ್ದ ಅಂಜಲಿ ಮೃತದೇಹವನ್ನು ಸುಮಾರು 12 ಕಿ.ಮೀ. ವರೆಗೂ ಎಳೆದೊಯ್ಯಲಾಗಿತ್ತು.

‘ಘಟನೆ ದಿನ ಅಂಜಲಿ ವಿಪರೀತ ಕುಡಿದಿದ್ದಳು. ಬೇಡವೆಂದರೂ ತಾನೇ ಸ್ಕೂಟಿ ಚಾಲನೆ ಮಾಡಿದ್ದಳು’ ಎಂದು ಆಕೆಯ ಸ್ನೇಹಿತೆ ಮಾಧ್ಯಮದವರಿಗೆ ತಿಳಿಸಿದ್ದರು.

> **ಮೃತ ಯುವತಿಯ ಕುಟುಂಬದವರನ್ನು ಭೇಟಿಯಾಗಿ ಮಾತನಾಡಿದ್ದೇವೆ. ಮನೆಯವರ ಪೈಕಿ ಒಬ್ಬರಿಗೆ ಸರ್ಕಾರಿ ಉದ್ಯೋಗ ನೀಡುತ್ತೇವೆ**
>
> **ಮನೀಷ್ ಸಿಸೋಡಿಯ,** ದೆಹಲಿ ಉಪ ಮುಖ್ಯಮಂತ್ರಿ

ಸ್ನೇಹಿತೆಯ ಹೇಳಿಕೆ ಅಲ್ಲಗಳೆದಿರುವ ಭೂಪೇಶ್, ‘ಅಂಜಲಿ ಹೊಟ್ಟೆಯಲ್ಲಿ ಆಹಾರವಷ್ಟೇ ಇತ್ತು ಎಂದು ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಹೇಳಲಾಗಿದೆ. ಒಂದೊಮ್ಮೆ ಆಕೆ ಕುಡಿದಿದ್ದರೆ ದೇಹದಲ್ಲಿ ಮದ್ಯದ ಅಂಶ ಪತ್ತೆಯಾಗಬೇಕಿತ್ತು. ಆದರೆ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಆ ಕುರಿತ ಉಲ್ಲೇಖವೇ ಇಲ್ಲ’ ಎಂದಿದ್ದಾರೆ.

‘ಯುವತಿಯ ದೇಹದಲ್ಲಿ ಶೇ 40ರಷ್ಟು ಗಾಯಗಳು ಕಂಡುಬಂದಿರುವುದಾಗಿ ಮರಣೋತ್ತರ ಪರೀಕ್ಷೆ ವರದಿಯಲ್ಲಿ ಹೇಳಲಾಗಿದೆ. ಇದನ್ನು ಗಮನಿಸಿದರೆ ಇದು ಸಾಮಾನ್ಯ ಕೊಲೆಯಲ್ಲ ಎಂಬುದು ಸ್ಪಷ್ಟವಾಗಲಿದೆ’ ಎಂದಿದ್ದಾರೆ.

‘ಕಾರಿನಲ್ಲಿದ್ದ ಐವರು ಆರೋಪಿಗಳು ಉದ್ದೇಶಪೂರ್ವಕವಾಗಿಯೇ ಅಂಜಲಿಯನ್ನು ಕೊಲೆ ಮಾಡಿದ್ದರು. ಆಕೆ ಕಾರಿನಡಿ ಸಿಲುಕಿರುವುದು ಚಾಲಕನ ಗಮನಕ್ಕೆ ಬಂದಿತ್ತು’ ಎಂದು ಸ್ನೇಹಿತೆ ಹೇಳಿದ್ದಾರೆ.

ಅಂಜಲಿ ಸಿಂಗ್‌ಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಬುಧವಾರ ಮೇಣದ ಬತ್ತಿ ಹಿಡಿದು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಅತ್ಯಾಚಾರ ಪ್ರಕರಣ: ವ್ಯಕ್ತಿ ಖುಲಾಸೆ

ಸರ್ಕಾರದಿಂದ ₹ 10 ಸಾವಿರ ಕೋಟಿ ಪರಿಹಾರಕ್ಕೆ ದಾವೆ

ರತ್ಲಾಮ್, ಮಧ್ಯಪ್ರದೇಶ (ಪಿಟಿಐ): ಸಾಮೂಹಿಕ ಅತ್ಯಾಚಾರದ ಪ್ರಕರಣದಿಂದ ಖುಲಾಸೆಗೊಂಡ ಮಧ್ಯಪ್ರದೇಶದ ರತ್ಲಾಮ್‌ನ ವ್ಯಕ್ತಿಯೊಬ್ಬರು, ತನಗಾದ ನೋವು ಮತ್ತು ಮಾನಸಿಕ ಯಾತನೆಗಾಗಿ ₹ 10,000 ಕೋಟಿಗೂ ಹೆಚ್ಚು ಪರಿಹಾರ ಒದಗಿಸುವಂತೆ ಮಧ್ಯಪ್ರದೇಶ ಸರ್ಕಾರದ ವಿರುದ್ಧ ದಾವೆ ಹೂಡಿದ್ದಾರೆ.

ಕಾಂತು ಅಲಿಯಾಸ್ ಕಾಂತಿಲಾಲ್ ಭೀಲ್ (35) ಎಂಬುವವರು ಎರಡು ವರ್ಷಗಳ ಕಾಲ ಜೈಲಿನಲ್ಲಿದ್ದರು. ಒಟ್ಟು ₹10,006.2 ಕೋಟಿ ಪರಿಹಾರ ಕೋರಿದ್ದಾರೆ. ಈ ಪೈಕಿ ₹ 2 ಲಕ್ಷವನ್ನು, ಸಹಜ ಲೈಂಗಿಕ ಕ್ರಿಯೆ ಸೇರಿದಂತೆ ಇತರೆ ಕಾರ್ಯಗಳನ್ನು ಮಾಡಲಾಗದಿದ್ದಕ್ಕೆ ನೀಡಬೇಕು ಹಾಗೂ ಕಾನೂನು ಹೋರಾಟದ ವೆಚ್ಚಗಳು ಸೇರಿದಂತೆ ಇತರ ಖರ್ಚು ವೆಚ್ಚಗಳಿಗೆ ₹ 6 ಕೋಟಿ ಪರಿಹಾರ ಒದಗಿಸಬೇಕು ಎಂದು ಅರ್ಜಿ ಸಲ್ಲಿಸಿದ್ದಾರೆ.

ಜಿಲ್ಲಾ, ಸೆಷನ್ ನ್ಯಾಯಾಲಯವು 2022ರ ಅ. 20ರಂದು ಕಾಂತು ಅವರನ್ನು ಸಾಮೂಹಿಕ ಅತ್ಯಾಚಾರ ಪ್ರಕರಣದಿಂದ ಖುಲಾಸೆಗೊಳಿಸಿದೆ ಎಂದು ಅವರ ಪರ ವಕೀಲ ವಿಜಯ್ ಸಿಂಗ್ ಯಾದವ್ ತಿಳಿಸಿದ್ದಾರೆ. ಪರಿಹಾರ ಕೋರಿ ಮಧ್ಯ ಪ್ರದೇಶ ಸರ್ಕಾರ ಮತ್ತು ತನಿಖಾಧಿಕಾರಿಗಳ ವಿರುದ್ಧ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ಜನವರಿ 10ರಂದು ನಡೆಯಲಿದೆ.

‘ಮಾನವ ಜೀವನ ಅಮೂಲ್ಯ’ವಾದದ್ದು, ಅಲ್ಲದೆ ಈ ಅವಧಿಯಲ್ಲಿ ಕಾಂತು ಮತ್ತು ಅವರ ಕುಟುಂಬದ ಸದಸ್ಯರು ಅನುಭವಿಸಿದ ಮಾನಸಿಕ ಯಾತನೆ ಅಪಾರವಾದದ್ದು. ಹೀಗಾಗಿ ₹ 10,000 ಕೋಟಿಗೂ ಹೆಚ್ಚು ಪರಿಹಾರಕ್ಕೆ ಅರ್ಜಿ ಸಲ್ಲಿಸಲಾಗಿದೆ’ ಎಂದು ವಕೀಲ ಯಾದವ್ ಪ್ರತಿಕ್ರಿಯಿಸಿದರು.

‘ಸಾಮೂಹಿಕ ಅತ್ಯಾಚಾರದ ನಕಲಿ ಆರೋಪಗಳ ಮೇಲೆ ಪೊಲೀಸರು ನನ್ನನ್ನು 2020ರ ಡಿಸೆಂಬರ್ 23ರಂದು ಬಂಧಿಸಿದ್ದರು. ನನ್ನ ಕುಟುಂಬಕ್ಕೆ ನಾನೊಬ್ಬನೇ ಆಧಾರ. ನನ್ನ ಬಂಧನದಿಂದ ವಯಸ್ಸಾದ ತಾಯಿ, ಪತ್ನಿ ಮತ್ತು ಮೂವರು ಮಕ್ಕಳಿಗೆ ಅಪಾರ ಸಂಕಷ್ಟ ಎದುರಾಗಿತ್ತು. ಅವರು ಹಸಿವಿನಿಂದ ದಿನಗಳನ್ನು ಕಳೆಯುವಂತಾಯಿತು’ ಎಂದು ಕಾಂತು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ವಕೀಲ ಯಾದವ್ ಅವರ ಪ್ರಕಾರ, ಮಹಿಳೆಯೊಬ್ಬರು ಕಾಂತು ಅವರ ವಿರುದ್ಧ ಮಾನಸಾ ಪೊಲೀಸ್ ಠಾಣೆಯಲ್ಲಿ ಅತ್ಯಾಚಾರದ ಪ್ರಕರಣ ದಾಖಲಿಸಿದ್ದರು. ತನ್ನನ್ನು ಸಹೋದರನ ಮನೆಗೆ ಬಿಡುವ ನೆಪದಲ್ಲಿ ಕರೆದೊಯ್ದು ಕಾಂತು ತನ್ನ ಮೇಲೆ ಅತ್ಯಾಚಾರ ಎಸಗಿದ್ದಾಗಿ ದೂರಿನಲ್ಲಿ ತಿಳಿಸಿದ್ದರು. ಆ ಬಳಿಕ ಕಾಂತು ತನ್ನನ್ನು ಬೇರೊಬ್ಬ ವ್ಯಕ್ತಿಗೆ ಹಸ್ತಾಂತರಿಸಿದ. ಆತ ತನ್ನ ಮೇಲೆ ಆರು ತಿಂಗಳು ಅತ್ಯಾಚಾರ ಎಸಗಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಸಂಕ್ಷಿಪ್ತ ಸುದ್ದಿ

ಕುಪ್ಪಂ ಪ್ರವೇಶಿಸಲು ಯತ್ನಿಸಿದ ನಾಯ್ಡು– ಪೊಲೀಸರಿಂದ ತಡೆ

ಅಮರಾವತಿ, ಆಂಧ್ರಪ್ರದೇಶ (ಪಿಟಿಐ): ಕುಪ್ಪಂ ವಿಧಾನಸಭಾ ಕ್ಷೇತ್ರ ಪ್ರವೇಶಿಸಲು ಮುಂದಾದ ತೆಲುಗು ದೇಶಂ ಪಾರ್ಟಿ (ಟಿಡಿಪಿ) ಅಧ್ಯಕ್ಷ ಎನ್.ಚಂದ್ರಬಾಬು ನಾಯ್ಡು ಅವರನ್ನು ಪೊಲೀಸರು ಬುಧವಾರ ತಡೆದರು.

ರಾಜ್ಯದಾದ್ಯಂತ ಸಾರ್ವಜನಿಕ ಸಭೆಗಳು ಹಾಗೂ ರ‍್ಯಾಲಿಗಳನ್ನು ನಡೆಸದಂತೆ ನಿಷೇಧ ಹೇರಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ, ಪೊಲೀಸರು ನಾಯ್ಡು ಅವರಿಗೆ ತಡೆಯೊಡ್ಡಿದ ಘಟನೆ ನಡೆದಿದೆ.

ಟಿಡಿಪಿ ನಾಯಕರಿದ್ದ ಹಲವು ವಾಹನಗಳನ್ನು ಜಪ್ತಿ ಮಾಡಿದ ಪೊಲೀಸರು, ಪಕ್ಷದ ಕಾರ್ಯಕರ್ತರನ್ನು ಚದುರಿಸಲು ಲಾಠಿ ಪ್ರಹಾರ ನಡೆಸಿದರು. ಕೆಲ ಕಾರ್ಯಕರ್ತರನ್ನು ವಶಕ್ಕೆ ಪಡೆದರು.

ಒಬಿಸಿ ಮೀಸಲು: ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ

ನವದೆಹಲಿ: ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಮೀಸಲಾತಿ ಕಲ್ಪಿಸದೇ ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನಿರ್ದೇಶಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂಕೋರ್ಟ್ ಬುಧವಾರ ತಡೆ ನೀಡಿದೆ.

ಒಬಿಸಿಗಳಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿ ಹಿಂದುಳಿದ ವರ್ಗಗಳ ಆಯೋಗವು ಮಾರ್ಚ್ 31ರ ಒಳಗಾಗಿ ನಿರ್ಧಾರ ಪ್ರಕಟಿಸಬೇಕು ಎಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿದೆ.

ಪಿಆರ್‌ಪಿ ಜೊತೆ ಶಿಂದೆ ಮೈತ್ರಿ

ಮುಂಬೈ: ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾವು (ಬಾಳಾಸಾಹೇಬ್ ಬಣ) ಪ್ರೊ.ಜೋಗೇಂದ್ರ ಕವಾಡೆ ನಾಯಕತ್ವದ ಪೀಪಲ್ಸ್ ರಿಪಬ್ಲಿಕನ್ ಪಾರ್ಟಿ(ಪಿಆರ್‌ಪಿ) ಜೊತೆ ಮೈತ್ರಿ ಮಾಡಿಕೊಂಡಿದೆ.

ಅಂಬೇಡ್ಕರ್ ಅವರ ಮರಿಮೊಮ್ಮಗ ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ ಬಹುಜನ ಆಘಾಡಿ (ವಿಬಿಎ) ಜೊತೆ ಉದ್ಧವ್ ಠಾಕ್ರೆ ಇತ್ತೀಚೆಗೆ ಮೈತ್ರಿ ಮಾಡಿಕೊಂಡಿದ್ದಾರೆ.

ಮಹಿಳೆ ಮೇಲೆ ಮೂತ್ರ ವಿಸರ್ಜನೆ: ವರದಿ ಕೇಳಿದ ಡಿಜಿಸಿಎ

ನವದೆಹಲಿ (ಪಿಟಿಐ): ಪಾನಮತ್ತ ಸ್ಥಿತಿಯಲ್ಲಿದ್ದ ವ್ಯಕ್ತಿಯೊಬ್ಬ ಮಹಿಳಾ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜನೆ ಮಾಡಿದ ಘಟನೆ ಬಗ್ಗೆ ಏರ್ ಇಂಡಿಯಾದಿಂದ ವರದಿ ಕೋರಲಾಗಿದೆ ಎಂದು ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಬುಧವಾರ ತಿಳಿಸಿದೆ.

2022ರ ನ. 26 ರಂದು ನ್ಯೂಯಾರ್ಕ್‌ನಿಂದ ದೆಹಲಿಗೆ ಸಂಚರಿಸುತ್ತಿದ್ದ ಏರ್ ಇಂಡಿಯಾ ವಿಮಾನದ ಬ್ಯುಸಿನೆಸ್ ಕ್ಲಾಸ್‌ನಲ್ಲಿ ಈ ಘಟನೆ ನಡೆದಿತ್ತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರುದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ / ಇಎಂಡಿ
ಪ್ರಧಾನ ಮುಖ್ಯ ಅಭಿಯಂತರರ ಕಚೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.	
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪಶ್ಚಿಮ)/ಉಮುಅ(ತ್ಯಾನೀನಿ–ಪೂ&ಪ)/ಟಾಂಸ–2/6172/2022–23, ದಿನಾಂಕ: 04.01.2023	
ಟರ್ನ್‌ಕೀ ಆಧಾರದಲ್ಲಿ 7 ವರ್ಷಗಳ ಅವಧಿಗೆ (2(ಎರಡು) ವರ್ಷಗಳು ಕಾಮಗಾರಿ ಗುತ್ತಿಗೆಯ ಸಮಯದಲ್ಲಿ ಮತ್ತು 5 (ಐದು)ವರ್ಷಗಳು ಕಾಮಗಾರಿಯ ಗುತ್ತಿಗೆಯ ನಂತರ) ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಮುಖ್ಯ ಪಂಪಿಂಗ್ ಕಾರ್ಯದ ಜೊತೆಗೆ ಬೆಂಗಳೂರಿನ ನಾಗಸಂದ್ರ ಫೇಸ್–1 ರಲ್ಲಿ ಎ20 ಪ್ರಕ್ರಿಯೆಯ ಏರೇಷನ್ ಆಧಾರದ ಮೇಲೆ ವಿಸ್ತರಿಸಿದ ಹಾಲಿಯಿರುವ 20ಎಂ.ಎಲ್.ಡಿ ಸಾಮರ್ಥ್ಯದ ಎಸ್‌ಟಿಪಿ ಮತ್ತು ಮೇದರಹಳ್ಳಿಯಲ್ಲಿ 15ಎಂ.ಎಲ್.ಡಿ ಐ.ಎಸ್.ಪಿ.ಎಸ್, ಬಾಗಲಕುಂಟೆಯಲ್ಲಿ 30ಎಂ.ಎಲ್.ಡಿ ಐ.ಎಸ್.ಪಿ.ಎಸ್, ಎನ್.ಕೆ. ಹಳ್ಳಿಯಲ್ಲಿ 25ಎಂ.ಎಲ್.ಡಿ ಐ.ಎಸ್.ಪಿ.ಎಸ್, ವಿನ್ಯಾಸ, ನಿರ್ಮಾಣ ಮತ್ತು ಉನ್ನತೀಕರಣದ ಕಾಮಗಾರಿ.	ರೂ. 39.337 ಕೋಟಿ / ರೂ. 46.42 ಲಕ್ಷಗಳು
ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಅಮುಅ(ತ್ಯಾನೀನಿ–ಯೋ–ಪ)/ಉಮುಅ(ತ್ಯಾನೀನಿ–ಪೂ&ಪ)/ಟಾಂಸ–2/6174/2022–23, ದಿನಾಂಕ: 04.01.2023	
ಟರ್ನ್‌ಕೀ ಆಧಾರದಲ್ಲಿ 5 ವರ್ಷಗಳ ಅವಧಿಗೆ ಕಾರ್ಯಾಚರಣೆ ಮತ್ತು ನಿರ್ವಹಣೆಯೊಂದಿಗೆ ಬೆಂಗಳೂರಿನ ದೊಡ್ಡಬೆಲೆಯಲ್ಲಿ ಹಾಲಿಯಿರುವ 20 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಟಿ.ಪಿ ಉನ್ನತೀಕರಣಗೊಳಿಸಲು ಮತ್ತು 35 ಎಂ.ಎಲ್.ಡಿ ಸಾಮರ್ಥ್ಯಕ್ಕೆ ವೃದ್ಧಿಗೊಳಿಸಲು ವಿನ್ಯಾಸ ಮತ್ತು ನಿರ್ಮಾಣದ ಕಾಮಗಾರಿ ಹಾಗೂ 15 ಎಂ.ಎಲ್.ಡಿ ಸಾಮರ್ಥ್ಯದ ಹೊಸ ಐಎಸ್‌ಪಿಎಸ್(ISPS) ನಿರ್ಮಾಣ ಮಾಡುವುದು.	ರೂ. 32.81 ಕೋಟಿ / ರೂ. 38.02 ಲಕ್ಷಗಳು

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **27.01.2023 ರಂದು ಸಂಜೆ 4:00 ಗಂಟೆಯವರೆಗೆ.** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **30.01.2023 ರಂದು ಸಂಜೆ: 4.00 ಗಂಟೆಗೆ.** ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು https://eproc.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/3876/2022–23 ಸಹಿ/– ಪ್ರಧಾನ ಮುಖ್ಯ ಅಭಿಯಂತರರು.



ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ನಂ.16–ಡಿ., 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052. ದೂರವಾಣಿ:080–22374834 ಇ–ಮೇಲ್ : md.dbcdc@gmail.com

ಸಂಖ್ಯೆ: ದೇಹಿನಿ/ಸ/ಪ್ರಕಟಣೆ/ಸಿಆರ್–06/2022–23 ದಿನಾಂಕ:03.01.2023

ಪ್ರಕಟಣೆ

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿಗೆ ಈ ಕೆಳಕಂಡ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ಪೋರ್ಟಲ್ ಮುಖಾಂತರ ಅರ್ಜಿ ಸ್ವೀಕೃತಿ

ಹೊಲಿಗೆ ಯಂತ್ರ ವಿತರಣೆ ಯೋಜನೆ:

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಬಡ ಕುಟುಂಬದ ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸುವ ಸ್ವಾವಲಂಬಿ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಬಯಸುವವರು ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು. **(ವಿಶ್ವಕರ್ಮ, ಉಪ್ಪಾರ, ಅಂಬಿಗ, ಸವಿತಾ, ಮಡಿವಾಳ, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ, ಒಕ್ಕಲಿಗ, ಲಿಂಗಾಯತ, ಕಾಡುಗೊಲ್ಲ, ಹಟ್ಟಿಗೊಲ್ಲ, ಮರಾಠ ಮತ್ತು ಇದರ ಉಪಸಮುದಾಯಗಳು ಹೊರತುಪಡಿಸಿ)** ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ **ರೂ. 98,000/–ಗಳು,** ಪಟ್ಟಣ ಪ್ರದೇಶದವರಿಗೆ **ರೂ. 1,20,000/– ಗಳ** ಒಳಗಿರಬೇಕು. ಅರ್ಜಿದಾರರ ವಯಸ್ಸು 18ರಿಂದ 55 ವರ್ಷಗಳ ಮಿತಿಯಲ್ಲಿರಬೇಕು. ಈ ಯೋಜನೆಯಡಿಯಲ್ಲಿ ಸೌಲಭ್ಯ ಒದಗಿಸಲು ಸೇವಾಸಿಂಧು ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಧಾರ್ ಕಾರ್ಡ್‌ನಲ್ಲಿರುವಂತೆ ಅರ್ಜಿದಾರರ ಹೆಸರು, (ಶ್ರೀ/ಶ್ರೀಮತಿ / ಕುಮಾರಿ ಮುಂತಾದ ಮಾಹಿತಿಗಳೆಲ್ಲವು) ಇತರೆ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರದಲ್ಲಿಯೂ ಇದ್ದು ಹೊಂದಾಣಿಕೆಯಾಗಬೇಕು.

ಈ ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಜಿದಾರರು ಈ ಕೆಳಕಂಡ ಅರ್ಹತೆ ಹೊಂದಿರಬೇಕು.

1. ಹೊಲಿಗೆ ಯಂತ್ರ ತರಬೇತಿ ಪಡೆದ ಪ್ರಮಾಣ ಪತ್ರ ಹೊಂದಿರಬೇಕು.
2. ಒಂದು ಕುಟುಂಬದಲ್ಲಿ ಓರ್ವ ಸದಸ್ಯರು ಮಾತ್ರ ಈ ಸೌಲಭ್ಯ ಪಡೆಯು ಅರ್ಹರಾಗಿರುತ್ತಾರೆ.

ಮೇಲ್ಕಂಡ ಸೌಲಭ್ಯಗಳನ್ನು ಪಡೆಯಲು ಇಚ್ಛಿಸುವ ಹಿಂದುಳಿದ ವರ್ಗಗಳ ಮಹಿಳೆಯರು ಸೇವಾಸಿಂಧು ಪೋರ್ಟಲ್ ಮುಖಾಂತರ ಗ್ರಾಮ ಒನ್, ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಸೇವಾ ಕೇಂದ್ರಗಳಲ್ಲಿ ಆನ್‌ಲೈನ್ ಮೂಲಕ ದಿನಾಂಕ : **05.01.2023 ರಿಂದ 20.02.2023**ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ ಹಾಗೂ ನಿಗಮದ ವೆಬ್‌ಸೈಟ್ www.dbcdc.karnataka.gov.in ಇಲ್ಲಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಪಡೆಯಲು ನಿಗಮದ ಸಹಾಯವಾಣಿ ಸಂಖ್ಯೆ : 080–22374832, 8050770004 & 6, 7090400100 / 7090400900 ನಿಗಮದ ಆಯಾ ಜಿಲ್ಲಾ ಕಛೇರಿಯ ದೂರವಾಣಿ ಸಂಖ್ಯೆಗಳನ್ನು ವೆಬ್‌ಸೈಟ್‌ನಲ್ಲಿ ನೀಡಲಾಗಿದ್ದು ಅದರಂತೆ ಸಂಪರ್ಕಿಸಬಹುದು.

ಸಹಿ/–
(ವಿ. ರವಿ)
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ವಾಪ್ರ/ಜಿಎ/3867/2022–23

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ / ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23460460 (5 ಲೈನ್ಸ್), ಫ್ಯಾಕ್ಸ್: 080–23461576, ಇ–ಮೇಲ್: keauthority-ka@nic.in, ವೆಬ್‌ಸೈಟ್: Website: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್.11/2022–23 ದಿನಾಂಕ: 31–12–2022

ಅಧಿಸೂಚನೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವ್ಯಾಪ್ತಿಯಲ್ಲಿರುವ ವಸತಿ ಶಾಲೆಗಳಲ್ಲಿ 2023–24ನೇ ಶೈಕ್ಷಣಿಕ ಸಾಲಿನ 6ನೇ ತರಗತಿಗೆ ಪ್ರವೇಶಾತಿ

ಸರ್ಕಾರದ ಆದೇಶ ಸಂಖ್ಯೆ ಸಕಇ 94 ಮೊದೇಶಾ 2020 ಬೆಂಗಳೂರು ದಿನಾಂಕ 19–06–2021 ಮತ್ತು 12–11–2021 ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರ ಪತ್ರ ಸಂಖ್ಯೆ: KREIS/EDN/ENT/4/2022-EDU/E-40396 ದಿನಾಂಕ 05–12–2022 ಅನ್ವಯ, 2023–24ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ 6ನೇ ತರಗತಿ ಪ್ರವೇಶಕ್ಕೆ ಅಗತ್ಯವಾದ ಪ್ರವೇಶ ಪರೀಕ್ಷೆ ಮತ್ತು ಆನ್‌ಲೈನ್ ಕೌನ್ಸಿಲಿಂಗ್ ಅನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸಲಾಗುವುದು. 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳ ಪೋಷಕರು ತಮ್ಮ ಮಕ್ಕಳನ್ನು 6ನೇ ತರಗತಿಗೆ ವಸತಿ ಶಾಲೆಗಳಿಗೆ ದಾಖಲಿಸಲು, **ದಿನಾಂಕ 05–01–2023 ರ ಬೆಳಿಗ್ಗೆ 11.00 ರಿಂದ 22–01–2023 ರಾತ್ರಿ 11.59**ರ ವರೆಗೆ ರವರೆಗೆ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ / ಕಾಲೇಜುಗಳ ಮೂಲಕ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸಲು ತಿಳಿಸಿದೆ. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ದಿನಾಂಕ **12–03–2023** ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರವೇಶ ಪರೀಕ್ಷೆ ನಡೆಸಲಿದೆ. ಅರ್ಜಿ ಸಲ್ಲಿಸಲು ವರ್ಗಾವಾರು ವಾರ್ಷಿಕ ಆದಾಯದ ಮಿತಿ ಕೆಳಕಂಡಂತಿದೆ.

ಕ್ರ. ಸಂ.	ವಿದ್ಯಾರ್ಥಿಯ ವರ್ಗ	ಕುಟುಂಬದ ವಾರ್ಷಿಕ ಆದಾಯ ಮಿತಿ
01	ಪ.ಜಾತಿ/ಪರಿಶಿಷ್ಟ ವರ್ಗ	ರೂ.2,50,000/–
02	ಹಿಂ.ವರ್ಗದ ಪ್ರವರ್ಗ–1	ರೂ.2,50,000/–
03	ಹಿಂ.ವರ್ಗ 2ಎ, 2ಬಿ, 3ಎ ಮತ್ತು 3ಬಿ	ರೂ.1,00,000/–

ಅರ್ಜಿ ಸಲ್ಲಿಸುವ ವಿಧಾನ, ಹಾಗೂ **“ಮಾಹಿತಿ ಪುಸ್ತಕ–2023”** ವನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಮತ್ತು ವಸತಿ ಶಿಕ್ಷಣ ಸಂಸ್ಥೆಗಳ ವೆಬ್‌ಸೈಟ್ http://kreis.kar.nic.in ನಲ್ಲಿ ಪ್ರಚುರ ಪಡಿಸಲಾಗಿದೆ. ಪರೀಕ್ಷೆಗೆ ಪ್ರವೇಶ ಪತ್ರಗಳನ್ನು ದಿನಾಂಕ **02–03–2023** ರಿಂದ ಈ ಮೇಲ್ಕಂಡ ವೆಬ್‌ಸೈಟ್‌ಗಳಿಂದ ಆಯಾ ವಸತಿ ಶಾಲೆಯಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು.

ಗಮನಿಸಿ: ಅಭ್ಯರ್ಥಿಯು ಈಗಾಗಲೇ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಶಾಲೆಯಿಂದ SATS ಸಂಖ್ಯೆ, ಇತ್ತೀಚಿನ ಭಾವಚಿತ್ರ ಮತ್ತು ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಅಥವಾ ಜೆರಾಕ್ಸ್ ಪ್ರತಿಗಳನ್ನು ತೆಗೆದುಕೊಂಡು ಅರ್ಜಿ ಸಲ್ಲಿಸುವ ಸಮಯದಲ್ಲಿ ಸಂಬಂಧಿಸಿದ ವಸತಿ ಶಾಲೆ / ಕಾಲೇಜಿನ ಮುಖ್ಯಸ್ಥರನ್ನು ಸಂಪರ್ಕಿಸಬೇಕು.

ಪ್ರವೇಶ ಪರೀಕ್ಷೆ – 2023ರ ವೇಳಾಪಟ್ಟಿ			
ದಿನಾಂಕ	ದಿನ	ಸಮಯ	ಅಂಕಗಳು
12–03–2023	ಭಾನುವಾರ	ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ರವರೆಗೆ	100

ವಸತಿ ಶಾಲೆಗಳ ಆಯ್ಕೆಯ ಆದ್ಯತಾ ಕ್ರಮದಲ್ಲಿ ನಮೂದಿಸುವ ಕುರಿತು: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಾರೋ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಹಂಚಿಕೆಗೆ ಪರಿಗಣಿಸಲಾಗುವುದು. ಅಭ್ಯರ್ಥಿಗಳು ತಮ್ಮ ಸೀಟು ಹಂಚಿಕೆ ಅವಕಾಶವನ್ನು ಹೆಚ್ಚಿಸಿಕೊಳ್ಳಲು ತಮ್ಮ ಜಿಲ್ಲೆಯಲ್ಲಿರುವ KREIS ನ ಎಲ್ಲಾ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸತಕ್ಕದು. ಪ್ರವೇಶ ಪರೀಕ್ಷೆಯಲ್ಲಿ ಗಳಿಸಿದ ಮೆರಿಟ್, ಮೀಸಲಾತಿ ಹಾಗೂ ಅಭ್ಯರ್ಥಿಗಳು ಪ್ರವೇಶಾತಿಗಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ Computerized Auto Selection ಮೂಲಕ ಸೀಟು ಹಂಚಿಕೆಯನ್ನು ಮಾಡಲಾಗುವುದು.

ಕೆಇಎ ಸಹಾಯವಾಣಿ ಸಂಖ್ಯೆಗಳು: 080 – 23 460 460 – (ಐದು ಲೈನುಗಳು – ಬೆ. 9.30 ರಿಂದ ಸಂ. 6.00)

ಸಹಿ/– (ಎಸ್. ರಮ್ಯ ಭಾ.ಆ.ಸೇ.),
ಕಾರ್ಯನಿರ್ವಾಹಕ ನಿರ್ದೇಶಕರು.

DIPR/CP/RO3882/2022-23

ಛತ್ತೀಸಗಢಕ್ಕೆ ತಿರುಗೇಟು ನೀಡಿದ ಕರ್ನಾಟಕ; ವಿದ್ವತ್‌ಗೆ 5 ವಿಕೆಟ್; ಸಮರ್ಥ್ ಅರ್ಧಶತಕ

ಮಯಂಕ್ ಮೋಹಕ ಶತಕ

● ಗಿರೀಶ ದೊಡ್ಡಮನಿ

ಬೆಂಗಳೂರು: ಮಯಂಕ್ ಅಗರವಾಲ್ ಅವರು ಹೊಸ ವರ್ಷದಲ್ಲಿ ಆಡುತ್ತಿರುವ ತಮ್ಮ 'ಮೊದಲ' ರಣಜಿ ಪಂದ್ಯದಲ್ಲಿ ಚೆಂದದ ಶತಕ ದಾಖಲಿಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಛತ್ತೀಸಗಢ ಎದುರಿನ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಎರಡನೇ ದಿನ ಮಯಂಕ್ (ಬ್ಯಾಟಿಂಗ್ 102; 285ನಿಮಿಷ, 191ಎಸೆತ, 4x9, 6X5) ಆಟದಲ್ಲಿ ದೀರ್ಘ ಮಾದರಿ ಕ್ರಿಕೆಟ್‌ನ ತಾಳ್ಮೆ ಆಟವೂ ಇತ್ತು. ಆಗಾಗ ಟಿ20 ಕ್ರಿಕೆಟ್‌ನ ಬಿರುಸಿನ ಹೊಡೆತಗಳ ಮಿಂಚು ಕೂಡ ಹರಿಯಿತು. ಅಲ್ಲದೇ ಮಯಂಕ್ ಅವರು ಆರ್. ಸಮರ್ಥ್(81; 127ಎ, 4X11) ಜೊತೆಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 163 ರನ್ ಸೇರಿಸುವ ಮೂಲಕ ಆತಿಥೇಯ ತಂಡದ ಹೋರಾಟಕ್ಕೆ ಬಲ ತುಂಬಿದರು. ಛತ್ತೀಸಗಢ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 311 ರನ್‌ಗಳಿಗೆ ಉತ್ತರವಾಗಿ ಕರ್ನಾಟಕ 64 ಓವರ್‌ಗಳಲ್ಲಿ 1 ವಿಕೆಟ್‌ಗೆ 202 ರನ್ ಗಳಿಸಿದೆ. ಮಯಂಕ್ ಮತ್ತು ವಿಶಾಲ್ ಒಣತ್ (ಬ್ಯಾಟಿಂಗ್ 15) ಕ್ರೀಸ್‌ನಲ್ಲಿದ್ದಾರೆ.

ಭಾರತ ತಂಡಕ್ಕೆ ಮರಳುವ ಛಲದಲ್ಲಿರುವ ಮಯಂಕ್ ಅವರಿಗೆ ಇದು ಪ್ರಥಮದರ್ಜೆ ಕ್ರಿಕೆಟ್‌ನಲ್ಲಿ 13ನೇ ಶತಕವಾಗಿದೆ. 2021–22ರ ಸಾಲಿನಲ್ಲಿ ಮುಂಬೈನಲ್ಲಿ ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್‌ನಲ್ಲಿ ಶತಕ ಗಳಿಸಿದ್ದರು. ಅವರು ಒಟ್ಟು 85 ಪ್ರಥಮದರ್ಜೆ ಪಂದ್ಯಗಳನ್ನು ಆಡಿದ್ದಾರೆ.

ಮಯಂಕ್ ಅಗರವಾಲ್ ಶತಕ ಸಂಭ್ರಮ –ಪ್ರಜಾವಾಣಿ ಚಿತ್ರ/ವಿ. ಪುಷ್ಕರ್

'ರಣಜಿ ಟ್ರೋಫಿ ಕ್ರಿಕೆಟ್‌ನಲ್ಲಿ ಮಯಂಕ್ ಅವರಿಗೆ 42ನೇ ಪಂದ್ಯ ಮತ್ತು ಏಳನೇ ಶತಕ. ಅವರು ಕಳೆದ 41 ಪಂದ್ಯಗಳಲ್ಲಿ 2855 ರನ್‌ಗಳನ್ನು ಕಲೆ ಹಾಕಿದ್ದಾರೆ' ಎಂದು ದೇಶಿ ಕ್ರಿಕೆಟ್ ಅಂಕಿ ಸಂಖ್ಯೆ ಪರಿಣತ ಚನ್ನಗಿರಿ ಕೇಶವಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಳೆದ 3 ಪಂದ್ಯಗಳಲ್ಲಿ ಶತಕ ಗಳಿಸಿದ್ದ ಆರ್. ಸಮರ್ಥ್ ಮತ್ತು ಮೂರು ಅರ್ಧಶತಕ ಗಳಿಸಿದ್ದ ಮಯಂಕ್ ಛತ್ತೀಸಗಢದ ಎದುರೂ ಉಪಯುಕ್ತ ಆಟವಾಡಿದರು.

ಅದರಲ್ಲೂ ಇಡೀ ಟೂರ್ನಿಯಲ್ಲಿ ಗರಿಷ್ಠ ವಿಕೆಟ್ ಗಳಿಸಿದ ಬೌಲರ್ ಎಡಗೈ ಸ್ಪಿನ್ನರ್ ಅಜಯ್ ಜಾಧವ್ ಮಂಡಲ್ ಅವರನ್ನು ಹೆಚ್ಚು ದಂಡಿಸಿದರು. ಸಮರ್ಥ್ 69 ಎಸೆತಗಳಲ್ಲಿ ಮತ್ತು ಮಯಂಕ್ 90 ಎಸೆತಗಳಲ್ಲಿ ಅರ್ಧಶತಕದ ಗಡಿ ದಾಟಿದರು. ಇನಿಂಗ್ಸ್‌ನ 47ನೇ ಓವರ್‌ನಲ್ಲಿ ಅಜಯ್ ಹಾಕಿದ ಎಸೆತವನ್ನು ನೇರವಾಗಿ ಹೊಡೆಯುವ ಯತ್ನದಲ್ಲಿ ಸಮರ್ಥ್ ಬೌಲರ್‌ಗೇ ಕ್ಯಾಚಿತ್ತರು. ಶತಕ ತಪ್ಪಿಸಿಕೊಂಡ ಬೇಸರದಲ್ಲಿ ಪೆವಿಲಿಯನ್‌ಗೆ ಹಿಂದಿರುಗಿದರು.

ಇದರ ನಂತರ ಮಯಂಕ್ ಆಟದ ವೇಗ ಹೆಚ್ಚಿತು. ಡ್ರೈವ್ ಮತ್ತು ಸ್ವೀಪ್‌ಗಳನ್ನು ಆಡಿದರು. ಕ್ರೀಸ್‌ನಿಂದ ಹೊರಗೆ ಬಂದು ಎಸೆತಗಳನ್ನು ಸಿಕ್ಸರ್‌ಗೆತ್ತಿದರು. ಶತಕದ ಸನಿಹ ಸಾಗಿದರು. 93 ರನ್ ಗಳಿಸಿದ್ದ ಸಂದರ್ಭದಲ್ಲಿ ಎರಡು ಎಸೆತಗಳಲ್ಲಿ ಕ್ರಮವಾಗಿ ಸಿಕ್ಸರ್ ಹಾಗೂ ಸಿಂಗಲ್ ಗಳಿಸಿ ಶತಕ ಪೂರೈಸಿದರು.

ವಿದ್ವತ್‌ಗೆ ಐದು ವಿಕೆಟ್: ಯುವ ಮಧ್ಯಮವೇಗಿ ವಿದ್ವತ್ ಕಾವೇರಪ್ಪ ಐದು ವಿಕೆಟ್ ಗೊಂಚಲು ಗಳಿಸಿದರು. ಮೊದಲ ದಿನ 3 ವಿಕೆಟ್ ಗಳಿಸಿದ್ದ ಅವರು 2ನೇ ದಿನದಾಟದಲ್ಲಿ ಒಂದೇ ಓವರ್‌ನಲ್ಲಿ ಶಶಾಂಕ್ ಸಿಂಗ್ ಮತ್ತು ಅಜಯ್ ಮಂಡಲ್ ವಿಕೆಟ್ ಕಬಳಿಸಿದರು. ಹ್ಯಾಟ್ರಿಕ್ ಆಸೆ ಮಾತ್ರ ಈಡೇರಲಿಲ್ಲ. ಮಂಗಳವಾರ ದಿನದಾಟದ ಶತಕ ಗಳಿಸಿ ಕ್ರೀಸ್‌ನಲ್ಲಿದ್ದ ಆಶುತೋಷ್ ಸಿಂಗ್ ಸೇರಿದಂತೆ ಮೂರು ವಿಕೆಟ್ ಕಿತ್ತ ವಾಸುಕಿ ಕೌಶಿಕ್ ಮಿಂಚಿದರು.

ವಿದ್ವತ್ ಕಾವೇರಪ್ಪ

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಛತ್ತೀಸಗಢ: 311 (109.3 ಓವರ್‌ಗಳಲ್ಲಿ)
ಆಶುತೋಷ್ ಸಿಂಗ್ ಸಿ ಶರತ್ ಬಿ ಕೌಶಿಕ್ 135 (319ಎ, 4X21, 6X1), ಶಶಾಂಕ್ ಸಿಂಗ್ ಎಲ್‌ಬಿಡಬ್ಲ್ಯು ವಿದ್ವತ್ 13 (32ಎ, 4X2), ಅಜಯ್ ಬಿ ವಿದ್ವತ್ 0 (1ಎ), ವರ್ಮಾ ಔಟಾಗದೆ 15 (36ಎ, 4X2), ಸೌರಭ್ ಬಿ ಕೌಶಿಕ್ 0 (6ಎ), ರವಿಕಿರಣ ಸಿ ಮನೀಷ್ ಬಿ ಕೌಶಿಕ್ 0 (4ಎ)
ಇತರೆ 21 (ಬೈ 9, ಲೆಗ್‌ಬೈ 7, ವೈಡ್ 3, ನೋಬಾಲ್ 2)
ವಿಕೆಟ್ ಪತನ: 6–284 (ಶಶಾಂಕ್ ಸಿಂಗ್; 97.5), 7–284 (ಅಜಯ್ ಮಂಡಲ್; 97.6), 8–305 (ಆಶುತೋಷ್ ಸಿಂಗ್ ; 105.5), 9–311 (ಸೌರಭ್ ಮಜುಂದಾರ್; 107.5), 10–311 (ರವಿಕಿರಣ; 109.3)
ಬೌಲಿಂಗ್: ವಿದ್ವತ್ ಕಾವೇರಪ್ಪ 28–5–67–5, ವಿ. ಕೌಶಿಕ್ 26.3–9–43–4, ವಿಜಯಕುಮಾರ್ ವೈಶಾಖ 23–7–56–1, ಶ್ರೇಯಸ್ ಗೋಪಾಲ್ 16–0–70–0, ಕೃಷ್ಣಪ್ಪ ಗೌತಮ್ 16–3–59–0

ಕರ್ನಾಟಕ: 1ವಿಕೆಟ್‌ಗೆ 202 (64 ಓವರ್‌ಗಳಲ್ಲಿ)
ಸಮರ್ಥ್ ಸಿ ಮತ್ತು ಬಿ ಅಜಯ್ 81 (127ಎ, 4X11), ಮಯಂಕ್ ಬ್ಯಾಟಿಂಗ್ 102 (191ಎ, 4X9, 6X5), ವಿಶಾಲ್ ಬ್ಯಾಟಿಂಗ್ 15 (67ಎ, 4X1)
ಇತರೆ 21 (ಬೈ 9, ಲೆಗ್‌ಬೈ 7, ವೈಡ್ 3, ನೋಬಾಲ್ 2)
ವಿಕೆಟ್ ಪತನ: 4 (ಬೈ 1, ಲೆಗ್‌ಬೈ 2, ನೋಬಾಲ್ 1)
ಬೌಲಿಂಗ್: ರವಿಕಿರಣ 11–2–22–0, ಸೌರಭ್ ಮಜುಂದಾರ್ 10–0–47–0, ಶಶಾಂಕ್ ಸಿಂಗ್ 7–2–23–0, ಅಜಯ್ ಮಂಡಲ್ 21–1–61–1, ಸುಮಿತ್ ರುಯ್ಕರ್ 15–3–46–0

ಸರಣಿ ಕೈವಶದತ್ತ ಭಾರತ ಚಿತ್ತ

ಕ್ರಿಕೆಟ್: ಶ್ರೀಲಂಕಾ ಎದುರು ಎರಡನೇ ಪಂದ್ಯ ಇಂದು

ಪುಣೆ (ಪಿಟಿಐ): ಭಾರತ ಕ್ರಿಕೆಟ್ ತಂಡವು ಶ್ರೀಲಂಕಾ ಎದುರಿನ ಟಿ20 ಸರಣಿಯನ್ನು ಕೈವಶಪಡಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿರುವ ಸರಣಿಯ ಎರಡನೇ ಟಿ20 ಪಂದ್ಯದಲ್ಲಿ ಜಯಿಸುವ ಛಲದಲ್ಲಿ ನಾಯಕ ಹಾರ್ದಿಕ್ ಪಾಂಡ್ಯ ಇದ್ದಾರೆ. ಮುಂಬೈನಲ್ಲಿ ಮಂಗಳವಾರ ನಡೆದಿದ್ದ ಮೊದಲ ಪಂದ್ಯದಲ್ಲಿ ಜಯಿಸಿದ್ದರೂ ಕೂಡ ಕೆಲವು ವೈಫಲ್ಯಗಳೂ ಇದ್ದವು. ಅವುಗಳನ್ನು ಸರಿಪಡಿಸಿಕೊಂಡು ತಂಡವನ್ನು ಕಣಕ್ಕಿಳಿಸುವ ಸವಾಲೂ ಅವರ ಮುಂದಿದೆ.

ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಅವರು ಪವರ್ ಪ್ಲೇನಲ್ಲಿ ಆಡುವ ಶೈಲಿ ಬದಲಾಗಬೇಕಿದೆ. ತಮ್ಮ ಬ್ಯಾಟಿಂಗ್‌ಗೆ ತುಸು ವೇಗ ಮತ್ತು ಹೊಡೆತಗಳಲ್ಲಿ ನಿಖರತೆ ಅಳವಡಿಸಿಕೊಂಡರೆ ಇಶಾನ್ ಕಿಶನ್ ಜೊತೆಗೆ ಉತ್ತಮ ಆರಂಭ ನೀಡಬಲ್ಲರು.

ಸೂರ್ಯಕುಮಾರ್ ಯಾದವ್ ಅವರು ಸಂದರ್ಭದ ಅಗತ್ಯಕ್ಕೆ ತಕ್ಕಂತೆ ಆಟವಾಡುವ ಅಗತ್ಯವಿದೆ. ದೀಪಕ್ ಹೂಡಾ ಮತ್ತು ಅಕ್ಷರ್ ಪಟೇಲ್ ತಮ್ಮ ಮೇಲಿನ ನಿರೀಕ್ಷೆ ಉಳಿಸಿಕೊಂಡಿದ್ದಾರೆ. ಅಕ್ಷರ್ ಪಂದ್ಯದ ಕೊನೆಯ ಓವರ್‌ನಲ್ಲಿ (ಶ್ರೀಲಂಕಾ ತಂಡದ ಗೆಲುವಿಗೆ 13 ರನ್‌ಗಳು ಬೇಕಿದ್ದವು) ಭಾರತ ತಂಡಕ್ಕೆ ಜಯದ ಕಾಣಿಕೆ ನೀಡಿದರು.

ಬೌಲಿಂಗ್ ವಿಭಾಗದಲ್ಲಿ ಹೊಸಪ್ರತಿಭೆ ಶಿವಂ ಮಾವಿ, ಉಮ್ರಾನ್ ಮಲಿಕ್ ಉತ್ತಮವಾಗಿ ಆಡಿದ್ದಾರೆ. ನಾಲ್ಕು ವಿಕೆಟ್ ಪಡೆದಿರುವ ಮಾವಿ ಮತ್ತು 155 ಕಿ.ಮೀ ವೇಗದಲ್ಲಿ ಎಸೆತ ಹಾಕಿ ದಾಖಲೆ ಬರೆದ ಉಮ್ರಾನ್ ಭರವಸೆ ಮೂಡಿಸಿದ್ದಾರೆ. ಆದರೆ ಕೊನೆಯ ಹಂತದ ಓವರ್‌ಗಳಲ್ಲಿ ಬೌಲರ್‌ಗಳು ಬಿಗಿ ದಾಳಿ ನಡೆಸಿದರೆ ಮಾತ್ರ ಜಯಗಳಿಸುವುದು ಸುಲಭ.

ಶ್ರೀಲಂಕಾ ತಂಡದ ನಾಯಕ ದಸುನ್ ಶನಕಾ, ಕುಶಾಲ ಮೆಂಡಿಸ್, ಚಮಿಕಾ ಕರುಣರಾತ್ನೆ ಮತ್ತು ವಣಿಂದು ಹಸರಂಗಾ ಅವರು ಡೆತ್ ಓವರ್‌ಗಳಲ್ಲಿ ಬೀಸಾಟವಾಡಿ ರನ್ ಗಳಿಸುವ ಸಮರ್ಥರಾಗಿದ್ದಾರೆ. ಪ್ರವಾಸಿ ಬಳಗವು ಸ್ಪಿನ್ ಬೌಲರ್‌ಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ. ಮಧ್ಯಮವೇಗಿ ಕಸುನ್ ರಜಿತಾ ಲಯಕ್ಕೆ ಮರಳುವ ಅಗತ್ಯವಿದೆ.

ಇಲ್ಲಿ ಮುಸ್ಸಂಜೆ ವೇಳೆ ಇಬ್ಬನಿ ಸುರಿಯುವುದರಿಂದ ಟಾಸ್ ಗೆದ್ದವರಿಂದ ಫೀಲ್ಡಿಂಗ್ ಆಯ್ಕೆ ಸಾಧ್ಯತೆ ಹೆಚ್ಚು.

ಸಂಜುಗೆ ಗಾಯ; ತಂಡಕ್ಕೆ ಜಿತೇಶ್: ಭಾರತದ ಬ್ಯಾಟರ್ ಸಂಜು ಸ್ಯಾಮ್ಸನ್ ಅವರು ಮೊಣಕಾಲು ನೋವಿನ ಕಾರಣ ಈ ಪಂದ್ಯದಲ್ಲಿ ಆಡುತ್ತಿಲ್ಲ. ಅವರ ಬದಲಿಗೆ ವಿಕೆಟ್ ಕೀಪರ್ ಬ್ಯಾಟರ್ ಜಿತೇಶ್ ಯಾದವ್ ಸ್ಥಾನ ಪಡೆದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್


ಭಾರತ ತಂಡದ ದೀಪಕ್ ಹೂಡಾ ಮತ್ತು ಇಶಾನ್ ಕಿಶನ್ –ಎಎಫ್‌ಪಿ ಚಿತ್ರ

ಬೂಮ್ರಾ ದಾಖಲೆ ಮೀರಿದ ಉಮ್ರಾನ್

ಉದಯೋನ್ಮುಖ ವೇಗದ ಬೌಲರ್ ಉಮ್ರಾನ್ ಮಲಿಕ್ ಮಂಗಳವಾರ ಶ್ರೀಲಂಕಾ ಎದುರಿನ ಟಿ20 ಪಂದ್ಯದಲ್ಲಿ ಪ್ರತಿ ಗಂಟೆಗೆ 155 ಕಿ.ಮೀ ವೇಗದ ಎಸೆತ ಪ್ರಯೋಗಿಸಿದರು. ಅದರೊಂದಿಗೆ ಜಸ್‌ಪ್ರೀತ್ ಬೂಮ್ರಾ ಅವರ ದಾಖಲೆ ಮುರಿದರು.

2018ರ ಬಾರ್ಡರ್ ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಜಸ್‌ಪ್ರೀತ್ ಬೂಮ್ರಾ ಗಂಟೆಗೆ 153.2 ಕಿ.ಮಿ ವೇಗದಲ್ಲಿ ಬೌಲಿಂಗ್ ಮಾಡಿ ದಾಖಲೆ ಬರೆದಿದ್ದರು. ಇದೀಗ ಆ ದಾಖಲೆಯನ್ನು 23 ವರ್ಷದ ಉಮ್ರಾನ್ ಮೀರಿನಿಂತಿದ್ದಾರೆ. ಅವರ ಈ ಎಸೆತದಲ್ಲಿ ಲಂಕಾ ತಂಡದ ನಾಯಕ ದಸುನ್ ಶನಕಾ ಔಟಾದರು.

ಉಮ್ರಾನ್

8ರಂದು 'ಗ್ರೇಟ್ ಬೆಂಗಳೂರು 10ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ಇದೇ ಮೊದಲ ಬಾರಿಗೆ ಜನವರಿ 8ರಂದು 'ಗ್ರೇಟ್ ಬೆಂಗಳೂರು 10ಕೆ' ರನ್ ಆಯೋಜಿಸಲಾಗುತ್ತಿದೆ.

ಕರ್ನಾಟಕ ಒಲಿಂಪಿಕ್ ಭವನದಲ್ಲಿ ಈ ಕುರಿತು ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಒಲಿಂಪಿಕ್ ಸಂಸ್ಥೆಯ (ಕೆಒಎ) ಅಧ್ಯಕ್ಷ ಕೆ. ಗೋವಿಂದರಾಜ್ ಮಾತನಾಡಿದರು.

'10 ಕೆ, 5ಕೆ ಮತ್ತು ಫನ್ 3ಕೆ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಬೆಳಿಗ್ಗೆ 6.15ರಿಂದ 10ಕೆ, 7 ಗಂಟೆಯಿಂದ 5ಕೆ ಮತ್ತು 7.45ರಿಂದ 3ಕೆ ರನ್ ಆರಂಭವಾಗಲಿವೆ. ಕಂಠೀರವ ಕ್ರೀಡಾಂಗಣದಿಂದ ಸ್ಪರ್ಧೆಗಳು ಆರಂಭವಾದಲಿದ್ದು, ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಎಂ.ಜಿ. ರಸ್ತೆಗಳ ಮೂಲಕ ಓಟಗಾರರು ಸಾಗಲಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

'ಸ್ಪರ್ಧೆಗಳಿಗೆ ಈಗಾಗಲೇ 7,500 ಮಂದಿ ನೋಂದಾಯಿಸಿಕೊಂಡಿದ್ದಾರೆ. ಸ್ಪರ್ಧೆಗಳ ಮೂಲಕ ₹ 50 ಲಕ್ಷ ಸಂಗ್ರಹಿಸುವ ನಿರೀಕ್ಷೆಯಿದ್ದು, ಅದನ್ನು ಶಂಕರ ಕ್ಯಾನ್ಸರ್ ಫೌಂಡೇಷನ್‌ಗೆ ದೇಣಿಗೆಯಾಗಿ ನೀಡಲಾಗುವುದು. ವಿಜೇತರಿಗೆ ಆಕರ್ಷಕ ಬಹುಮಾನ ನೀಡಲಾಗುವುದು' ಎಂದರು.

ಕಂಠೀರವ ಕ್ರೀಡಾಂಗಣದಲ್ಲಿ ಇದೇ 6 ಮತ್ತು 7ರಂದು ನಡೆಯಲಿರುವ ಎಕ್ಸ್‌ಪೊದಲ್ಲಿ ಸ್ಪರ್ಧಿಗಳು ನೋಂದಾಯಿಸಬಹುದು.

ಅಂಜು ರಾಯಭಾರಿ: ಒಲಿಂಪಿಯನ್ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರು ಕೂಟದ ಪ್ರಚಾರ ರಾಯಭಾರಿಯಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ http://www.great10k.com ಸಂಪರ್ಕಿಸಬಹುದು.

ಕೆಒಎ ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು, ಅಂಜು ಬಾಬಿ ಜಾರ್ಜ್, ಅಂತರರಾಷ್ಟ್ರೀಯ ಅಥ್ಲೀಟ್ ರೀತ್ ಅಬ್ರಹಾಂ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಪತ್ರಿಕಾಗೋಷ್ಠಿಯಲ್ಲಿ ಅಂತರರಾಷ್ಟ್ರೀಯ ಅಥ್ಲೀಟ್‌ಗಳಾದ ರೀತ್ ಅಬ್ರಹಾಂ, ಅಂಜು ಬಾಬಿ ಜಾರ್ಜ್, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್ ಮತ್ತು ಪ್ರಧಾನ ಕಾರ್ಯದರ್ಶಿ ಟಿ. ಅನಂತರಾಜು ಸ್ಪರ್ಧೆಯ ಟೀಶರ್ಟ್‌ಗಳನ್ನು ಅನಾವರಣ ಮಾಡಿದರು– ಪ್ರಜಾವಾಣಿ ಚಿತ್ರ

ಟೆಸ್ಟ್: ಶಕೀಲ್ ಚೊಚ್ಚಲ ಶತಕ

ಕರಾಚಿ (ಪಿಟಿಐ): ಎಡಗೈ ಬ್ಯಾಟರ್ ಸೌದ್ ಶಕೀಲ್ (ಬ್ಯಾಟಿಂಗ್ 124) ಗಳಿಸಿದ ಚೊಚ್ಚಲ ಶತಕದ ಬಲದಿಂದ ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ಎದುರಿನ ಎರಡನೇ ಟೆಸ್ಟ್‌ನ ಮೊದಲ ಇನಿಂಗ್ಸ್‌ನಲ್ಲಿ ಉತ್ತಮ ಪೇರಿಸಿತು.

ಬುಧವಾರ ಮೂರನೇ ದಿನದಾಟದ ಅಂತ್ಯಕ್ಕೆ ಪಾಕಿಸ್ತಾನ 9 ವಿಕೆಟ್ ಕಳೆದುಕೊಂಡು 407 ರನ್ ಗಳಿಸಿತು. ಶಕೀಲ್ ಹಾಗೂ ಖಾತೆ ತೆರೆಯದ ಅಬ್ರಾರ್ ಅಹಮದ್ ಕ್ರೀಸ್‌ನಲ್ಲಿದ್ದರು.

3 ವಿಕೆಟ್‌ಗೆ 154 ರನ್‌ಗಳೊಂದಿಗೆ ದಿನದಾಟ ಆರಂಭಿಸಿದ ಪಾಕಿಸ್ತಾನದ ಪರ ಇಮಾಮ್ ಉಲ್ ಹಕ್ 83 ರನ್ ಗಳಿಸಿ ಔಟಾದರು. ಅವರೊಂದಿಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಶಕೀಲ್ 83 ರನ್‌ಗಳ ಜೊತೆಯಾಟವಾಡಿದರೆ, ಐದನೇ ವಿಕೆಟ್‌ಗೆ ಸರ್ಫರಾಜ್ ಅಹಮದ್ (78) ಅವರೊಂದಿಗೆ 150 ರನ್‌ಗಳನ್ನು ಪೇರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 131 ಓವರ್‌ಗಳಲ್ಲಿ 449: ಪಾಕಿಸ್ತಾನ: 132 ಓವರ್‌ಗಳಲ್ಲಿ 9ಕ್ಕೆ 407 (ಇಮಾಮ್ ಉಲ್ ಹಕ್ 83, ಸೌದ್ ಶಕೀಲ್ ಬ್ಯಾಟಿಂಗ್ 124, ಸರ್ಫರಾಜ್ ಅಹಮದ್ 78, ಆಘಾ ಸಲ್ಮಾನ್ 41; ಎಜಾಜ್ ಪಟೇಲ್ 88ಕ್ಕೆ 3, ಇಶ್ ಸೋಧಿ 94ಕ್ಕೆ 2).

ಶಕೀಲ್ (ಎಡ), ಆಘಾ ಸಲ್ಮಾನ್

ಇಂದಿನಿಂದ ಅಂಧರ ಚೆಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕ್ಷಮ ಸಂಘಟನೆಯು ಅಖಿಲ ಭಾರತ ಅಂಧರ ಚೆಸ್ ಫೆಡರೇಷನ್ ಮತ್ತು ಕರ್ನಾಟಕ ಅಂಧರ ಚೆಸ್ ಸಂಸ್ಥೆಯ ಸಹಯೋಗದಲ್ಲಿ ಗುರುವಾರದಿಂದ ಜನವರಿ 7ರವರೆಗೆ ದಕ್ಷಿಣ ವಲಯ ಅಂಧರ ಚೆಸ್ ಟೂರ್ನಿಯನ್ನು ಆಯೋಜಿಸಿದೆ.

ಬಸವನಗುಡಿಯ ನಿಜಗುಣರ ಕ್ಷೇತ್ರದಲ್ಲಿ ಟೂರ್ನಿ ನಡೆಯಲಿದೆ. ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಟೂರ್ನಿಗೆ ಚಾಲನೆ ನೀಡಲಿದ್ದಾರೆ.

ಸಕ್ಷಮ ಸಂಘಟನೆಯ ರಾಷ್ಟ್ರೀಯ ಅಧ್ಯಕ್ಷ ಗೋವಿಂದರಾಜನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಹರಿಕೃಷ್ಣ ರೈ ತಿಳಿಸಿದ್ದಾರೆ.

ಟೆನಿಸ್: ಸಿಂಗಲ್ಸ್ ಮಾದರಿಗೆ ಯೂಕಿ ವಿದಾಯ

ಪುಣೆ (ಪಿಟಿಐ): ಭಾರತದ ಟೆನಿಸ್ ಆಟಗಾರ ಯೂಕಿ ಭಾಂಬ್ರಿ ಅವರು ಸಿಂಗಲ್ಸ್ ಮಾದರಿಗೆ ವಿದಾಯ ಹೇಳಿದ್ದಾರೆ.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಡಬಲ್ಸ್ ವಿಭಾಗದಲ್ಲಿ ಯಶಸ್ಸಿ ಸಾಧಿಸುವತ್ತ ಚಿತ್ತ ನೆಟ್ಟು ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ. ಸಾನಿಯಾ ಮಿರ್ಜಾ ಅವರ ಬಳಿಕ ಸಿಂಗಲ್ಸ್ ವಿಭಾಗ ತ್ಯಜಿಸುತ್ತಿರುವ ಭಾರತದ ಪ್ರಮುಖ ಟೆನಿಸ್ ಪಟು ಅವರಾಗಿದ್ದಾರೆ.

ದೀರ್ಘಕಾಲ ಕಾಡಿದ ಮೊಣಕಾಲು ನೋವು ಕೂಡ 28 ವರ್ಷದ ಯೂಕಿ ಅವರು ಸಿಂಗಲ್ಸ್ ವಿಭಾಗ ತೊರೆಯಲು ಕಾರಣವಾಗಿದೆ.

'ಸಿಂಗಲ್ಸ್ ವಿಭಾಗದಲ್ಲಿ ಶ್ರೇಷ್ಠ ನಿರ್ವಹಣೆ ತೋರಿದ್ದೇನೆ. ಆ ಕುರಿತು ಸಂತೃಪ್ತಿ ಇದೆ. ಇನ್ನೂ ಹೆಚ್ಚಿನ ಸಾಧನೆ ಮಾಡಬೇಕಿತ್ತೆಂಬ ಪಶ್ಚಾತ್ತಾಪವೂ ಇಲ್ಲ' ಎಂದು ಭಾಂಬ್ರಿ ಸುದ್ದಿಸಂಸ್ಥೆಯೊಂದಿಗಿನ ಸಂದರ್ಶನದಲ್ಲಿ ಹೇಳಿದ್ದಾರೆ.

ಕಂಬಳದ ಕರೆಯಲ್ಲಿ ಡಿಆರ್‌ಎಸ್!

ತಾಂತ್ರಿಕ ದೋಷ ಕಂಡರೆ ಮೂರನೇ ಅಂಪೈರ್ ಮೊರೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕ್ರಿಕೆಟ್ ಮತ್ತು ಫುಟ್‌ಬಾಲ್ ಪಂದ್ಯಗಳಲ್ಲಿ ಇರುವಂತೆ ಕಂಬಳದಲ್ಲೂ ತೀರ್ಪು ಮರುಪರಿಶೀಲನೆ ಪದ್ಧತಿ ಜಾರಿಗೆ ಬರಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯಲ್ಲಿ ಬುಧವಾರ ನಡೆದ ಕಂಬಳ ಕೋಣಗಳ ಮಾಲೀಕರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಈ ವಾರಾಂತ್ಯದಲ್ಲಿ (ಜನವರಿ 7,8) ಕಾರ್ಕಳದ ಮಿಯಾರಿನಲ್ಲಿ ನಡೆಯಲಿರುವ ಕಂಬಳದಲ್ಲಿ ಈ ಪದ್ಧತಿ ಜಾರಿಗೆ ಬರಲಿದೆ.

ಕಂಬಳದಲ್ಲಿ ಒಂದು ದಶಕದಿಂದ ಲೇಜರ್ ಬೀಮ್ ತಂತ್ರಜ್ಞಾನ ಬಳಸಿ ಫಲಿತಾಂಶ ನಿರ್ಣಯಿಸಲಾಗುತ್ತಿದೆ. ದಾಖಲೆಗಳು ಸೃಷ್ಟಿಯಾಗಲು ಆರಂಭವಾದ ನಂತರ, ನಿಖರ ಕಾಲ ನಿರ್ಣಯ ಮಾಡುವುದಕ್ಕಾಗಿ 'ಮಂಜಟ್ಟ'ಯಲ್ಲಿ ಸೆನ್ಸರ್ ಬಳಕೆಯೂ ಆರಂಭವಾಯಿತು. ಆದರೆ ಈಚೆಗೆ ತಂತ್ರಜ್ಞಾನದಲ್ಲಿ ದೋಷಗಳು ಕಂಡುಬರಲು ಆರಂಭವಾದ ಕಾರಣ ಟಿವಿ ಅಂಪೈರ್ ಮುನ್ನೆಲೆಗೆ ಬಂದಿದ್ದಾರೆ.

ಕ್ರಿಕೆಟ್‌ನಲ್ಲಿ ಅಂಪೈರ್ ತೀರ್ಪು ಮರುಪರಿಶೀಲನೆ (ಡಿಆರ್‌ಎಸ್) ಮತ್ತು ಫುಟ್‌ಬಾಲ್‌ನಲ್ಲಿ ವಿಡಿಯೊ ಸಹಾಯಕ ರೆಫರಿ (ವಿಎಆರ್) ಬಳಕೆಯಾಗುತ್ತಿದೆ.

'ಬಿಸಿಲಿನ ತಾಪದಿಂದ ಕೆಲವೊಮ್ಮೆ ಲೇಜರ್ ಬೀಮ್ ತಂತ್ರಜ್ಞಾನ ಕೈಕೊಡುತ್ತದೆ. ಇಂಥ ಸಂದರ್ಭದಲ್ಲಿ ಬದಲಿ ವ್ಯವಸ್ಥೆ ಬೇಕು. ಇನ್ನು ಮುಂದೆ ಲೇಜರ್ ಬೀಮ್ ತಂತ್ರಜ್ಞಾನ ಕೈಕೊಟ್ಟರೆ, ಓಟ ಟೈ ಅದರೆ ಅಥವಾ ಸಂದೇಹಗಳು ಬಂದರೆ ಟಿವಿ ಅಂಪೈರ್ ನೆರವು ಪಡೆಯಲಾಗುವುದು. ಕೋಣಗಳ ಮಾಲೀಕರ ಸಮಕ್ಷಮದಲ್ಲಿ ಟಿವಿ ದೃಶ್ಯಾವಳಿ ಪರಿಶೀಲಿಸಿ ಮೂರನೇ ಅಂಪೈರ್ ಅಂತಿಮ ತೀರ್ಪು ನೀಡಲಿದ್ದಾರೆ' ಎಂದು ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ರೋಹಿತ್ ಹೆಗ್ಡೆ ಎರ್ಮಾಳು 'ಪ್ರಜಾವಾಣಿ'ಗೆ ತಿಳಿಸಿದರು.

ವಿಮಾನ ಮೂಲಕ ಮುಂಬೈಗೆ ರಿಷಭ್ ಸ್ಥಳಾಂತರ

ನವದೆಹಲಿ/ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ರಿಷಭ್ ಪಂತ್ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬುಧವಾರ ಡೆಹ್ರಾಡೂನ್‌ನಿಂದ ಮುಂಬೈಗೆ ವಿಮಾನ ಮೂಲಕ ಸ್ಥಳಾಂತರಿಸಲಾಗಿದೆ.

ರಿಷಭ್

ದೆಹಲಿ-ಡೆಹ್ರಾಡೂನ್ ಹೆದ್ದಾರಿಯಲ್ಲಿ ಈಚೆಗೆ ಸಂಭವಿಸಿದ್ದ ಕಾರು ಅಪಘಾತದಲ್ಲಿ ಪಂತ್ ಗಾಯಗೊಂಡಿದ್ದರು. ಪಂತ್ ಅವರ ಮುಖದ ಗಾಯಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಪ್ಲಾಸ್ಟಿಕ್ ಸರ್ಜರಿ ಮಾಡಲಾಗಿದೆ. ಅವರ ಕಾಲುಗಳ ಅಸ್ಥಿಮಜ್ಜೆಯಲ್ಲಿ ಊತ ಇರುವುದು ಎಂಆರ್‌ಐ ಸ್ಕ್ಯಾನಿಂಗ್‌ನಲ್ಲಿ ಪತ್ತೆಯಾಗಿದೆ. ಆದ್ದರಿಂದ ಉನ್ನತಮಟ್ಟ ಚಿಕಿತ್ಸೆಗಾಗಿ ಅವರನ್ನು ಮುಂಬೈಗೆ ಸ್ಥಳಾಂತರಿಸಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿದೆ.

ಬ್ಯಾಡ್ಮಿಂಟನ್: ಸಿಂಧು, ಪ್ರಣಯ್ ನೇತೃತ್ವ

ನವದೆಹಲಿ(ಪಿಟಿಐ): ಪಿ.ವಿ. ಸಿಂಧು ಹಾಗೂ ಎಚ್.ಎಸ್. ಪ್ರಣಯ್ ಅವರು ಬ್ಯಾಡ್ಮಿಂಟನ್ ಏಷ್ಯಾ ಮಿಶ್ರ ತಂಡಗಳ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಲಿದ್ದಾರೆ.

ಪಿ.ವಿ.ಸಿಂಧು

ದುಬೈನಲ್ಲಿ ಫೆ. 14ರಿಂದ 19ರವರೆಗೆ ಈ ಚಾಂಪಿಯನ್‌ಷಿಪ್ ನಡೆಯಲಿದೆ. ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ತಂಡದಲ್ಲಿರುವ ಮತ್ತೊರ್ವ ಆಟಗಾರ.

ಮಹಿಳಾ ಸಿಂಗಲ್ಸ್‌ನಲ್ಲಿ ಸಿಂಧು ಅವರಿಗೆ ಆಕರ್ಷಿ ಕಶ್ಯಪ್ ಜೊತೆಯಾಗಲಿದ್ದಾರೆ. ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ, ಕೃಷ್ಣ ಪ್ರಸಾದ್ ಜಿ.– ವಿಷ್ಣುವರ್ಧನ್ ಗೌಡ್ ಆಡಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್– ತ್ರಿಶಾ ಜೋಲಿ, ಮಿಶ್ರ ಡಬಲ್ಸ್‌ನಲ್ಲಿ ಇಶಾನ್ ಭಟ್ನಾಗರ್–ತನಿಶಾ ಕ್ರಾಸ್ಟೊ ಆಡುವ ನಿರೀಕ್ಷೆಯಿದೆ.

ದೆಹಲಿ ತಂಡದ ಆಯ್ಕೆಗಾರ ಸಿದಾನಾ ಸಭಾತ್ಯಾಗ

ನವದೆಹಲಿ (ಪಿಟಿಐ): ದೆಹಲಿ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಸದಸ್ಯ ಮಯಂಕ್ ಸಿದಾನಾ ಅವರು ಸಭಾತ್ಯಾಗ ಮಾಡುವ ಮೂಲಕ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ.

ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ರಣಜಿ ಪಂದ್ಯದಲ್ಲಿ ದೆಹಲಿ ತಂಡವು ಸೌರಾಷ್ಟ್ರದ ವಿರುದ್ಧ ಆಡುತ್ತಿದೆ. ಮೊದಲ ದಿನವಾದ ಮಂಗಳವಾರದ ಆಟದಲ್ಲಿ ದೆಹಲಿ ತಂಡವು 133 ರನ್‌ಗಳಿಗೆ ಆಲೌಟ್ ಆಗಿತ್ತು. ಇದರ ಹಿನ್ನೆಲೆಯಲ್ಲಿ ರಾಜ್‌ಕೋಟ್ ಹೋಟೆಲ್‌ನಲ್ಲಿ ನಡೆದ ಆಯ್ಕೆಗಾರರ ಸಭೆಯಲ್ಲಿ ಮಯಂಕ್ ಹೊರನಡೆದರು. ಈ ಸಂದರ್ಭದಲ್ಲಿ ಆಯ್ಕೆ ಸಮಿತಿ ಮುಖ್ಯಸ್ಥ ಗಗನ್ ಖೋಡಾ ಮತ್ತು ಕಾರ್ಯದರ್ಶಿ ಸಿದ್ಧಾಂತ್ ಸಾಹಿಬ್ ಸಿಂಗ್ ಹಾಜರಿದ್ದರು. 25 ವರ್ಷದೊಳಗಿನವರ ತಂಡವನ್ನು ಆಯ್ಕೆ ಮಾಡುವ ಕುರಿತು ಇಲ್ಲಿ ಮಾತುಕತೆ ನಡೆದಿತ್ತು ಎನ್ನಲಾಗಿದೆ.

ಅಲ್ಲದೇ ದೆಹಲಿ ತಂಡದ ಮಧ್ಯಮ ಕ್ರಮಾಂಕದ ಪರಿಣತ ಬ್ಯಾಟರ್ ಆಯುಷ್ ಬದೋನಿ ಅವರಿಗೆ ಇನಿಂಗ್ಸ್ ಆರಂಭಿಸಲು ಬಡ್ತಿ ನೀಡಿದ ಮುಖ್ಯ ಕೋಚ್ ಅಭಯ್ ಶರ್ಮಾ ಅವರ ನಿರ್ಧಾರವು ಅಸಮಾಧಾನಕ್ಕೆ ಕಾರಣವೆನ್ನಲಾಗಿದೆ. 19 ಆಟಗಾರರ ತಂಡವನ್ನು ಆಯ್ಕೆ ಮಾಡಲಾಗಿತ್ತು.

ವಾಲಿಬಾಲ್: ಕುರುಕ್ಷೇತ್ರ ವಿವಿಗೆ ಜಯ

ಉಡುಪಿ: ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯ ತಂಡವು ಪೂರ್ಣಪ್ರಜ್ಞ ಕಾಲೇಜಿನಲ್ಲಿ ಬುಧವಾರ ಆರಂಭವಾದ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಟ್ಟದ ಪುರುಷರ ವಾಲಿಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಮಂಗಳೂರು ವಿಶ್ವವಿದ್ಯಾಲಯ ತಂಡವು ಭುವನೇಶ್ವರ್ ವಿವಿಯ ಎದುರು ವಾಕ್ ಓವರ್ ಪಡೆದು ಮುನ್ನಡೆಯಿತು.

ಟೂರ್ನಿಯ ಮೊದಲ ಪಂದ್ಯದಲ್ಲಿ ಕುರುಕ್ಷೇತ್ರ ವಿವಿಯ ಆಟಗಾರರು ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿದರು. 25–11, 25–22 ಹಾಗೂ 25–23 ಅಂಕಗಳಿಂದ ಜಯಭೇರಿ ಬಾರಿಸಿದರು. ನಂತರ ನಡೆದ ಪಂದ್ಯದಲ್ಲಿ ಚೆನ್ನೈನ ಮದ್ರಾಸ್ ವಿವಿ ತಂಡವು ರಾಜಸ್ಥಾನ ವಿವಿ ವಿರುದ್ಧ ಜಯಸಾಧಿಸಿತು. ಎದುರಾಳಿ ತಂಡಕ್ಕೆ ಮೊದಲ ಸೆಟ್ (21–25) ಬಿಟ್ಟುಕೊಟ್ಟರೂ ನಂತರ 26–24, 25–23, 25–19ರಿಂದ ಗೆದ್ದು ಬೀಗಿತು.

ಜ. 8ರವರೆಗೆ ವಾಲಿಬಾಲ್ ಟೂರ್ನಿ ನಡೆಯಲಿದೆ.

ಬೀಚ್ ಸಾಕರ್: 7ರಿಂದ ಆಯ್ಕೆ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಬೀಚ್ ಸಾಕರ್ ಚಾಂಪಿಯನ್‌ಷಿಪ್‌ಗೆ ರಾಜ್ಯ ತಂಡದ ಆಯ್ಕೆಗಾಗಿ ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯು ಜನವರಿ 7 ಮತ್ತು 8ರಂದು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿ ಟ್ರಯಲ್ಸ್ ನಡೆಯಲಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ಜನವರಿ 24ರಿಂದ ಫೆಬ್ರುವರಿ 1ರವರೆಗೆ ಗುಜರಾತ್‌ನ ಸೂರತ್‌ನಲ್ಲಿ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ceoksfa@gmail.com ವೆಬ್ ವಿಳಾಸಕ್ಕೆ ಮೇಲ್ ಮಾಡಬಹುದು ಅಥವಾ ಸಲೀಂ (ಮೊ. ಸಂ. 8050296058), ಆದಿತ್ಯ (7338584114) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಎಲ್ಲ ವಿದ್ಯಾರ್ಥಿಗಳು ಗಣಿತ ಓದಲಿ: ರಿಷಿ ಸುನಕ್

ಲಂಡನ್(ಪಿಟಿಐ): 'ಗಣಿತ ಕಲಿಕೆಯಲ್ಲಿ ಮಕ್ಕಳು ಹಿಂದುಳಿಯುವುದನ್ನು ತಡೆಯುವ ಸಲುವಾಗಿ ಎಲ್ಲಾ ಮಕ್ಕಳಿಗೂ 18 ವರ್ಷ ತುಂಬುವವರೆಗೂ ಗಣಿತ ಕಲಿಕೆ ಕಡ್ಡಾಯಗೊಳಿಸಲಾಗಿದೆ. ಈ ಸಂಬಂಧ ಯೋಜನೆಯೊಂದನ್ನು ಜಾರಿಗೆ ತಂದಿದ್ದೇವೆ' ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಬುಧವಾರ ಹೇಳಿದ್ದಾರೆ.

ರಿಷಿ ಸುನಕ್

ಹೊಸ ವರ್ಷದ ಆರಂಭದಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿರುವ ಅವರು, 'ಬಲಿಷ್ಠ ಬ್ರಿಟನ್ ನಿರ್ಮಾಣ ನಮ್ಮ ಧ್ಯೇಯವಾಗಿದೆ. ಇದಕ್ಕಾಗಿ ಸರ್ಕಾರವು ಹಣದುಬ್ಬರ ತಗ್ಗಿಸುವ, ಆರ್ಥಿಕತೆ ಅಭಿವೃದ್ಧಿಪಡಿಸುವ, ಸಾಲ ತಗ್ಗಿಸುವ, ರಾಷ್ಟ್ರೀಯ ಆರೋಗ್ಯ ಸೇವೆಯನ್ನು ಬಲವರ್ಧಿಸುವ ಹಾಗೂ ಸಮುದ್ರ ಮಾರ್ಗದ ಮೂಲಕ ಫ್ರಾನ್ಸ್‌ನಿಂದ ಅಕ್ರಮ ವಲಸಿಗರನ್ನು ಕರೆತರುವ ಸಣ್ಣ ದೋಣಿಗಳ ಮೇಲೆ ನಿರ್ಬಂಧ ಹೇರುವ ಸೂತ್ರಗಳನ್ನು ಅಳವಡಿಸಿಕೊಳ್ಳಲಿದೆ' ಎಂದಿದ್ದಾರೆ.

ಪ್ರಪಾತಕ್ಕೆ ಕಾರು: ಭಾರತೀಯ ಮೂಲದ ವ್ಯಕ್ತಿ ಬಂಧನ

ವಾಷಿಂಗ್ಟನ್ (ಪಿಟಿಐ): ಪತ್ನಿ ಮತ್ತು ಮಕ್ಕಳೊಂದಿಗೆ ಟೆಸ್ಲಾ ಕಾರು ಚಲಾಯಿಸಿಕೊಂಡು ಹೊರಟಿದ್ದ ಭಾರತೀಯ ಮೂಲದ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಕಾರನ್ನು ಪ್ರಪಾತಕ್ಕೆ ಉರುಳಿಸಿದ್ದು, ಕೊಲೆ ಯತ್ನ ಆರೋಪದಡಿ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಕ್ಯಾಲಿಫೋರ್ನಿಯಾದ ಪಾಸಡೀನಾ ನಿವಾಸಿ ಧರ್ಮೇಶ್ ಎ.ಪಟೇಲ್ (41) ಬಂಧಿತರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆಯಾದ ಬಳಿಕ ಅವರನ್ನು ಬಂಧಿಸಿ ಸ್ಯಾನ್ ಮೆಟಿಯೊ ಕೌಂಟಿ ಜೈಲಿಗೆ ಕಳುಹಿಸಲಾಗಿದೆ' ಎಂದು ಹೆದ್ದಾರಿ ಗಸ್ತು ಅಧಿಕಾರಿಗಳು ಬುಧವಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪಟೇಲ್, ಅವರ ಪತ್ನಿ ಹಾಗೂ ಇಬ್ಬರು ಪುಟ್ಟ ಮಕ್ಕಳು ಅಪಾಯದಿಂದ ಪಾರಾಗಿದ್ದಾರೆ. 'ಡೆವಿಲ್ಸ್ ಸ್ಲೈಡ್' ಬಳಿಯ ಪ್ರಪಾತದಲ್ಲಿ ಸಿಲುಕಿದ್ದ ಅವರನ್ನು ಅಗ್ನಿಶಾಮಕ ದಳದ ಸಿಬ್ಬಂದಿಯ ನೆರವಿನೊಂದಿಗೆ ಸೋಮವಾರ ರಕ್ಷಿಸಲಾಗಿದೆ. ಸುಮಾರು 250 ರಿಂದ 300 ಅಡಿ ಆಳಕ್ಕೆ ಕಾರು ಉರುಳಿತ್ತು' ಎಂದು ಕ್ಯಾಲಿಫೋರ್ನಿಯಾ ಹೆದ್ದಾರಿ ಗಸ್ತು ಪಡೆ ಹೇಳಿದೆ.

ರಾಜಕೀಯ ಜಾಹೀರಾತು ನಿಷೇಧ ತೆರವು: ಟ್ವೀಟರ್

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ರಾಜಕೀಯ ಜಾಹೀರಾತುಗಳ ನಿಷೇಧ ನಿಯಮವನ್ನು ಸಡಿಲಿಸುವುದಾಗಿ ಟ್ವೀಟರ್ ತಿಳಿಸಿದೆ.

'ಜಾಹೀರಾತು ನಿಯಮಗಳನ್ನು ಸಡಿಲಿಸುತ್ತಿದ್ದೇವೆ. ರಾಜಕೀಯ ಜಾಹೀರಾತುಗಳಿಗೂ ಮುಂಬರುವ ವಾರಗಳಲ್ಲಿ ಅವಕಾಶ ನೀಡಲು ಚಿಂತಿಸಿದ್ದೇವೆ' ಎಂದು ಮಂಗಳವಾರ ಟ್ವೀಟ್ ಮಾಡಿದೆ.

ಎಲಾನ್ ಮಸ್ಕ್ ಅವರು ಟ್ವೀಟರ್ ಖರೀದಿ ಬಳಿಕ ಅದರ ಆದಾಯ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ. 2019ರಲ್ಲಿ ಟ್ವೀಟರ್ ರಾಜಕೀಯ ಜಾಹೀರಾತುಗಳನ್ನು ನಿಷೇಧಿಸಿತ್ತು.

'ಸೈನಿಕರ ಸಾವಿಗೆ ಫೋನ್ ಬಳಕೆ ಕಾರಣ'

ಕೀವ್(ಎಪಿ): ರಷ್ಯಾ ಸೈನಿಕರು ಸೆಲ್ ಫೋನ್‌ಗಳನ್ನು ಅನಧಿಕೃತವಾಗಿ ಬಳಸಿದ ಪರಿಣಾಮ ಅವರು ತಂಗಿದ್ದ ಘಟಕದ ಮೇಲೆ ಉಕ್ರೇನ್‌ನ ರಾಕೆಟ್ ದಾಳಿಗೆ ಕಾರಣವಾಯಿತು ಎಂದು ರಷ್ಯಾದ ಮಿಲಿಟರಿ ಮಂಗಳವಾರ ತಡರಾತ್ರಿ ತಿಳಿಸಿದೆ.

ವಾರಾಂತ್ಯದ ದಾಳಿಯಿಂದ ಸಾವಿನ ಸಂಖ್ಯೆ 89 ಕ್ಕೇರಿದೆ.

'ದೂರವಾಣಿ ಸಂಕೇತಗಳು ಕೀವ್ ಪಡೆಗಳಿಗೆ ಮಿಲಿಟರಿ ಸಿಬ್ಬಂದಿ ಸ್ಥಳ ನಿರ್ಧರಿಸಲು ಮತ್ತು ದಾಳಿ ನಡೆಸಲು ಅನುವು ಮಾಡಿಕೊಟ್ಟವು. ಭವಿಷ್ಯದಲ್ಲಿ ಈ ರೀತಿಯ ದುರಂತ ತಡೆಗಟ್ಟಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ' ಎಂದು ಜನರಲ್ ಲೆಫ್ಟಿನೆಂಟ್ ಸೆರ್ಗೆಯ್ ಸೆವ್ರಿಯುಕೋವ್ ಹೇಳಿಕೆಯಲ್ಲಿ ತಿಳಿಸಿದ್ದಾರೆ. ನಿಯಮ ಉಲ್ಲಂಘಿಸಿದ ಅಧಿಕಾರಿಗಳನ್ನು ಶಿಕ್ಷಿಸುವುದಾಗಿ ಅವರು ಭರವಸೆ ನೀಡಿದ್ದಾರೆ.

ಸೆವ್ರಿಯುಕೋವ್ ಪ್ರಕಾರ, 10 ತಿಂಗಳ ಹಿಂದೆ ಯುದ್ಧ ಪ್ರಾರಂಭವಾದಾಗಿನಿಂದ ಕ್ರೆಮ್ಲಿನ್ ಪಡೆಗಳ ಮೇಲಿನ ಅತ್ಯಂತ ಮಾರಣಾಂತಿಕ ದಾಳಿ ಹೊಸ ವರ್ಷದ ಒಂದು ನಿಮಿಷದಲ್ಲಿ ಸಂಭವಿಸಿದೆ.

ಉಕ್ರೇನ್ ಪಡೆಗಳು ಅಮೆರಿಕ ಪೂರೈಸಿದ್ದ ಹಿಮಾರ್ಸ್ ಬಹುಪಯೋಗಿ ಉಡಾವಣಾ ವಾಹಕ ಬಳಸಿ ಆರು ರಾಕೆಟ್‌ಗಳನ್ನು ಸೈನಿಕರು ನೆಲೆಸಿದ್ದ ಪ್ರದೇಶದಲ್ಲಿ ಹಾರಿಸಿದವು. ಎರಡು ರಾಕೆಟ್‌ಗಳನ್ನು ಹೊಡೆದುರಿಸಲಾಯಿತು. ಆದರೆ, ನಾಲ್ಕು ಕಟ್ಟಡಕ್ಕೆ ಅಪ್ಪಳಿಸಿ ಸ್ಫೋಟಗೊಂಡವು. ದಾಳಿಯಲ್ಲಿ 63 ಸೈನಿಕರು ಮೃತಪಟ್ಟಿದ್ದಾರೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಆರಂಭದಲ್ಲಿ ತಿಳಿಸಿತ್ತು. ಆದರೆ, ತುರ್ತು ಸಿಬ್ಬಂದಿ ಕಟ್ಟಡ ಅವಶೇಷ ಶೋಧಿಸುತ್ತಿದ್ದಂತೆ ಸಾವಿನ ಸಂಖ್ಯೆ 89ಕ್ಕೆ ಏರಿದೆ ಎಂದು ಸೆವ್ರಿಯುಕೋವ್ ಹೇಳಿದ್ದಾರೆ. ಮೃತರಲ್ಲಿ ರೆಜಿಮೆಂಟ್‌ನ ಡೆಪ್ಯುಟಿ ಕಮಾಂಡರ್ ಕೂಡ ಸೇರಿದ್ದಾರೆ.

ಪಾಕಿಸ್ತಾನದಲ್ಲಿ ರಾತ್ರಿ 8ಕ್ಕೇ ಮಾಲ್ ಬಂದ್

ಇಸ್ಲಾಮಾಬಾದ್(ಎಪಿ): ಪಾಕಿಸ್ತಾನವು ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದು ಇಂಧನವನ್ನು ಮಿತವಾಗಿ ಬಳಸುವ ಉದ್ದೇಶದಿಂದ ಸರ್ಕಾರವು, ಶಾಪಿಂಗ್ ಮಾಲ್, ಮಾರುಕಟ್ಟೆಯನ್ನು ರಾತ್ರಿ 8.30ಕ್ಕೆ ಹಾಗೂ ಮದುವೆ ಛತ್ರ, ರೆಸ್ಟೋರೆಂಟ್‌ಗಳನ್ನು ರಾತ್ರಿ 10ರ ಒಳಗೆ ಮುಚ್ಚಲು ಬುಧವಾರ ಆದೇಶ ಹೊರಡಿಸಿದೆ.

'ಹೊಸ ಇಂಧನ ಸಂರಕ್ಷಣಾ ಯೋಜನೆಗೆ ಸಂಪುಟವು ಒಪ್ಪಿಗೆ ನೀಡಿದೆ' ಎಂದು ರಕ್ಷಣಾ ಸಚಿವ ಖ್ವಾಜಾ ಮೊಹಮ್ಮದ್ ಆಸೀಫ್ ಹಾಗೂ ಇಂಧನ ಸಚಿವ ಗುಲ್ತಮ್ ದಸ್ತ್‌ಗೀರ್ ಅವರು ಮಂಗಳವಾರ ತಿಳಿಸಿದ್ದರು.

ಪಾಕಿಸ್ತಾನವು ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ (ಐಎಂಎಫ್) ₹49,700 ಕೋಟಿ (6 ಬಿಲಿಯನ್ ಡಾಲರ್) ಸಾಲ ಪಡೆದುಕೊಂಡಿದೆ. ಇದರಿಂದಾಗಿ ದೇಶದಲ್ಲಿ ಹಣದುಬ್ಬರ ಹೆಚ್ಚಳವಾಗಲಿದೆ ಎಂದು ಸರ್ಕಾರ ಯೋಚಿಸುತ್ತಿದೆ. ತಾನು ನೀಡಿರುವ ಸಾಲ ಸಂಬಂಧ ಕೆಲವು ನಿರ್ಬಂಧಗಳನ್ನು ಸಡಿಲಿಸುವಂತೆ ಪಾಕಿಸ್ತಾನವು ಐಎಂಎಫ್ ಜೊತೆಗೆ ಮಾತುಕತೆ ನಡೆಸುತ್ತಿದೆ. ಸರ್ಕಾರದ ಕ್ರಮದ ಬಗ್ಗೆ ಶಾಪಿಂಗ್ ಮಾಲ್ ಮಾಲೀಕರು, ರೆಸ್ಟೋರೆಂಟ್ ಮಾಲೀಕರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಪಾಕಿಸ್ತಾನದ ಜನರು ಮಧ್ಯ ರಾತ್ರಿಯ ವೇಳೆ ಶಾಪಿಂಗ್ ಮಾಡಲು ಇಚ್ಛಿಸುತ್ತಾರೆ. ಆ ವೇಳೆ ಊಟಕ್ಕೂ ಬರುತ್ತಾರೆ. ಈಗ ವಿಧಿಸಿರುವ ನಿರ್ಬಂಧಗಳಿಂದ ಕೆಟ್ಟ ಪರಿಣಾಮ ಬೀರಲಿದೆ ಎಂದು ವ್ಯಾಪಾರಿ ಸಂಘಟನೆಗಳ ಮುಖಂಡರು ಹೇಳಿದ್ದಾರೆ.

ಕೌಶಲ್ ಕಿಶೋರ್ ಆನಂದ್ (ವ್ಯಾಪಾರಿ)

ಮೊದಲು ನನಗೆ ನಡೆದಾಡಲಿಕ್ಕೂ ಕಷ್ಟವಾಗುತ್ತಿತ್ತು ಆದರೀಗ ಓಡಾಡಬಲ್ಲವನಾಗಿದ್ದೇನೆ.

ಹಿಂದೆ 15 ವರ್ಷಗಳಿಂದ ನಾನು ಮಂಡಿಗಳ ನೋವಿನಿಂದ ಬಳಲುತ್ತಿದ್ದೆ. ನಾನಾ ರೀತಿಯ ಚಿಕಿತ್ಸೆ ಪಡೆದರೂ, ವಿವಿಧ ತೈಲಗಳನ್ನು ಲೇಪಿಸಿದರೂ, ನಡೆದಾಡುವಾಗ ಮತ್ತು ಮೆಟ್ಟಿಲುಗಳನ್ನು ಏರುವಾಗ ನೋವಿನಿಂದ ನರಳುತ್ತಿದ್ದೆ. ಎಲ್ಲಗೂ ಹೋಗಿ ಬರಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ನಂತರ ಒಂದು ದಿನ ಚತುರ್ಭುಜ ತೈಲ ಮತ್ತು ಟ್ಯಾಬ್ಲೆಟ್ ಕುರಿತು ಮಾಹಿತಿ ಸಿಕ್ಕ ಬಳಿಕ, ಪ್ರತಿದಿನ ಬೆಳಗ್ಗೆ 1 ಮತ್ತು ರಾತ್ರಿ 1 ಚತುರ್ಭುಜ ಟ್ಯಾಬ್ಲೆಟ್ ಸೇವಿಸತೊಡಗಿದೆ ಮತ್ತು ಈ ನೋವು ಚರ್ಮದ ಮೇಲೆ ಇರುವುದಿಲ್ಲ, ಕೀಲುಗಳಲ್ಲಿ ಹಾಗೂ ಮಾಂಸಖಂಡಗಳಲ್ಲಿ ಇರುತ್ತದೆ ಎಂದು ನನಗೆ ತಿಳಿದಿದ್ದರಿಂದ ಯಾವುದೇ ಮುಲಾಜಿಲ್ಲದೆ ದಿನಕ್ಕೆ 3 ಬಾರಿ 8 ರಿಂದ 10 ಎಂ.ಎಲ್. ತೈಲದಿಂದ 15 ರಿಂದ 20 ನಿಮಿಷ ಚೆನ್ನಾಗಿ ಮಂಡಿಗಳನ್ನು ಮಾಲಿಷ್ ಮಾಡಿಕೊಂಡೆ. ಹೆಚ್ಚಿನ ಪ್ರಮಾಣದ ತೈಲದಿಂದ ಮಸಾಜ್ ಮಾಡಿಕೊಂಡಿದ್ದರಿಂದ, ತೈಲವು ಆಳದವರೆಗೆ ಇಳಿದು ಪ್ರಭಾವ ಬೀರಿತ್ತು ಮತ್ತು ನನಗೆ ಬಹುಬೇಗ ನಿವಾರಣೆ ಲಭಿಸಿತು. ಇದೀಗ ನಾನು ಎಲ್ಲಿಗೆ ಬೇಕಾದರೂ ಕಾಲ್ನಡಿಗೆಯಲ್ಲೇ ಹೋಗಿ ಬರುಬಂತಾಗಿದ್ದೇನೆ ಮತ್ತು ಮನೆಯ ಮೆಟ್ಟಿಲುಗಳನ್ನು ಓಡುತ್ತ ಏರಬಲ್ಲವನಾಗಿದ್ದೇನೆ. ನನ್ನ ಕುಟುಂಬ ಸದಸ್ಯರು ಚತುರ್ಭುಜ ತೈಲ ಮತ್ತು ಚತುರ್ಭುಜ ಟ್ಯಾಬ್ಲೆಟ್‌ಗಳನ್ನು ಹಲವಾರು ನೋವಿಗಾಗಿ ಬಳಸುತ್ತಿದ್ದಾರೆ ಮತ್ತು ನೋವುಗಳಿಂದ ಮುಕ್ತರಾಗುತ್ತಿದ್ದಾರೆ. ನನಗೆ ಇದರ ಫಲಿತಾಂಶ ಅತ್ಯಂತ ತೃಪ್ತಿ ನೀಡಿದೆ. ಎಲ್ಲಾ ಜನರು ನೋವುಗಳಿಂದ ಮುಕ್ತರಾಗಲಿ ಎಂಬ ಏಕೈಕ ಸಾರ್ವಜನಿಕ ಹಿತಾಸಕ್ತಿಯಿಂದ ಇಲ್ಲಿ ನನ್ನ ವೈಯಕ್ತಿಕ ಅನುಭವವನ್ನು ಹಂಚಿಕೊಳ್ಳುತ್ತಿದ್ದೇನೆ.

ಆಯುರ್ವೇದಿಕ ಔಷಧಿ
ಚತುರ್ಭುಜ®
ತೈಲ ಮತ್ತು ಟ್ಯಾಬ್ಲೆಟ್
ಎಲ್ಲಾ ಮೆಡಿಕಲ್ ಮತ್ತು ಆಯುರ್ವೇದಿಕ ಮಳಿಗೆಗಳಲ್ಲಿ ಲಭ್ಯ UID No. UK AD/35/2021